“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

17ನೇ ಮಾರ್ಚ್ 2021
ಬುಧವಾರ

## ವಿಷಯಾನುಕ್ರಮಣಿಕೆ

**1.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1500 – ಪಶುವೈದ್ಯಕೀಯ ವಿಶ್ವವಿದ್ಯಾಲಯದ ಬಗ್ಗೆ.**
– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಪ್ರಭು ಬಿ. ಚವ್ಹಾಣ್(ಪಶು ಸಂಗೋಪನೆ ಸಚಿವರು)

**1435 – ನಮೂನೆ–57ರಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸುವ ಬಗ್ಗೆ.**
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1276 – ಉಪನೋಂದಣಾಧಿಕಾರಿಗಳ ಕಛೇರಿಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ**
– ಶ್ರೀ ಎಂ.ಎ.ಗೋಪಾಲಸ್ವಾಮಿ
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1477 – ಜ್ಯೋತಿ ಸಂಜೀವಿನಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ**
– ಶ್ರೀ ಅರುಣ ಶಹಾಪುರ
– ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**1273 – ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಮನೆಗಳ ಹಂಚಿಕೆ ಬಗ್ಗೆ**
– ಶ್ರೀ ಪ್ರದೀಪ ಶೆಟ್ಟರ್
– ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**1482+ – ಸರ್ವೆ ಸ್ಕೆಚ್‌ಗಳನ್ನು ನೀಡಲು ವಿಳಂಬವಾಗುತ್ತಿರುವುದು ಭೂ ದಾಖಲೆಗಳ**
**1426 Digitalization ಮಾಡುವ ಬಗ್ಗೆ.**
– ಶ್ರೀ ಕೆ.ಎ.ತಿಪ್ಪೇಸ್ವಾಮಿ + ಶ್ರೀ ಹೆಚ್.ಎಂ.ರಮೇಶ ಗೌಡ
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**1476 – ನ್ಯಾ:ಸದಾಶಿವ ಆಯೋಗದ ವರದಿ ಜಾರಿ ಬಗ್ಗೆ**

– ಶ್ರೀ ಆರ್.ಧರ್ಮಸೇನ

– ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**1456 – ಗುತ್ತಿಗೆದಾರರಿಗೆ ವರ್ಷಾನುಗಟ್ಟಲೆ ಗುತ್ತಿಗೆ ಹಣ ಬಾಕಿ ಇರುವ ಬಗ್ಗೆ.**

– ಶ್ರೀ ಗೋವಿಂದ ರಾಜು

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**1257 – ರಸ್ತೆ ದುರಸ್ತಿ ತ್ವರಿತಗೊಳಿಸುವ ಬಗ್ಗೆ**

– ಶ್ರೀ ಕೆ.ಹರೀಶ್ ಕುಮಾರ್

– ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**1227 – ಕೊಡಗು ಜಿಲ್ಲೆಯ ಮಲೆತಿರಿಕೆ ಬೆಟ್ಟ, ನೆಹರು ನಗರ ಮತ್ತು ಅರಸು ನಗರದ ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಬಗ್ಗೆ**

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1427 – ಹಸ್ತಚಾಲಿತ ಸ್ಕ್ಯಾವೆಂಜಿಂಗ್ ಕೆಲಸಗಳ ಬಗ್ಗೆ**

– ಶ್ರೀ ಬಿ.ಕೆ.ಹರಿಪ್ರಸಾದ್

– ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**1263 – ಶಿವಮೊಗ್ಗ ಜಿಲ್ಲೆ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳ ಬಗ್ಗೆ.**

– ಶ್ರೀ ಆರ್.ಪ್ರಸನ್ನ ಕುಮಾರ್

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**1028– ರಾಜ್ಯದ ಹಿಂದುಳಿದ ವರ್ಗಗಳ ಜನಾಂಗದ ಸ್ಥಿತಿಗತಿಗಳ ಬಗ್ಗೆ**

– ಶ್ರೀ ಪಿ.ಆರ್.ರಮೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಜರಾಯಿ ಮತ್ತು ಹಿಂದುಳಿದ ವರ್ಗಗಳ ಸಚಿವರು)

**908 – ಕರ್ನಾಟಕ ಗೃಹ ಮಂಡಳಿಯ ಯೋಜನೆಗಳ ಬಗ್ಗೆ**

– ಶ್ರೀ ಎಂ.ಎ.ಗೋಪಾಲಸ್ವಾಮಿ

– ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**882 – ಚಾಲುಕ್ಯ ವೃತ್ತದಿಂದ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ರಸ್ತೆ ಕಲ್ಪಿಸುವ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**1082 – ಅರಣ್ಯ ಹಕ್ಕು ಕಾಯ್ದೆಯಡಿ ಬುಡಕಟ್ಟು ಸಮುದಾಯದವರ ಜಮೀನು ಮಂಜೂರಾತಿ ಬಗ್ಗೆ.**

– ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ

– ಶ್ರೀ ಬಿ.ಶ್ರೀರಾಮುಲು(ಸಮಾಜ ಕಲ್ಯಾಣ ಸಚಿವರು)

**ಅ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಬೆಂಗಳೂರು ಮಹಾನಗರದಲ್ಲಿ ಮೈದಾನಗಳು ನಿರ್ವಹಣೆಯಿಂದ ಹಾಳಾಗಿರುವ ಬಗ್ಗೆ.**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಹಾಗೂ ನಗುವಿನಹಳ್ಳಿ ಗ್ರಾಮಗಳ ಬಳಿ ಕೆಮಿಕಲ್ ಫ್ಯಾಕ್ಟರಿ ಮತ್ತು ಒಳಚರಂಡಿ ಕಲ್ಮಶ ನೀರು ಕಾವೇರಿ ನದಿಗೆ ಸೇರುತ್ತಿರುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ 2019–20 ಮತ್ತು 2020–21ನೇ ಸಾಲಿನಲ್ಲಿ ಪ್ರವಾಹ, ಅತಿವೃಷ್ಟಿ ಇತ್ಯಾದಿಗಳಿಂದ ಉಂಟಾಗಿರುವ ನಷ್ಟಕ್ಕೆ ಪರಿಹಾರ ವಿತರಣೆಯಾಗದಿರುವ ಬಗ್ಗೆ.**

– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**3.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂಬ ಕುಗ್ರಾಮಕ್ಕೆ ಸಾರಿಗೆ ಸೌಲಭ್ಯ ಒದಗಿಸದೆ ಇರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಪರವಾಗಿ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಕಲ್ಯಾಣ ಕರ್ನಾಟಕ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕದೇ ಇರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**ಇ) ಮೈಸೂರು ನಗರದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ಸುಸಜ್ಜಿತ ಚಿತ್ರನಗರಿ ಸ್ಥಾಪನೆ ಬಗ್ಗೆ.**

ಶ್ರೀ ಸಿ.ಸಿ.ಪಾಟೀಲ್(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು)

**4.ಕಾರ್ಯದರ್ಶಿಯವರ ವರದಿ**

**5.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಲೇವಾದೇವಿದಾರರ(ತಿದ್ದುಪಡಿ)ವಿಧೇಯಕ 2021**

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಗೋವಿಂದ ರಾಜು
– ಶ್ರೀ ಬಿ.ಕೆ.ಹರಿಪ್ರಸಾದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 2021**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪೌರಾಡಳಿತ ಸಚಿವರ ಪರವಾಗಿ)
– ಶ್ರೀ ಕೆ.ಎ.ತಿಪ್ಪೇಸ್ವಾಮಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**6.ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಅಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಮರಿತಿಬ್ಬೇಗೌಡ

~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(441) 17–03–2021/ 11–10/ ಕೆಹೆಚ್–ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 17ನೇ ಮಾರ್ಚ್ 2021***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪ ಸಭಾಪತಿ (ಶ್ರೀ ಎಂ.ಕೆ.ಪ್ರಾಣೇಶ್) ಅವರು ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01.ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1500**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 'ರಾಜ್ಯದಲ್ಲಿ ಏಕೈಕ ಪಶು ವಿಶ್ವವಿದ್ಯಾಲಯವು ಇದ್ದು ವಿಭಜನೆ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ವಿಭಜನೆ ಮಾಡಲು ಕಾರಣವೇನು;' ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು 'ಪ್ರಸ್ತುತ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ವಿಭಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ, ನನಗೆ ಇದರಲ್ಲಿ ಒಂದು ಸಂಶಯ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳವರು ಶಿವಮೊಗ್ಗ ಜಿಲ್ಲೆಯಲ್ಲಿ ಸಭೆ ಮಾಡಿದಾಗ ಶಿವಮೊಗ್ಗ ಜಿಲ್ಲೆಯಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಅದೇ ರೀತಿ ಇದಕ್ಕೆ ಪೂರಕವಾಗಿ ಅಲ್ಲಿನ ವೈಸ್ ಛಾನ್ಸಲರ್‌ರವರಾದ ಶ್ರೀ ನಾರಾಯಣಸ್ವಾಮಿರವರು ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದರೆ ದೂರವಾಗುತ್ತದೆ, ಆದ್ದರಿಂದ, ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವ ಉದ್ದೇಶದಿಂದ ಈ ವರದಿಯನ್ನು ತರಿಸಿದ್ದಾರೆ. ಈ ರೀತಿ ಯಾವ ಕಾರಣಕ್ಕಾಗಿ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ಹೈದರಾಬಾದ್–ಕರ್ನಾಟಕ ಬಹಳ ಹಿಂದುಳಿದ ಪ್ರದೇಶವಾಗಿದ್ದು, ಡಾ॥ ನಂಜುಂಡಪ್ಪ ವರದಿಯ ಆಧಾರದ ಮೇಲೆ ಈ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ನೇಮಕ ಮಾಡಲಿಲ್ಲ. ಆದರೆ, ಇದನ್ನು ವಿಭಜನೆ ಮಾಡಲು ಏನು ಉದ್ದೇಶ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರವಿಂದ ಕುಮಾರ ಅರಳಿಯವರು ನಮ್ಮ ಬೀದರ್ ಜಿಲ್ಲೆಯವರು. ನಾನು ಕೂಡ ಬೀದರ್ ಜಿಲ್ಲೆಯವನಾಗಿದ್ದೇನೆ. ಬೀದರ್ ಜಿಲ್ಲೆಯ ಪಶು ವೈದ್ಯಕೀಯ ವಿಶ್ವವಿದ್ಯಾಲಯವು 2005 ರಲ್ಲಿ ಪ್ರಾರಂಭವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ವೈಸ್ ಛಾನ್ಸಲರ್‌ರವರಾದ ಶ್ರೀ ನಾರಾಯಣಸ್ವಾಮಿರವರು ಹೇಳಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಈ ಇಲಾಖೆಯ ಮಂತ್ರಿಯಾಗಿದ್ದು, ಇಲ್ಲಿಯವರೆಗೆ ನನಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಸೂಚನೆ ಬಂದಿಲ್ಲ. ನಾನು ಯಾವುದೇ ಸಭೆಯನ್ನು ಮಾಡಿಲ್ಲ. ಈ ರೀತಿ ಮಾಡಬೇಕಾದರೆ ಇದು ಸಚಿವ ಸಂಪುಟಕ್ಕೆ ಬರಬೇಕು. ಇಲ್ಲವೇ ಚರ್ಚೆಯಾಗಬೇಕು. ಇದರ ಬಗ್ಗೆ ಪ್ರಸ್ತಾವನೆ ಬರಬೇಕು. ನಾನು ಯಾವುದೇ ಪ್ರಸ್ತಾವನೆಯನ್ನು ಮಾಡಿಲ್ಲ. ಆದ್ದರಿಂದ, ಇದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಇದಕ್ಕೆ ಯಾವುದೇ ಪ್ರಸ್ತಾವನೆ ಬಂದಿಲ್ಲ. ನಮ್ಮ ಗಮನಕ್ಕೂ ಬಂದಿಲ್ಲ. ಏಕೆಂದರೆ, ಇದರ ಬಗ್ಗೆ ನಮ್ಮ ಹತ್ತಿರ ಮಾತನಾಡಿಲ್ಲ ಮತ್ತು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿಯೂ ಸಹ ಮಾತನಾಡಿಲ್ಲ. ಅದಕ್ಕಾಗಿ ಇಲ್ಲಿಯವರೆಗೆ ಪ್ರಸ್ತುತ ಯಾವುದೇ ಪ್ರಸ್ತಾವನೆ ಇಲ್ಲ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಚಿವರೇ, ಸದ್ಯಕ್ಕಂತೂ ಯಾವುದೇ ಪ್ರಸ್ತಾಪ ಇಲ್ಲ. ಮುಂದೆ ಮಾಡಬಹುದು.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಆ ರೀತಿ ಏನು ಹೇಳುವುದಕ್ಕೆ ಆಗುವುದಿಲ್ಲ. ತಾವು ಹೇಗೆ ಹೇಳುತ್ತೀರಿ?

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಚಿವರೇ, ತಾವು ಹೇಳುತ್ತಿರುವ ಉದ್ದೇಶ ಹಾಗೆಯೇ ಇದೆ.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರವಿಂದ ಕುಮಾರ ಅರಳಿಯವರೇ, ಸದ್ಯಕ್ಕಂತೂ ಯಾವುದೇ ಪ್ರಸ್ತಾಪ ಇಲ್ಲ. ನಾನು ಈ ಇಲಾಖೆಗೆ ಮಂತ್ರಿಯಾಗಿದ್ದೀನಿ. ಇಲ್ಲಿಯತನಕ ಯಾವುದೇ ಪ್ರಸ್ತಾಪ ಬಂದಿಲ್ಲ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಚಿವರೇ, ನನ್ನ ವಾದ ಇಷ್ಟೇ. ಯಾವ ಮಾನ್ಯ ಸಚಿವರಿಗೆ ಗೊತ್ತಿಲ್ಲದೇ ಪಿ.ಸಿ., ಯವರ ಕಡೆಯಿಂದ ವರದಿಯನ್ನು ತರಿಸಿಕೊಳ್ಳುತ್ತಾರೆ ಹೇಳಿ.

**ಶ್ರೀ ಕೆ.ವಿ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಚಿವರೇ, ದಯಮಾಡಿ ತಾವು ಆ ರೀತಿ ಮಾಡಬಾರದು. ದೆಹಲಿ ಬಹು ದೂರ ಎಂದು . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ತಾವು ವಿಶ್ವವಿದ್ಯಾನಿಲಯಗಳ ಬದಲು ಕಾಲೇಜುಗಳನ್ನು ಕೇಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದಂತಹವರು ಪ್ರಶ್ನೆಯನ್ನು ಕೇಳಲಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸದಸ್ಯರುಗಳೇ, ಒಂದು ನಿಮಿಷ. ಸರ್ಕಾರದ ಮುಂದೆ ಆ ರೀತಿಯ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಬಹಳ ಸ್ಪಷ್ಟವಾಗಿ ಇಲಾಖೆಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು, ಇದಕ್ಕೆ . . .

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನಾನು ಹೇಳುವುದನ್ನು ಕೇಳಿ. ಗಲಾಟೆ ಮಾಡಬೇಡಿ. ಈಗ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದ ಮೇಲೆ ಇದನ್ನು ಮುಕ್ತಾಯ ಮಾಡಿ.

**ಉಪ ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲ ಎಂದ ಮೇಲೆ ತಾವು ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ಒಬ್ಬ ವಿ.ಸಿ., ಯವರು ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದಾರೆ. ಅವರು ವರದಿಯನ್ನು ತರಿಸಿಕೊಂಡಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ದಯಮಾಡಿ ಕುಳಿತುಕೊಳ್ಳಿ. ಇದರ ಬಗ್ಗೆ ಪ್ರಸ್ತಾಪ ಇಲ್ಲವೆಂದಾಗ ಮುಂದಿನ ವಿಚಾರಗಳನ್ನು . . .

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಕೇಳುವಂತಹ ಪ್ರಶ್ನೆಗಳು ಇವೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, . . .

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಎಂದು ಹೆಸರಿಟ್ಟು ಕಲ್ಯಾಣ ಮಾಡಿಕೊಳ್ಳುವುದಕ್ಕೆ ಹೊರಟಿದೆ. ಇದೇ ರೀತಿ ಕಲ್ಯಾಣ ಮಾಡಿಬಿಡುತ್ತೀರಿಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ನಾನು ಹೇಳುವುದನ್ನು ಕೇಳಿ. ಸರ್ಕಾರಕ್ಕೆ 108 ಜನರು 108 ಪ್ರಸ್ತಾವನೆಗಳನ್ನು ಸಲ್ಲಿಸಬಹುದು. ಆದರೆ, ಸರ್ಕಾರ ಒಪ್ಪಿದಾಗ ಮಾತ್ರ ಅದು ಅಧಿಕೃತ ಆದೇಶವಾಗುತ್ತದೆ. ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಯಾವುದೇ ಪ್ರಸ್ತಾವನೆ ಇಲ್ಲ ಎಂದ ಮೇಲೂ ಅದರ ಮೇಲೆ ಪ್ರಶ್ನೆಗಳನ್ನು ಕೇಳುತ್ತೀರಿಯೇ?

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೇಳಲಿಲ್ಲವೆಂದರೆ, ನಾನು ಮಾನ್ಯ ಸಚಿವರಿಗೆ ಬೇರೆ ಪ್ರಶ್ನೆಗಳನ್ನು ಕೇಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಯಾವ ಪ್ರಶ್ನೆಯನ್ನು ಕೇಳಿದ್ದೀರಿ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಭಾಪತಿಯವರೇ, ನಾನು ಸಿಬ್ಬಂದಿ ನೇಮಕಾತಿಯ ಬಗ್ಗೆ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿದ್ದೇನೆ. ಇನ್ನು ಸಿಬ್ಬಂದಿ ನೇಮಕಾತಿ ಏಕೆ ಆಗಿಲ್ಲ? ಮಾನ್ಯ ಸಚಿವರು ಕರೋನಾ ನೆಪವನ್ನು ಹೇಳುತ್ತಿದ್ದಾರೆ. ಇದರ ಜೊತೆಗೆ ಮಾನ್ಯ ಸಚಿವರು ಆರ್ಥಿಕ ಇಲಾಖೆಯ ನೆಪವನ್ನು ಹೇಳುತ್ತಿದ್ದಾರೆ. ಈ ನೇಮಕಾತಿ ಪ್ರಕ್ರಿಯೆಗೆ ಆರ್ಥಿಕ ಇಲಾಖೆಯವರ ಅನುಮತಿ ಬೇಕಾಗಿಲ್ಲ. ಹೈದರಾಬಾದ್–ಕರ್ನಾಟಕದಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಬಹುದು. ಆದ್ದರಿಂದ, ಇನ್ನು ನೇಮಕ ಏಕೆ ಆಗಿಲ್ಲ, ಮಾನ್ಯ ಸಚಿವರು ಪ್ರತಿಯೊಂದಕ್ಕೂ ಕರೋನಾ ಎಂದು ಹೇಳಿದರೆ ಹೇಗೆ?

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರವಿಂದ ಕುಮಾರ ಅರಳಿಯವರಿಗೆ, ನಾನು ಲಿಖಿತ ಉತ್ತರವನ್ನು ಕೊಟ್ಟಿದ್ದೇನೆ. ಅವರಿಗೆ ಏನು ಅರ್ಥವಾಗಿದೆ ಎಂಬುದು ನನಗೆ ಗೊತ್ತಿಲ್ಲ. ಕರೋನಾ ಎಲ್ಲಾ ವಿಷಯದಲ್ಲಿಯೂ ಸಹ ಇದೆ. ನಾನು ಕರೋನಾ, ಕರೋನಾ ಎಂದು ಹೇಳುತ್ತಿಲ್ಲ. ಎಲ್ಲಾ ಕಡೆಯಲ್ಲಿಯೂ ಕರೋನಾ ಇದೆ.

**ಶ್ರೀ ಅರವಿಂದ ಕುಮಾರ ಅರಳಿ:–** ಮಾನ್ಯ ಸಚಿವರೇ, ಕರೋನಾ 24 ತಾಸುಗಳಲ್ಲೂ ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆರ್ಥಿಕ ಇಲಾಖೆಯಲ್ಲಿ ಬಾಕಿ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ, ನೇಮಕಾತಿ ಮಾಡುವಂತಹ ಪ್ರಕ್ರಿಯೆಯನ್ನು ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ ಅರಳಿಯವರೇ, ಮಾನ್ಯ ಸಚಿವರು ಹೇಳುತ್ತಿರುವಂತಹ ಉತ್ತರವನ್ನು ಕೇಳಿ. ಮಾನ್ಯ ಸಚಿವರು ಮಾತನಾಡಿದ ಮೇಲೆ ತಾವು ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕದಲ್ಲಿ ಆರ್ಥಿಕ ಮಿತವ್ಯಯ applicable ಆಗುವುದಿಲ್ಲ ಎಂದು ಹೇಳಿ. . .

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕಕ್ಕೆ ಆಗುವುದಿಲ್ಲ ಎಂದು ನಾವು ಹೇಳಿದ ಮೇಲೆ ಎಫ್.ಡಿ.ಯಲ್ಲಿ ಇದೆ ಎಂದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಕರೋನಾ ಇರಬಹುದು, ನಾನು ಕರೋನಾ ಇಲ್ಲ ಎಂದು ಹೇಳುವುದಿಲ್ಲ. ಇದು ಕೇವಲ ಕರ್ನಾಟಕದಲ್ಲಿ ಇಲ್ಲ. ಇಡೀ ದೇಶ ವ್ಯಾಪಿಯಾಗಿ ಹರಡಿದೆ. ಆರ್ಟಿಕಲ್ 371ಜೆ ಪ್ರಕಾರ ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಿದೆ. ಹೈದರಾಬಾದ್-ಕರ್ನಾಟಕ ಏರಿಯಾದಿಂದ ಕಲ್ಯಾಣ ಕರ್ನಾಟಕ ಏರಿಯಾಗೆ ಆರ್ಥಿಕ ಮಿತವ್ಯಯ applicable ಆಗುವುದಿಲ್ಲ ಎಂದು clear cut ಆಗಿ ಒಂದು ತೀರ್ಮಾನವಾಗಿದೆ. ಮತ್ತೆ ತಾವು ಕರೋನಾ ಎಂದು ಹೇಳುತ್ತೀರಿ. ತಾವು ಕರೋನಾ ಎಂದು ಹೇಳಬೇಡಿ. ಮತ್ತೆ ಬೇರೆ ಏನಾದರೂ ಕಾರಣವನ್ನು ಹೇಳಿ. ಬೊಕ್ಕಸ ಖಾಲಿಯಾಗಿದೆ, ದಿವಾಳಿಯಾಗಿದೆ ಎಂದು ಹೇಳಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಾನು ಈ ಇಲಾಖೆಗೆ ಹೋದ ಮೇಲೆ ನನಗೆ ಸಿಕ್ಕಿರುವ ಉತ್ತರವನ್ನು ತಮ್ಮ ಮುಂದೆ ಕೊಡುತ್ತಿದ್ದೇನೆ. ಇದರ ಬಗ್ಗೆ ಪರಿಶೀಲನೆ ಮಾಡಿ, ಚರ್ಚೆ ಮಾಡಿ, ಇದನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನವನ್ನು confuse ಮಾಡುವುದಕ್ಕೆ ಹೋಗಬಾರದು. ಈಗಾಗಲೇ ಹಿರಿಯ ಸದಸ್ಯರಾದ ಶಶೀಲ್ ಜಿ.ನಮೋಶಿಯವರು ಈ ಹಿಂದೆ ಯಾವುದೋ ಒಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುವಾಗ ಹೈದರಾಬಾದ್-ಕರ್ನಾಟಕ ನೇಮಕಾತಿಗೆ ಯಾವುದೇ ಆರ್ಥಿಕ ಇಲಾಖೆಯ ಅನುಮತಿ ಇಲ್ಲ ಎಂದು ಹೇಳಿದ್ದಾರೆ. ಪದೇ ಪದೇ ಅವರು ಈ ರೀತಿ ಉಪಯೋಗ ಮಾಡಿ ಏಕೆ ಮರೆಮಾಡುತ್ತಿದ್ದಾರೆ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ವಿಶ್ವವಿದ್ಯಾನಿಲಯದ ಪ್ರಶ್ನೆ ಮಾತ್ರವಲ್ಲ. ದಯಮಾಡಿ ಮಾನ್ಯ ಪಶು ಸಂಗೋಪನಾ ಸಚಿವರು ಗಮನಹರಿಸಬೇಕು. ಪಶು ಸಂಗೋಪನೆ ಇಲಾಖೆಯಲ್ಲಿರುವ ವೈದ್ಯರು ಇ.ಓ., ಗಳಾಗಿದ್ದಾರೆ. ಎಲ್ಲಿಯೂ ಕೂಡಾ ವೈದ್ಯರುಗಳು ಇಲ್ಲ. ಅವರೆಲ್ಲಾ ಇ.ಓ.,ಗಳಾಗಿದ್ದಾರೆ, ಅದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅವರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಶೀಘ್ರದಲ್ಲಿಯೇ ಆರ್ಥಿಕ ಇಲಾಖೆಯವರ ಜೊತೆ ಮತ್ತು ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಪರಿಹರಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ ಅರಳಿಯವರೇ, ತಾವು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೀರಿ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಇದನ್ನು ನಾನು ಮನೆಗೆ ಕೊಟ್ಟು ಕಳುಹಿಸುತ್ತೇನೆ. ನಾನು ಅಲ್ಲಿಯೇ ಉಳಿದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1435**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, 'ರಾಜ್ಯದಲ್ಲಿ ಶಾಸನಬದ್ಧವಾಗಿ ಅಕ್ರಮ ಸಕ್ರಮ ಯೋಜನೆಯ ನಮೂನೆ–57 ರಲ್ಲಿ ಅರ್ಜಿಯನ್ನು ಸಲ್ಲಿಸಲು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ' ಎಂದು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅರ್ಜಿಗಳು ಎಷ್ಟು ಬಂದಿದೆ ಎನ್ನುವುದಕ್ಕೂ ಸಹ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಲೋಕಸಭಾ ಚುನಾವಣೆ ಘೋಷಣೆಯಾದ ದೃಷ್ಟಿಯಿಂದ ಅರ್ಜಿಗಳನ್ನು ಸಲ್ಲಿಸುವುದಕ್ಕೆ ದಿನಾಂಕ: 17–03–2018 ರಿಂದ ದಿನಾಂಕ:16–03–2019ರವರೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಲೋಕಸಭಾ ಚುನಾವಣೆ ದಿನಾಂಕ:10–03–2018 ರಂದು ಘೋಷಣೆಯಾಗಿದೆ. ತಾವು ದಿನಾಂಕ:16–03–2019 ರವರೆಗೆ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ತಾವು ಕೂಡ ಅವಕಾಶ ಕೊಟ್ಟಿದ್ದೇವೆ ಎಂದು ಒಪ್ಪಿಕೊಂಡಿದ್ದೀರಿ. 'ಈ ಸಂದರ್ಭದಲ್ಲಿ ಕೇಂದ್ರ ಚುನಾವಣಾ ಆಯೋಗವು ದಿನಾಂಕ:10–03–2019ರ ಅಧಿಸೂಚನೆಯ ಮೂಲಕ ಸಾರ್ವತ್ರಿಕ ಲೋಕಸಭಾ ಚುನಾವಣೆಯನ್ನು ಘೋಷಿಸಿದ ಪ್ರಯುಕ್ತ ಜಾರಿಗೊಂಡ ಚುನಾವಣೆ ಮಾದರಿ ನೀತಿ ಸಂಹಿತೆಯ ನಂತರವೂ ರೈತರ ಹಿತದೃಷ್ಟಿಯಿಂದ ಉಡುಪಿ ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ನಮೂನೆ–57ರ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ದಿನಾಂಕ:10–03–2019 ರಂದು ಚುನಾವಣೆ ಘೋಷಣೆಯಾಗಿದೆ. ಬೈಂದೂರು ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ದಿನಾಂಕ:11–03–2019 ರಂದು ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕವಾಗಿರುತ್ತದೆ. ಬ್ರಹ್ಮಾವರ ತಾಲ್ಲೂಕಿನಲ್ಲಿ ದಿನಾಂಕ:12–03–2019 ಮತ್ತು ಉಡುಪಿ ತಾಲ್ಲೂಕಿನಲ್ಲಿ ದಿನಾಂಕ:13–03–2019 ರಂದು ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕವಾಗಿರುತ್ತದೆ. ಕಾಪು, ಕಾರ್ಕಳ, ಹೆಬ್ರಿ ಈ ಮೂರು ತಾಲ್ಲೂಕುಗಳಲ್ಲಿ ದಿನಾಂಕ:14–03–2019 ರಂದು ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕವಾಗಿರುತ್ತದೆ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ರೀತಿಯ ತೀರ್ಮಾನಗಳು ಆಯಿತು. ಆದರೂ ಸಹ ನಮಗೆ ಇನ್ನು ಅರ್ಥವಾಗಿಲ್ಲ ಎಂದು ಕಾಣಿಸುತ್ತದೆ. ಯಾವುದೇ ಕಾಯ್ದೆಯಲ್ಲಿ ದಿನವನ್ನು ನಿಖರವಾಗಿ ನಮೂದಿಸಿದ ನಂತರ ಯಾವುದೇ ಚುನಾವಣೆಗಳು ಇದಕ್ಕೆ ಅನ್ವಯಿಸುವುದಿಲ್ಲ. ಬಹುಶಃ ಅಂದಿನ ಜಿಲ್ಲಾಧಿಕಾರಿಯವರು ಅದನ್ನು ತಡೆ ಹಿಡಿಯಿರಿ ಎಂದು ಹೇಳಿದ್ದರು. ಅದಕ್ಕೆ ಪೂರಕವಾದ ಎಲ್ಲಾ ವ್ಯವಸ್ಥೆಗಳು ಆಯಿತು.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(442) 17/03/2021/ಎಸ್‌ಪಿಆರ್/ಎಂಡಿ/11:20**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಮುಂದು):–**

ಇದಕ್ಕೆ ನೀವು ಹೊಣೆ ಎಂದು ನಾನು ಹೇಳುವುದಿಲ್ಲ. 'ಉಡುಪಿ ಜಿಲ್ಲಾ ರೈತ ಸಂಘದಿಂದ ಕಂದಾಯ ಸಚಿವರಿಗೆ ಮನವಿ' ಎನ್ನುವ ವಿಚಾರವಾಗಿ ನಾವು ಅಂದಿನ ಸಚಿವರಾಗಿದ್ದ ಶ್ರೀ ಆರ್.ವಿ.ದೇಶಪಾಂಡೆರವರ ಬಳಿ ಮನವಿ ಮಾಡಿದ್ದೆವು. ಆದರೆ ಒಂದು ಕಾಯ್ದೆಯನ್ನು ಅರ್ಥೈಸಿಕೊಳ್ಳುವುದಕ್ಕೆ ಆಗದೇ, ಏಳು ದಿನಗಳವರೆಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಮಾಡಿಕೊಡದೇ ಇರುವುದು ತಪ್ಪು. ಇದನ್ನು ಸರ್ಕಾರವು ಸರಿಪಡಿಸಿಕೊಳ್ಳಬೇಕು. ಇದನ್ನು ಸರಿಪಡಿಸಿದರೆ, ನನ್ನ ಪ್ರಶ್ನೆ ಇರುವುದಿಲ್ಲ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಾಜಿ ಸಭಾಪತಿಗಳು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಅವರು ತಿಳಿಸಿದಂತೆ, ಪ್ರಶ್ನಿತ ಅವಧಿಯಲ್ಲಿ ಕಾನೂನು ಪ್ರಕಾರ ಅರ್ಜಿಗಳನ್ನು ತೆಗೆದುಕೊಂಡು, ನಾವುಗಳು ಅದನ್ನು ಅಪ್‌ಲೋಡ್ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡುವುದಕ್ಕಾಗಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಸರಿಯಾದ ನಿರ್ದೇಶನ ಹೋಗಬೇಕಾಗಿತ್ತು. ಆದರೆ ಹೋಗಿಲ್ಲ. ಹೀಗಾಗಿ ಆ ಅವಧಿಯಲ್ಲಿನ ಎಲ್ಲಾ ಅರ್ಜಿಗಳನ್ನು . . .

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆ ಅವಧಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಿಲ್ಲ. ಅರ್ಜಿಗಳನ್ನು ಸ್ವೀಕರಿಸುವುದಿಲ್ಲವೆಂದು ಅಲ್ಲಿ ಬೋರ್ಡ್‌ನ್ನು ಹಾಕಿದಾಗ ಅರ್ಜಿಗಳನ್ನು ಸ್ವೀಕರಿಸುವ ಪ್ರಶ್ನೆ ಎಲ್ಲಿಂದ ಬಂತು? ಸರ್ಕಾರವು ನೀಡಿದ ಉತ್ತರದಲ್ಲಿ ಈ ಸಂಗತಿಯು ಗೊತ್ತಾಗುತ್ತದೆ. ಬೈಂದೂರು ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕ 11/03/2019 ಆಗಿದ್ದು, ಬ್ರಹ್ಮಾವರ ತಾಲ್ಲೂಕಿನಲ್ಲಿ ದಿನಾಂಕ 12/03/2019 ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ 16/03/2019 ನೇ ತಾಕೀಖಿನವರೆಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದ್ದರೂ ಸಹ ಕಾಯ್ದೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ, ಇಲಾಖೆಯಿಂದಾಗಿರುವ ತಪ್ಪಿನಿಂದಾಗಿ ಬಹಳಷ್ಟು ರೈತರಿಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಆಗಿರುವುದಿಲ್ಲ. ಆ ಸಂದರ್ಭದಲ್ಲಿ ಸಚಿವರು ವಿರೋಧ ಪಕ್ಷದ ಸ್ಥಾನದಲ್ಲಿದ್ದು, ಅವರು ತಮ್ಮ ಪ್ರಯತ್ನವನ್ನು ಮಾಡಿದ್ದರು. ಆದರೆ ಒಂದು ಬಾರಿ ಕಾಯ್ದೆಯಲ್ಲಿ ಅವಕಾಶ ನೀಡಿರುವುದರಿಂದ, ನಾವು ಬಾಯಿ ಮಾತಿನಲ್ಲಿ ಹೇಳುವಷ್ಟು ಸುಲಭದ ರೀತಿಯಲ್ಲಿ ಪುನಃ ಅವಕಾಶವನ್ನು ಮಾಡಿಕೊಡುವುದಕ್ಕಾಗುವುದಿಲ್ಲ; ಕಾಯ್ದೆಗೆ ತಿದ್ದುಪಡಿಯನ್ನು ಮಾಡಲೇ ಬೇಕಾಗುತ್ತದೆ. ಇದರಲ್ಲಿ ರೈತರದ್ದು ಯಾವ ರೀತಿಯಾದ ತಪ್ಪಿದೆ? ಜಿಲ್ಲಾಧಿಕಾರಿಗಳಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಯ್ದೆಯನ್ನು ಸರಿಯಾಗಿ ಅರ್ಥೈಸಿಕೊಳ್ಳುವುದಕ್ಕಾಗದೇ ಆಗಿರುವ ತಪ್ಪನ್ನು ಮಂತ್ರಿಗಳು ಸರ್ಕಾರದ ಭಾಗವಾಗಿ, ಅದನ್ನು ಸಮರ್ಥಿಸಬಾರದು. ತಪ್ಪಾಗಿರುವುದನ್ನು ಸರಿ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಅಪ್‌ಲೋಡ್ ಮಾಡಿರುವುದಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದು ಹೇಗೆ? ಸುಮ್ಮನೆ ಸಚಿವರು ಸಮರ್ಥಿಸಿಕೊಳ್ಳಬಾರದು.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲು ಕಾಯ್ದೆಗೆ ತಿದ್ದುಪಡಿಯನ್ನು ಮಾಡಬೇಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಕಾಯ್ದೆಗೆ ತಿದ್ದುಪಡಿಯ ಅವಶ್ಯಕತೆ ಇದ್ದರೆ, ಅದನ್ನು ಮಾಡಿ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಕಾಯ್ದೆಗೆ ತಿದ್ದುಪಡಿಯನ್ನು ಮಾಡಿ 2019 ನೇ ಇಸವಿಯಲ್ಲಿ ಒಂದು cut-off date ಅನ್ನು ನಿಗದಿಪಡಿಸಲಾಗಿತ್ತು. ಅಲ್ಲಿಗೆ ಅದು ಮುಗಿಯಿತು. ಪುನಃ ಈಗ ಹೊಸದಾಗಿ ಮಾಡಬೇಕಾದರೆ, ಅದನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಕಾನೂನಿಗೆ ಬದಲಾವಣೆಯನ್ನು ಮಾಡಬೇಕಾಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರವು ಮಾಡಬೇಕು. ಇದರಲ್ಲಿ ರೈತರದ್ದು ಯಾವ ರೀತಿಯಾದ ತಪ್ಪಿದೆ? ಕಾಯ್ದೆಗೆ ಸಚಿವರೇ ವ್ಯತಿರಿಕ್ತವಾಗಿ . . .

**ಉಪಸಭಾಪತಿಯವರು:–** ಶ್ರೀ ಪ್ರತಾಪಚಂದ್ರ ಶೆಟ್ಟಿಯವರೇ, ಸಚಿವರು ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಲ್ಲಿಗೆ ಸಾಕು. ನೀವು ನಿಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ನೀತಿಯ ಪ್ರಕಾರ ನಾನು ಕೇಳುತ್ತಿದ್ದೇನೆ. ನಾನು ಕೇವಲ ಉಡುಪಿ ಜಿಲ್ಲೆಗೆ ಮಾತ್ರವೇ ಮಾಡಿಕೊಡಿ ಎಂದು ಕೇಳುವುದಿಲ್ಲ. ಇದನ್ನು ಇಡೀ ರಾಜ್ಯಕ್ಕೆ ಮಾಡಿಕೊಡಿ. ಎಲ್ಲಿಯೋ ಒಂದು ಕಡೆ ತಪ್ಪಾಗಿದೆ. ಹೀಗಾಗಿ ಇದನ್ನು ಸರಿಪಡಿಸಬೇಕು. ಇಲ್ಲದಿದ್ದರೆ ರೈತರು ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ. ಸರ್ಕಾರವು ನೀಡಿರುವ ದಾಖಲೆಯು ನ್ಯಾಯಾಲಯಕ್ಕೆ ಹೋಗಲು ಸಾಕಾಗುತ್ತದೆ. ಒಬ್ಬ ರೈತನು ನ್ಯಾಯಾಲಯಕ್ಕೆ ಹೋಗಿ ನ್ಯಾಯವನ್ನು ಕೇಳುವುದಕ್ಕಿಂತ ಈ ಸದನದಲ್ಲಿ ನ್ಯಾಯ ಕೇಳುವುದು ಸೂಕ್ತವಲ್ಲವೆ?

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಅಂದಿನ ಆರು ದಿನಗಳವರೆಗೆ ಸ್ವೀಕರಿಸಿದ ಅರ್ಜಿಗಳನ್ನು ಅಪ್‌ಲೋಡ್ ಮಾಡಿರುವುದಿಲ್ಲ. ಹೀಗಾಗಿ ಲಕ್ಷಾಂತರ ಅರ್ಜಿಗಳು ಬಾಕಿಯಿವೆ. ಹೀಗಾಗಿ ಅವುಗಳನ್ನು ಅಪ್‌ಲೋಡ್ ಮಾಡಲು ನಾನು ಅನುಮತಿಸುತ್ತೇನೆ. ಇದಕ್ಕೆ ಯಾವುದೇ ಕಾನೂನಿನ ತಿದ್ದುಪಡಿಯ ಅವಶ್ಯಕತೆ ಇಲ್ಲ. ಹೀಗಾಗಿ ಆ ಆರು ದಿನಗಳವರೆಗೆ ಅಪ್‌ಲೋಡ್‌ಗಾಗಿ ಬಾಕಿಯಿರುವ ಲಕ್ಷಾಂತರ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಅವಕಾಶ ನೀಡಲಾಗುವುದು. ಸದಸ್ಯರು ಪ್ರಸ್ತಾಪಿಸಿದಂತೆ, ಈಗಿರುವ ಕಾನೂನಿಗೆ ಬದಲಾವಣೆಯನ್ನು ತಂದು ಅರ್ಜಿ ಸಲ್ಲಿಸಲು ಅವಕಾಶವನ್ನು ನೀಡಬೇಕೆಂದು ಸದನದ ಎಲ್ಲಾ ಸದಸ್ಯರುಗಳು ಪ್ರಸ್ತಾಪಿಸಿದ್ದಾರೆ. ಅದೇ ರೀತಿಯಾಗಿ ಆ ಭಾಗದ ಬಹಳಷ್ಟು ಶಾಸಕರುಗಳು ಈಗಾಗಲೇ ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳನ್ನೂ ಸಹ ನಾನು ಪರಿಶೀಲಿಸುತ್ತಿದ್ದೇನೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಲಾಗುವುದು. ಈ ಹಿಂದೆ ನಾನು ಕಾನೂನಿಗೆ ತಿದ್ದುಪಡಿಯನ್ನು ತರಬೇಕೆಂದು ಪ್ರಯತ್ನಿಸಿದ್ದೆನು. ಆಗ ಮುಖ್ಯಮಂತ್ರಿಗಳು ಸ್ವಲ್ಪ ದಿನಗಳವರೆಗೆ ಇದನ್ನು ತಡೆಹಿಡಿಯಲು ಸೂಚಿಸಿದ್ದರು. ಅದರನ್ವಯ ಅದನ್ನು ತಡೆಹಿಡಿಯಲಾಗಿದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ರೈತರಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅಕ್ರಮ–ಸಕ್ರಮ ಯೋಜನೆಯ ಸಮಿತಿಯಲ್ಲಿ ಎಂ.ಎಲ್.ಸಿ.ಗಳಿಗೂ ಸಹ ಸ್ಥಾನ ಕೊಡಿ. ಆದರೆ ಅದನ್ನು ಏಕೆ ನೀಡುತ್ತಿಲ್ಲ?

**ಉಪಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿ ಎಂಬುದು ನಿಮಗೂ ಸಹ ತಿಳಿದಿದೆ. ಹೀಗಾಗಿ ದಯವಿಟ್ಟು ಈಗ ಮಧ್ಯದಲ್ಲಿ ಚರ್ಚೆಯನ್ನು ಮಾಡಿದರೆ ಆಗುವುದಿಲ್ಲ. ದಯವಿಟ್ಟು ಸದಸ್ಯರು ಕುಳಿತುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರಶ್ನಿತ ಆರು ದಿನಗಳಲ್ಲಿ ಮಿಸ್ ಆಗಿ ಅಪ್‌ಲೋಡ್ ಆಗದಿರುವ ಲಕ್ಷಾಂತರ ಅರ್ಜಿಗಳಿದ್ದು, ಅವುಗಳನ್ನು ಅಪ್‌ಲೋಡ್ ಮಾಡುವುದಕ್ಕೆ ನಮಗೆ ಅಧಿಕಾರವಿದೆ, ಹೀಗಾಗಿ ಇದಕ್ಕೆ ಅವಕಾಶವನ್ನು ನೀಡುತ್ತೇನೆ. ಮುಂದುವರೆದು, ಈಗಿರುವ ಕಾನೂನಿಗೆ ಬದಲಾವಣೆಯನ್ನು ಮಾಡುವ ವಿಚಾರದಲ್ಲಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಕಾನೂನಿಗೆ ಬದಲಾವಣೆಯನ್ನು ತರುವ ಪ್ರಯತ್ನ ಮಾಡುತ್ತೇನೆ. ನಾನೂ ಸಹ ಇದರ ಪರವಾಗಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅರ್ಜಿಗಳ upload or download ಯಾವುದೂ ಬೇಕಾಗಿಲ್ಲ. ಅಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಬೋರ್ಡ್‌ನ್ನು ಹಾಕಲಾಗಿತ್ತು. ಆಗ ಅಲ್ಲಿ ಹೇಗೆ ಅರ್ಜಿಗಳು ಬರುತ್ತವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅಕ್ರಮ-ಸಕ್ರಮ ಯೋಜನೆಯ ನಮೂನೆ – 57 ರನ್ವಯ ಅರ್ಜಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಲೋಕಸಭಾ ಚುನಾವಣೆಯು ಘೋಷಣೆಯಾಗಿತ್ತು. ಇದಾದ ತಕ್ಷಣವೇ ಆಯಾಯ ಜಿಲ್ಲಾಧಿಕಾರಿಗಳು 'ಚುನಾವಣಾ ನೀತಿ ಸಂಹಿತೆ ಬಂದಿದೆ, ಹೀಗಾಗಿ ಹೊಸ ಅರ್ಜಿಗಳನ್ನು ಸ್ವೀಕರಿಸಬೇಡಿ' ಎಂಬ ಸೂಚನೆಯನ್ನು ನೀಡಿರುತ್ತಾರೆ. ಆಗ ಎಲ್ಲರಿಗೂ ಗೊಂದಲವಾಗಿತ್ತು. ಆ ಸಂದರ್ಭದಲ್ಲಿ ನಾವು ಮತ್ತು ನೀವುಗಳೆಲ್ಲರೂ ಮಧ್ಯ ಪ್ರವೇಶ ಮಾಡಿದ್ದೆವು. ಕಡೆಗೆ ಅದನ್ನು ಸ್ಥಗಿತಗೊಳಿಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಆರ್.ವಿ.ದೇಶಪಾಂಡೆರವರು ಕಂದಾಯ ಮಂತ್ರಿಗಳಾಗಿದ್ದರು. ಆಗ ನಾನು ಮತ್ತು ಮಂತ್ರಿಗಳು ಇದರ ಬಗ್ಗೆ ಹೇಳಿದ್ದೆವು. ಅರ್ಜಿಗಳು ಸ್ವೀಕರಿಸಿಲ್ಲವಾದ್ದರಿಂದ ಇದಕ್ಕೆ ಮತ್ತೊಂದು ಅವಕಾಶವನ್ನು ನೀಡುವುದಾಗಿ ಹೇಳಿದರು. ಆದರೆ ನೀಡಿರಲಿಲ್ಲ. ಹೀಗಾಗಿ ಉಳಿದಿರುವ ಅರ್ಜಿಗಳನ್ನು ಈಗ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಸ್ತಾಪಿಸಿದ್ದಾರೆ. ಇದಕ್ಕೆ ಕಂದಾಯ ಮಂತ್ರಿಗಳು ಉತ್ತರಿಸಿದ್ದಾರೆ. ಅದರಂತೆ, ನಮ್ಮ ಮಿತಿಯೊಳಗೆ ಏನಾದರೂ ಮಾಡಿ ಅರ್ಜಿಗಳನ್ನು ತೆಗೆದುಕೊಳ್ಳಲು ಅವಕಾಶವಿದ್ದರೆ, ತೆಗೆದುಕೊಳ್ಳಲಾಗುವುದು. ಒಂದು ವೇಳೆ ಹೀಗೆ ಮಾಡಲು ಆಗದಿದ್ದರೆ ಆಗ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾದರೆ, ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಅದಕ್ಕೆ ಅವಶ್ಯಕವಾದ ಪೂರಕ ವಾತಾವರಣವನ್ನು ನಿರ್ಮಾಣ ಮಾಡುತ್ತೇವೆಂದು ತಿಳಿಸಿದ್ದಾರೆ. ಹೀಗಾಗಿ ಇದಕ್ಕಿಂತಲೂ ಒಳ್ಳೆಯ ಉತ್ತರವನ್ನು ಹೇಗೆ ನಿರೀಕ್ಷೆ ಮಾಡುತ್ತೀರಿ?

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇದಕ್ಕಿಂತಲೂ ಒಳ್ಳೆಯ ಉತ್ತರ ಸಿಗುವುದಿಲ್ಲ. ನೀವು ಬಹಳ ಸಹಾನುಭೂತಿಯಿಂದ, ರೈತರ ಬಗೆಗಿನ ಅನುಕಂಪದಿಂದ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದೀರೆಂದು ನಾವು ಭಾವಿಸೋಣ. ಆದರೆ ರೈತರ ಹಕ್ಕಿಗೆ ಚ್ಯುತಿಯಾಗಿದೆ ಎಂದು ನಾನು ಹೇಳುತ್ತೇನೆ. ಇಲ್ಲವೆಂದು ನೀವು ಹೇಳುವುದಕ್ಕಾಗುವುದಿಲ್ಲ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರೇ ಈ ವಿಚಾರದ ಬಗ್ಗೆ ಚರ್ಚಿಸುವುದು ಬೇಡ. ಪ್ರಶ್ನೋತ್ತರ ಅವಧಿಯಲ್ಲಿ ಚರ್ಚಿಸುತ್ತಾ ಹೋದರೆ, ಇದನ್ನು ಒಂದು ಘಂಟೆಯ ಅವಧಿಯಲ್ಲಿ ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಹೀಗಾಗಿ ಬೇರೆ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸಲು ನಿಯಮಾನುಸಾರ ಅವಕಾಶ ಮಾಡಿಕೊಡಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ರೈತರ ಹಕ್ಕಿಗೆ ಚ್ಯುತಿ ಮಾಡಿರುವುದು ಈಗಿನ ಕಂದಾಯ ಮಂತ್ರಿಗಳಲ್ಲ. ಈ ಹಿಂದೆ ಆಗಿರುವ ತಪ್ಪನ್ನು ಸರಿಪಡಿಸಿಕೊಡುವುದಾಗಿ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅಕ್ರಮ-ಸಕ್ರಮ ಯೋಜನೆಯ ಸಮಿತಿಯಲ್ಲಿ ಎಂ.ಎಲ್.ಎ.ಗಳು ಅಧ್ಯಕ್ಷರಾಗಿರುತ್ತಾರೆ. ಹೀಗಾಗಿ ಎಂ.ಎಲ್.ಸಿ.ಗಳು ಅಲ್ಲಿ ಸದಸ್ಯರಾಗಿ ಇರಬೇಕಲ್ಲವೇ?

**ಉಪಸಭಾಪತಿಯವರು:-** ಮಾನ್ಯ ಸದಸ್ಯರೇ, ಇದನ್ನು ಚರ್ಚಿಸುವ ಸಮಯ ಇದಲ್ಲ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೆಯನ್ನು ಕೇಳಿದ್ದಾರೆ; ಸಚಿವರು ಅದಕ್ಕೆ ಉತ್ತರಿಸುತ್ತಿದ್ದಾರೆ. ಶ್ರೀ ಭೋಜೇಗೌಡರೇ, ದಯಮಾಡಿ ಕುಳಿತುಕೊಳ್ಳಿ ಹಾಗೂ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಿ. ನಿಮಗೆ ಮಾತನಾಡಲು ಅವಕಾಶವಿಲ್ಲ. ಇವರು ಮಾತನಾಡಿರುವುದನ್ನು ಯಾವುದೂ ಕಡತಕ್ಕೆ ತೆಗೆದುಕೊಳ್ಳಬೇಡಿ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ರವರು ಮಾತನಾಡಿರುವುದನ್ನು ದಾಖಲಿಸದಿರಲು ಸೂಚನೆ ನೀಡಿದ್ದರಿಂದ ಅದನ್ನು ದಾಖಲಿಸಿರುವುದಿಲ್ಲ)**

ಇದು ಪ್ರಶ್ನೋತ್ತರ ಅವಧಿಯಾಗಿರುವುದರಿಂದ ಸದಸ್ಯರು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಇದರ ಬಗ್ಗೆ ಎಷ್ಟು ಬಾರಿ ಹೇಳಿದರೂ ಸಹ ಸದಸ್ಯರುಗಳು ಪುನಃ ಇದನ್ನೇ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಉತ್ತರಿಸಲಾಗುವುದು. ಪ್ರಶ್ನಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಇನ್ನು ಅಪ್‌ಲೋಡ್ ಆಗಲು ಬಾಕಿಯಿರುವ ಅರ್ಜಿಗಳಿಗೆ ಅನುಮತಿ ನೀಡುತ್ತೇನೆ. ಇದಕ್ಕೆ ಸಂಬಂಧಿತ ಕಾನೂನಿಗೆ ಬದಲಾವಣೆ ಮಾಡುವ ಚಿಂತನೆಯು ಸರ್ಕಾರಕ್ಕಿದೆ ಮತ್ತು ಇದನ್ನು ಮಾಡುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1276**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರವನ್ನು ದಾಖಲೆಯೊಂದಿಗೆ ಒದಗಿಸಿದ್ದು, ಸಂತೋಷವಾಗಿದೆ. ಮತ್ತೊಂದು ಪ್ರಶ್ನೆಗೆ, 'ಸರ್ಕಾರದ ಗಮನಕ್ಕೆ ಬಂದಿದೆ' ಎಂಬುದಾಗಿ ಉತ್ತರಿಸಲಾಗಿದೆ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ರಸ್ತೆಗಳಿರುವುದಿಲ್ಲ ಆದರೆ, ನಿವೇಶನಗಳ ಲೆಕ್ಕದಲ್ಲಿ ನೊಂದಣಿಗಳಾಗುತ್ತವೆ. ಅಲ್ಲಿ ಹಣದ ದಂಧೆಯನ್ನು ಮಾಡಿ ಖುಷ್ಕಿ ಮತ್ತು ತರಿ ಭೂಮಿಯ ನೊಂದಣಿಯಲ್ಲಿ ಹಣ ವ್ಯತ್ಯಾಸ ಮಾಡಿ, ಸ್ಟ್ಯಾಂಪ್ ವೆಂಡರ್‌ಗಳು ಮತ್ತು ಉಪನೋಂದಣಾಧಿಕಾರಿಗಳು ಸೇರಿಕೊಂಡು ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಾರೆ. ಇಲ್ಲಿ ಹದ್ದುಬಸ್ತು ಮತ್ತು ಇ–ಸ್ವತ್ತುಗಳಿವೆ. ಇವೆರಡನ್ನೂ ಒಟ್ಟಿಗೆ ನೊಂದಣಿ ಮಾಡುತ್ತಾರೆ. ಇದರ ಬಗ್ಗೆ ಸರ್ವೇಯರ್‌ಗಳಿಗೆ ಹೇಳುತ್ತೇವೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 2,500 ಹದ್ದುಬಸ್ತು ಪಹಣಿಗಳಾಗುತ್ತವೆ. ಅಲ್ಲಿನ ಮನೆಗಳು ಮತ್ತು ನಿವೇಶನಗಳಿಗೆ ಸಂಬಂಧಪಟ್ಟಂತೆ ಇ–ಸ್ವತ್ತಿನ 500 ಅರ್ಜಿಗಳಿವೆ. ಇವುಗಳನ್ನು ಪ್ರತ್ಯೇಕಿಸಿ, ನೋಂದಣಿ ಮಾಡಿದ್ದರೆ ತುಂಬಾ ಒಳ್ಳೆಯದಾಗುತ್ತದೆ. ಇದರ ಬದಲಾಗಿ ಕ್ಯೂಗೆ ಹೋದರೆ 8–10 ತಿಂಗಳುಗಳಾಗುತ್ತವೆ. ಈಗ ಅಲ್ಲಿನ ಸ್ಟ್ಯಾಂಪ್ ವೆಂಡರ್‌ಗಳು ಮತ್ತು ಉಪನೋಂದಣಾಧಿಕಾರಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಾರೆ. ಇದರ ಬಗ್ಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚನ್ನರಾಯಪಟ್ಟಣ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಸ್ವತ್ತಿನ ದಾಖಲೆಗಳನ್ನು ಬದಲಾವಣೆ ಮಾಡಿ, ನೋಂದಣಿ ಮಾಡುವುದರಿಂದ ಸರ್ಕಾರದ ಆದಾಯಕ್ಕೆ ಕುಂಠಿತವಾಗಿದೆ ಎಂದು ಹೇಳಿರುವುದು ನಿಜವಾಗಿದೆ. ಈ ರೀತಿಯ ಘಟನೆಗಳು ಅಲ್ಲಿ ಆಗಿವೆ. ತರಿ, ತೆಂಗು ಈ ರೀತಿಯ ಭೂಮಿಯನ್ನು ಅನುಕ್ರಮವಾಗಿ ಖುಷ್ಕಿ ಮತ್ತು ತರಿ ಎಂಬುದಾಗಿ ನಮೂದು ಮಾಡುವ ಮೂಲಕ ಅದರ ಮೌಲ್ಯವನ್ನು ಕಡಿಮೆ ಮಾಡಿ, ಮುದ್ರಾಂಕ ಶುಲ್ಕದಿಂದ ಬರಬೇಕಾದ ಆದಾಯ ಕಡಿತಗೊಳಿಸಿ ಮೋಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ವಿಚಾರಣೆ ಮಾಡಲು ಈಗಾಗಲೇ ತಂಡವನ್ನು ಅಲ್ಲಿಗೆ ಕಳುಹಿಸಿಕೊಡಲಾಗಿದೆ. ಇದರ ವರದಿಯು ಬಂದ ತಕ್ಷಣವೇ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಚನ್ನರಾಯಪಟ್ಟಣ ಉಪನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ 15

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಜನರು ಪತ್ರ ಬರಹಗಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರ ಪರವಾನಿಗೆಯನ್ನು 2018–19ನೇ ಸಾಲಿಗೆ ನವೀಕರಿಸುವಂತೆ ಕೇಳಿದ್ದು, ಅದನ್ನು ಈಗಾಗಲೇ ನವಿಕರಿಸಿ, ಈ ಮಾಹೆಯ ಅಂತ್ಯದವರೆಗೆ ಅನುಮತಿ ನೀಡಲಾಗಿದೆ. ಅವರುಗಳು ಪುನಃ ಹೊಸ ಅರ್ಜಿಗಳನ್ನು ಸಲ್ಲಿಸಿದರೆ, ಮುಂದಿನ ಒಂದು ವರ್ಷದವರೆಗೆ ಅವರ ಪರವಾನಿಗೆಯನ್ನು ವಿಸ್ತರಿಸಿ, ಅನುಮತಿ ನೀಡಲಾಗುವುದು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(443)17–03–2021(11–30)ಬಿಎಸ್‌ಡಿ–ಎಂಡಿ**

**ಪ್ರಶ್ನೆ ಸಂಖ್ಯೆ: 1477**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಅರುಣ್ ಶಹಾಪೂರ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದು, ಇದರ ಸಮಸ್ಯೆ ಅವರಿಗೆ ಸಂಪೂರ್ಣವಾಗಿ ಗೊತ್ತಿದೆ. ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಎಂದು ಮಾಡಿರುವುದೇ ಬಹಳ ಸಮಸ್ಯೆಗೆ ಕಾರಣವಾಗಿದೆ. ಇಲ್ಲಿ ಕೆಲಸ ಮಾಡುವ ಸಿಬ್ಬಂದಿ ವರ್ಗಕ್ಕೆ ಸರ್ಕಾರಿ ನೌಕರರಲ್ಲ ಎಂದು ಹಲವಾರು ಸೌಲಭ್ಯಗಳನ್ನು ಕೊಡುತ್ತಿಲ್ಲ. ನಿನ್ನೆ–ಮೊನ್ನೆ ಮಾನ್ಯ ಸಚಿವರು ಈ ಸಂಘಟನೆಗಳ ಜೊತೆಗೆ ಹಾಗೂ ಶಿಕ್ಷಕರ, ಪದವೀಧರ ಕ್ಷೇತ್ರಗಳ ಶಾಸಕರ ಜೊತೆ ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಇದು solve ಆಗಬೇಕೆಂದರೆ ಇದನ್ನು ನಿರ್ದೇಶನಾಲಯ ಎಂದು ಮಾಡಬೇಕು. ಸಂಘ ಎಂದು ಮಾಡಿರುವುದರಿಂದ ಅನುದಾನಿತ ಸಂಸ್ಥೆ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ. ಆ ಕಾರಣಕ್ಕಾಗಿ ಸೌಲಭ್ಯಗಳಿಂದ ವಂಚಿತರಾಗಿರುವ ಸಿಬ್ಬಂದಿ ವರ್ಗಕ್ಕೆ ಸೌಲಭ್ಯಗಳನ್ನು ಕೊಡುವ ದೃಷ್ಟಿಯಿಂದ ಹಾಗೂ ಇಡೀ ಕರ್ನಾಟಕ ರಾಜ್ಯದಲ್ಲಿ ವಸತಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಬಹಳ ದೊಡ್ಡದಾಗಿದೆ. ಅದು ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳು ಇರಬಹುದು, ಇವುಗಳನ್ನು ನಿರ್ವಹಣೆ ಮಾಡುತ್ತಿಲ್ಲ. ಆ ಕಾರಣಕ್ಕಾಗಿ ಮಾನ್ಯ ಸಚಿವರು ಆದಷ್ಟು ಬೇಗ ನಿರ್ದೇಶನಾಲಯವನ್ನಾಗಿ ಮಾಡಿ, ಎಲ್ಲಾ ಸೌಲಭ್ಯಗಳನ್ನು ಕೊಡುವ ಬಗ್ಗೆ ನಿರ್ಣಯ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ನಿನ್ನೆ–ಮೊನ್ನೆ ಎಲ್ಲಾ ಪರಿಷತ್ತಿನ ಸದಸ್ಯರ ಜೊತೆ ಸುದೀರ್ಘವಾಗಿ ಚರ್ಚೆ ಮಾಡಿದ್ದು, ವಸತಿ ಶಿಕ್ಷಣ ಸಂಸ್ಥೆಯು directorate ಆಗಬೇಕೆಂದು ಬಹಳಷ್ಟು ಮಂದಿ ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ಕೆಲವೊಂದು ಸವಲತ್ತುಗಳು ಈ ಏಖಇಖಖ (Karnataka Residential Educational Institutions Society) ನಲ್ಲಿ ಕೆಲಸ ಮಾಡುತ್ತಿರುವ teaching staff ಗೆ ಸಿಗುತ್ತಿಲ್ಲ. ಜೊತೆಗೆ ಅವರಿಗೆ ಬಹಳ ಅನ್ಯಾಯವಾಗುತ್ತಿದೆ ಎಂಬ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಅನೇಕ ಪ್ರಸ್ತಾವಗಳನ್ನು ಕಳುಹಿಸಿಕೊಟ್ಟಿದ್ದರೂ ಬೇರೆ ಬೇರೆ ಕಾರಣಗಳಿಂದ ರದ್ದಾಗುತ್ತಾ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಖಾಯಂ ನೌಕರರಿಗೆ, ಅವರ ಕುಟುಂಬದವರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಆರೋಗ್ಯ ವಿಚಾರದಲ್ಲಿ ಸವಲತ್ತು ಸಿಗಬೇಕಾಗಿತ್ತು. ಆ ಅನುಕೂಲ ಸಿಗುತ್ತಿಲ್ಲ ಎಂಬ ವಿಚಾರ ಬಂದಿದೆ. Already ಈ ವಿಚಾರವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ Suvarna Aarogya Suraksha Trust ಗೆ ಎಷ್ಟು ನೌಕರರಿದ್ದಾರೆ, ಕುಟುಂಬಸ್ಥರಿದ್ದಾರೆ, ಅವರಿಗೆ ಬೇಕಾದ ್ಠಿಣಡಿಚಿಟಿಛಿಜ ಆಗಿರಬಹುದು, ಆರೋಗ್ಯ ತೊಂದರೆಯಾದ ಸಂದರ್ಭದಲ್ಲಿ ವೆಚ್ಚವನ್ನು ಯಾವ ರೀತಿ ಭರಿಸಬೇಕೆಂದು ಪತ್ರವನ್ನು ಬರೆದಿದ್ದೇನೆ. ಶೀಘ್ರದಲ್ಲಿ ಆ ಪತ್ರ ಬಂದ ನಂತರ ಅದನ್ನು implementation ಮಾಡುವ ಬಗ್ಗೆ ಮಾಡುತ್ತೇನೆ. ಜೊತೆಗೆ ನಿರ್ದೇಶನಾಲಯವನ್ನಾಗಿ ಮಾಡುವ ಬಗ್ಗೆ ಬೇಡಿಕೆ ಇಟ್ಟಿದ್ದು, ಎಲ್ಲಾ ಸದಸ್ಯರ ಜೊತೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡುವ ಕೆಲಸ ಮಾಡುತ್ತೇನೆ.

**ಶ್ರೀ ಅರುಣ್ ಶಹಾಪೂರ್:–** ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಒಟ್ಟು ಖಾಯಂ ಸಿಬ್ಬಂದಿಗಳ ಸಂಖ್ಯೆ 5,216 ಇದ್ದು, ಒಟ್ಟು ಸಿಬ್ಬಂದಿಗಳ ಸಂಖ್ಯೆ 17,166 ಇದೆ. Almost one fourth ಖಾಯಂ ಸಿಬ್ಬಂದಿಗಳ ಮೂಲಕ ಈ KREIS ಕೆಲಸ ನಿರ್ವಹಿಸುತ್ತಿದೆ. ಪ್ರತಿಯೊಂದಕ್ಕೂ ಹಣಕಾಸು ಇಲಾಖೆಯ ಅಡೆತಡೆ ಎಂದು ಪ್ರತಿ ಸಂದರ್ಭದಲ್ಲೂ ಬರುತ್ತಿರುವ ಸಂದರ್ಭದಲ್ಲಿ, ಖಾಯಂಗೊಳಿಸುವ ದೃಷ್ಟಿಯಿಂದ, ಖಾಯಂ ಸಿಬ್ಬಂದಿ ನೇಮಕಾತಿ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಬರಲು ಎಲ್ಲಾ ಶಾಸಕರು ಒಪ್ಪಿಕೊಂಡಿದ್ದೇವೆ. ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ಎಲ್ಲಾ ಶಾಸಕರು ಬರುವವರಿದ್ದು, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳ ಮನವೊಲಿಸಿ ಈ ಕೆಲಸ ಮಾಡಿಕೊಡಬೇಕು.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಖಾಯಂ ಸಿಬ್ಬಂದಿ 5,216 ಜನರಿದ್ದು, ಅತಿಥಿ ಶಿಕ್ಷಕರು 2,280 ಜನರಿದ್ದು, ಹೊರ ಸಂಪನ್ಮೂಲವಾಗಿ 9,670 ಜನರು ಕೆಲಸ ನಿರ್ವಹಿಸುತ್ತಿದ್ದಾರೆ. ಅತಿಥಿ ಶಿಕ್ಷಕರು ಹಾಗೂ ಹೊರಸಂಪನ್ಮೂಲದವರನ್ನು ಖಾಯಂಗೊಳಿಸಬೇಕೆಂಬ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಯವರ ಬಳಿಗೆ ಹೋಗಿ ಮನವೊಲಿಸಿ ಮಾಡಿಕೊಡುವ ಕೆಲಸ ಮಾಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಕೆ.ಸಿ. ಕೊಂಡಯ್ಯನವರ ಪ್ರಶ್ನೆಗೆ ಮಾನ್ಯ ಕಂದಾಯ ಮಂತ್ರಿಗಳು 15 ದಿವಸಗಳ ಕಾಲಾವಕಾಶ ಕೇಳಿದ್ದಾರೆ. ನಂತರ ಮಾನ್ಯ ಪ್ರದೀಪ್ ಶೆಟ್ಟರ್ ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1273**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ವಸತಿ ಸಚಿವರು ಉತ್ತರವನ್ನು ಕೊಟ್ಟಿದ್ದು, ಮೊದಲನೆಯ ಪ್ರಶ್ನೆಯಾಗಿ ಎಷ್ಟು ವರ್ಷದಲ್ಲಿ ಮನೆ ಹಂಚಿಕೆ ಮಾಡಲಾಗುತ್ತದೆ ಹಾಗೂ ಅವರು ಸಚಿವರಾದ ಮೇಲೆ ಒಳ್ಳೆಯ ಪ್ರಯತ್ನವನ್ನು ಮಾಡುತ್ತಿದ್ದಾರೆ. ಎರಡನೆಯ ಪ್ರಶ್ನೆಗೆ ಕಳೆದ 5 ವರ್ಷಗಳಲ್ಲಿ ಏನಾಗಿದೆ ಎಂಬ ವಿವರ ಕೊಟ್ಟಿದ್ದಾರೆ. ಅದಾದ ನಂತರ ನಮ್ಮ ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಆಶ್ರಯ ಯೋಜನೆಗೆ ಸುತ್ತಮುತ್ತಲೂ land ಅನ್ನು ನೋಡುತ್ತಿದ್ದು, ಆದಷ್ಟು ಬೇಗನೆ land final ಮಾಡಬೇಕು, ಏಕೆಂದರೆ ಆಅ ರವರು survey ಮಾಡಿಕೊಂಡು ಹೋಗಿದ್ದಾರೆ. ಹಣ ಇಲ್ಲದಿರುವ ಬಗ್ಗೆ ಮಾನ್ಯ ಸಚಿವರ ಬಳಿ personal ಆಗಿ ಮಾತನಾಡಿದಾಗ ಹೇಳಿದ್ದಾರೆ. ಕೋವಿಡ್-19 ರಿಂದಾಗಿ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎಂದು 2-3 ಬಾರಿ ಆ ಕಡೆ ಬಂದಾಗ ಹೇಳಿದ್ದಾರೆ. ಅದೇ ರೀತಿ ಗದಗ್, ಹಾವೇರಿ ಜಿಲ್ಲೆಗಳ ಗ್ರಾಮ ಪಂಚಾಯಿತಿ ಸದಸ್ಯರುಗಳಿಂದ ನಾನು ಆರಿಸಿ ಬರುವವನಿದ್ದು, ಆ ಭಾಗಗಳಲ್ಲಿ ಸಾಕಷ್ಟು ವಸತಿಗಳನ್ನು ಜನರು ಕೇಳುತ್ತಿದ್ದಾರೆ. ಆ ಭಾಗಕ್ಕೆ ಬಂದು review meeting ಮಾಡಿದ್ದಾರೆ. ಧಾರವಾಡ, ಹಾವೇರಿ ಮತ್ತು ಗದಗ್ ಭಾಗಗಳಿಗೆ ಆದಷ್ಟು ಬೇಗ ವಸತಿಗಳನ್ನು ಜನರಿಗೆ ಹಂಚಿಕೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ ಗೃಹ ಮಂಡಳಿಯಲ್ಲಿ ದುರ್ಬಲ ವರ್ಗದವರಿಗೆ ಹಂಚಿಕೆಯಾಗಿರುವ ನಿವೇಶಗಳ ಬಗ್ಗೆ ಪ್ರಶ್ನೆ ಕೇಳಿದ್ದು, 1962ರ ಮಂಡಳಿ ಕಾಯ್ದೆ ಪ್ರಕಾರ 1983ರಿಂದ 3 ವಿವಿಧ ಹಂತಗಳಲ್ಲಿ ಹಂಚಿಕೆ ಮಾಡಿದ್ದೇವೆ. ಅದರ ಮಾಹಿತಿ ಕಳುಹಿಸಿಕೊಟ್ಟಿರುತ್ತೇನೆ. ಎರಡನೆಯದಾಗಿ 15 ರಿಂದ 20% ನಿವೇಶನಗಳನ್ನು ಬಡವರಿಗೆ ಅಂದರೆ ರು.87,600 ಆದಾಯ ಇರುವವರು ಹಾಗೂ ಕೊನೆಯ ಹಂತದಲ್ಲಿ ರೂ.32,000 ಇರುವ even BPL card ಇರುವವರಿಗೂ ಕೂಡ ಬಡಾವಣೆಗಳನ್ನು ಮಾಡಿರುವ ಕಡೆ ಕಾಯ್ದಿರಿಸಿ, ಅದಕ್ಕೆ fix ಮಾಡಿರುವ ಹಣದ 50 percent ನಲ್ಲಿ site ಕೊಡುವ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ವಿಶೇಷವಾಗಿ ಹುಬ್ಬಳ್ಳಿ ತಾಲ್ಲೂಕಿನ ಅಮರಗೋಳ ಬಡಾವಣೆ ಮತ್ತು ಸಟ್ಟೂರು ಭಾಗದಲ್ಲಿ ಸುಮಾರು ವರ್ಷಗಳಿಂದ ರೈತರಿಗೆ ಗೊಂದಲ ಆಗಿ ಹಣ ಕಟ್ಟಿದ್ದರೂ ತೊಂದರೆಯಾಗಿತ್ತು. ಈಗಾಗಲೇ ಹತ್ತಾರು ಸಭೆಗಳನ್ನು ಮಾಡಿ ಮಾನ್ಯ ಪ್ರಹ್ಲಾದ್ ಜೋಷಿ, ಮಾನ್ಯ ಜಗದೀಶ್ ಶೆಟ್ಟರ್, ಮಾನ್ಯ ಪ್ರದೀಪ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೆಟ್ಟರ್ ರವರೆಲ್ಲರನ್ನೂ ಒಳಗೊಂಡಂತೆ ಎಲ್ಲಾ ಶಾಸಕರನ್ನು ಕರೆದು ಮಾತನಾಡಿ, ಒಂದು ಹಂತಕ್ಕೆ ಬಂದಿದೆ. ಜಿಲ್ಲಾ ಮಟ್ಟದಲ್ಲಿ ಹೊಸದಾಗಿ ಮಾಡುತ್ತಿರುವ ಬಡಾವಣೆಗಳಲ್ಲಿ sharing ತೆಗೆದುಕೊಳ್ಳುತ್ತಿದ್ದೇವೆ. ತಾಲ್ಲೂಕು ಟಜತಜಟ ನ ಪುರಸಭೆ ವ್ಯಾಪ್ತಿಯಲ್ಲಿ ಬರುವ ಬಡಾವಣೆಗಳಿಗೆ 40:60 ರಂತೆ ಮಾಡುತ್ತಿದ್ದೇವೆ. ಇದರಲ್ಲೂ ಸಹ 50 percent ತೆಗೆದುಕೊಳ್ಳುವುದಕ್ಕೆ ಆರ್ಥಿಕವಾಗಿ ಹಿಂದುಳಿದಿರುವವರಿಗೆ ಶೇಕಡಾ ಬರುವ sharing ನಲ್ಲಿ 20% ಅನ್ನು fix ಮಾಡಿರುವ rate ನಲ್ಲಿ 50 percent ಮಾಡುವ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಗದಗ್ ಬೇರೆ ಬೇರೆ ಕಡೆ ಪ್ರಧಾನ ಮಂತ್ರಿ ಅವಾಜ್ ಯೋಜನೆಯಡಿ ಮನೆಗಳನ್ನು ಮಾಡುತ್ತಿದ್ದು, ಗದಗ್‌ನಲ್ಲಿ ಸಾಕಷ್ಟು ಮನೆಗಳು ಒಂದು ಹಂತಕ್ಕೆ ಬಂದಿದೆ. ಈ ಸಂದರ್ಭಕ್ಕೆ ಅನುಗುಣವಾಗಿ ಧಾರವಾಡ, ಹುಬ್ಬಳ್ಳಿ ಗಾಮನಗಟ್ಟಿ 3ನೇ ಹಂತದಲ್ಲಿ ಸುಮಾರು ವರ್ಷಗಳ ನೋವನ್ನು ಬಗೆಹರಿಸಿದ್ದೇವೆ. ಅದೇರೀತಿ ಬಡವರಿಗೆ ಅನುಕೂಲವಾಗಲೀ ಎನ್ನುವ ದೃಷ್ಟಿಯಿಂದ ಸರ್ಕಾರದ ಅನುದಾನವನ್ನು ಪಡೆಯದೇ, ನಮ್ಮ ಅನುದಾನದಲ್ಲಿಯೇ 50 percent site ಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಕೊಡುವ ಕೆಲಸ ಮಾಡುತ್ತೇವೆ. ಬಾಕಿ ನಾನು ಹೋದ ಕಡೆಗಳಲ್ಲಿ ಒಂದು ಹಂತಕ್ಕೆ ಬರುತ್ತಿದೆ. ಏಕಕಾಲದಲ್ಲಿ ಎಲ್ಲವನ್ನು ಕೈಗೆತ್ತಿಕೊಳ್ಳುವುದು ಕಷ್ಟ. ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಿ ಒಂದು ತಾತ್ವಿಕ ಹಂತಕ್ಕೆ ತಂದಿದ್ದೇವೆ. ಮುಂದಿನ ದಿನಗಳಲ್ಲಿ ಈ ಕಾಯ್ದೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**(ಮುಂದು)**

**(444)/17.03.2021/11.40/ಹೆಚ್‌ವಿ:ಎಕೆ**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:202(1249)ಕ್ಕೆ ಮಾನ್ಯ ಕಂದಾಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಈಗ ಮುಂದಿನ ಪ್ರಶ್ನೆ ಶ್ರೀಯುತರುಗಳಾದ ಕೆ.ಎ.ತಿಪ್ಪೇಸ್ವಾಮಿ ಮತ್ತು ಹೆಚ್.ಎಂ.ರಮೇಶ್‌ಗೌಡ ಅವರದು.

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1482 ಮತ್ತು 1426**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರಮೇಶ್‌ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ ಮತ್ತು ನನಗೆ ಆ ಉತ್ತರ ಸಮಾಧಾನವನ್ನುಂಟು ಮಾಡಿಲ್ಲ. ಕಳೆದ 5 ವರ್ಷಗಳಲ್ಲಿ ಭೂ ಸಮೀಕ್ಷೆಗಾಗಿ ಅಂದರೆ, ಸರ್ವೆ ಸ್ಕೆಚ್, 11–ಇ ನಕ್ಷೆ, ಭೂ ಪರಿವರ್ತನೆ ನಕ್ಷೆ, ಹದ್ದುಬಸ್ತು, ತತ್ಕಾಲ್ ಮತ್ತು ಭೂಸ್ವಾಧೀನ, ಪೋಡಿಗಳಿಗಾಗಿ ಕೋರಿ ಸ್ವೀಕೃತವಾದ ಪ್ರಕರಣಗಳ ಸಂಖ್ಯೆ; ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ಪರಿಗಣಿಸಿ ವಿಲೇವಾರಿ ಮಾಡಲಾಗಿದೆ; ಬಾಕಿ ಉಳಿದಿರುವ ಪ್ರಕರಣಗಳೆಷ್ಟು?' ಎನ್ನುವ ನನ್ನ ಪ್ರಶ್ನೆಗೆ, 'ಇನ್ನೂ 4,81,982 ಪ್ರಕರಣಗಳು ಬಾಕಿ ಇವೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಈ 5 ವರ್ಷಗಳ ಕಾಲಾವಧಿಯಲ್ಲಿ ಈ ಎಲ್ಲ ಪ್ರಕರಣಗಳನ್ನು ವಿಲೇವಾರಿ ಮಾಡುವುದಕ್ಕೆ ಸರ್ಕಾರಕ್ಕಿರುವ ಸಮಸ್ಯೆಯೇನು; ಇದುವರೆವಿಗೂ ಯಾವ ಕಾರಣಕ್ಕಾಗಿ ಇವುಗಳನ್ನು ವಿಲೇವಾರಿ ಮಾಡಲಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಕಂದಾಯ ಇಲಾಖೆಯಲ್ಲಿ ಲಕ್ಷಾಂತರ ಪ್ರಕರಣಗಳು ಬಾಕಿ ಉಳಿದಿವೆ. ಇವುಗಳನ್ನು ವಿಲೇವಾರಿ ಮಾಡುವುದಕ್ಕೆ ಇಷ್ಟು ವರ್ಷಗಳ ಕಾಲಾವಕಾಶ ಬೇಕಾಗಿದೆಯೇ ಎನ್ನುವುದು ನನ್ನ ಮತ್ತೊಂದು ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಪೋಡಿ, ರೆವಿನ್ಯೂ ಸ್ಕೆಚ್ ಎಲ್ಲ ಆದನಂತರವೂ ತಾಲ್ಲೂಕು ಕಛೇರಿಗಳಲ್ಲಿ ಅವುಗಳನ್ನು ಕಂಪ್ಯೂಟರ್ ಮೂಲಕ ಪಹಣಿಯಲ್ಲಿ ಭರ್ತಿ ಮಾಡುವುದಕ್ಕೆ ಎಷ್ಟು ದಿನಗಳಾದರೂ ಸಹ ಫೈಲ್ ಮೂವ್ ಆಗುವುದೇ ಇಲ್ಲ. ಅಲ್ಲಿರುವಂತಹ ಶಿರಸ್ತೆದಾರ, ಮ್ಯಾನೇಜರ್, ವಿಲೇಜ್ ಅಕೌಂಟೆಂಟ್ ಯಾರೂ ಸಹ ಇದರ ಬಗ್ಗೆ ಗಮನಹರಿಸುವುದಿಲ್ಲ. ಆ ಫೈಲ್ ಅಲ್ಲಿಯೇ ಕೊಳೆಯುತ್ತಾ ಬಿದ್ದಿರುತ್ತವೆ. ಕಳೆದ ಬಾರಿ ಇದೇ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾ, 'ಡಿಜಿಟೈಜೇಷನ್ ಮಾಡುವ ಪ್ರಕ್ರಿಯೆಯಲ್ಲಿ ಹಿಂದಿಗಿಂತ ನಾವು ಸಾಕಷ್ಟು ಮುಂದುವರೆದಿದ್ದೇವೆ' ಎನ್ನುವ ಉತ್ತರವನ್ನು ನೀಡಿದ್ದರು. ಈಗ ಅವರೇ ಕೊಟ್ಟಿರುವ ಲಿಖಿತರೂಪದ ಉತ್ತರದಲ್ಲಿ ಲಕ್ಷಾಂತರ ಪ್ರಕರಣಗಳು ಬಾಕಿ ಉಳಿದಿರುವ ಬಗ್ಗೆ ಮಾಹಿತಿಯನ್ನು ನೀಡುತ್ತಿದ್ದಾರೆ. ಅವರು ಹೇಳಿದಂತೆ ಯಾವುದೇ ರೀತಿಯ ಪ್ರಗತಿ ಕಂಡು ಬರುತ್ತಿಲ್ಲ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯತನ ಮತ್ತು ಯಾವುದರ ಬಗ್ಗೆಯೂ ಕಾಳಜಿ ಇಲ್ಲದೇ ಇರುವುದೇ ಕಾರಣವಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ನೀಡಿದ್ದಾರೆ. Land Records Computerizationನಲ್ಲಿ ಇಡೀ ದೇಶದಲ್ಲಿಯೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಪ್ರಥಮ ಸ್ಥಾನವನ್ನು ಗಳಿಸಿಕೊಂಡಿದೆ. ಅದು microfilming ಇರಬಹುದು, computerization ಇರಬಹುದು ಮತ್ತು digitization ಇರಬಹುದು. ಕಾವೇರಿ, ಖಜಾನೆ ಮತ್ತು ಭೂಮಿ ಯೋಜನೆಗಳನ್ನು ನಾವು ಅನುಷ್ಠಾನಗೊಳಿಸಿದ್ದೇವೆ. 'ಸರ್ವೆ ಮಾಡುವುದಕ್ಕೆ ಹೋದಾಗ ಮತ್ತು ಸರ್ವೆ ಆಗಿ ಬಂದ ನಂತರದ Records of Rights ದಾಖಲೆಗಳನ್ನು updation ಮಾಡುವುದಕ್ಕೆ ಸರ್ವೆಯರ್‌ಗೆ, ವಿಲೇಜ್ ಅಕೌಂಟೆಂಟ್‌ಗೆ ಮತ್ತು ತಾಲ್ಲೂಕು ಅಧಿಕಾರಿಗಳಿಗೆ ಎಷ್ಟು ಸಮಯವನ್ನು ನಿಗದಿ ಮಾಡಲಾಗಿದೆ' ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ, ಸರ್ಕಾರ ಸಮಯವನ್ನು ನಿಗದಿ ಮಾಡಿರಬಹುದು, ಆದರೆ ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿಲ್ಲ. ಆ ಮಾಹಿತಿಯನ್ನು ಮಾನ್ಯ ಸಚಿವರು ನೀಡಬೇಕೆನ್ನುವುದು ನನ್ನ ಮನವಿಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ 2008ರಲ್ಲಿ ಪ್ರಾರಂಭವಾದಂತಹ 'National Land Records Modernization Programme' ಅಡಿಯಲ್ಲಿ ಸುಮಾರು 950 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಇಡೀ ದೇಶದಲ್ಲಿರುವ ಬೇರೆಬೇರೆ ರಾಜ್ಯಗಳಿಗೆ ನೀಡಲಾಗುತ್ತಿದೆ. ಪುನಃ 2015ರಲ್ಲಿ 'Digital India Land Records Management Programme' ಎಂದು ಆ ಯೋಜನೆಯ ಹೆಸರನ್ನು ಬದಲಾವಣೆ ಮಾಡಿದ್ದಾರೆ. ಅದರಲ್ಲಿ Computerization of Records of Rights, Digitization of the Cadastral Maps, Survey and Re-survey, modernization of the Record Room, Computerization of Registration and Connectivity between the Sub-Registrar and the Taluk Office ಮತ್ತು ಜಿಲ್ಲಾ ಮಟ್ಟದಲ್ಲಿ, ಉಪ ವಿಭಾಗದ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಅನುದಾನವನ್ನು ಕೊಟ್ಟಿದ್ದಾರೆ. ಕಳೆದ 5 ವರ್ಷಗಳಲ್ಲಿ ಅಥವಾ ಆ ಯೋಜನೆ ಜಾರಿಯಾದ ಮೇಲೆ ನಮ್ಮ ರಾಜ್ಯ ಸರ್ಕಾರ ಎಷ್ಟು ಅನುದಾನವನ್ನು ಪಡೆದುಕೊಂಡಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ, ಇದರ ಬಗ್ಗೆಯೂ ಮಾನ್ಯ ಸಚಿವರು ಮಾಹಿತಿಯನ್ನು ಒದಗಿಸಿಲ್ಲ. ಮಾಹಿತಿ ಒದಗಿಸಬೇಕೆಂದು ಕೋರುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, 'Digital India Land Records Management Programme' ದಿನಾಂಕಃ31.03.2021ಕ್ಕೆ ಕೊನೆಗೊಳ್ಳುತ್ತದೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ಇನ್ನೂ ಕೂಡ ಆಕಾರಬಂದ್ ಗಣಕೀಕರಣ ಕಾರ್ಯ ಮತ್ತು ಪಕ್ಕ ಪುಸ್ತಕಗಳು ಒಳಗೊಂಡಂತೆ ಟಿಪ್ಪಣಿ ಪತ್ರಗಳನ್ನು ಗಣಕೀಕರಣ ಮಾಡಬೇಕು' ಎಂದು ಹೇಳಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆಯೇ ಎನ್ನುವುದರ ಬಗ್ಗೆಯೂ ಮಾಹಿತಿ ನೀಡಬೇಕೆಂದು ಕೋರುತ್ತಿದ್ದೇನೆ.

**ಶ್ರೀ ಆರ್.ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಸುಮಾರು 12 ಕೋಟಿ ರೂಪಾಯಿಗಳಷ್ಟು ಅನುದಾನವನ್ನು 'ಸರ್ವೆ ಆಫ್ ಇಂಡಿಯಾ' ಅವರಿಗೆ ಬಿಡುಗಡೆ ಮಾಡಿದ್ದಾರೆ. ಕೇಂದ್ರ ಸರ್ಕಾರದ ಆದೇಶದ ಮೇರೆಗೆ ತುಮಕೂರು, ರಾಮನಗರ, ಉತ್ತರ ಕನ್ನಡ, ಹಾಸನ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 'ಡ್ರೋಣ್' ಮೂಲಕ ಸರ್ವೆ ಮಾಡುವುದಕ್ಕೆ ಈ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು 'ಸರ್ವೆ ಆಫ್ ಇಂಡಿಯಾ'ಗೆ ಹಣ ಬಿಡುಗಡೆ ಮಾಡಿದ್ದೇವೆ. ದಾಖಲೆಗಳ ಡಿಜಿಟೈಜೇಷನ್ ಮಾಡುವುದಕ್ಕೆ ಈಗಾಗಲೇ ಸುಮಾರು 4 ಕೋಟಿ ರೂಪಾಯಿಗಳನ್ನು ನೀಡಿದ್ದೇವೆ, ಕಾರ್ಯ ಪ್ರಗತಿಯಲ್ಲಿದೆ. ಕಳೆದ 5 ವರ್ಷಗಳಲ್ಲಿ ಒಟ್ಟು 32,72,723 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಸುಮಾರು 31,97,349 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಸುಮಾರು ಶೇಕಡಾ 95ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಮಾನ್ಯ ರಮೇಶ್‌ಗೌಡರು, '4,81,982 ಅರ್ಜಿಗಳು ಬಾಕಿ ಇರಲು ಕಾರಣವೇನು?' ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಈ ಅರ್ಜಿಗಳು ಬಹಳ ವರ್ಷಗಳಿಂದ ಬಾಕಿ ಉಳಿದಿವೆ. ಈ ರೀತಿ ಬಾಕಿ ಉಳಿಯುವುದಕ್ಕೆ ಕಾರಣವೇನೆಂದರೆ, ಭೂ ಮಂಜೂರಾತಿ ಸಮಿತಿಯಿಂದ ಭೂಮಿಯನ್ನು ಮಂಜೂರು ಮಾಡಿರುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, 200 ಎಕರೆ ಜಾಗವಿದ್ದರೆ, 500 ಎಕರೆ ಜಾಗವನ್ನು ಮಂಜೂರು ಮಾಡಿರುತ್ತಾರೆ. ಇಡೀ ರಾಜ್ಯದಲ್ಲಿ ಇದ್ದೊಂದು ದೊಡ್ಡ ಸಮಸ್ಯೆಯಾಗಿದೆ. ಎಲ್ಲ ಸರ್ಕಾರಗಳು ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಚಿಂತನೆ ಮಾಡಿವೆ. ಜಮೀನು ಇರುವುದು ಒಂದು ಅಳತೆಯಾದರೆ, ಮತ್ತೊಂದು ಅಳತೆಗೆ ಮಂಜೂರು ಮಾಡುವಂತಹ ಕೆಲಸವಾಗಿದೆ. ನಿವೃತ್ತಿ ಹೊಂದಿರುವ ತಹಸೀಲ್ದಾರ್‌ಗಳು ಭೂ ಮಂಜೂರಾತಿ ಸರ್ಟಿಫಿಕೇಟ್‌ಗಳಿಗೆ ಸಹಿ ಮಾಡಿರುವ ಪ್ರಕರಣಗಳು ಬಹಳಷ್ಟಿವೆ. ಎಲ್ಲರಿಗೂ ಹಕ್ಕುಪತ್ರಗಳನ್ನು ನೀಡಲಾಗಿದೆ. ಇವೆಲ್ಲ ನಮ್ಮ ಗಮನಕ್ಕೆ ಬಂದಿವೆ. ಇವುಗಳಲ್ಲಿ ಕೆಲವು ಪ್ರಕರಣಗಳು ಕೋರ್ಟ್ ಮೆಟ್ಟಿಲೇರಿವೆ. ಕೆಲವು ಪ್ರಕರಣಗಳು ಬೋಗಸ್ ಆಗಿವೆ. ಭೂಮಿ ಮಂಜೂರು ಆಗಿರುವುದನ್ನು (i) to (v) ಮಾಡಬೇಕಾಗುತ್ತದೆ. ದಾಖಲೆಗಳು ತಾಲ್ಲೂಕು ಕಚೇರಿಗಳಲ್ಲಿಯೂ ಇರಬೇಕು ಮತ್ತು ವ್ಯಕ್ತಿಯ ಬಳಿಯೂ ಇರಬೇಕಾಗುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ವ್ಯಕ್ತಿಯ ಬಳಿ ದಾಖಲೆಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುತ್ತವೆ, ತಾಲ್ಲೂಕು ಕಚೇರಿಯಲ್ಲಿ ದಾಖಲೆಗಳೇ ಇರುವುದಿಲ್ಲ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ (i) to (v) ಆಗದೇ ಅರ್ಜಿಗಳು ಬಾಕಿ ಉಳಿದಿವೆ. ಜಮೀನು ಮಂಜೂರಾತಿ ಆಗಿರುವುದರಲ್ಲಿ ದಾಖಲೆಗಳು ವ್ಯತ್ಯಾಸವಾಗಿರುವುದು ಅಥವಾ ಅಳತೆ ವ್ಯತ್ಯಾಸ ಆಗಿರುವ ಪ್ರಕರಣಗಳು ಬಾಕಿ ಉಳಿದಿವೆಯೇ ಹೊರತು, ರೆಗ್ಯುಲರ್ ಆಗಿರುವ ಅರ್ಜಿಗಳಲ್ಲಿ ಶೇಕಡಾ 95ರಷ್ಟನ್ನು ಕ್ಲಿಯರ್ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು 'ಸರ್ವೆ ಆಫ್ ಇಂಡಿಯಾ'ಗೆ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ದಾಖಲೆಗಳನ್ನು ಡಿಜಿಟೈಜೇಷನ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಕಾರ್ಯ ಪ್ರಗತಿಯಲ್ಲಿದೆ. ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಲ್ಲಿರುವ ಲೋಪದೋಷಗಳ ಬಗ್ಗೆ ತಿಳಿಸುವ ಜೊತೆಗೆ ನಿವೃತ್ತಿ ಹೊಂದಿರುವ ತಹಸೀಲ್ದಾರ್‌ರವರು ಭೂ ಮಂಜೂರಾತಿ ಸರ್ಟಿಫಿಕೇಟ್‌ಗೆ ಸಹಿ ಮಾಡಿದ್ದಾರೆ ಎನ್ನುವ ಅಂಶವನ್ನು ತಿಳಿಸಿದ್ದಾರೆ. ಇಂತಹವರ ಮೇಲೆ ಕ್ರಿಮಿನಲ್ ಕೇಸ್ ಅನ್ನು ದಾಖಲು ಮಾಡಬೇಕಾಗುತ್ತದೆ. ನಾವು ಸಹ ಇಂತಹ ಪ್ರಕರಣಗಳನ್ನು ನೋಡಿದ್ದೇವೆ. ಕೆಲವು ತಹಸೀಲ್ದಾರ್‌ಗಳು ತಮಗೆ ಬೇಕಾದವರಿಗೆ ನಿವೃತ್ತಿ ಹೊಂದಿದ ಮೇಲೆಯೂ ಭೂ ಮಂಜೂರಾತಿ ಸರ್ಟಿಫಿಕೇಟ್‌ಗೆ ಸಹಿ ಮಾಡಿಕೊಟ್ಟಿರುತ್ತಾರೆ. ನಂತರ ಯಾರೋ ಓ.ಎಂ. ಕಾಪಿ ಕೊಡಿ ಎಂದು ಹೋಗಿರುತ್ತಾರೆ ಇಂತಹ ಪ್ರಕರಣಗಳು ಸಾಕಷ್ಟಿವೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ Sri Munish Moudgilರವರು ಸರ್ವೆ ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್‌ನ ಆಯುಕ್ತರಾಗಿದ್ದಾಗ, 'ಪ್ರಾಪರ್ಟಿ ಕಾರ್ಡ್' ಮಾಡಬೇಕೆಂದು ಒಂದು ಆದೇಶವನ್ನು ಮಾಡಿದ್ದರು. ಈ ಯೋಜನೆಯನ್ನು ಮೊಟ್ಟಮೊದಲ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಾದ ಶಿವಮೊಗ್ಗದಲ್ಲಿ ಜಾರಿಗೆ ತರಬೇಕೆಂದು ಯೋಚಿಸಿದ್ದರು. ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತುಕೊಂಡು ಆದೇಶ ಮಾಡುತ್ತಾರೆ. ಅದನ್ನು ಆಯಾಯ ಜಿಲ್ಲೆಯಲ್ಲಿರುವ ಕಂದಾಯ ಇಲಾಖೆಯ ಅಧಿಕಾರಿಗಳು ಅನುಷ್ಠಾನಗೊಳಿಸಬೇಕಾಗುತ್ತದೆ. ಆದರೆ, ಈ ಯೋಜನೆ ಅನುಷ್ಠಾನಗೊಳ್ಳಲೇ ಇಲ್ಲ. ಆಸ್ತಿ ನೋಂದಣಿಗಾಗಿ ಹೋದರೆ, 'ಈಗಾಗಲೇ ಪ್ರಾಪರ್ಟಿ ಕಾರ್ಡ್ ಮಾಡಿದ್ದಾರೆ ಅದನ್ನು ತೆಗೆದುಕೊಂಡು ಬನ್ನಿ' ಎಂದು ಹೇಳುತ್ತಾರೆ. 'ಪ್ರಾಪರ್ಟಿ ಕಾರ್ಡ್' ಇಲ್ಲದಿದ್ದರೆ ರಿಜಿಸ್ಟ್ರೇಶನ್ ಆಗುವುದಿಲ್ಲ. ಸುಮಾರು ಜಿಲ್ಲೆಗಳಲ್ಲಿ ರೈತರು ಸಾಯುತ್ತಿದ್ದಾರೆ. ಐ.ಎ.ಎಸ್. ಅಧಿಕಾರಿಗಳು ಇಲ್ಲಿ ಕುಳಿತುಕೊಂಡು ಆದೇಶ ಮಾಡುತ್ತಾರೆ. ಆದೇಶ ಮಾಡಿದ ಮೇಲೆ ಪ್ರತಿತಿಂಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಾದರೊಂದು ಜಿಲ್ಲೆಗೆ ಭೇಟಿ ಕೊಟ್ಟು ನಾವು ಮಾಡಿರುವ ಆದೇಶದಿಂದ ಜನರಿಗೆ ಯಾವ ರೀತಿಯಲ್ಲಿ ತೊಂದರೆಯಾಗುತ್ತಿದೆ, ಆದೇಶ ಮಾಡಿದ ಮೇಲೆ ಎಷ್ಟು ಪ್ರಾಪರ್ಟಿಗಳಿಗೆ ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ ಎನ್ನುವುದರ ಬಗ್ಗೆ ನೋಡಬೇಕಾಗುತ್ತದೆ. ಅದನ್ನು ಸಹ ಮಾಡಲಿಲ್ಲ.

**(ಮುಂದು)**

**(445) 17.3.2021 11.50 ಪಿಕೆ:ಎಕೆ**

**ಶ್ರೀ ಹೆಚ್.ಎಂ.ರಮೇಶ್‌ಗೌಡ(ಮುಂದು):-**

ಅವರು ಯಾರೇ ಆದರೂ ಕರುಣೆ ತೋರಿಸದೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ತಾಲ್ಲೂಕು ಆಫೀಸ್‌ನಲ್ಲಿ ತಹಸೀಲ್ದಾರ್‌ರವರಿಗೇ ಅಧಿಕಾರ ಕೊಡುವಂಥದ್ದನ್ನು ಮಾಡಬೇಕು. 100 ಇದ್ದರೆ 200 ಎಕರೆಗೆ . . .

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಗೋಪಾಲಸ್ವಾಮಿಯವರೇ ದಯವಿಟ್ಟು ಕುಳಿತುಕೊಳ್ಳಿ. ಇದು ಮಾನ್ಯ ರಮೇಶ ಗೌಡ ಮತ್ತು ಮಾನ್ಯ ತಿಪ್ಪೇಸ್ವಾಮಿಯವರ ಪ್ರಶ್ನೆಯಾಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಇದು ಕೇವಲ ಒಬ್ಬರ ಪ್ರಶ್ನೆಯಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಸುಮಾರು 25 ವರ್ಷಗಳಿಂದ ರೈತರು ಸಾಯುತ್ತಲೇ ಇದ್ದಾರೆ.

**(ಗೊಂದಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಖಾತೆ ಬದಲಾವಣೆ ಆದೇಶ ಆದಮೇಲೆ ಮತ್ತೆ, ಸರ್ವೇ ರಿಪೋರ್ಟ್ಸ್ ಇರಬಹುದು, '11E' Sketch ಬಂದ ಮೇಲೆ, revenue records ನಲ್ಲಿ incorporate ಆಗುವುದಕ್ಕೆ ತುಂಬಾ ತಡ ಆಗುತ್ತಿದೆ. ದಯವಿಟ್ಟು ಅದನ್ನು ಅವಾಯಿಡ್ ಮಾಡಬೇಕು. ಜನ ಸಾಮಾನ್ಯರಿಗೆ ಇದರಿಂದ ತುಂಬಾ ತೊಂದರೆ ಆಗುತ್ತಿದೆ. ಅದು computerize ಆಗುವುದಿಲ್ಲ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

entry ಆಗುವುದಿಲ್ಲ, RTC output ಬರುವುದಿಲ್ಲ. ಇದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ನಿರ್ದೇಶನ ಕೊಡಬೇಕು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಗೌಡರು ಹೇಳಿದ ಹಾಗೆ, ಯಾರು ಬೋಗಸ್ ದಾಖಲೆಗಳನ್ನು ಸೃಷ್ಟಿ ಮಾಡುತ್ತಾರೋ ಅವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅಂತಹ ಅಧಿಕಾರಿಗಳು ನಿವೃತ್ತರಾಗಿದ್ದರೂ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಸರ್ವೇ ಕಾರ್ಯವನ್ನು ಇನ್ನಷ್ಟು ಬೇಗ ಮಾಡಬೇಕು ಎನ್ನುವ ದೃಷ್ಟಿಯಿಂದ ಹೊಸದಾಗಿ 2072 ಪರವಾನಗಿ ಭೂಮಾಪಕರನ್ನು ಈ ತಿಂಗಳಲ್ಲಿ ನೇಮಕ ಮಾಡಿದ್ದೇವೆ. ಇನ್ನು 3 ತಿಂಗಳ ಒಳಗೆ ಅವರಿಗೆ ತರಬೇತಿ ಕೊಟ್ಟು ಸರ್ವೇ ಕಾರ್ಯದಲ್ಲಿ ಹೆಚ್ಚಿನ ಪ್ರಗತಿ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ತಮಗೆಲ್ಲಾ ಗೊತ್ತಿರುವ ಹಾಗೆ, ಜಿಲ್ಲಾಧಿಕಾರಿಗಳು, ಎ.ಸಿ ಹಾಗೂ ತಹಸೀಲ್ದಾರುಗಳನ್ನು ಒಂದು ದಿನ ಹಳ್ಳಿಗಳಲ್ಲೇ ವಾಸ ಮಾಡುವುದಕ್ಕೆ ಹೇಳಿದ್ದೇವೆ. ಅವರು ಹಳ್ಳಿಗಳ ಕಡೆಗೆ ಹೋಗಿ ಬಹಳ ವರ್ಷಗಳಾಗಿತ್ತು. ಈ ನಿಟ್ಟಿನಲ್ಲಿಯೂ ಕೂಡ ಕೆಲಸ ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಈಗ ಕನ್‌ವರ್ಷನ್ ಎನ್ನುವುದು ದೊಡ್ಡ ದಂಧೆಯಾಗಿದೆ. ಕನ್‌ವರ್ಷನ್ ಮಾಡಿಸಬೇಕಾದರೆ ಆರಾರು ತಿಂಗಳು ಕಾಯಬೇಕಾಗುತ್ತದೆ. ಅದನ್ನು ಕೂಡ ಸರಳೀಕರಣ ಮಾಡಬೇಕಿದೆ. ಯಾವುದೇ ಅಧಿಕಾರಿಗಳ ಹಸ್ತಕ್ಷೇಪ ಇಲ್ಲದೇ ತಕ್ಷಣ ಒಂದು ವಾರದ ಒಳಗೆ ಕನ್‌ವರ್ಷನ್ ಆಗಬೇಕು. ಆ ರೀತಿಯಲ್ಲಿ ಸರಳೀಕರಣ ಮಾಡಲು ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳುತ್ತಿದ್ದೇವೆ. ಕಂದಾಯ ಇಲಾಖೆಯಲ್ಲಿ ಡಿಜಿಟೈಸ್ ಮಾಡುವಂಥದ್ದು ಮತ್ತು ಸರ್ವೇ ಕಾರ್ಯದಲ್ಲಿ ಪ್ರಗತಿ ಕಾಣಲು ಹೊಸ ಸರ್ವೇಯರ್ಸ್ ನೇಮಕಾತಿಯನ್ನು ಮಾಡುವಂಥದ್ದು ಮಾಡುತ್ತಿದ್ದೇವೆ. ಯಾರು ಬೋಗಸ್ ದಾಖಲೆಗಳನ್ನು ಸೃಷ್ಟಿ ಮಾಡುತ್ತಾರೋ ಅವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಚಿವರಿಗೆ ಈ ಕುರಿತು ಕಾಳಜಿ ಇದೆ. ಅವರು ಕಂದಾಯ ಇಲಾಖೆಯನ್ನು ವಹಿಸಿಕೊಂಡ ಮೇಲೆ ಸಾಕಷ್ಟು ಬದಲಾವಣೆಯಾಗಿದೆ. ನಾವು ಅದಕ್ಕೆ ಅಭಿನಂದಿಸುತ್ತೇವೆ. ಆದರೆ, ಒಂದು ಗುಂಟೆ ಜಾಗ . . . .(ಗೊಂದಲ)

**ಉಪಸಭಾಪತಿಯವರು:–** ಮಾನ್ಯ ರಮೇಶ್‌ಗೌಡರೇ ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಪ್ರಶ್ನೆಗೆ 15 ನಿಮಿಷವಾಗಿದೆ. ನಿಮಗೆ ಉತ್ತರ ಸಿಕ್ಕಿದೆ ದಯವಿಟ್ಟು ಕುಳಿತುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 1476**

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ **ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನ್ಯಾ॥ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡುವ ಸಂಬಂಧ ಪ್ರತಿ ಅಧಿವೇಶನದಲ್ಲೂ ಕೇಳುತ್ತಿದ್ದೇನೆ. ಆದರೆ ಸರ್ಕಾರ ಪ್ರತಿ ಸಲ ಒಂದೇ ರೀತಿಯ ಉತ್ತರಗಳನ್ನು ಕೊಡುತ್ತಾ ಬಂದಿದೆ. ಹಿಂದೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಮಾತ್ರ ಈ ಮೀಸಲಾತಿಗಳನ್ನು ಕೊಟ್ಟಿದ್ದರು. ಆದರೆ, ಸದಾಶಿವ ಆಯೋಗ ರಚನೆ ಆಗುವುದಕ್ಕೆ ಮುಂಚೆ, ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ಮಾನ್ಯ ಹಾವನೂರ ವರದಿಯ ಆಧಾರದ ಮೇಲೆ ಸುಮಾರು 95 ಜಾತಿಗಳನ್ನು ಅಸ್ಪೃಶ್ಯರ ಮೀಸಲಾತಿಗೆ ತಂದು ಸೇರಿಸಿದರು. ಹಾವನೂರು ವರದಿ ಜಾರಿಯಾದ ನಂತರದಿಂದ ಇವತ್ತಿನವರೆಗೂ ಒಂದು ವರ್ಗ, ಅದನ್ನು ಆದಿ ಜಾಂಬವ ಅಥವಾ ಮಾದಿಗ ಎಂದು ಹೇಳಿದರೂ ಪರವಾಗಿಲ್ಲ. ಅವರು ಆವತ್ತಿನಿಂದ ಇವತ್ತಿನವರೆಗೂ ಹೋರಾಟ ಮಾಡುತ್ತಿದ್ದಾರೆ. ನಮ್ಮ ತಂದೆಯವರಾದ ಎನ್.ರಾಚಯ್ಯನವರು ಅದೇ ವರ್ಗಕ್ಕೆ ಸೇರಿದವರಾಗಿ ಇದೇ ವಿಧಾನಸೌಧದ ಮುಂದೆ ಧರಣಿ ಮಾಡುತ್ತಾ ಬಂದಿದ್ದರು. ಆದರೆ ಇವತ್ತಿಗೂ ಕೂಡ ಯಾವುದೇ ರೀತಿಯ ತೀರ್ಮಾನವಾಗಿಲ್ಲ. ಮೊನ್ನೆಯು ಕೂಡ ಮಾನ್ಯ ಲಕ್ಷ್ಮೀನಾರಾಯಣ್‌ರವರ ನೇತೃತ್ವದಲ್ಲಿ 20-30 ಸಾವಿರ ಜನ ಸೇರಿ ಪ್ರತಿಭಟನೆ ಮಾಡಿದ್ದರು. ಆದರೆ, ಈ ಕುರಿತು ಸರ್ಕಾರ ಯಾವುದನ್ನೂ ಹೇಳುತ್ತಿಲ್ಲ. ಉತ್ತರದಲ್ಲಿ ಸಂವಿಧಾನದ 15 ಮತ್ತು 16ನೇ ಅನುಚ್ಛೇದದ ಅಡಿಯಲ್ಲಿ ಅನುಸೂಚಿತ ಜಾತಿಗಳಿಗೆ ಸರ್ಕಾರವು ವಿಸ್ತರಿಸಿದ ಮೀಸಲಾತಿ ಪ್ರಯೋಜನಗಳನ್ನು ನ್ಯಾಯಸಮ್ಮತವಾಗಿ ಅನುಸೂಚಿತ ಜಾತಿಗಳ ಎಲ್ಲ ಜಾತಿಗಳು ಜನಾಂಗಗಳು ಮತ್ತು ಬುಡಕಟ್ಟುಗಳು ಅನುಭವಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡುವಂತೆ ಹೇಳಿದ್ದೇವೆ ಎಂದು ತಿಳಿಸಿದ್ದಾರೆ. ಯಾವುದೇ ತರಹದ ಸವಲತ್ತುಗಳು ಸಿಕ್ಕಿಲ್ಲ ಎನ್ನುವ ದೃಷ್ಟಿಯಿಂದ ಮಾನ್ಯ ಸದಾಶಿವರವರು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ.

**ಉಪಸಭಾಪತಿಯವರು:-** ತಾವು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ **ಆರ್.ಧರ್ಮಸೇನ:-** ಈ ಕುರಿತು ಸ್ವಲ್ಪ ಹಿಂದಿನದನ್ನು ಹೇಳಬೇಕಾಗುತ್ತದೆ. ಈ ಸಮಸ್ಯೆ ನಿನ್ನೆ-ಮೊನ್ನೆಯದಲ್ಲ. ಮಾನ್ಯ ದೇವರಾಜ ಅರಸುರವರ ಕಾಲದಿಂದಲೂ ಹೋರಾಟ ನಡೆಯುತ್ತಿದೆ ಎಂದು ಹೇಳಿದರೆ ಇದರ ಗಂಭೀರತೆಯನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಸದಾನಂದಗೌಡರು ಈ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಸದರಿ ವರದಿಯನ್ನು ನೀಡಲಾಗಿತ್ತು. ನೀವು ಆ ವರದಿಯನ್ನು ಸ್ವೀಕಾರ ಮಾಡಿ, ಇಲ್ಲವೇ ತಿರಸ್ಕಾರ ಮಾಡಿ.

**ಉಪಸಭಾಪತಿಯವರು:-** ಮಾನ್ಯ ಧರ್ಮಸೇನರವರೇ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ನಂತರ ನೀವು ಮಾತನಾಡಿ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ನ್ಯಾ॥ ಸದಾಶಿವ ಆಯೋಗವು 2005ರಲ್ಲಿ ರಚನೆಯಾಯಿತು. ಅನುಚ್ಛೇದ 15 ಮತ್ತು 16ರ ಅಡಿಯಲ್ಲಿ ಅನುಸೂಚಿತ ಜಾತಿ ಮತ್ತು ಜನಾಂಗದವರಿಗೆ ಮೀಸಲಾತಿ ಪ್ರಯೋಜನಗಳು ಸಿಗುತ್ತಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ವರದಿ ಕೊಡಬೇಕು ಎಂದು ಸದರಿ ಆಯೋಗವನ್ನು ರಚಿಸಲಾಗಿತ್ತು. ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಬುಡಕಟ್ಟು ಸಮುದಾಯಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಗಳು ಎಷ್ಟರಮಟ್ಟಿಗೆ ಪ್ರಗತಿ ಕಾಣುತ್ತಿದ್ದಾರೆ ಎನ್ನುವುದನ್ನು ಆ ವರದಿಯೊಳಗೆ ಉಲ್ಲೇಖ ಮಾಡಿದ್ದಾರೆ. ನಂತರ, ನ್ಯಾ. ಸದಾಶಿವ ಆಯೋಗದ ವರದಿಯನ್ನು ಸುಮಾರು 2012ರಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಆ ವರದಿ ಸರ್ಕಾರಕ್ಕೆ ಮುಟ್ಟುವಂತಹ ಸಂದರ್ಭದಲ್ಲಿ ಅದರ ವಿರುದ್ಧವಾಗಿ ಮತ್ತು ಪರವಾಗಿ ಹಲವಾರು ಆಕ್ಷೇಪಣೆಗಳು ಬರುತ್ತವೆ. 2015ರಲ್ಲಿ ಅದು ವಿಧಾನ ಮಂಡಲದಲ್ಲಿ ಚರ್ಚೆಯಾಗಬೇಕು ಎಂದು ತೀರ್ಮಾನ ಮಾಡಿದ ಮೇಲೆ, 2015ರಲ್ಲೇ ಇದನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗುತ್ತದೆ. ಅಲ್ಲಿ ಅನುಮೋದನೆ ಪಡೆದುಕೊಂಡರೂ ನಂತರ ಅದನ್ನು ಯಾವ ಕಾರಣಕ್ಕೋಸ್ಕರ ಮುಂದೂಡಿದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆಗ ಯಾವ ಸರ್ಕಾರಗಳಿತ್ತು ಎನ್ನುವುದರ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಆವತ್ತಿನ ಸಂದರ್ಭದಲ್ಲಿ ಅದನ್ನು ಮುಂದೂಡಲಾಯಿತು ಎನ್ನುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. 2018ರಲ್ಲೂ ಇದರ ಬಗ್ಗೆ ಸುದೀರ್ಘ ಚರ್ಚೆಯಾದಾಗಲೂ ಪರವಾಗಿ ಮತ್ತು ವಿರುದ್ಧವಾಗಿ ಆಕ್ಷೇಪಣೆಗಳು ಬಂತು. ಆವತ್ತಿನ ಸಂದರ್ಭದಲ್ಲಿ ಸರ್ಕಾರಗಳು ಸಚಿವ ಸಂಪುಟದ ಉಪಸಮಿತಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡವು. ದಿನಾಂಕ 14.3.2018ರಲ್ಲಿ ಉಪಸಮಿತಿಯು ಏನು ನಿರ್ಧಾರ ತೆಗೆದುಕೊಂಡಿತು, ಆ ಹಿನ್ನೆಲೆಯಲ್ಲಿ ಬೇರೆ ಬೇರೆ ಕಾರಣಗಳಿಂದ ವರದಿಯ ಅನುಷ್ಠಾನ ಮುಂದಕ್ಕೆ ಹೋಯಿತು. ನಂತರದ ಯಾವ ಸರ್ಕಾರಗಳು ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಆ ಉಪಸಮಿತಿಯನ್ನು ಪುನಃ ರಚನೆ ಮಾಡಬೇಕೆಂದು ಚರ್ಚೆ ನಡೆಯುತ್ತಿದೆಯೇ ಹೊರತು ಈ ನಿಟ್ಟಿನಲ್ಲಿ ಇಲ್ಲಿಯ ತನಕ ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ಮೊನ್ನೆ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ್ಮೀನಾರಾಯಣರವರ ನೇತೃತ್ವದಲ್ಲಿ ಧರಣಿ ನಡೆಯುತ್ತಿದ್ದಾಗ ನಾನು ಅಲ್ಲಿಗೆ ಹೋಗಿದ್ದೆ. ಆಗ ಅವರು, ಮಾನ್ಯ ರಾಮುಲುರವರೇ ನೀವು ಇಲ್ಲಿಗೆ ಬಂದಿದ್ದು ಸಂತೋಷವಾಯಿತು. ಆದರೆ ಈ ವರದಿಯನ್ನು ಯಾವಾಗ ಜಾರಿಗೆ ತರುವ ಕೆಲಸ ಮಾಡುತ್ತೀರಿ ಎಂದು ಬಹಳ ಗಟ್ಟಿಯಾಗಿ ಕೇಳುತ್ತಿದ್ದರು. ಸಚಿವ ಸಂಪುಟದ ಮುಂದೆ ಈ ವಿಷಯವನ್ನು ತಂದು ಸಂಪುಟದ ಉಪಸಮಿತಿ ಮಾಡಿಕೊಂಡು ಇದನ್ನು ಯಾವರೀತಿಯಲ್ಲಿ ಮುಂದುವರೆಸಬೇಕು, ಪರಿಶೀಲಿಸಬೇಕು ಎನ್ನುವುದರ ಬಗ್ಗೆ ಎಲ್ಲರೂ ಕೂಡಿ ಸುದೀರ್ಘವಾದಂತಹ ಚರ್ಚೆ ಮಾಡಿ ಅಂತಿಮವಾದ ತೀರ್ಮಾನಕ್ಕೆ ಬರುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 2015 ರಿಂದಲೂ ಇದನ್ನು ಮುಂದೂಡುತ್ತಿದ್ದರು, ಇದಕ್ಕೆ ಕಾರಣವೇನು ಎನ್ನುವುದು ನನಗೆ ಗೊತ್ತಿಲ್ಲ ಎನ್ನುವ ವಿಚಾರವನ್ನು ಹೇಳಿದರು. Government means it is a continuous entity. ಹಿಂದೆ ಬೇರೆ ಸರ್ಕಾರ ಇರಬಹುದು, ಬೇರೆ ಮಂತ್ರಿಗಳಿರಬಹುದು. ಯಾವುದೇ ಪಕ್ಷದ ಸರ್ಕಾರ ಇದ್ದರೂ ಅದು ಸರ್ಕಾರವೇ ಆಗಿರುತ್ತದೆ. It is a continuous entity.

**(ಮುಂದು)**

**(446) 17-03-2021/12-00/bkp-rn**

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

ಮಾನ್ಯ ಸಭಾಪತಿಯವರೇ, ಅದರ ಉತ್ತರಾಧಿಕಾರವನ್ನು ತಮಗೂ ಕೊಟ್ಟಿರಲಾಗಿರುತ್ತದೆ. ಗೊತ್ತಿಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ. ಇದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ ಮೊನ್ನೆ ಶಿರಾ ಉಪ ಚುನಾವಣೆಯ ಸಮಯದಲ್ಲಿ. ನಾವು ಸದಾಶಿವ ಆಯೋಗದ ವರದಿಯನ್ನು ಒಪ್ಪುತ್ತೇವೆಂದು ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿಕೆ ಮಾಡಿದ್ದಾರೆ. ಇದು ದೇವರಾಜ ಅರಸ್ ಕಾಲದಿಂದಲೂ ಹೇಳುತ್ತಲೇ ಬಂದಿದ್ದಾರೆ. ಈಗಲಾದರೂ ಇದಕ್ಕೆ ಒಂದು ಗತಿಯನ್ನು ಕಾಣಿಸಬೇಕು. ಇದು ಒಂದೇ ಸರ್ಕಾರವೆಂದು ನಾನು ಹೇಳುವುದಿಲ್ಲ. ಅನೇಕ ಸರ್ಕಾರಗಳು ಕೂಡ ಇದನ್ನು ಮುಂದಕ್ಕೆ ಹಾಕಿಕೊಂಡು ಬಂದಿವೆ. ಈಗ ಈ ಸರ್ಕಾರವಾದರೂ ಇದನ್ನು ಒಂದು ಹಂತಕ್ಕೆ ತೆಗೆದುಕೊಂಡು ಬನ್ನಿ. You take it to the logical end. ನಮ್ಮ ಮುಖ್ಯಮಂತ್ರಿಗಳು ಕೂಡ ಇದ್ದಾರೆ. ಮತ್ತೆ, ನಮ್ಮ ಜಿಲ್ಲೆಯವರೆ ಆಗಿದ್ದಾರೆ. ನಾವು ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತಂದೇ ತರುತ್ತೇವೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಮತ್ತೊಂದು ಬೈ– ಎಲೆಕ್ಷನ್ ಬಂತು. ಬೈ–ಎಲೆಕ್ಷನ್ ಬರುವುದು, ಜನರಲ್ ಎಲೆಕ್ಷನ್ ಬರುವುದು. ಸರ್ಕಾರ ಹೇಳಿ ಹೋಗುವುದು, ಇನ್ನು ಎಷ್ಟು ಕಾಲ ಕಾಯುವುದು?

**(ಗೊಂದಲ)**

**ಉಪ ಸಭಾಪತಿಯವರು:** ವಿರೋಧ ಪಕ್ಷದ ನಾಯಕರೆ, ಆಯಿತು ಸಚಿವರು ಈಗ ಉತ್ತರ ಕೊಡುತ್ತಾರೆ.

**ಶ್ರೀ ಆರ್.ಧರ್ಮಸೇನ:** ಮಾನ್ಯ ಸಭಾಪತಿಯವರೆ, ಪ್ರಸ್ತುತ ಸಂವಿಧಾನದ ಅನುಚ್ಛೇದ 330ರಲ್ಲಿ ಪರಿಶಿಷ್ಠ ಜಾತಿಗಳಿಗೆ ಈಗಾಗಲೇ ರಾಜಕೀಯ ಮೀಸಲಾತಿಯ ಬಗ್ಗೆ ಕೇಳಿದ್ದೆ. ಮಾನ್ಯ ಉಪ ಸಭಾಪತಿಯವರೆ, ಅದರ ಬಗ್ಗೆ ಹೇಳಿದ್ದಾರೆ. ನೋಡಿ ರಾಜ್ಯದಲ್ಲಿ 36 MLA reservations seats ಇವೆ. ಇವತ್ತು ಅದರಲ್ಲಿ ಅಸ್ಪೃಶ್ಯರನ್ನು ಗೆಲ್ಲಿಸುವಂತಹ ಕೆಲಸವೇ ಈ ರಾಜ್ಯದ ಮತದಾರರಿಂದ ನಡೆಯುತ್ತಿಲ್ಲ. ಇದರಿಂದ ಯಾವಾಗ ಎಂ.ಎಲ್.ಎ.ಗಳು ಆಯ್ಕೆಯಾಗುವುದಿಲ್ಲವೋ ಆಗ ಸದನದಲ್ಲಿಯೂ ಕೂಡ ಇವೆಲ್ಲಾ ಹಿನ್ನೆಡೆಯಾಗುತ್ತದೆ. ಒಂದು ಕಾನೂನು ರೂಪವಾಗಬೇಕೆಂದರೆ ಇವೆಲ್ಲಾ ಹಿನ್ನೆಡೆಯಾಗುತ್ತದೆ. ಜನಸಂಖ್ಯೆಗೆ ಅನುಗುಣವಾಗಿ ಸರಿಯಾದಂತಹ ಪ್ರತಿನಿಧಿಗಳಿಲ್ಲವೆಂದರೆ ಅಂತಹ ವರ್ಗಗಳಿಗೆ ಯಾವುದೇ ಸವಲತ್ತುಗಳು ಸಿಗುವುದಿಲ್ಲ. ನಾನು ಅದರ ಪ್ರಶ್ನೆಗೋಸ್ಕರವಾಗಿಯೇ ರಾಜಕೀಯ ಸವಲತ್ತುಗಳನ್ನು ಕೇಳಿದ್ದೆ. ದಯಮಾಡಿ ನಮಗೆ ಈ ವರ್ಗದವರು ಹೋರಾಟ ಮಾಡುತ್ತಿದಾರೆಯೋ ಇವರುಗಳಿಗೆ ರಾಜಕೀಯ ಮೀಸಲಾತಿಯನ್ನೂ ಕೊಡಬೇಕು, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಏನು ಅವರುಗಳಿಗೆ ಹಿನ್ನೆಡೆಯಾಗಿದೆ, ಯಾವುದೇ ಸವಲತ್ತುಗಳು ಅವರಿಗೆ ತಲುಪುತ್ತಿಲ್ಲ. ಈ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಲಿಕ್ಕೆ ಬಯಸುತ್ತೇನೆ. ತಾವು ವಿಶೇಷವಾಗಿ ಸಮಾಜ ಕಲ್ಯಾಣ ಸಚಿವರಾಗಲೇಬೇಕೆಂದು ಬಂದಿದ್ದೀರಿ. ಸಮಾಜ ಕಲ್ಯಾಣ ಸಚಿವರಾಗಿದ್ದ ಮಾನ್ಯ ಎನ್.ರಾಚಯ್ಯನವರ ನಂತರ ಯಾರೂ ಕೂಡ ಸರಿಯಾಗಿ ಈ ವರ್ಗವನ್ನು ಅಂದರೆ ಯಾರೂ ಕೂಡ ಈ ಅಸ್ಪೃಶ್ಯ ಜನಾಂಗವನ್ನು ಮೇಲೆ ಎತ್ತುವಂತಹ ಕೆಲಸವನ್ನು ಮಾಡುತ್ತಿಲ್ಲ. ದಯಮಾಡಿ ತಾವೂ ಕೂಡ ಒಂದು ಅನುಸೂಚಿತ ಪಂಗಡಗಳ ಪ್ರತಿನಿಧಿಯಾಗಿ ಈ ಸದನಕ್ಕೆ ಏನು ಬಂದಿದ್ದೀರಿ, ರಾಜ್ಯ ಸರ್ಕಾರದ ಮಂತ್ರಿಗಳಾಗಿ ಬಂದಿದ್ದೀರಿ, ಎಲ್ಲರನ್ನೂ ಕೂಡ ಸಮಾನ ಚಿತ್ತದಿಂದ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ತಾವು ಮಾಡಿಕೊಡಬೇಕು. ಯಾವುದೇ ಕಾರಣಕ್ಕೂ ಕೂಡ ತಡ ಮಾಡದೇ ಈ ಸದಾಶಿವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯೋಗದ ವರದಿಯನ್ನು ಕೂಡಲೇ ನಿಮ್ಮ ಸಂಪುಟದಲ್ಲಿ ಜಾರಿಗೊಳಿಸಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

**ಶ್ರೀ ಎನ್ ರವಿಕುಮಾರ್: ಮಾನ್ಯ** ಸಚಿವರು ಎಷ್ಟು ದಿನಗಳೊಳಗೆ ಕೊಡುತ್ತೇನೆ ಎನ್ನುವುದನ್ನು ಸಹ ತಳಿಸಬೇಕು

**ಶ್ರೀ ಬಿ. ಶ್ರೀರಾಮುಲು: ಮಾನ್ಯ** ಸಭಾಪತಿಯವರೆ, ಏನು ಈ ಸದಾಶಿವ ಆಯೋಗದ ವರದಿಯ ಬಗ್ಗೆ ಎರಡು ವಿಚಾರಗಳಿವೆ. ಏಕೆಂದರೆ, ಒಂದು ವಿಚಾರವೇನೆಂದರೆ, ಪರಿಶೀಲನೆ ಮಾಡಿ ಉಪ ಸಮಿತಿ ರಚನೆ ಮಾಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತಹ ಕೆಲಸ ಮಾಡಬೇಕು. ಅದರ ಜೊತೆಗೆ ಸದನದಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಹಾಗೂ ಇದರ ಬಗ್ಗೆ ಶೀಘ್ರದಲ್ಲಿಯೇ ಮಾನ್ಯ ಹಿರಿಯ ಸದಸ್ಯರ ಜೊತೆಗೆ ಮಾತನಾಡಬೇಕಾಗಿದೆ. ಏಕೆಂದರೆ, ಒಂದು ಉಪ ಸಮಿತಿಯನ್ನು ರಚನೆ ಮಾಡಬೇಕೆನ್ನುವ ವಿಚಾರ ಮೊದಲನೆಯದು. ಅದರ ಜೊತೆಗೆ ಎರಡನೇ ವಿಚಾರವೇನೆಂದರೆ, ಈ ವಿಷಯ ಸದನದಲ್ಲಿ ಕೂಡ ಚರ್ಚೆಯಾಗಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:** ಸದನದಲ್ಲಿ ಚರ್ಚೆಯಾದ ನಂತರ ಟೇಬಲ್ ಮಾಡುತ್ತೀರೇನು?

**ಶ್ರೀ ಬಿ..ಶ್ರೀರಾಮುಲು:** ಮೊದಲು ಉಪ ಸಮಿತಿ ರಚನೆ ಮಾಡುವ ಬಗ್ಗೆ ನಾನು ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:** ಯಾವುದು ಮೊದಲು ಮಾಡುತ್ತೀರಿ?

**ಶ್ರೀ ಬಿ.ಶ್ರೀರಾಮುಲು:** ಮೊದಲು ಉಪ ಸಮಿತಿ ಮಾಡುತ್ತೇವೆ. ಆಮೇಲೆ ಸದನದಲ್ಲಿ ವಿಷಯ ಚರ್ಚೆಗೆ ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:** ಉಪ ಸಮಿತಿಯ ವರದಿ ಬಂದ ನಂತರ ಸದನದಲ್ಲಿ ಚರ್ಚೆಗೆ ಇಡುತ್ತೀರಾ? ಆದರೆ, ಅದಕ್ಕೆ ಏನಾದರೂ ಒಂದು definite time limit ಹೇಳಿ. ಈಗಾಗಲೇ ಎಷ್ಟೋ ಸರ್ಕಾರಗಳು ಬಂದು ಹೋಗಿವೆ, ಇದರ ಅವಧಿಯೂ ಸಹ, ಮುಗಿಯಿತು. ಆದುದರಿಂದ ಇದರ ಬಗ್ಗೆ ಏನಾದರೂ ಹೇಳಬೇಕಲ್ಲವೇ ಕಡೆ ಪಕ್ಷ ಇಷ್ಟು ಅವಧಿಯೊಳಗೆ ಮಾಡುತ್ತೇವೆ ಎಂದಾದರೂ ತಿಳಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ..ಶ್ರೀರಾಮುಲು**: ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಉಪ ಸಮಿತಿ ಮಾಡಿ ಮತ್ತೆ ಪುನ: ಸದನದಲ್ಲಿ ಚರ್ಚೆ ಮಾಡುವ ಬಗ್ಗೆ ಆದಷ್ಟು ಶೀಘ್ರದಲ್ಲಿ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಸಭಾಪತಿಯವರೇ,ಆದಷ್ಟು ಶೀಘ್ರದಲ್ಲಿ ಎಂದು ಹೇಳಿದರೆ ಅದರ definition ಏನು ಎನ್ನುವುದೇ ನಮಗೆ ಅರ್ಥವಾಗುತ್ತಿಲ್ಲ.

**ಉಪ ಸಭಾಪತಿಯವರು**: ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಆರ್. ಧರ್ಮಸೇನ:** ಮಾನ್ಯ ಸಭಾಪತಿಯವರೇ,ಅವರು ಕಾಲ ಮಿತಿಯಲ್ಲಿ ಮಾಡುತ್ತಾರೆಂಬುದನ್ನು ತಿಳಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1456**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು:** ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಸೂಕ್ಷ್ಮ ಜೀವಿಗಳು ಮತ್ತು ಬಹಳ ಒಳ್ಳೆಯವರು. ನಮಗೆ ಅವರ ಬಗ್ಗೆ ಮೊದಲಿನಿಂದಲೂ ಬಹಳ ಗೌರವವಿದೆ. ಆದರೆ, ಇವರು ನಿಭಾಯಿಸುತ್ತಿರುವ ಒಂದು ಇಲಾಖೆ ಏನಿದೆ ಅದು ಗುತ್ತಿಗೆದಾರರನ್ನು ಬಹಳ ಸಂಕಷ್ಟಕ್ಕೀಡು ಮಾಡಿದಂತಹ ಇಲಾಖೆಯಾಗಿದೆ. ಎಲ್ಲೋ ಒಂದು ಕಡೆಯಲ್ಲಿ ಮಾನಸಿಕವಾಗಿ ಹೆಚ್ಚಿಗೆ ಅವರಿಗೆ ಒತ್ತಡ ಕೊಡದೇ ಅವನ ಗಮನಕ್ಕೆ ತರಬೇಕು ಎಂಬ ವಿಚಾರವನ್ನು ನನ್ನ ಮನಸ್ಸಿಗೆ ತಂದುಕೊಂಡು ಹೇಳುತ್ತಿದ್ದೇನೆ. 'ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ವರ್ಷಾನುಗಟ್ಟಲೆ ಗುತ್ತಿಗೆ ಹಣ ಬಾಕಿ ನೀಡದೇ ಹಾಗೆಯೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. 'ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಗುತ್ತಿಗೆದಾರರಿಗೆ ಪಾವತಿಸಿದ ಬಿಲ್ಲುಗಳು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ' ಎಂದು ಒಪ್ಪಿಕೊಂಡಿದ್ದಾರೆ. ಉಪ ಪ್ರಶ್ನೆ ಏನೆಂದರೆ, 'ಹಾಗಿದ್ದಲ್ಲಿ ಕೋಲಾರ ಜಿಲ್ಲೆಯ ಗುತ್ತಿಗೆದಾರರಿಗೆ ಉಳಿದ ಲೆಕ್ಕಶೀರ್ಷಿಕೆಯಡಿಯಲ್ಲಿ ಬಾಕಿ ಇರುವ ಒಟ್ಟು ಮೊತ್ತ ಎಷ್ಟು' ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ 'ರೂ.108 ಕೋಟಿ 72 ಲಕ್ಷ 24 ಸಾವಿರಗಳು ಬಾಕಿಯಿದೆ' ಎಂದು ಉತ್ತರ ಕೊಟ್ಟಿದ್ದಾರೆ. ಅದು ಖಂಡಿತ ಸತ್ಯವಾಗಿದೆ. ಅದಕ್ಕೆ ಏನು ಅವರು ಏನು 11 ಲೆಕ್ಕಶೀರ್ಷಿಕೆಯಡಿಯಲ್ಲಿ ಬಾಕಿಯ ಬಗ್ಗೆ ಹೇಳಿದ್ದಾರೆ, ನನಗೆ ಇವೆಲ್ಲಾ ಏನೂ ಗೊತ್ತಾಗುವುದಿಲ್ಲ, ಏಕೆಂದರೆ, ನಾನೇನೂ ಗುತ್ತಿಗೆದಾರನಲ್ಲ. 'ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವಾಗ ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು' ಎಂದು ಕೇಳಲಾಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಈ ಮೂರು ಸಂಖ್ಯೆಯಲ್ಲಿ ಅದಕ್ಕೆ ಒಂದು ಮಾನದಂಡವಿದೆ ಎಂದು ಹೇಳಿದ್ದಾರೆ. ಮಾನದಂಡದ ಪ್ರಕಾರ ಹಣ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನನ್ನ ಮನವಿಯಿಷ್ಟೆ. ನಾನು ಹೆಚ್ಚಿಗೆ ಅವರಿಗೆ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ, ನನಗೆ ಮುಜುಗರವಾಗುತ್ತದೆ. ಈಗಾಗಲೇ ರೂ.108 ಕೋಟಿಗಳು ಹಣ ಬಾಕಿ ಇರಬೇಕಾದರೆ 30 ಜಿಲ್ಲೆಗೆ ಎಷ್ಟು ಹಣ ಬಾಕಿಯಿರುತ್ತದೆ ಎನ್ನುವುದು ಎಲ್ಲರಿಗೂ ಸ್ಪಷ್ಟ. ಇದು ಮನವರಿಕೆಯಾಗಿರುತ್ತದೆ. ಅದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗ ಏನು ಗುತ್ತಿಗೆದಾರರಿದ್ದಾರೆ, ಅವರು ಈ ಹಿಂದೆ ರೈತರು ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು ಎಂದು ಏನು ಹೇಳುತ್ತಿದ್ದರು ಅದು ಇವತ್ತಿನ ದಿವಸ ಇನ್ನೂ ಸಹ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ರೈತರು ಸಾಲಬಾದೆಯಿಂದ ಆತ್ಮಹತ್ಯೆ ಎಂದು ಹೇಳುತ್ತಿದ್ದಾರೆ. ಅದು ಬೇಡ.

**ಶ್ರೀ ಗೋವಿಂದರಾಜು:** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆ ಕೇಳುವುದಿಲ್ಲ. ನಾನು ಇಡೀ ಸದನಕ್ಕೆ ಮನವಿ ಮಾಡುತ್ತಿದ್ದೇನೆ. ಏಕೆಂದರೆ, ಇಡೀ ರಾಜ್ಯದಾದ್ಯಂತ ಇರುವಂತಹ ಗುತ್ತಿಗೆದಾರರ ಪರವಾಗಿ ಕೇಳುತ್ತಿದೇನೆ. ಈ ವರ್ಷ ಕೂಡ ಸುಮಾರು ಇಇತಟೂ.10,282 ಕೋಟಿಗಳನ್ನು ಮಾತ್ರ ಬಜೆಟ್‌ನಲ್ಲಿ ಮೀಸಲಾತಿ ಕೊಟ್ಟಿದ್ದಾರೆ. ಈ ಸಲ ಕೊಡಬೇಕಾಗಿರುವ ಬಾಕಿ ನೋಡಿದರೆ, ಈ ಬಾರಿ ಕೋಲಾರಕ್ಕೆ ನಾವು ರೂ.108 ಕೋಟಿಗಳನ್ನು ಊಹೆ ಮಾಡಿಕೊಳ್ಳಬಹುದು, ಸುಮಾರು ರೂ.30,000 ಕೋಟಿ ಬಾಕಿಯಿರಬಹುದು. ಯಾವಾಗ ಅವರಿಗೆ ಹಣ ಕೊಡುವುದಕ್ಕೆ ಸಾಧ್ಯವಾಗುತ್ತದೆ?

**ಸಭಾಪತಿಯವರು:** ಮಾನ್ಯ ಸಚಿವರು..

**ಶ್ರೀ ಗೋವಿಂದರಾಜು:** ನನಗೆ ಉತ್ತರ ಕೊಡುವುದು ಬೇಡ. ನಾನು ಮನವಿಯನ್ನಷ್ಟೇ ಮಾಡುತ್ತೇನೆ.

**ಸಭಾಪತಿಯವರು:** ಉತ್ತರ ಕೊಡಬೇಕು. ನಿಮಗೆ ತೃಪ್ತಿಕರವಾಗಿದೆಯೆಂದರೆ ಕುಳಿತುಕೊಳ್ಳಬೇಕು.

**ಶ್ರೀ ಗೋವಿಂದರಾಜು:** ನನಗೆ ಉತ್ತರ ಕೊಡುವುದು ಬೇಡ. ನಾನು ಎಲ್ಲರ ಪರವಾಗಿ ಮನವಿ ಮಾಡುವುದಿಷ್ಟೆ, ಮಾರ್ಚ್ 31ನೇ ದಿನಾಂಕದೊಳಗೆ ಕನಿಷ್ಟಪಕ್ಷ ಶೇಕಡಾ 50 ರಷ್ಟನ್ನಾದರೂ ಹಣ ಬಿಡುಗಡೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರೆ ನಾನು ಎಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನೀವು ಏನು ಉತ್ತರ ಕೊಡುತ್ತೀರೆಂದು ಗೊತ್ತು. ಮತ್ತೆ ಉತ್ತರ ಕೊಡುವುದು ಬೇಡ.

**ಶ್ರೀ ಗೋವಿಂದ ಎಂ.ಕಾರಜೋಳ:** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ–ಕಾಳಜಿ ನನಗೆ ಅರ್ಥವಾಗುತ್ತದೆ. ಇದು ಪೆಂಡಿಂಗ್ ಬಿಲ್ ಇರುವುದು ಇಂದಿನ ಸಮಸ್ಯೆ ಅಲ್ಲ. ಏನಾಗಿದೆಯೆಂದರೆ, ನಮ್ಮಲ್ಲಿ ಒತ್ತಡ ಹೆಚ್ಚಾಗಿ, ಶಾಸಕರ ಒತ್ತಡ ಹೆಚ್ಚಾಗಿ, ಸಾರ್ವಜನಿಕರ ಒತ್ತಡ ಹೆಚ್ಚಾಗಿ ಎಲ್ಲ ಸರ್ಕಾರಗಳಿದ್ದಾಗಲೂ ಕೂಡ ನಮ್ಮ ಬಜೆಟ್ ಅಲೋಕೇಷನ್‌ಗಿಂತ ಹೆಚ್ಚಿನ ಕಾಮಗಾರಿಗಳನ್ನು ನಾವು ಅನುಮೋದನೆ ಮಾಡಿ ಮಂಜೂರಾತಿ ಮಾಡಿ ಕೊಡುತ್ತಿದ್ದೇವೆ. ಹೀಗಾಗಿ ಸ್ವಲ್ಪ ಸಮಸ್ಯೆಯಾಗಿದೆ. ತಮಗೆ ಸೂಕ್ಷ್ಮವಾಗಿ ಹೇಳಿಬಿಡುತ್ತೇನೆ. ತಮಗೆ ಧನ್ಯವಾದ ಹೇಳುತ್ತೇನೆ. ಈ ಸದನದ ಮತ್ತು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಯಾರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುವಂತಹ ಅವಶ್ಯಕತೆ ಇಲ್ಲ. ಗುತ್ತಿಗೆದಾರರು ಸಾಲ–ಸೋಲ ಮಾಡಿ ಬ್ಯಾಂಕಿನಿಂದ ಹಣ ತೆಗೆದು ಯಂತ್ರಗಳನ್ನು ಖರೀದಿಮಾಡಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿ ಮಾಡಲು ಹಣ ಸಾಲ ಮಾಡಿರುತ್ತೀರಿ. ಆ ವಿಷಯ ನಮಗೆ ಗೊತ್ತಿದೆ. ಈಗ ಹಣಕಾಸಿನ ವ್ಯವಸ್ಥೆ ಸ್ವಲ್ಪ ಸುಧಾರಣೆ ಆಗುತ್ತಿದೆ. ತಾವೇನು ಈಗ ಶೇಕಡಾ 50ರಷ್ಟನ್ನಾದರೂ ಹಣ ಬಿಡುಗಡೆ ಮಾಡುವ ಬಗ್ಗೆ ಹೇಳಿದಿರಿ. ಅದರ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, 2018ರ ಏಪ್ರಿಲ್ ಮಾಹೆಯಲ್ಲಿ ನಮ್ಮ ವರ್ಕ್‌ಲೋಡ್ ಎಷ್ಟಿತ್ತೆಂದರೆ 21718 ಕೋಟಿ ರೂ. ಇತ್ತು. 2019ರ ಜುಲೈನಲ್ಲಿ 33,944 ಕೋಟಿ ರೂ. ಇತ್ತು. 2018ರ ಏಪ್ರಿಲ್ 1200 ಕೋಟಿ ರೂ. ಬಾಕಿಯಿತ್ತು. ಮತ್ತು 2019ರ ಜುಲೈ ಮಾಹೆಗೆ 3,100 ಕೋಟಿ ರೂ. ಬಾಕಿಯಿತ್ತು. ಇವತ್ತು 4633 ಕೋಟಿ ರೂ. ಬಾಕಿ ಇದೆ. ನಿಮ್ಮ ಕಳಕಳಿ ನನಗೆ ಅರ್ಥವಾಗಿದೆ. ನನಗೆ ಸಾಕಷ್ಟು ಮನವಿಗಳು ಗುತ್ತಿಗೆದಾರರಿಂದ ಬಂದಿವೆ. ಈ ತಿಂಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕೋಲಾರ ಜಿಲ್ಲೆಯಲ್ಲಿ 108ಕೋಟಿ ಏನು ಬಾಕಿ ಉಳಿದಿದೆ ಅದನ್ನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಕೊಡಸಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೇನೆ.

**(ಮುಂದು)**

**(447) 17.03.2021 12.10 ಎಸ್‌ವಿ-ಆರ್‌ಎನ್**

**ಉಪ ಸಭಾಪತಿಯವರು:-** ನಾನು ಇನ್ನೇನು ಪ್ರಶ್ನೆಯನ್ನೇ ಕೇಳುವುದಿಲ್ಲ ಎಂದು ಹೇಳಿದಿರಿ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ನಾನು ಶಾಸಕನಾಗಿ ಕೇವಲ ಒಂಬತ್ತು ತಿಂಗಳುಗಳು ಕಳೆದಿವೆ. ಅದಕ್ಕೆ ಮೊದಲು ನಾನು ಸಾರ್ವಜನಿಕ ಜೀವನದಲ್ಲಿ ಇದ್ದಂತಹವನಲ್ಲ. ಸದನದ ಮಾಹಿತಿಗಾಗಿ. ಜ್ಯೇಷ್ಠತೆಯ ಆಧಾರದ ಮೇಲೆ ಹಣ ಬಿಡುಗಡೆ ಮಾಡಬೇಕೆಂದು ಮಾಡಿದಂತಹ ಮುಖ್ಯಮಂತ್ರಿಗಳು ಮಾನ್ಯ ಎಸ್.ಎಂ.ಕೃಷ್ಣ ಅವರು. ಅದರ ನಂತರ ನನಗಿರುವಂತಹ ಮಾಹಿತಿ ಪ್ರಕಾರ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮಾನ್ಯ ಡಿ.ವಿ.ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರಿದ್ದಂತಹ ಒಂದು ವರ್ಷದ ಅವಧಿಯಲ್ಲಿಯೇ ಎಲ್ಲಾ ಬಿಲ್‌ಗಳನ್ನು ಮಾರ್ಚ್ 31ರೊಳಗಾಗಿ ಪಾವತಿ ಮಾಡಿದಂತಹ ಇತಿಹಾಸವಿದೆ. ಇಂದು ಬಿಜೆಪಿಯದ್ದೇ ಸರ್ಕಾರವಿದೆ. ಈಗಲೂ ಅದನ್ನೇ ಅನುಸರಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1257**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:–** ಮಾನ್ಯ ಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಧರ್ಮಸ್ಥಳ ಕಡೆಗೆ ಇರುವಂತಹ ಎರಡು ಪ್ರಮುಖ ಸಂಪರ್ಕ ರಸ್ತೆಗಳೆಂದರೆ ಚಾರ್ಮಾಡಿ ಘಾಟ್ ಮತ್ತು ಶಿರಾಡಿ ಘಾಟ್‌ಗಳು. ಚಾರ್ಮಾಡಿ ಘಾಟಿಯಲ್ಲಿ ಸಂಚಾರ ದಿನಾಂಕ 14.08.2019ರಿಂದ ನಿಷೇಧ ಆಗಿದ್ದು, ಆಗ ಬಂದಂತಹ ದೊಡ್ಡ ಮಳೆಯಿಂದ ಭೂಕುಸಿತವುಂಟಾಗಿ ಮಾರ್ಗವನ್ನು ಮುಚ್ಚಲಾಗಿತ್ತು. ಈಗ ಕೆಲವು ಸಮಯದಿಂದ ಲಘುವಾಹನಗಳ ಸಂಚಾರಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ಈಗ ಆ ರಸ್ತೆ ಸಂಪೂರ್ಣವಾಗಿ ದುರಸ್ತಿಯಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಸಾಧಿಸುವಂತಹ ಈ ರಸ್ತೆಯನ್ನು ಮೂಡಿಗೆರೆ, ಚಿಕ್ಕಮಗಳೂರು, ಶಿವಮೊಗ್ಗ, ಹೊಸಪೇಟೆ, ಬಳ್ಳಾರಿ ಮುಂತಾದ ಕಡೆಯಿಂದ ಬರುವ ಎಲ್ಲಾ ಬಸ್‌ಗಳು ಹಾಗೂ ತರಕಾರಿ ತರುವ ಇತರ ವಾಹನಗಳು ಅವಲಂಬಿಸಿವೆ. ಆದರೆ ಸುಮಾರು ಎರಡು ವರ್ಷಗಳಿಂದ ಆ ರಸ್ತೆಯಲ್ಲಿ ಈ ವಾಹನಗಳಿಗೆ ಅವಕಾಶವಿರುವುದಿಲ್ಲ. ಈಗ ಈ ರಸ್ತೆ ಸಂಪೂರ್ಣವಾಗಿ ಡಾಂಬರೀಕರಣಗೊಂಡು ಸುಸಜ್ಜಿತವಾಗಿದ್ದು, ಇಲ್ಲಿ ವಾಹನಗಳು ಓಡಾಡಲಿಕ್ಕೆ ಸೌಕರ್ಯವನ್ನು ಸರ್ಕಾರ ಕಲ್ಪಿಸಿಕೊಟ್ಟಿದೆ.

ಇಂದು ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಸಾಕಷ್ಟು ನಷ್ಟದಲ್ಲಿವೆ. ಸುಮಾರು 50–60–70 ಕಿಲೋಮೀಟರ್‌ಗಳು ಸುತ್ತಿ ಬಳಸಿ ಬರಬೇಕಾಗಿದೆ. ಈಗ ಈ ರಸ್ತೆಯು ಸಂಪೂರ್ಣ ದುರಸ್ತಿಯಾದ ಕಾರಣದಿಂದಾಗಿ ಆರು ಚಕ್ರದ ವಾಹನಗಳು ಮತ್ತು ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಇವುಗಳಿಗೆ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಇದಕ್ಕಾಗಿ ಈಗಾಗಲೇ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ವರದಿಯನ್ನು ಕೇಳಿದ್ದೇವೆ. ಜಿಲ್ಲಾಧಿಕಾರಿಗಳು, ಮಂಗಳೂರು ಇವರಿಗೂ ಸಹ ಪತ್ರವ್ಯವಹಾರವನ್ನು ಮಾಡಲಾಗಿದ್ದು, ಇನ್ನೂ ಉತ್ತರ ಲಭ್ಯವಾಗಿಲ್ಲ. ಇನ್ನು ಮಳೆಗಾಲಕ್ಕೆ ಎರಡು ತಿಂಗಳು ಬಾಕಿಯಿದೆ. ಬಹುಶಃ ಜೂನ್ ಎಂದಾದರೆ ಮೂರು ತಿಂಗಳ ಕಾಲಾವಕಾಶ ಸಿಗಬಹುದು. ಈ ಸೀಸನ್‌ನಲ್ಲಿಯಾದರೂ ಆರು ಚಕ್ರಗಳ ಸರಕು ಸಾಗಣೆ ವಾಹನಗಳಿಗೆ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್‌ಗಳಿಗೆ ಅವಕಾಶವನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಚಾರ್ಮಾಡಿ ಘಾಟ್ ರಾಷ್ಟ್ರೀಯ ಹೆದ್ದಾರಿ 234 ಸುಮಾರು 24 ಕಿ.ಮೀ. ರಸ್ತೆ ಸುಸ್ಥಿತಿಯಲ್ಲಿದೆ. ಏಕೆಂದರೆ 24 ಕಿ.ಮೀ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದಕ್ಕೂ bitumen concrete ಹಾಕಲಾಗಿದೆ. ವಾಹನಗಳ ಸಂಚಾರಕ್ಕೆ ರಸ್ತೆ ಸುಗಮವಾಗಿದೆ. ದಿನಾಂಕ 08.03.2021ರಂದು ವಾಹನ ಸಂಚಾರಕ್ಕೆ ಅನುಮತಿಯನ್ನು ನೀಡಬೇಕೆಂದು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ನಾವು ಪತ್ರವನ್ನು ಬರೆದಿದ್ದೇವೆ. ಇಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುವ ವಿಚಾರವನ್ನು ಮತ್ತೊಮ್ಮೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿ ಖಂಡಿತವಾಗಿಯೂ ಕೂಡಲೇ ಅನುಮತಿಯನ್ನು ಕೊಡುವುದಕ್ಕೆ ಹೇಳುತ್ತೇನೆ.

**ಶ್ರೀ ಬಿ.ಎಂ.ಫಾರೂಕ್:–** ಮಾನ್ಯ ಸಚಿವರೇ, ತಮ್ಮಲ್ಲಿ ಒಂದು ಮನವಿ. Tunnel road proposal ಒಂದು ತಯಾರು ಮಾಡಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಫಾರೂಕ್ ಅವರೇ, ತಾವು ಕೇಳಿರುವ ಪ್ರಶ್ನೆಗೆ ಉತ್ತರ ಹೇಳಿಬಿಡುತ್ತೇನೆ. ಮೂಡಿಗೆರೆ–ಬೆಳ್ತಂಗಡಿ ರಸ್ತೆಯಲ್ಲಿ tunnel road ಆಗಬೇಕೆಂದು ಇದೆ. ಅಲ್ಲಿ tunnel road ಮಾಡಲಿಕ್ಕೆ ಒಂದು ಕಡೆ ಬೆಟ್ಟ ಬರುತ್ತದೆ, ಇನ್ನೊಂದು ಕಡೆ valley ಬರುತ್ತದೆ. ಹೀಗಾಗಿ ಅಲ್ಲಿ tunnel road ಮಾಡಲು feasibility ಇಲ್ಲ ಎಂಬುದರ ಬಗ್ಗೆ ಸಭೆಯನ್ನು ನಡೆಸಿ ತಿಳಿದುಕೊಂಡಿದ್ದೇನೆ. ಅದು ಬಹಳ ದಿನಗಳ ಬೇಡಿಕೆಯಾಗಿದ್ದು, Environment Clearance ಆಗುತ್ತಿಲ್ಲ. ಆಕ್ಷೇಪಣೆ ಮಾಡುತ್ತಿದ್ದಾರೆ. ಇದರ ಮಧ್ಯದಲ್ಲಿ ಒಂದು ಕಡೆ ಬೆಟ್ಟ ಮತ್ತೊಂದು ಕಡೆ valley ಇರುವುದರಿಂದ tunnel ಮಾಡುವುದು ಕಷ್ಟದ ಕೆಲಸವಾಗಿದೆ. ಆದರೂ ಕೂಡ ಸಾರ್ವಜನಿಕ ಹಿತದೃಷ್ಟಿಯಿಂದ ತಾವು ಸರ್ಕಾರದ ಗಮನಕ್ಕೆ ತಂದಿರುವುದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ನಾನು ಹೇಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರೇ, ಇಲ್ಲಿ ಸಮಸ್ಯೆ ಇರುವುದು ಅರಣ್ಯ ಇಲಾಖೆ ಮತ್ತು ಪರಿಸರವಾದಿಗಳು ಎಂದು ಹೇಳಿ. ನಾನು ಅವರನ್ನು ಪರಿಸರವ್ಯಾಧಿಗಳು ಎಂದು ಕರೆಯುತ್ತೇನೆ. Tunnel road ಅನ್ನು ಮಾಡಲಿಕ್ಕೆ ಚಾರ್ಮಾಡಿ ಘಾಟಿಗಿಂತಲೂ ಸೂಕ್ತವಾದ ಜಾಗ ಬೇರೆ ಯಾವುದಿದೆ? ಇಟಲಿಯಂತಹ ದೇಶಗಳಲ್ಲಿ ಹೇಗೆ ಮಾಡಿದ್ದಾರೆ? ಶಿರಾಡಿ ಘಾಟಿಯಲ್ಲಿ ರೈಲು ಮಾರ್ಗವನ್ನೇ ನಾವು ತೆಗೆದುಕೊಂಡು ಹೋಗಿದ್ದೇವೆ. Environment clearance ಅನ್ನು ದಯಮಾಡಿ ಮಾಡಬೇಕು. ಆ ಮೂಲಕ ಸಾಕಷ್ಟು ಸಮಯ ಉಳಿತಾಯವಾಗುತ್ತದೆ. ತಾವು ದಯಮಾಡಿ ಇದರ ಬಗ್ಗೆ ಮನಸ್ಸು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಚಿವರೇ, ಈ ವಿಷಯದಲ್ಲಿ National Highway Authority of India ಅವರು project report ಅನ್ನು ತಯಾರು ಮಾಡಿದ್ದಾರೆ. Japan International Co-operation Agency ಸಹ partnership ಗಾಗಿ clearance ಮಾಡಿದ್ದಾರೆ. ದಯಮಾಡಿ ತಾವು ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 1227**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮಲೆತಿರಿಕೆ ಬೆಟ್ಟ, ನೆಹರು ನಗರ ಮತ್ತು ಅರಸು ನಗರದ ಸಮೀಪದಲ್ಲಿ 2018ರಲ್ಲಿ 200 ಮೀಟರ್ ಆಳದ ಬಿರುಕು ಕಾಣಿಸಿಕೊಂಡ ಕಾರಣದಿಂದಾಗಿ ಸದರಿ ಪ್ರದೇಶವು ಅಪಾಯಕಾರಿಯಾಗಿದ್ದು, ಜನವಸತಿಗೆ ಸುರಕ್ಷಿತವಲ್ಲ ಎಂಬ ವರದಿಯ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳು ಭಯದ ವಾತಾವರಣದಲ್ಲಿ ಕಳೆದ ಮೂರು ವರ್ಷಗಳಿಂದ ಬದುಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಬಂದಿದೆ ಎಂದು ಉತ್ತರಿಸಿದ್ದಾರೆ. ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎಂಬ ಪ್ರಶ್ನೆಗೆ ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮಲೆತಿರಿಕೆ ಬೆಟ್ಟದಲ್ಲಿ ಸುರಕ್ಷಿತವಲ್ಲದ ಸ್ಥಳದಲ್ಲಿ ವಾಸಿಸುತ್ತಿರುವವರಿಗೆ ಪುನರ್ವಸತಿ ಕಲ್ಪಿಸಲು ಸ್ಥಳೀಯವಾಗಿ ಸರ್ಕಾರಿ ಜಮೀನು ಲಭ್ಯವಿಲ್ಲದ್ದರಿಂದ ವಿರಾಜಪೇಟೆ ಪಟ್ಟಣ ಪಂಚಾಯಿತಿಯಿಂದ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಬಿಟ್ಟಂಗಾಲದ ಅಂಬಟ್ಟಿ ಗ್ರಾಮದಲ್ಲಿ ಜಾಗವನ್ನು ಖರೀದಿಸಲು ಗುರುತಿಸಲಾಗಿದ್ದು, ಖರೀದಿ ಪ್ರಸ್ತಾವನೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಎಂದು ಹೇಳಿದ್ದಾರೆ.

ಮಾನ್ಯ ಸಚಿವರೇ, ಭೂಮಿಯನ್ನು ಖರೀದಿ ಮಾಡಿ ನಿವೇಶನ ಒದಗಿಸಿಕೊಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಆರ್ಥಿಕ ಪರಿಸ್ಥಿತಿಯಲ್ಲಿ ಅದು ಬಹಳ ಕಷ್ಟ ಎಂದು ನನಗನ್ನಿಸುತ್ತದೆ. ಏಕೆಂದರೆ ಅಲ್ಲಿ ಸರ್ಕಾರಿ ಜಮೀನು ಇದೆ. ಬಾಳಗೋಡು ಎನ್ನುವ ಜಾಗದಲ್ಲಿ 4 ಎಕರೆ 75 ಸೆಂಟ್ ಜಾಗವಿದೆ. ಜೊತೆಗೆ ಆರ್ಜಿ, ಕೆದಮುಳ್ಳೂರು, ಬಿಟ್ಟಂಗಾಲ ಮುಂತಾದ ಕಡೆಗಳಲ್ಲಿ ಸರ್ಕಾರಿ ಜಮೀನಿದೆ. ಆದಷ್ಟು ಬೇಗ ಸರ್ವೆ ಮಾಡಿ ಸರ್ಕಾರಿ ಜಾಗದಲ್ಲಿ ಮನೆಗಳನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಸರ್ಕಾರದ ಸುತ್ತೋಲೆಯ ಪ್ರಕಾರ ಮನೆಗೆ ರೂ.5 ಲಕ್ಷ ಹಣವನ್ನು ಸಹ ಕೊಡಲಾಗುತ್ತಿದೆ. ನಿಮಗೆ ಇದು ಸುಲಭವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಬಹುಶಃ ನೀವು ಖಾಸಗಿ ಜಮೀನು ತೆಗೆದುಕೊಳ್ಳುವ ಪ್ರಕ್ರಿಯೆ ವಿಳಂಬವಾಗುತ್ತದೆ. ಮುಂಬರುವ ಮಳೆಗಾಲಕ್ಕೆ ಮಲೆತಿರಿಕೆ ಬೆಟ್ಟದ ನಿವಾಸಿಗಳಿಗೆ ತಂಗಲು ತಾಣವೆಲ್ಲಿ? ಬಿರುಕು ಬಿಟ್ಟ ಬೆಟ್ಟ ವಾಸಯೋಗ್ಯವಲ್ಲ; ಅಧಿಕಾರಿಗಳ ನಿರ್ಲಕ್ಷ್ಯ ಎಂದು ಪತ್ರಿಕೆಗಳಲ್ಲಿ ಬಂದಿದೆ. ಸರ್ಕಾರಿ ಜಮೀನನ್ನು ಗುರುತು ಮಾಡುವುದಕ್ಕೆ ಏಕೆ ಅಧಿಕಾರಿಗಳು ಇಷ್ಟು ಕಷ್ಟ ಪಡುತ್ತಾರೆಂದು ನನಗೆ ಅರ್ಥವಾಗುವುದಿಲ್ಲ. ಸರ್ಕಾರಿ ಜಮೀನು ಇದೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಜಾಗವನ್ನು ಕೊಂಡು ಮನೆಗಳನ್ನು ನಿರ್ಮಾಣ ಮಾಡಿಕೊಡುವಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ನಾವು ಸ್ವಾಗತಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ಮಳೆ ಬರುತ್ತದೆ. ಗುರುತು ಮಾಡಿರುವುದು ಕೇವಲ 66 ಮನೆಗಳು. ಅರಸು ನಗರ ಮತ್ತು ನೆಹರು ನಗರಗಳಲ್ಲಿ ಸುಮಾರು 2,500 ರಷ್ಟು ಜನಸಂಖ್ಯೆಯಿದೆ. 66 ಮನೆಗಳು ಖಂಡಿತವಾಗಿ ಸಾಕಾಗುವುದಿಲ್ಲ. ಹಾಗಾಗಿ ಶೀಘ್ರದಲ್ಲಿಯೇ ಸರ್ಕಾರಕ್ಕೆ ಯಾವ ರೀತಿ ಅನುಕೂಲವಾಗುತ್ತದೆಯೋ ಆ ರೀತಿ ಮನೆ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ವಿರಾಜಪೇಟೆ ಭಾಗದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ land sliding ಜಾಸ್ತಿಯಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಒಂದು ತಂಡವನ್ನು ಈಗಾಗಲೇ ಅಲ್ಲಿಗೆ ಪರಿಶೀಲನೆಗಾಗಿ ಕಳುಹಿಸಿಕೊಟ್ಟು, ಅವರು survey report ಅನ್ನು ಸಹ ಕೊಟ್ಟಿದ್ದಾರೆ. ಕಾರಣವಿಷ್ಟೇ. ಅಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ, ರಸ್ತೆ ನಿರ್ಮಾಣಕ್ಕಾಗಿ ಬೆಟ್ಟಗಳನ್ನು ಕಡಿಯಲಾಗುತ್ತಿದೆ. ನೈಸರ್ಗಿಕವಾಗಿ ಬೆಳೆಯುತ್ತಿದ್ದಂತಹ ಬೀಟೆ, ಮತ್ತಿ ಮುಂತಾದ ಮರಗಳಿಗೆ ಬದಲಾಗಿ silver Oak ಅನ್ನು ಬೆಳೆಸಲಾಗುತ್ತಿದ್ದು, ಅವುಗಳ ಬೇರುಗಳು ಭೂಮಿಯಲ್ಲಿ ಹೋಗುತ್ತಿರುವುದರಿಂದ ಈ ತರಹ ಆಗುತ್ತಿದೆ ಎನ್ನುವ ಕಾರಣಗಳನ್ನು ಕೊಟ್ಟಿದ್ದಾರೆ.

**(ಮುಂದು)**

**(448) 17.03.2021, 12 .20 KG.VK**

**ಶ್ರೀ ಆರ್.ಅಶೋಕ್ (ಮುಂದು):–**

ಈಗಾಗಲೇ Geological Survey ವರದಿಯ ಪ್ರಕಾರ, ವಿರಾಜಪೇಟೆಯ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮಲೆತಿರಿಕೆ ಬೆಟ್ಟದಲ್ಲಿ 57 ಮನೆಗಳು, ನೆಹರು ನಗರದಲ್ಲಿ 9 ಮನೆಗಳು ಹಾಗೂ ಅರಸು ನಗರದಲ್ಲಿ 5 ಮನೆಗಳು ಈ ರೀತಿ ಒಟ್ಟು 71 ಮನೆಗಳು ಸುರಕ್ಷಿತವಲ್ಲವೆಂದು ಈಗಾಗಲೇ ಗುರುತಿಸಿದ್ದೇವೆ. ಅದಕ್ಕೆ ಈಗಾಗಲೇ 7.80 ಎಕರೆ ಜಾಗವನ್ನು ಅಂಬಟ್ಟಿ ಗ್ರಾಮದಲ್ಲಿ ಖಾಸಗಿಯವರಿಂದ ಖರೀದಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಸರ್ಕಾರಿ ಜಾಗವಿದೆ ಎಂಬ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಈಗಲೇ ಆ ಸರ್ವೆ ನಂಬರ್‌ನ ಬಗ್ಗೆ ವಿವರಗಳನ್ನು ಕೊಟ್ಟರೆ ಒಳ್ಳೆಯದು, ಸರ್ಕಾರಕ್ಕೂ ಹಣ ಉಳಿಯುತ್ತದೆ ಮತ್ತು ಬೇಗ ಮನೆಗಳನ್ನು ಕಟ್ಟುವುದಕ್ಕೂ ಅವಕಾಶವಾಗುತ್ತದೆಂದು ಮನವಿ ಮಾಡಿಕೊಳ್ಳುತ್ತೇನೆ. ಆ ದೃಷ್ಟಿಯಿಂದ ತಕ್ಷಣ ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ಸರ್ಕಾರದ ಜಾಗವಿರುವ ಬಗ್ಗೆ ವಿವರಗಳನ್ನು ಕೊಟ್ಟರೆ, ತಕ್ಷಣ ಅಲ್ಲಿ ಮನೆಗಳನ್ನು ಕಟ್ಟುವಂತಹ ಕೆಲಸವನ್ನು ಮಾಡುತ್ತೇವೆ. ಇಲ್ಲವೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಅಲ್ಲಿ ಬೇರೆ ಜಮೀನನ್ನು ಖರೀದಿ ಮಾಡುವುದಕ್ಕೆ ಆದೇಶ ಮಾಡಿದೆ. ಮುಂದೆ ಮಳೆ ಬರುವಂತಹ ಸಮಯದಲ್ಲಿ ಈ ರೀತಿಯ ತೊಂದರೆಗಳು ಆಗಬಾರದೆಂದು ಅದರ ತಯಾರಿಗಾಗಿ ಒಂದು ಕಮಿಟಿಯನ್ನು ಸಹ ರಚನೆ ಮಾಡಿದ್ದೇವೆ. ಮಳೆ ಬರುವುದಕ್ಕೂ ಮೊದಲೇ ಅಲ್ಲಿರುವಂತಹ ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೂ ವಿನಂತಿ ಮಾಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರವು ಸಹ ಒಪ್ಪಿದೆ. ಇದಕ್ಕೆ ಒಂದು permanent structure ಮಾಡುವುದಕ್ಕೆ. ಎಲ್ಲೆಲ್ಲಿ ಈ ತರಹ landslide ಆಗುತ್ತಿದೆಯೋ ಇಲ್ಲಿ ಇರಬಹುದು, ಕಾರವಾರದ ಭಾಗದಲ್ಲಿ ಇರಬಹುದು, ಉಡುಪಿ ಭಾಗದಲ್ಲಿ ಇರಬಹುದು, ಚಿಕ್ಕಮಂಗಳೂರು ಭಾಗದಲ್ಲಿ ಇರುಬಹದು, ಈ ಕಡೆಗಳಲ್ಲಿ ಬಹಳ landslide ಆಗುತ್ತಿದೆ. ಕಾಳಜಿ ಕೇಂದ್ರ ಎಂದರೆ, ಯಾವುದೋ ಒಂದು ಶಾಲೆಗೆ ಅಥವಾ ಒಂದು ಹಾಸ್ಟಲ್‌ಗೆ ಸ್ಥಳಾಂತರ ಮಾಡುದಲ್ಲ. ಅಲ್ಲಿ facilities ಇರುವುದಿಲ್ಲ, bathroom ಇರುವುದಿಲ್ಲ, ಜಳಕ ಮಾಡುವುದಕ್ಕೆ ವ್ಯವಸ್ಥೆ ಇರುವುದಿಲ್ಲ, Medical treatment ಇರುವುದಿಲ್ಲ. ಆದ್ದರಿಂದ, ಆ ದೃಷ್ಟಿಯಿಂದ permanent ಆಗಿ ಸುಮಾರು 5 ರಿಂದ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ತರಹ landslide, flood ಆಗುವಂತಹ ಕಡೆ permanent ಆಗಿ ಒಂದು structure ಅನ್ನು ಮಾಡುವುದರ ಮೂಲಕ ಮಳೆ ಬಂದಾಗ ಅವರಿಗೆ ವಸತಿಯನ್ನು ಕಲ್ಪಿಸುವುದಕ್ಕೆ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಅಲ್ಲಿ ಜಿಲ್ಲಾಧಿಕಾರಿಗಳು review meetings ಇರಬಹುದು, ಬೇರೆ ಬೇರೆ ಸಭೆಗಳನ್ನು ಮಾಡುವುದಕ್ಕೆ ಅವಕಾಶ ಮಾಡುವುದಕ್ಕೆ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ಈಗಾಗಲೇ ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ. ಕೇಂದ್ರ ಸರ್ಕಾರದವರು ಸಹ ಅನುಮತಿಯನ್ನು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟ ತಕ್ಷಣವೇ ಅದಕ್ಕೂ ಸಹ permanent ಆಗಿ ವ್ಯವಸ್ಥೆ ಮಾಡುವುದಕ್ಕೆ ತೀರ್ಮಾನವನ್ನು ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1427**

**(ಉತ್ತರ ಒದಗಿಸಲಾಗಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರದಲ್ಲಿ ಹಿಂದು ಸಮಾಜದಲ್ಲಿರುವಂತಹ ಅಮಾನವೀಯ ಕ್ರೂರ ಅನಾಗರಿಕ ಪದ್ದತಿ ಈ ಒಂದು manual scavenging, ಈ ವಿಚಾರದಲ್ಲಿ ಮೊಟ್ಟ ಮೊದಲ ಬಾರಿಗೆ ಈ ರಾಷ್ಟ್ರಕ್ಕೆ ಮಾದರಿಯಾಗಿರುವಂಥದ್ದು ಕರ್ನಾಟಕ ರಾಜ್ಯ 1973-74ನೇ ಇಸವಿಯಲ್ಲಿ ದಿವಂಗತ ಶ್ರೀ ಬಸವಲಿಂಗಪ್ಪನವರು ಪೌರಾಡಳಿತ ಸಚಿವರಾಗಿದ್ದಾಗ ಒಂದು ಕ್ರಾಂತಿಕಾರಿ ಕಾನೂನನ್ನು ತಂದು ತಲೆ ಮೇಲೆ ಮಲ ಹೊರುವುದನ್ನು ಸಂಪೂರ್ಣವಾಗಿ ban ಮಾಡಿದರು. ತದನಂತರ ಕೇಂದ್ರ ಸರ್ಕಾರದವರು 1993-94 ರಲ್ಲಿ ನಮ್ಮ ಇಡೀ ರಾಷ್ಟ್ರದಲ್ಲಿ ಅಂದರೆ, carrying of night soil, ತಲೆ ಮೇಲೆ ಮಲ ಹೊರುವುದನ್ನು ban ಮಾಡಿದರು. ಆದರೂ ಸಹ, ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರದಲ್ಲಿ ಈ ಅಮಾನವೀಯ ಕೆಲಸ ಸಂಪೂರ್ಣವಾಗಿ ನಿಂತಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳರವರು ಸದನದಲ್ಲಿದ್ದಾರೆ. ಇದರ ಬಗ್ಗೆ ನನಗಿಂತಲೂ ಹೆಚ್ಚಿಗೆ ಅವರಿಗೆ ಗೊತ್ತಿದೆ. ತದನಂತರ ಈ ವಿಚಾರದಲ್ಲಿ 2013 ರಲ್ಲಿ ಮತ್ತೊಂದು ಕಾನೂನನ್ನು ತಂದರು. The Prohibition of Employment as Manual Scavengers and their Rehabilitation Act, 2013. ಆದರೂ ಸಹ, ಈ ಒಂದು manual scavenging ಸಂಪೂರ್ಣವಾಗಿ ನಿಂತಿಲ್ಲ. ಆದರೆ, ಮಾನ್ಯ ಸಚಿವರು ಕಾನೂನು ಬಾಹಿರವಾಗಿ ಹಸ್ತಚಾಲಿತ scavenging ಕೆಲಸಗಳನ್ನು ಗಂಭೀರವಾಗಿ ಪರಿಗಣಿಸಿದೆ ಎಂದು ಉತ್ತರ ಕೊಟ್ಟಿದ್ದಾರೆ. ಕೋಲಾರದಲ್ಲಿ 1224, ಮೈಸೂರಿನಲ್ಲಿ 1016 ಮತ್ತು ಬಿಬಿಎಂಪಿಯಲ್ಲಿ 1625 ಒಟ್ಟು 5080 ಎಂದು ರಾಜ್ಯದಲ್ಲಿ ಜಿಲ್ಲಾವಾರು ಗುರುತಿಸಲ್ಪಟ್ಟ Scavengers ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದ್ದಾರೆ. ಇದರ ಬಗ್ಗೆ ಯಾವುದಾದರೂ NGOs ಹತ್ತಿರ ಕೇಳಿದಾಗ, ಇದು ಸುಮಾರು 25,000 ಕ್ಕಿಂತಲೂ ಹೆಚ್ಚಿಗೆ ಇದೆ ಎಂಬುದು ತಿಳಿದುಬರುತ್ತದೆ. ಮಾನ್ಯ ಸಚಿವರು ಇದನ್ನು ಒಪ್ಪಿಕೊಳ್ಳುತ್ತಾರೆ. ಅನುಬಂಧ-1 ರಲ್ಲಿ ಸರ್ಕಾರಿ ಅಂಕಿ-ಅಂಶಗಳಿವೆ. ಈ ಕೆಲಸ ಮಾಡುವವರನ್ನು ಯಾರು ಸಹ ಹತ್ತಿರ ತೆಗೆದುಕೊಳ್ಳುವುದಕ್ಕೆ ಸಮಾಜದಲ್ಲಿ ತಯಾರಿಲ್ಲವೆಂದ ಮೇಲೆ, ಸರ್ಕಾರ ಸಹ ಅದೇರೀತಿಯ ವರ್ತನೆಯನ್ನು ಮಾಡುತ್ತಿದೆ ಎಂಬುದನ್ನು ಈ ಉತ್ತರದಲ್ಲಿ ನೋಡಬಹುದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇತ್ತಿಚೆಗೆ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ಜಿಲ್ಲೆಯಾದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ Municipal Corporation ನಲ್ಲಿ ಕೆಲಸ ಮಾಡುತ್ತಿದ್ದ ನಾರಾಯಣ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ ಏತಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದರೆ, ಅಲ್ಲಿರುವಂತಹ ಅಧಿಕಾರಿಗಳು ಅವರ ಕೈಗಳಲ್ಲಿ ಯಾವುದೇ safety measures ಗಳಿಲ್ಲದೆ ಈ manual scavenging ಮಾಡಬೇಕೆಂದು ಒತ್ತಡ ತಂದಾಗ ಆತ suicide ಮಾಡಿಕೊಳ್ಳುತ್ತಾನೆ. ಆದರೆ, ಆತನ ಸಾವು accident ಎಂದು ಹೇಳುತ್ತಾರೆ. ಈ manual scavenging ನಲ್ಲಿ ಬಹಳಷ್ಟು ಸಾವುಗಳು ನಡೆಯುತ್ತವೆ. ಈ ಕೆಲಸಗಾರರು ಅದರಲ್ಲಿ ಸತ್ತ ತಕ್ಷಣವೇ, ಅದನ್ನು accident ಎಂದು ಹೇಳಿಬಿಡುತ್ತಾರೆ. ಇದು culpable homicide ಅಲ್ಲದಿದ್ದರೂ ಸಹ, ಇದನ್ನು murder ಎಂದು ಹೇಳಿ ಬುಕ್ ಮಾಡಬೇಕು. ಇದು murder. ಅವರು ಧ್ವನಿ ಇಲ್ಲದಂತಹವರು. ಅಂತಹವರ ಕೈಯಲ್ಲಿ ಈ ಕೆಲಸವನ್ನು ಮಾಡಿಸುತ್ತಾರೆ. ಇತ್ತೀಚೆಗೆ ಗುಲ್ಬರ್ಗಾದಲ್ಲಿ ಎರಡು ಕೇಸ್‌ಗಳು ಆಗಿವೆ. ಈ ಒಂದು ವಿಚಾರವನ್ನು ನೋಡಿದಾಗ, NGO ಗಳು ಒಂದು PIL ಅನ್ನು ದಾಖಲಿಸುತ್ತಾರೆ. ಅದರಲ್ಲಿ 2015 ರಿಂದ 2021 ರವರೆಗೆ ಒಟ್ಟು 43 ಜನರು 21 ಇಂತಹ ಅನಾಹುತಗಳಲ್ಲಿ ಸತ್ತಿದ್ದಾರೆ. ಅಂದರೆ, ಆರು ವರ್ಷಗಳಲ್ಲಿ ಸುಮಾರು 43 ಜನರನ್ನು ಇದರಿಂದ ಕಳೆದುಕೊಂಡಿದ್ದೇವೆ. ಆದರೂ ಸಹ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆಂದು ಹೇಳಿದೆ. ಇದು ಅರ್ಥವಾಗುತ್ತಿಲ್ಲ. ಇತ್ತಿಚೆಗೆ ಮಾನ್ಯ ಉಚ್ಚ ನ್ಯಾಯಾಲಯ *"The state government consider issuing a general direction to all agencies and authorities to ensure that no person is allowed to clean a sewer manually, except in certain circumstances of the scavenging act,"* ಎಂದು ನಿರ್ದೇಶನ ಕೊಟ್ಟಿದೆ. ಈ ವಿಚಾರದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, The Prohibition of Employment as Manual Scavengers and their Rehabilitation Act, 2013 ಪ್ರಕಾರ, ಈ ಕಾಯಿದೆ ಬಂದ ನಂತರ ಬಹಳ ಬಿಗಿಯಾಗಿದೆ. ಎಲ್ಲಾ ನಗರ ಪ್ರದೇಶಗಳಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗ ಮಾಡಬೇಕೆಂದು ಮಾನ್ಯ ಸರ್ವೋಚ್ಚ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಲಯದ ಆದೇಶ ಇದ್ದರೂ ಸಹ, ಅದರ ಪ್ರಕಾರ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದರೂ ಸಹ, ಕಳೆದ ಐದು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಅಂದಾಜು 30 ರಿಂದ 35 ಜನರು ಮರಣ ಹೊಂದಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಇದರಲ್ಲಿ 25 ಸಾವಿರ ಮಂದಿ ಇರಬಹುದು. ಈಗಿನ ಕಾಲಘಟ್ಟದಲ್ಲಿ ತಾಂತ್ರಿಕತೆ ಬಹಳಷ್ಟು ಮುಂದುವರಿದಿದ್ದರೂ ಸಹ, ಈ ರೀತಿ manual scavengers ಕೆಲಸ ಮಾಡಿ ಮರಣ ಹೊಂದಿದ ಕುಟುಂಬದವರು ಸರ್ಕಾರದಿಂದ ಪರಿಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಸರ್ಕಾರದ ಆದೇಶಗಳಿದ್ದರೂ ಸಹ, ಈ ರೀತಿಯಾಗುತ್ತಿದೆ. ಹಾಗಾಗಿ, ಇದರ ಜೊತೆಗೆ ಇನ್ನಷ್ಟು ಕಠಿಣವಾದಂತಹ ಕಾನೂನುಗಳನ್ನು ತರಬೇಕಾಗುತ್ತದೆ. ಏಕೆಂದರೆ, ಈ technology ಜೊತೆಯಲ್ಲಿ ಈಗ ಇರುವಂತಹ latest and advance technology ಅನ್ನು ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಮಾನ್ಯ ಸದಸ್ಯರು ಇನ್ನೂ 25 ಸಾವಿರ ಮಂದಿ ಇದ್ದಾರೆಂದು ಹೇಳಿದ್ದಾರೆ. ಬಹಳಷ್ಟು ಮಂದಿ ಅವರ ಹೊಟ್ಟೆಪಾಡಿಗಾಗಿ ಈ ಕೆಲಸವನ್ನು ಮಾಡುತ್ತಿದ್ದಾರೆ. ಅವರೇ ಖುದ್ದಾಗಿ hole ಗಳಲ್ಲಿ ಇಳಿದು ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಇಂತಹ ಘಟನೆಗಳು ನಡೆದುಕೊಂಡು ಬರುತ್ತಿರುವುದನ್ನು ನೋಡಿಕೊಂಡು ಬರುತ್ತಿದ್ದೇವೆ. ಹಾಗಾಗಿ, ಇದಕ್ಕೆ ಕಠಿಣವಾದಂತಹ ಕಾನೂನನ್ನು ಜಾರಿಗೆ ತರುವುದರ ಮೂಲಕ ಇದನ್ನು ಸರಿಪಡಿಸಬೇಕಾಗಿದೆ. ಅದಕ್ಕಾಗಿ ಆದೇಶವನ್ನು ಸಹ ಮಾಡಿದ್ದೇವೆ. ಈಗಲೂ ಸಹ ಈ ರೀತಿ ಮಾಡಬಾರದು ಎನ್ನುವಂತಹ ಕಾನೂನು ಇದೆ. ಆದರೆ, ಆ ಕಾನೂನನ್ನು ಪಾಲಿಸಬೇಕೆಂದು ಆದೇಶವನ್ನು ಕೊಟ್ಟಂತಹ ಸಂದರ್ಭದಲ್ಲಿಯೂ ಈ ರೀತಿಯಾಗುತ್ತಿದೆ. ಈ ರೀತಿಯಾಗದಂತೆ ಮುಂದಿನ ದಿವಸಗಳಲ್ಲಿ ಕಠಿಣವಾದಂತಹ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಕಠಿಣವಾದಂತಹ ಕಾನೂನು ಕ್ರಮಗಳನ್ನು ಜರುಗಿಸುತ್ತೇವೆ ಎಂದು ಹೇಳುವಂಥದ್ದನ್ನು ಸಾಮಾನ್ಯವಾಗಿ ಮತ್ತು ಸಹಜವಾಗಿ ಕೇಳುತ್ತಲೇ ಇದ್ದೇವೆ. ಈ manual scavengers ಕೆಲಸ ಮಾಡುವಂತಹ ವ್ಯಕ್ತಿಗಳ ವಯಸ್ಸು ಸುಮಾರು 40 ರಿಂದ 45 ಇರುತ್ತದೆ. ನಮಗೆ ಬೆಂಗಳೂರು ನಗರ ಹೊಸದಲ್ಲ; ಅವರು manual scavenging ಕೆಲಸ ಮಾಡಬೇಕೆಂದರೆ, ಅವರಿಗೆ ಪಾಪ ಬೇರೆ ವಿಧಿ ಇಲ್ಲ. ಏಕೆಂದರೆ, ಅವರಿಗಾಗಿ ಸರ್ಕಾರ ಬೇರೆ ಪುನರ್ವಸತಿಗಳನ್ನು ಮಾಡಿಲ್ಲ. ಇದು ಮಾನ್ಯ ಸಚಿವರಾದ ಅಶೋಕ್‌ರವರಿಗೂ ಚೆನ್ನಾಗಿ ಗೊತ್ತಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(449) 17–03–2021(12–30)ಎಂವಿ–ವಿಕೆ**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):–**

ಅವರು ಹೆಂಡವನ್ನು ಕುಡಿದರೆ ಮಾತ್ರ ಅದರಲ್ಲಿ ಇಳಿಯುವುದಕ್ಕೆ ಆಗುವುದು. ಇಲ್ಲವಾದರೆ ಯಾರೂ ಸಹ ಅದರಲ್ಲಿ ಇಳಿಯುವುದಿಲ್ಲ. ಇದು ಒಂದು ರೀತಿ ಅಮಾನವೀಯವಾಗಿದೆ. ಆದುದರಿಂದ ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣವನ್ನು ನೀಡಿದ್ದಾರೆಂದು ಹೇಳಲಿ. ಪ್ರತಿಯೊಂದು ಗ್ರಾಮಕ್ಕೂ ಸಹ technology ಹೋಗಬೇಕು. ಏಕೆಂದರೆ, ಪ್ರತಿ ಗ್ರಾಮದಲ್ಲೂ ಸಹ ಮನುಷ್ಯರ ಜೀವ ಬಹಳ ಮುಖ್ಯ. ಆದುದರಿಂದ ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗಿತ್ತು. ಹೊರದೇಶಗಳಿಗೆ ಹೋಗಿ ಬರುತ್ತಿರುತ್ತೇವೆ. ಹೊರದೇಶಗಳಲ್ಲಿ manual scavengers ಗಳಿಗೆ highest paid ಇದೆ. ಇಲ್ಲಿನ ಜಾತಿ ವ್ಯವಸ್ಥೆಯಲ್ಲಿ ಅವರನ್ನು ಶೋಷಣೆ ಮಾಡುವಂಥದ್ದು, ಅವರನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಯಾಗಿ ಇಟ್ಟಿರುವಂಥದ್ದು, ನಾವು ಅದರ ಬಗ್ಗೆ ಚೆನ್ನಾಗಿ ಭಾಷಣ ಮಾಡುತ್ತೇವೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದಕ್ಕೆ solution ಏನು ಎಂದು ಹೇಳಿ. ಇದು ಚರ್ಚೆ ಅಲ್ಲ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇದಕ್ಕೆ safety precautions ಏನು ಎಂದು ಹೇಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಪ್ರಶ್ನೆ.

**ಉಪ ಸಭಾಪತಿಯವರು:–** ಹೌದು, ಇದು ಗಂಭೀರವಾದ ಪ್ರಶ್ನೆ. ಅದಕ್ಕೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಏನು ಮಾಡಬೇಕೆಂದು ಹೇಳುತ್ತಿದ್ದೇನೆ. ತಾವು ಈ ರೀತಿ ಮಧ್ಯದಲ್ಲಿ ಕೇಳಿದರೆ...

**Mr. DEPUTY CHAIRMAN:-** No... ತಾವು ಅದನ್ನು debate ಮಾಡುತ್ತಿದ್ದೀರಿ. ಏಕೆಂದರೆ, ಇದು ಪ್ರಶ್ನೋತ್ತರ ವೇಳೆ. ಈಗಾಗಲೇ ಸುಮಾರು 12 ಗಂಟೆ 30 ನಿಮಿಷವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, debate ಗೂ ಮತ್ತು ಪ್ರಶ್ನೆಗೂ ಬಹಳ ವ್ಯತ್ಯಾಸವಿದೆ.

**ಉಪ ಸಭಾಪತಿಯವರು:-** ಹೌದು ವ್ಯತ್ಯಾಸವಿದೆ. ಆದುದರಿಂದ ತಾವು ನೇರವಾಗಿ ಸಚಿವರಿಗೆ ಪ್ರಶ್ನೆ ಕೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಚೇರ್ ಕಡೆ ಏನು ನಡೆಯುತ್ತಿದೆ ಮತ್ತು ಮುಂದೆ ಅದಕ್ಕೆ ಏನು ಮಾಡಬೇಕೆಂದು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ತಾವು ಆ ರೀತಿಯಾದ ಸಲಹೆಗಳನ್ನು ನೀಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಎಲ್ಲಾ ವಿಚಾರದಲ್ಲಿ ಈ ತರಹ ಮಾತನಾಡುವುದಕ್ಕೆ ಬರಬೇಡಿ.

**ಉಪ ಸಭಾಪತಿಯವರು:-** ಮಾನ್ಯ ಗೌರವಾನ್ವಿತ ಸದಸ್ಯರೆ, ನಾನು ಇರುವುದನ್ನು ಹೇಳುತ್ತಿದ್ದೇನೆ. ಪೀಠದಲ್ಲಿ ಕುಳಿತುಕೊಂಡಾಗ ತಾವು ಹೇಳುವುದಕ್ಕೆ ಬರಬೇಡಿ ಎಂದು ಹೇಳುವುದು ಸರಿಯಲ್ಲ. No debate. ಪ್ರಶ್ನೋತ್ತರ ಅವಧಿಯಲ್ಲಿ debate ಮಾಡುವುದಕ್ಕೆ ಅವಕಾಶವಿಲ್ಲ. ಪ್ರತಿ ಸಂದರ್ಭದಲ್ಲೂ ತಾವು ಇದೇ ರೀತಿ ಮಾಡುತ್ತಿದ್ದೀರಿ. ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ. ಆದುದರಿಂದ ತಾವು ಪ್ರಶ್ನೆ ಕೇಳಿ. ಏಕೆಂದರೆ, ಇದು ಪ್ರಶ್ನೋತ್ತರ ಅವಧಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ತಾವು ಪ್ರಶ್ನೆಗೆ ಅವಕಾಶ ಕೊಡಬೇಡಿ, ಇದನ್ನು ಬಿಟ್ಟುಬಿಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಒಂದು ಸಮಾಜದಲ್ಲಿರುವಂತಹ ಕಟ್ಟಕಡೆಯ ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ,...

**ಉಪ ಸಭಾಪತಿಯವರು:-** ಈ ವಿಷಯವನ್ನು ನಿಯಮದ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಪ್ರಶ್ನೋತ್ತರ ಅವಧಿಯಲ್ಲಿ ಇದಕ್ಕೆ debate ಮಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಫೆಬ್ರವರಿ ತಿಂಗಳಿನಲ್ಲಿ ಹಲವರು ಜನರು ಸತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಯಾವುದೇ ರೀತಿಯ ಉತ್ತರವಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ, ತಾವು ಮಾನ್ಯ ಸಚಿವರ ಉತ್ತರ ಪಡೆದ ನಂತರ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಪ್ರಶ್ನೆಗಳನ್ನು ಕೇಳುತ್ತಾರೆ, ಅದಕ್ಕೆ ಸರ್ಕಾರ ಉತ್ತರ ನೀಡುತ್ತದೆ. ಆದರೆ, ಮಾನ್ಯ ಸದಸ್ಯರು ಆರ್ಭಟದ ಮೂಲಕ ಮಂಡಿಸುವುದು ಸರಿಯಲ್ಲ. ಮಾನ್ಯ ಸದಸ್ಯರು ಸಭಾಪತಿಯವರ ಪೀಠಕ್ಕೆ ಮಧ್ಯ ಬರಬೇಡಿ ಎನ್ನುವುದು ಏನು ಅರ್ಥ? ಮಾನ್ಯ ಸದಸ್ಯರೇ ಸಭಾಪತಿಯವರ ಪೀಠವನ್ನು ಗೌರವಿಸಬೇಕೆಂದು ಹೇಳಿಕೊಟ್ಟವರು. ಆದರೆ, ಈಗ ಮಾನ್ಯ ಸದಸ್ಯರೆ ಈ ರೀತಿ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, I have a right to speak.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿರ್ದೇಶನ ಕೊಡುವ ಅಧಿಕಾರ ಸಭಾಪತಿಯವರಿಗೆ ಇಲ್ಲವೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ನಾನು ತಮ್ಮ rights ಗೆ ಕೈ ಹಾಕುತ್ತಿಲ್ಲ ನಿಯಮದ ಅಡಿಯಲ್ಲಿ ಏನು ಇದೆ, ಅದನ್ನು ಹೇಳುವಂತಹ ಹಕ್ಕು ಇದೆ. ನಿಯಮದ ಅಡಿಯಲ್ಲಿರುವಂತೆ, ಪ್ರಶ್ನೋತ್ತರ ಅವಧಿಯಲ್ಲಿ ಏನು ಮಾತನಾಡಬೇಕು, ಅಷ್ಟನ್ನು ಮಾತ್ರ ಮಾತನಾಡಬೇಕು. ತಾವು ಇದರ ಬಗ್ಗೆ debate ಮಾಡುವುದಕ್ಕೆ ಅಲ್ಲ. ತಾವು ಹೇಳಿದ ತಕ್ಷಣ ಪೀಠ ಕೇಳಬೇಕೆಂದು ಇಲ್ಲ. ಈಗ ತಾವು ಏನು ಮಾತನಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಭಾಪತಿಯವರ ಪೀಠವನ್ನು ಪ್ರಶ್ನಿಸಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ತಾವು ಪ್ರತಿಬಾರಿ...

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ಸದಸ್ಯರು):–** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವ ನೀಡಬೇಕು. ಅದರ ಬಗ್ಗೆ ಎರಡು ಮಾತಿಲ್ಲ. ಮತ್ತೆ ಪೀಠದ ಮೇಲೆ ಕುಳಿತಿರುವಂತಹವರಿಗೂ ಸಹ ಗೌರವವಿರಬೇಕು.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಕೇಳುತ್ತಿರುವುದು ಉಪ ಪ್ರಶ್ನೆಯಲ್ಲ. ಅವರು ಅದರ ಬಗ್ಗೆ debate ಮಾಡುತ್ತಿದ್ದಾರೆ. ಅವರು ಪ್ರಶ್ನೆ ಕೇಳಿಲಿ ಮತ್ತು ಅದಕ್ಕೆ ಸಲಹೆಗಳನ್ನು ನೀಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಒಂದು ನಿಮಿಷ ನಾನು ಏನು ವ್ಯತಿರಿಕ್ತವಾಗಿ ಮಾತನಾಡಿಲ್ಲ. ನಮ್ಮ ಕಡೆ ಇರುವವರಿಗೆ ಪೀಠದ ಬಗ್ಗೆ ಅಪಾರವಾದ ಗೌರವವಿದೆ. ತಾವು ಹೇಳಿದಂತಹ ಶಬ್ಧಗಳಿಗೆ ಗೌರವ ಕೊಡುತ್ತೇವೆ. ಇಲ್ಲಿ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಬಹಳ ಗಂಭೀರವಾದ ವಿಚಾರ ಎತ್ತಿದ್ದಾರೆ. ಅವರು ಪೀಠಕ್ಕೆ ಮನವಿ ಮಾಡಿಕೊಂಡು ಇದನ್ನು ಚರ್ಚೆ ಮಾಡುವುದರಿಂದ ಯಾವರೀತಿ ಕೆಟ್ಟದಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಅವರು ಕರೆಕ್ಟ್ ಆಗಿ ಹೇಳಿದ್ದಾರೆ.

**(ಗೊಂದಲ)**

**Mr. DEPUTY CHAIRMAN:-** BAC (Business Advisory Committee) ನಲ್ಲಿ ಏನಾಗಿದೆ ಎಂದು ತಾವೇ ಹೇಳಿ. ಅದರಲ್ಲಿ ತಾವುಗಳು ಸಹ ಇದ್ದೀರಿ. BAC ನಲ್ಲಿ ಯಾವ ರೀತಿಯ ನಿರ್ಧಾರಗಳು ಆಗಿದೆ ಎಂದು ಗೊತ್ತಿರುವವರೆ ಈ ರೀತಿ ಮಾತನಾಡುತ್ತಿದ್ದರೆ, ಇದಕ್ಕೆ ಏನು ಅರ್ಥವಿದೆ? BAC ನಲ್ಲಿ ಏನಾಗಿದೆ ಎಂದರೆ, ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳುವುದು ಮತ್ತು ಅದಕ್ಕೆ ಉತ್ತರ ಕೊಡುವುದು ಎಂದು. ಬೇರೆ ಏನಾದರೂ ವಿಚಾರಗಳು ಇದ್ದರೆ, ಈ ರೀತಿ ವಿಷಯಗಳು ಬಂದರೆ ಅದನ್ನು ಯಾವುದಾದರು ನಿಯಮಗಳ ಅಡಿಯಲ್ಲಿ ತಂದು, ಚರ್ಚೆ ಮಾಡಬಹುದು ಎನ್ನುವಂತಹ ವಿಚಾರವನ್ನು ತಾವು ಕುಳಿತು ಮಾಡಿದ್ದಂತಹ ಸಂದರ್ಭದಲ್ಲಿ ಆಗಿದೆ. ಅವರು ಅದನ್ನು ಮುರಿದು ಪೀಠಕ್ಕೆ ಪ್ರಶ್ನೆ ಮಾಡುತ್ತಿದ್ದಾರೆ. Is this right? ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ ತಾವೇ ಇದರ ಬಗ್ಗೆ ಯೋಚನೆ ಮಾಡಿ ನೋಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಪ್ರಶ್ನೆ ಮಾಡಿಲ್ಲ. ಅವರು ಪೀಠಕ್ಕೆ submission ಮಾಡಿಕೊಂಡಿದ್ದಾರೆ. It is a submission, and he has not questioned the very Chair.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 330ಕ್ಕೆ convert ಮಾಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಆಗಬಹುದು. ವಿಷಯವನ್ನು ನಿಯಮ 330ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಲಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–**ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಆದರೆ, ಇದು ಪ್ರಶ್ನೋತ್ತರ ಅವಧಿ. ಅವರು ಒಳ್ಳೆಯ ಸಲಹೆಗಳನ್ನು ನೀಡಿದ್ದಾರೆ. ಈ ವಿಷಯವನ್ನು ನಿಯಮ 330ಕ್ಕೆ convert ಮಾಡಿ, ದಯವಿಟ್ಟು ಇದನ್ನು ಚರ್ಚೆಗೆ ಅವಕಾಶ ಮಾಡಿಕೊಡಿ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ತಾವು ಈ ಸಭೆಗೆ ಅಧ್ಯಕ್ಷರು ಮತ್ತು ತಂದೆ ಸಮಾನವಾಗಿರುವಂತಹವರು. ತಾವು ಇದಕ್ಕೆಲ್ಲಾ ಸಿಟ್ಟಾಗಬಾರದು. ಸದಸ್ಯರುಗಳು ಕೇಳಿದಾಗ ಆಯಿತು ಅಪ್ಪ ಎನ್ನಬಹುದು.  ಈಗ ತಪ್ಪು ಆಗಬಹುದು. ತಪ್ಪು ಆಗಿಬಿಟ್ಟಿತು ಎಂದಾಗ, ತಾವು ತಂದೆ ಸಮಾನವರು, ತಾವು ವಿಷಕಂಠನಾದರೆ ಮಾತ್ರ ಕ್ಷಮಿಸುವುದಕ್ಕೆ ಸಾಧ್ಯ.

**(ಗೊಂದಲ)**

**ಉಪ ಸಭಾಪತಿಯವರು:–** ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್ ಮತ್ತು ಮಾನ್ಯ ಸಿ.ಎಂ.ಇಬ್ರಾಹಿಂರವರೆ, ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲ ಚರ್ಚೆಗೆ ತೆಗೆದುಕೊಳ್ಳಿ.  ಆದುದರಿಂದ ಪ್ರಶ್ನೆ ಕೇಳಿ ಇದನ್ನು ಮುಗಿಸಿ. ಈ ವಿಷಯವನ್ನು ಅರ್ಧಗಂಟೆ ಕಾಲಾವಧಿ ನಿಯಮದ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮತ್ತೆ ಇದಕ್ಕೆ ಚರ್ಚೆ ಬೇಡ, ಇದನ್ನು ಮುಕ್ತಾಯಗೊಳಿಸಿ.

**ಉಪ ಸಭಾಪತಿಯವರು:–** ಈಗ ಈ ವಿಷಯದ ಬಗ್ಗೆ ಚರ್ಚೆ ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಬೇಡ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಪೀಠಕ್ಕೆ submission ಮಾಡಿಕೊಂಡಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ. ನಾನು ನನ್ನ ಪ್ರಶ್ನೆಯನ್ನು ಪೂರ್ಣಗೊಳಿಸುತ್ತೇನೆ. ಅಲ್ಲಿಯವರೆಗೆ ನನಗೆ ಅವಕಾಶ ಮಾಡಿಕೊಡಿ. I am not yielding.

**ಉಪ ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೆ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ತಮ್ಮ ಪ್ರಶ್ನೆಯನ್ನು ಪೂರ್ಣಗೊಳಿಸಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಕಾಲಾವಾಧಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ಸದಸ್ಯರುಗಳು ಈ ರೀತಿ ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ. ಆದುದರಿಂದ ತಾವು ದಯವಿಟ್ಟು ಮಾನ್ಯ ಸದಸ್ಯರಿಗೆ ನಿರ್ದೇಶನ ನೀಡಿ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರ ಪ್ರಶ್ನೆ ಇರುವುದರಿಂದ ಅವರು ಪ್ರಶ್ನೆ ಕೇಳಲಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೆ ಕೇಳುವುದಕ್ಕೆ ಸ್ವತಂತ್ರರು. ನಾನು ಅವರ ಪ್ರಶ್ನೆ ಬಗ್ಗೆ ಕೇಳುತ್ತಿಲ್ಲ ಮತ್ತು ಅವರ ಪ್ರಶ್ನೆಯ ಬಗ್ಗೆ ಯಾವುದೇ ತಕರಾರು ಇಲ್ಲ. ಅವರ ಪ್ರಶ್ನೆ ಮುಗಿದ ತಕ್ಷಣ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಉಪ ಸಭಾಪತಿಯವರು:-** ಆಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಮೇಲೆ ಮಾತನಾಡಲಿ. ನಾನು ನನ್ನ ಪ್ರಶ್ನೆಯನ್ನು ಮುಕ್ತಾಯ ಮಾಡಬೇಕು. ಕಳೆದ ತಿಂಗಳು ಕಲಬುರಗಿಯಲ್ಲಿ ಇಬ್ಬರು ಸತ್ತಿದ್ದಾರೆ. ಮಂಡ್ಯದ ಮದ್ದೂರು ತಾಲ್ಲೂಕಿನಲ್ಲಿ ಒಬ್ಬರು ಸೂಸೈಡ್ ಮಾಡಿಕೊಂಡಿದ್ದಾರೆ. ಈ ರೀತಿ ಎಷ್ಟು ಅನಾಹುತಗಳಾಗಿವೆ. ಇದಕ್ಕೆ ಏನೋ ಹೇಳುತ್ತಾರೆ, "A *single death is a tragedy*, a *million* deaths is a *statistic."* ಅಂದ ಹಾಗೆ ಅಂಕಿಅಂಶಗಳನ್ನು ನೀಡಿದರೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿ ಕಾರ್ಪೊರೇಷನ್‌ನ ಅಧಿಕಾರಿಗಳು ಇದ್ದಾರೆ. ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮವನ್ನು ಜರುಗಿಸಿದ್ದಾರೆ ಎಂಬುದನ್ನು ಹೇಳಬೇಕು.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರ ನೋವು ಮತ್ತು ಕಳಕಳಿ ನನಗೆ ಅರ್ಥವಾಗುತ್ತದೆ. ಏಕೆಂದರೆ, ಈ manual scavenger ಬಗ್ಗೆ ಇಡೀ ರಾಜ್ಯದಲ್ಲಿ ಇದು ಸಂಪೂರ್ಣವಾಗಿ ನಿರ್ಮೂಲನೆ ಆಗಲೇಬೇಕಾಗಿದೆ. ಅದು ನಮಗೆ ಗೊತ್ತಿದೆ. ಏಕೆಂದರೆ, ಕೆಳ ಸಮುದಾಯಗಳ ಪರಿಸ್ಥಿತಿ ಹೇಗಿದೆ ಮತ್ತು ಅವರು ಯಾವ ರೀತಿ ಗಂಭೀರವಾಗಿ ಕೆಲಸ ಮಾಡುತ್ತಿದ್ದಾರೆ, ಈ ಎಲ್ಲಾ ವಿಚಾರಗಳನ್ನು ನಾವು ಮತ್ತು ನೀವು ನೋಡಿಕೊಂಡು ಧ್ರುವೀಕಾರಣವನ್ನು ಮಾಡಿಕೊಂಡು ಬಂದಿರುವಂತಹವರು. ಅದಕ್ಕೋಸ್ಕರವಾಗಿ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಷ್ಟು jetting ಯಂತ್ರೋಪಕರಣಗಳನ್ನು ಉಪಯೋಗ ಮಾಡಬೇಕಾಗುತ್ತದೆ. ಹಾಗೆಯೇ sucking machines ಗಳನ್ನು ಕೂಡ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯದ ಕಾರ್ಪೊರೇಷನ್, ಮುನ್ಸಿಪಾಲಿಟಿ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಕೂಡ ಸಾಕಷ್ಟು latest technology ಯನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ಇವತ್ತು ಇನ್ನು ಸಾಕಷ್ಟು ಹಳ್ಳಿಗಾಡು ಪ್ರದೇಶಗಳಲ್ಲಿ ಹೊಟ್ಟೆಪಾಡಿಗಾಗಿ ಅವರೇ ನೇರವಾಗಿ ಗುಂಡಿಗೆ ಇಳಿದು ಕೆಲಸ ಮಾಡುವಂತಹ ಸಂದರ್ಭದಲ್ಲಿ ಇಂತಹ ಘಟನಾವಳಿಗಳು ನಡೆದಿರುವುದನ್ನು ನೋಡಿದ್ದೇವೆ. ಸುಮಾರು 30 ಜನರು ಮರಣ ಹೊಂದಿದ್ದಾರೆ. ಅವರೆಲ್ಲರಿಗೂ ಕೂಡ ಸುಮಾರು ಹತ್ತು ಲಕ್ಷ ರೂಪಾಯಿಗಳ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಅಂದರೆ, ಹತ್ತು ಲಕ್ಷ ಪರಿಹಾರ ಕೊಡುವುದೇ ಅಲ್ಲ. ಅವರ ಮರಣ ಆಗದ ರೀತಿ ನೋಡಿಕೊಳ್ಳುವುದು ಸಹ ಸರ್ಕಾರದ ಜವಾಬ್ದಾರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸತ್ತಿರುವಂತಹ ಕುಟುಂಬ ವರ್ಗದವರಿಗೆ ಕೇವಲ ಐದು ಲಕ್ಷ ರೂಪಾಯಿಗಳ ಪರಿಹಾರ ನೀಡಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಏಕೆಂದರೆ, ತಮಗೆಲ್ಲಾ ಗೊತ್ತಿರುವಂತೆ ಇವತ್ತಿನ ದಿವಸ ಎಲ್ಲೋ ಒಂದು ಕಡೆ ಹೈಕೋರ್ಟ್‌ನಲ್ಲಿ ಪಿಐಎಲ್ ಹಾಕಿರುವುದರಿಂದ ವ್ಯಾಜ್ಯಗಳು ನಡೆಯುತ್ತಿವೆ. ಇದಕ್ಕೆ ಸಂಬಂಧಪಟ್ಟಂತೆ ಇನ್ನೂ ಕೂಡ ಆದೇಶವಾಗಿಲ್ಲ. ಮುಂದೆ ಅದನ್ನು ಯಾವ ರೀತಿ ಸರಿಪಡಿಸಬೇಕೆಂಬ ವಿಚಾರಗಳು ಕೂಡ ನಡೆಯುತ್ತಿದೆ. ಅದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಚರಂಡಿ ಮಂಡಳಿ ಇವುಗಳನ್ನು ಒಳಗೊಂಡಂತೆ ಮಾನ್ಯ ಮುಖ್ಯಕಾರ್ಯದರ್ಶಿಗಳ ನೇತೃತ್ವದಲ್ಲಿ ಈಗಾಗಲೇ ಸಭೆ ಕೂಡ ನಡೆಯುತ್ತಿದೆ. ಅದರ ಜೊತೆಗೆ ಕರ್ನಾಟಕ ಉಚ್ಚ ನ್ಯಾಯಾಲಯ ಯಾವ ರೀತಿಯ ಆದೇಶವನ್ನು ನೀಡುತ್ತದೆ ಅದರ ಬಗ್ಗೆ ಕೂಡ ಚರ್ಚೆ ಕೂಡ ಆಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ರೀತಿಯಲ್ಲೂ ಈ manual scavenger ಅನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಬೇಕು.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, lack of safety equipment's.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಹೌದು, lack of safety equipment's. ಈ ಎಲ್ಲಾ ವಿಚಾರಗಳನ್ನು ನೋಡಿಕೊಂಡು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಕಲಬುರಗಿಯಲ್ಲಿ ಆಗಿರುವಂತಹ ಘಟನೆಗೆ ಸಂಬಂಧಿಸಿದಂತೆ ಎಫ್.ಐ.ಆರ್. ಹಾಕಿ ಅವರ ಮೇಲೆ ಕ್ರಮವನ್ನು ಸಹ ಕೈಗೊಂಡಿದ್ದಾರೆ. ಈ ರೀತಿಯ ಘಟನೆಯಾದವರಿಗೆ ಹತ್ತು ಲಕ್ಷ ರೂಪಾಯಿ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಏಕೆಂದರೆ, ಕಲಬುರಗಿಯಲ್ಲಿ ಆದಂತಹ ಘಟನೆಯನ್ನು ಉಲ್ಲೇಖ ಮಾಡಿದಂತಹ ಸಂದರ್ಭದಲ್ಲಿ ಅವರ ಕುಟುಂಬ ವರ್ಗದವರಿಗೆ ಹತ್ತು ಲಕ್ಷ ರೂಪಾಯಿಗಳ ಪರಿಹಾರ ನೀಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದುದರಿಂದ ಕಾನೂನನ್ನು ಯಾವ ರೀತಿ ಅನುಷ್ಠಾನ ಮಾಡುತ್ತಾರೆಂದು ಹೇಳಲಿ. ಈಗ ಎಫ್.ಐ.ಆರ್ ಎಂದು ಹೇಳುವುದು ಅದು ಸಾಮಾನ್ಯವಾಗಿ ನಡೆಯುತ್ತಿರುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):-** ಮಾನ್ಯ ಸಭಾಪತಿಯವರೇ, ಇದು ಒಂದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ. ನಾವು ಈ ವಿಷಯವನ್ನು ಪ್ರಶ್ನೋತ್ತರ ಕಾಲದಲ್ಲಿ ಮಾತ್ರ ನೋಡುವಂಥದ್ದಲ್ಲ. ಸಾಮಾಜಿಕ ಕಳಕಳಿ ಮತ್ತು ಕಾಳಜಿಯ ದೃಷ್ಟಿಯಿಂದ ಈ ಪ್ರಶ್ನೆಯನ್ನು ನೋಡಬೇಕಾಗುತ್ತದೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಈ ಪ್ರಶ್ನೆಯನ್ನು ಚರ್ಚೆಗೆ ತಂದಂತಹ ಸಂದರ್ಭದಲ್ಲಿ ಶಬ್ಧಗಳ ಬಳಕೆಯಿಂದ ಮಾತಿನ ಘರ್ಷಣೆಯಾಗುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(450) 12.40 17.03.2021 ಎಲ್ಎಲ್/ಬಿಎನ್ಎಸ್**

**ಶ್ರೀ ಗೋವಿಂದ ಎಂ. ಕಾರಜೋಳ(ಮುಂದು):-**

ಸ್ವಾಭಾವಿಕವಾಗಿ ಅದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಒಂದು ಸಾಮಾಜಿಕ ಕಳಕಳಿ, ಕಾಳಜಿ ಇಲ್ಲದೇ ಹೋದ ಕಾರಣಕ್ಕೆ ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅಥವಾ ದೇಶದಲ್ಲಿ manual scavenger ದುರಂತಗಳು ಆಗುತ್ತಿವೆ. ಮನುಷ್ಯನ ಹೊಲಸನ್ನು ಕೈಯಿಂದ ತೆಗೆಯುವಂಥದ್ದು ಮತ್ತು ತಲೆ ಮೇಲೆ ಹೊತ್ತು ಹೊಯ್ಯುವಂಥದ್ದು ಅಮಾನವೀಯ ಎನ್ನುವ ಕಾರಣಕ್ಕಾಗಿ ದಿವಂಗತ ಶ್ರೀ ಬಸವಲಿಂಗಪ್ಪನವರು ಈ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಈ ಸದನದಲ್ಲಿ ಚರ್ಚೆ ಮಾಡಿ ಕಾನೂನನ್ನು ತಂದಿರುವಂಥದ್ದು ಮತ್ತು ಕೇಂದ್ರ ಸರ್ಕಾರದಲ್ಲಿಯೂ ಸಹ ಕಾನೂನನ್ನು ತಂದಿರುವುದಾಗಿದೆ. ಅಷ್ಟೇ ಅಲ್ಲದೇ, ಕೇಂದ್ರ ಸರ್ಕಾರ ಕೂಡ ದೇಶದಲ್ಲಿ 'ಸಫಾಯಿ ಕರ್ಮಚಾರಿ ಆಯೋಗ'ವನ್ನು ನೇಮಿಸಿದೆ. ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಆಯೋಗವನ್ನು ನೇಮಿಸಿದೆ. ಆ ಸಂದರ್ಭದಲ್ಲಿ ಅಂದರೆ, 2008 ರಿಂದ 2013ರ ಅವಧಿಯಲ್ಲಿ ಮಾನ್ಯ ಯಡಿಯೂರಪ್ಪನವರ ಸಚಿವ ಸಂಪುಟದಲ್ಲಿ ನಾನೂ ಸಹ ಮಂತ್ರಿಯಾಗಿದ್ದೆನು. ಕರ್ನಾಟಕ ರಾಜ್ಯದಲ್ಲಿಯೂ ಕೂಡ ಸಫಾಯಿ ಕರ್ಮಚಾರಿ ಆಯೋಗವನ್ನು ಜಾರಿಗೆ ತಂದು, ಪ್ರಸ್ತುತ ಆ ಆಯೋಗ ಕೆಲಸ ಮಾಡುತ್ತಿದೆ. ಅಷ್ಟೇ ಅಲ್ಲದೇ, 'ಸಫಾಯಿ ಕರ್ಮಚಾರಿ ನಿಗಮ'ವನ್ನು ಕೂಡ ರಾಜ್ಯ ಸರ್ಕಾರ ರಚನೆ ಮಾಡಿರುತ್ತದೆ. ಅದನ್ನು ಏತಕ್ಕಾಗಿ ರಚನೆ ಮಾಡಿದೆಯೆಂದರೆ, ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕಾಗಿ ಮಾಡಲಾಗಿರುತ್ತದೆ. ಸಫಾಯಿ ಕರ್ಮಚಾರಿ ಆಯೋಗದ ಮೂಲಕ ಅವರಿಗೆ ಉದ್ಯೋಗವನ್ನು ಒದಗಿಸುವುದಕ್ಕೆ, ಅವರಿಗೆ ಸಹಾಯಧನ ಕೊಡಲಿಕ್ಕೆ ಯಾವರೀತಿ ಡಾ: ಬಿ.ಆರ್. ಅಂಬೇಡ್ಕರ್ ನಿಗಮದಲ್ಲಿ ಮಾಡುತ್ತಿದ್ದೇವೆಯೋ; ..., ಲಿಡ್ಕರ್‌ನಲ್ಲಿ ಮಾಡುತ್ತಿದ್ದೇವೆಯೋ ಅಥವಾ ಇನ್ನಿತರ ನಿಗಮಗಳಲ್ಲಿ ಮಾಡುತ್ತಿದ್ದೇವೆಯೋ ಅದೇ ರೀತಿ ಸಹಾಯ ಮಾಡುಬೇಕು ಮತ್ತು ಅವರಿಗೆ ಮನೆಗಳನ್ನು ಕೂಡ ಕಟ್ಟಿಕೊಡುವಂತಹ ಕೆಲಸ ಕೂಡ ಮಾಡಬೇಕಾಗಿರುತ್ತದೆ. ಅವರ ಬದುಕನ್ನು ನಾವು ನೋಡಿದರೆ ಬಹುಶಃ ಈ ಭೂಮಿ ಮೇಲೆ ಮನುಷ್ಯತ್ವ ಇರುವಂತಹವರು ಯಾರು ಕೂಡ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನೆಲ್ಕಾರು ಅಡಿ ಜಾಗದಲ್ಲಿ, ಸ್ಲಂಗಳಲ್ಲಿ, ದೊಡ್ಡ ದೊಡ್ಡ ಗಟಾರ್‌ಗಳ ಮೇಲೆ, ಅಲ್ಲಿ ಹಂದಿಗಳು ಮತ್ತು ನಾಯಿಗಳು ಓಡಾಡುತ್ತಿರುತ್ತವೆ ಅವುಗಳ ಮಧ್ಯೆ ಬದುಕುವಂತಹ ಜೀವನ ಅವರದ್ದಾಗಿದೆ. ಮಾನ್ಯ ಹರಿಪ್ರಸಾದ್‌ರವರು ಈ ವಿಷಯದ ಮೇಲೆ ಮಾತನಾಡುವ ಸಂದರ್ಭದಲ್ಲಿ, "ಗೋವಿಂದ ಕಾರಜೋಳರವರು ಇದೇ ಸದನದಲ್ಲಿದ್ದಾರೆಂದು" ಹೇಳಿದರು. ಹೌದು. ನಾನು ಈ ಸದನದಲ್ಲಿಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದೇನೆ. ನಾನು ಸಹ ಅದೇ ಸಮುದಾಯದವನಾಗಿದ್ದೇನೆ. ಅದು ಅವರಿಗೆ ಗೊತ್ತಿರಲಿ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ ಶೇಕಡ 90 ರಷ್ಟು ಪೌರಕಾರ್ಮಿಕರು ನಮ್ಮ ಸಮುದಾಯದವರಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ಬಜೆಟ್ ಭಾಷಣದಲ್ಲಿ 2 ಕೋಟಿ ರೂಪಾಯಿಗಳ ಅನುದಾನವನ್ನು ಯಾರು ಸಫಾಯಿ ಕರ್ಮಚಾರಿಗಳ ಮಕ್ಕಳ ಸಂಘಟನೆ ಮಾಡಿಕೊಂಡು ಅವರಿಗೆ machinery purchase ಮಾಡುತ್ತಿದ್ದಾರೆಂದರೆ, ಅಂತಹವರಿಗೆ ಶೇಕಡ 75ರಷ್ಟು ಸಹಾಯಧನವನ್ನು ಕೊಟ್ಟಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಅನುದಾನವನ್ನು ಕೊಡೋಣ. ಎಸ್.ಸಿ.ಪಿ./ಟಿ.ಎಸ್.ಪಿ. ಗ್ರಾಂಟ್‌ನಲ್ಲಿ ಅನುದಾನ ಕೊಡುವುದಕ್ಕೆ ಅವಕಾಶ ಇದೆ. ಅದಕ್ಕಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕೆಂದು ಪ್ರತ್ಯೇಕ ಕಾನೂನು ಸಹ ಇರುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ದೇಶದ ಪ್ರಧಾನ ಮಂತ್ರಿಗಳು ಬನಾರಸ್‌ನಲ್ಲಿ, "ಸಫಾಯಿ ಕರ್ಮಚಾರಿಗಳ ಉದ್ಯೋಗ ಆಧ್ಯಾತ್ಮಿಕ ಸುಖ ಕೊಡುತ್ತದೆ" ಎಂದು ಹೇಳಿದ್ದಾರೆ. ಅದಕ್ಕಾಗಿ, ಸರ್ಕಾರ ಅವರಿಗೆ 2 ಕೋಟಿ ಅನುದಾನದ ಬದಲಾಗಿ 200 ಕೋಟಿ ರೂಪಾಯಿಗಳ ಅನುದಾನ ಕೊಡಬೇಕಾಗುತ್ತದೆ. ಅದನ್ನು ಹೇಳಲಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ಸಹ ಅದನ್ನೇ ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ ಈ ವಿಷಯಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿರುತ್ತೇನೆ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಹೇಳಿದರೆ ಸಾಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಆಗಬಹುದು. ಅರ್ಧ ಗಂಟೆ ಕಾಲಾವಧಿ ಚರ್ಚೆ ಬೇಡವೆಂದರೆ, ಈಗಲೇ ಮುಗಿಸುತ್ತೇವೆಂದು ಹೇಳಿದರೆ, ನನ್ನದೇನು ಅಭ್ಯಂತರವಿರುವುದಿಲ್ಲ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಕಾರಜೋಳರವರು ತಮ್ಮ ಮಾತನ್ನು ಮುಕ್ತಾಯ ಮಾಡಲಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾವು 2013ರ ಎಸ್.ಸಿ.ಪಿ./ಟಿ.ಎಸ್.ಪಿ. ಅನುದಾನವನ್ನು ಬಳಕೆ ಮಾಡುವುದಕ್ಕೆ ಒಂದು ಪ್ರತ್ಯೇಕವಾದಂತಹ ಕಾನೂನು ರಚನೆ ಮಾಡಿಕೊಂಡಿದ್ದೇವೆ. ಆ ಕಾನೂನಿಗೆ 33 ಇಲಾಖೆಗಳಿಗೆ ಬಜೆಟ್ ಅನ್ನು ಹಂಚಿಕೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಅದರ ಅಧ್ಯಕ್ಷತೆಯನ್ನು ವಹಿಸಬೇಕಾಗುತ್ತದೆ. ಆ ಅನುದಾನ ಹಂಚಿಕೆಗೆ ಅವರೇ ಅನುಮೋದನೆ ಸಹ ಕೊಡಬೇಕಾಗುತ್ತದೆ. ಖಂಡಿತವಾಗಿಯೂ ಈ ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕಾಗಿ ಇನ್ನೂ ಹೆಚ್ಚಿನ ಅನುದಾನವನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿರುವಂತಹ ಅನುದಾನದಲ್ಲಿ ಕೊಡೋಣ. ಇದರ ಜೊತೆಗೆ, ಮಾನ್ಯ ಸದಸ್ಯರು ಇದುವರೆವಿಗೂ ಏನು ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ ಖಂಡಿತವಾಗಿಯೂ ನಾವು ಅದನ್ನು ಪಾಲನೆ ಮಾಡುವುದಕ್ಕೆ ಸರ್ಕಾರ ನೂರಕ್ಕೆ ನೂರರಷ್ಟು ಸಿದ್ಧವಿದೆ. ಏಕೆಂದರೆ, ಇದು ಮಾನವೀಯತೆಯ ಪ್ರಶ್ನೆಯಾಗಿದ್ದು, ಈ ಕೆಲಸವನ್ನು ಕೂಲಿ ಕಾರ್ಮಿಕರ ರೀತಿಯಲ್ಲಿ ನೋಡುವುದಕ್ಕಾಗುವುದಿಲ್ಲ. ಅದಕ್ಕಾಗಿ, ಇವೊತ್ತಿನ ದಿವಸ ಸದನದಲ್ಲಿ ಏನು ಚರ್ಚೆ ಮಾಡಲಾಗಿದೆ, ಇದೊಂದು ಸಾಮಾಜಿಕ ಪಿಡುಗಾಗಿದ್ದು, ಇವತ್ತು ಅಥವಾ ನಿನ್ನೆಯದಲ್ಲ. ಇದು ಸಾವಿರ ವರ್ಷಗಳ ಹಿಂದಿನ ಪಿಡುಗಾಗಿದ್ದು, ಇದು ಸಂಪೂರ್ಣವಾಗಿ ಹೋಗಿರುವುದಿಲ್ಲ. ಇವೊತ್ತಿನ ದಿವಸ ನಾವು 21ನೇ ಶತಮಾನದಲ್ಲಿದ್ದೇವೆ, ಶೇಕಡ 90 ರಷ್ಟು ನಾವು ವಿದ್ಯಾವಂತರಾಗಿದ್ದೇವೆ ಆದರೂ ಕೂಡ ಇದು ನಿರ್ಮೂಲನೆ ಆಗುತ್ತಿಲ್ಲ. ನಮ್ಮ ಅಧಿಕಾರಿಗಳು ಅಂದರೆ, ಪುರಸಭೆ, ನಗರಸಭೆ ಅಥವಾ ಮಹಾನಗರ ಪಾಲಿಕೆಗಳಲ್ಲಿ ಅಧಿಕಾರಿಗಳು ಏನು ಇದ್ದಾರೆ ಅವರ ನಿರ್ಲಕ್ಷತೆಯಿಂದ ಇದೆಲ್ಲವೂ ಆಗುತ್ತಿದೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ scavengers ಜೊತೆಗೆ ಆಯುಕ್ತರು ಸಹ ಒಂದು ದಿವಸ ಕೆಲಸ ಮಾಡಬೇಕೆಂದು ಕಡ್ಡಾಯಗೊಳಿಸಿದರೆ, ಆಗ ಈ ಸಮಸ್ಯೆ ಅವರಿಗೆ ಅರ್ಥವಾಗುತ್ತದೆ. ಹಾಗಾಗಿ, ಆ ಟನಲ್ ಒಳಗೆ ಆಯುಕ್ತರು ಸಹ ಒಂದು ದಿವಸ ಹೋಗಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಯನ್ನು ಸಹ ನಾನು ಒಪ್ಪುತ್ತೇನೆ. ಇನ್ನು ಮುಂದೆ ಇಂತಹ ಘಟನೆಗಳು ಜರುಗಿದರೆ, ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಸೇರಿಸಬೇಕಾಗುತ್ತದೆ. ಆಗ ಮಾತ್ರ ಇದರಲ್ಲಿ ಬಿಗಿಯಾದಂತಹ ಕ್ರಮ ಆಗುತ್ತದೆ. ಈ ವಿಷಯದಲ್ಲಿ ಸರ್ಕಾರ ಕೂಡ ಬದ್ಧವಾಗಿದೆ. ಅದರಂತೆ ಸರ್ಕಾರ ನಡೆದುಕೊಳ್ಳುತ್ತದೆ ಎನ್ನುವಂತಹ ಮಾತನ್ನು ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಈ ವಿಷಯ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಇರುವುದಿಲ್ಲ ಅಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:–** ಅರ್ಧ ಗಂಟೆ ಚರ್ಚೆಗೆ ಕಾಲಾವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಆದರೆ, ಮಾನ್ಯ ಸದಸ್ಯರು ಬೇಡ ಎಂದು ಹೇಳುತ್ತಿದ್ದಾರೆ. ಹಾಗಾದರೆ, ಮಾನ್ಯ ಆಯನೂರು ಮಂಜುನಾಥ್‌ರವರೇ ಈ ವಿಷಯದ ಮೇಲೆ ಏನಾದರೂ ಮಾತನಾಡುವುದು ಇದ್ದರೆ, ಬೇಗ ಹೇಳಿ ಮುಗಿಸಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯರಾದ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರು ಪ್ರಾಮುಖ್ಯವಾದಂತಹ ವಿಷಯದ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ನಾಗರಿಕ ಸಮಾಜದಲ್ಲಿ ಏನು ಆಗಬಾರದಿತ್ತು, ಆ ವಿಷಯವನ್ನು ಈ ಸದನದಲ್ಲಿ ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ಸದಸ್ಯರು ಇದನ್ನು ದೂರದಿಂದ ನೋಡಿರಬಹುದು. ಆದರೆ, ನಾನು ಪೌರ ಕಾರ್ಮಿಕರ ಸಂಘಟನೆಯಲ್ಲಿ ಕೆಲಸವನ್ನು ಮಾಡಿಕೊಂಡು ಇದನ್ನು ಬಹಳ ಹತ್ತಿರದಿಂದ ನೋಡಿರುತ್ತೇನೆ. ಹಾಗಾಗಿ, ಅವರ ಎಲ್ಲಾ ಪ್ರಶ್ನೆಗಳಿಗೆ ನೂರಕ್ಕೆ ನೂರರಷ್ಟು ನನ್ನ ಸಹಮತವಿದೆ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾನು ಈಗ ಮೇಲೆ ಎದ್ದು ನಿಂತಿರುವುದು ಏತಕ್ಕೆಂದರೆ, ಸದನ ನಡೆಯುವಾಗ ಸಂಸತ್ ಸದಸ್ಯರಾದವರು, ಶಾಸಕರಾದಂತಹವರು...

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಅವಕಾಶ ಕೊಡಬಹುದೇ? ಇದನ್ನು ಮಾತನಾಡಬಹುದೇ?

**ಉಪ ಸಭಾಪತಿಯವರು:–** ಏಕೆಂದರೆ, ಅವರೇ ಹೇಳಿದಂತೆ ಎಲ್ಲಾ ಸದಸ್ಯರು ಮಾತನಾಡಿದಂತಹ...

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದನ್ನೇ ನಾವು ಬೇಡವೆಂದು ಹೇಳುತ್ತಿರುವುದು.

**(ಗೊಂದಲ)**

**ಉಪ ಸಭಾಪತಿಯವರು:–** ತಾವುಗಳು ಹೇಳಿದ್ದಕ್ಕೆ ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೇನೆ. (**ಗೊಂದಲ**) ತಾವುಗಳು ಈ ಪ್ರಶ್ನೆ ಈಗಲೇ ಚರ್ಚೆಯಾಗಬೇಕು ಎಂದು ಹೇಳಿದ್ದಕ್ಕಾಗಿಯೇ ನಾನು ಅವರಿಗೆ ಅವಕಾಶ ಕೊಟ್ಟಿರುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಆ ಸ್ಥಾನದಲ್ಲಿ ಕುಳಿತು ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡುವ ಹಾಗಿಲ್ಲ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಮರಿತಿಬ್ಬೇಗೌಡರವರೇ, ತಮಗೆ ಮಾತನಾಡುವುದಕ್ಕೆ ಅವಕಾಶ ನೀಡಲಾಗಿದೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಆ ಸ್ಥಾನದಲ್ಲಿ ಕುಳಿತು ಈ ರೀತಿಯ ಬೇದ-ಭಾವ ಮಾಡುವ ಹಾಗಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಏನಿದು?

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಅವರನ್ನು ಉದ್ದೇಶಿಸಿ ಮಾತನಾಡುತ್ತಿಲ್ಲ. ಅವರಿಗೆ ಇದಕ್ಕೆ ಯಾವುದೇ ಸಂಬಂಧವಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ಅವಧಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ನೀಡಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, ತಾವು ಎರಡು ಅಥವಾ ಮೂರು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ನಮಗೂ ಅವಕಾಶ ಕೊಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್‌ರವರೇ, ಇದರಲ್ಲಿ ಚರ್ಚೆ ಬೇಡ. ಮಾನ್ಯ ಸದಸ್ಯರು ಮಾತನಾಡಿರುವುದರಲ್ಲಿ ಏನಾದರೂ ತಿದ್ದುಪಡಿಗಳು ಇದ್ದರೆ ಅದನ್ನು ಹೇಳಿ. ಇದರಲ್ಲಿ ಚರ್ಚೆ ಇಲ್ಲ. **(ಗೊಂದಲ)** ಅವರು ಮಾತನಾಡಿದರಲ್ಲಿ ಏನಾದರೂ ತಿದ್ದುಪಡಿಗಳು ಇದ್ದರೆ ಅದನ್ನು ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಮಗೂ ಅವಕಾಶ ಕೊಡಿ. ನಾವು ಮಾತನಾಡುತ್ತೇವೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರು ಒಂದು ಗಂಭೀರವಾದ ವಿಷಯದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದರಲ್ಲಿ ಚರ್ಚೆ ಬೇಡ. ಮಾನ್ಯ ಆಯನೂರು ಮಂಜುನಾಥ್‌ರವರು ಅದರಲ್ಲಿ ಒಂದು ತಿದ್ದುಪಡಿ ಮಾಡುತ್ತೇನೆಂದು... **(ಗೊಂದಲ)** ಅದು ಬೇಕೋ ಅಥವಾ ಬೇಡವೋ ಎಂದು ನಾನು ಹೇಳುವುದು, ತಾವಲ್ಲ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ನಮಗೂ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ತಮಗೆ ತಾಳ್ಮೆ ಇರಬೇಕು.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪಿಸಿದಂತಹ ಮಾನ್ಯ ಹರಿಪ್ರಸಾದ್‌ರವರ ಹೆಸರನ್ನು ವಾಪಸ್ಸು ತೆಗೆದುಕೊಂಡಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:–** ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾದರೆ ಚರ್ಚೆ ಮುಂದುವರೆಯುತ್ತದೆಯೇ?

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆಗೆ ಮಾನ್ಯ ಗೋವಿಂದ ಕಾರಜೋಳರವರು ವಿವರವಾದಂತಹ ಉತ್ತರವನ್ನು ನೀಡಿ ಅದನ್ನು ಅಲ್ಲಿಗೆ ಮುಕ್ತಾಯ ಮಾಡಿದ್ದಾರೆ. ಇದರ ಮೇಲೆ ಇನ್ನು ಏನಾದರೂ ರಾಜಕಾರಣ ಮಾಡುವುದಿದ್ದರೆ ನಾನು ಕೂಡ ಮಾಡುತ್ತೇನೆ. ಏಕೆಂದರೆ, ಅದರಲ್ಲಿ ನನ್ನ ಅನಿಸಿಕೆ ಸಹ ಇದೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ತಾವು ಸಹ ಮಾಡಿ. ಯಾರಿಗೆ ಹೆದರಿಸುತ್ತಿದ್ದೀರಿ? ಇದು ಒಳ್ಳೆ ಚೆನ್ನಾಗಿದೆ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರತಿಯೊಬ್ಬರು ಅನಿಸಿಕೆ ಹೇಳುವುದಾದರೆ, ಪ್ರತಿಯೊಬ್ಬರಿಗೂ ತಾವು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಪ್ರತಾಪಚಂದ್ರಶೆಟ್ಟಿಯವರೇ, ತಾವು ಸಭಾಪತಿಯಾಗಿದ್ದವರು ಈ ರೀತಿಯ ಚಿಲ್ಲರೆ ರಾಜಕಾರಣ ಮಾಡಬೇಡಿ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಒಬ್ಬೊಬ್ಬರೇ ಮಾತನಾಡಿದರೆ ಆಗುವುದಿಲ್ಲ. ಅಲ್ಲದೇ, ಮಾನ್ಯ ಗೋವಿಂದ ಕಾರಜೋಳರವರು ಮಾತನಾಡಿದ ನಂತರ, ಪದೇ ಪದೇ ಅದೇ ವಿಚಾರವನ್ನು ಪ್ರಸ್ತಾಪ ಮಾಡುವುದು ಮತ್ತು ಪೀಠದಿಂದ ಮಾತನಾಡುವ ಮಧ್ಯದಲ್ಲಿ ಭಾಷಣ ಮಾಡುವುದು ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಈ ವಿಚಾರದಲ್ಲಿ ಯಾವುದೇ ಚರ್ಚೆ ಅಥವಾ ಭಾಷಣಕ್ಕೆ ಅವಕಾಶವಿರುವುದಿಲ್ಲ. **(ಗೊಂದಲ)** ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅಥವಾ ಭಾಷಣಕ್ಕೆ ಅವಕಾಶವಿರುವುದಿಲ್ಲ. **(ಗೊಂದಲ)** ಈ ವಿಷಯದಲ್ಲಿ ಏನಾದರೂ ತಿದ್ದುಪಡಿಗಳು ಇದ್ದರೆ ಅದನ್ನು ಹೇಳಿ ಮುಗಿಸಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ನನ್ನದೊಂದು ಸಲಹೆ ಇದೆ.

**(ಗೊಂದಲ)**

**ಉಪ ಸಭಾಪತಿಯವರು:–** ಹಾಗಾದರೆ, ಆ ಸಲಹೆಯನ್ನು ಹೇಳಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಉತ್ತರ ಕೊಟ್ಟಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಒಂದು ಸಲಹೆ ಕೊಡುತ್ತೇನೆಂದು ಹೇಳಿದ್ದಾರೆ. ಅದು ಕೊಟ್ಟ ನಂತರ ಅವರು ಕುಳಿತುಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮಗೂ ಅವಕಾಶ ಕೊಡಿ. ನಾವು ಮಾತನಾಡುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಅದಕ್ಕಾಗಿಯೇ ನಾನು ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ತಯಾರಿದ್ದರೂ, ತಾವು ಬೇಡವೆಂದು ಹೇಳುತ್ತಿದ್ದೀರಾ?

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಡುವವರೆಗೂ ನಾನು ಕುಳಿತುಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ನಾವು ಕೂಡ ಸಲಹೆ ಕೊಡುವುದಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವಂತಹ ವಿಚಾರ ಬೇರೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್‌ರವರೇ, ಒಂದು ನಿಮಿಷದಲ್ಲಿ ತಮ್ಮ ಸಲಹೆಯನ್ನು ಕೊಟ್ಟು ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಒಂದು ಸಲಹೆ ಕೊಡುವುದಿದೆ.

**(ಗೊಂದಲ)**

**ಉಪ ಸಭಾಪತಿಯವರು:–** ಆಯಿತು. ತಾವು ಮಾತನಾಡಿ. ಮಾನ್ಯ ಆಯನೂರು ಮಂಜುನಾಥ್‌ರವರೇ, ತಾವು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಈ ಸದನವನ್ನು ನಡೆಸುವಂತಹ ಸಂಪೂರ್ಣ ಪರಮಾಧಿಕಾರ ತಮ್ಮದು. ಸದಸ್ಯರಾದ ನಾವುಗಳು ಯಾವುದೇ ಕಾಲಘಟ್ಟದಲ್ಲಿ ಪೀಠವನ್ನು ಗದರಿಕೊಳ್ಳುವಂತಿಲ್ಲ. ಮಧ್ಯೆ ಪ್ರವೇಶ ಮಾಡಬೇಡಿ ಎಂದು ಹೇಳುವಂತಿಲ್ಲ. ಇದನ್ನು ಮಾಡಿದರೆ, ಪೀಠಕ್ಕೆ ಮಾಡಿದಂತಹ ಅಗೌರವವಾಗುತ್ತದೆ.

**(ಮುಂದು)**

**(451) 17.03.2021 12.50 ವೈಎಲ್–ಬಿಎನ್ಎಸ್**

**ಶ್ರೀ ಆಯನೂರು ಮಂಜುನಾಥ್(ಮುಂದು):–**

ಅದಕ್ಕಾಗಿ ಪೀಠದ ಗೌರವವನ್ನು ಕಾಪಾಡಿಕೊಳ್ಳಬೇಕಾದರೆ, ಆ ಪೀಠ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಮಾಡಬೇಕೆಂದು ಹೇಳುವುದಕ್ಕೋಸ್ಕರ ನಾನು ಮಾತನಾಡಲು ಎದ್ದು ನಿಂತಿದ್ದೆ. ಪೀಠವನ್ನು ಗದರಿಸಬಹುದು, ಹೆದರಿಸಬಹುದು ಎಂದಾದರೆ, ಯಾರಾದರೂ ತಮ್ಮ ಹಳೆಯ ಹವ್ಯಾಸದ ವಾಸನೆಯನ್ನು ನೆನಪಿಸಿಕೊಂಡು, ಧಾಟಿ ಹೆದರಿಸಿದರೆ, ಅದನ್ನು ಕೇಳುವಂಥ ಹೇಡಿಗಳು ಇಲ್ಲಿ ಯಾರು ಇಲ್ಲ. ಪೀಠವು ಹೆದರಬಹುದು. ಆದರೆ, ಅವರ ಪೂರ್ವಾಶ್ರಮದ ವಾಸನೆಗೆ ಇಲ್ಲಿ ಹೆದರುವವರು ಯಾರು ಇಲ್ಲ. **(ಗೊಂದಲ) XXX** ಆ ಪೂರ್ವಾಶ್ರಮದ ವಾಸನೆ ಇಲ್ಲಿ ನಡೆಯುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ತಾವು ಕುಳಿತುಕೊಳ್ಳಿ. ಮಾನ್ಯ ಪ್ರಸನ್ನ ಕುಮಾರ್‌ರವರೆ, ಮಾನ್ಯ ಸಚಿವರಿಗೆ ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನ ಸಲಹೆಯನ್ನು ಸಹ ತಾವು ಕೇಳಲೇಬೇಕು.

---

**XXX** ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಪ್ರಶ್ನೆ ಮುಗಿದಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನ ಸಲಹೆಯನ್ನು ಸಹ ತಾವು ಕೇಳಬೇಕು. **XXX** ಆ ರೀತಿ ಮಾಡುವುದು ಅವರ ಹವ್ಯಾಸ ಇರಬಹುದು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, **XXX** (ಗೊಂದಲ) **XXX** (ಗೊಂದಲ) **XXX . . .**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, **XXX**...

**(ಗೊಂದಲ)**

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:– XXX**...

**(ಗೊಂದಲ)**

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಸನ್ನ ಕುಮಾರ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಯಾವ ವರ್ತನೆ ಬಗ್ಗೆ ಹೇಳುತ್ತಿದ್ದಾರೆ, ಹೇಳಲಿ; ಅವರ ವರ್ತನೆ ಏನೆಂದು ನಾನು ಹೇಳುತ್ತೇನೆ. ನಮಗೂ ಮಾತನಾಡಲು ಅವಕಾಶ ನೀಡಿ,

---

**XXX ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದರೆ ಆ ವಾಸನೆ ಯಾವುದು ಎಂಬುದನ್ನು ಹೇಳುತ್ತೇನೆ. ನಾವು ಬಲವಂತವಾಗಿ ಕುಳಿತುಕೊಂಡ್ಡರೆ ಅವರ ನಾಲಗೆ ಉದ್ದ ಆಗುತ್ತದೆ, ಗಂಟಲು ದಪ್ಪ ಆಗುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇಡೀ ದಿನ ಬೇಕಾದರೆ ಚರ್ಚೆ ನಡೆಯಲಿ. ಈಗಾಗಲೇ ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ನೀಡಿದ್ದಾರೆ. ಆದರೆ, ಮಾನ್ಯ ಆಯನೂರು ಮಂಜುನಾಥ್‌ರವರು ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅನುಭವ ಇದ್ದರೆ ನಮ್ಮ ಕಡೆ ಮಾನ್ಯ ಮರಿತಿಬ್ಬೇಗೌಡರು ಕೈ ತೋರಿಸುವ ಅವಶ್ಯಕತೆ ಇಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತಾರೆ?

**ಉಪ ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೆ ತಮ್ಮ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು 15 ದಿವಸಗಳ ಕಾಲಾವಕಾಶ ಕೋರಿರುತ್ತಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, 15 ದಿವಸಗಳವರೆಗೂ ಎಲ್ಲಿ ಸದನ ನಡೆಯುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 15 ದಿವಸಗಳು ಎಂದರೆ ಸದನವೇ ಮುಕ್ತಾಯಗೊಳ್ಳುತ್ತದೆ. ಆದ್ದರಿಂದ ಒಂದು ವಾರದೊಳಗಾದರೂ ಉತ್ತರವನ್ನು ಕೊಡುವಂತೆ ಪೀಠದಿಂದ ಆದೇಶ ಮಾಡಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಕಂದಾಯ ಸಚಿವರೆ ಮುಂದಿನ ವಾರದಲ್ಲಿ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಒದಗಿಸಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಉತ್ತರ ನೀಡುತ್ತಾರೆ. ಈ ಪ್ರಶ್ನೆಗೆ ಮಾತ್ರ ಏತಕ್ಕೆ ಉತ್ತರ ನೀಡುತ್ತಿಲ್ಲ?

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಕಾರಣವೇನೆಂದು ಹೇಳುತ್ತೇನೆ. ನಿರ್ದಿಷ್ಟವಾಗಿ ಕೇಳಿದ್ದರೆ ಉತ್ತರವನ್ನು ನೀಡುತ್ತಿದ್ದೆ. ಗ್ರಾಮವಾರು ಮಾಹಿತಿಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅಂದರೆ, ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಹೋಗಿರುವುದರಿಂದ; ಗ್ರಾಮವಾರು ಮಾಹಿತಿ ಬೇಕಾಗಿರುವುದರಿಂದ ಇಡೀ ರಾಜ್ಯವನ್ನೇ ನೋಡಬೇಕಾಗುತ್ತದೆ. ಯಾವುದಾದರೂ ನಿರ್ದಿಷ್ಟವಾದ ಜಿಲ್ಲೆಯ ಬಗ್ಗೆ ಕೇಳಿದರೆ, ತಕ್ಷಣವೇ ಉತ್ತರವನ್ನು ತರಿಸುವಂಥ ಕೆಲಸ ಮಾಡುತ್ತೇವೆ. ಮಾನ್ಯ ಸದಸ್ಯರು ಅವಶ್ಯಕತೆ ಇದ್ದರೆ ಗಮನ ಸೆಳೆಯುವ ಸೂಚನೆ ಅಥವಾ ಬೇರೆ ನಿಯಮದಡಿಯಲ್ಲಿ ನಿರ್ದಿಷ್ಟವಾದ ಜಿಲ್ಲೆಗೆ ಸಂಬಂಧಿಸಿದಂತೆ ಉತ್ತರ ಕೇಳಿದರೆ, ತಕ್ಷಣವೇ ಉತ್ತರವನ್ನು ತರಿಸಿಕೊಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆಗಲಿ. ದಯವಿಟ್ಟು ಈಗಾಗಲೇ ಕೇಳಿರುವ ಪ್ರಶ್ನೆಗೆ ಮಾರ್ಪಾಟು ಮಾಡಿಕೊಂಡು, ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಸಚಿವರು ಉತ್ತರವನ್ನು ನೀಡಲಿ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ. ಆಗಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ನೈತಿಕತೆ ಬಗ್ಗೆ ಮಾತನಾಡಿದರು. ನಾಲ್ಕು ಪಕ್ಷಗಳನ್ನು ಬದಲಾಯಿಸಿಕೊಂಡು ಬಂದವರು ನಮಗೆ ನೈತಿಕತೆ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೆ ಅದು ಮುಗಿದ ವಿಚಾರ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಚುನಾವಣೆ ಮೂಲಕ ಗೆದ್ದು ಬಂದಿದ್ದೇನೆ. ಒಂದು ಚುನಾವಣೆಯಲ್ಲಿಯು ಗೆಲ್ಲುವುದಕ್ಕೆ ಅವರಿಗೆ ಯೋಗ್ಯತೆ ಇಲ್ಲ. **(ಗೊಂದಲ)** **XXX** ಆಯ್ಕೆಯಾಗಿರುವಂಥವರಿಗೆ,... ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಿಂದ ಗೆದ್ದು ಬಂದಿದ್ದೇನೆ. ಬಕೆಟ್ . . .

(ಗೊಂದಲ)

**ಉಪ ಸಭಾಪತಿಯವರು:–** ಆಗಲಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:– XXX**

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್ ಮತ್ತು ಮಾನ್ಯ ಆಯನೂರ ಮಂಜುನಾಥ್‌ರವರೆ ನೀವಿಬ್ಬರೂ ಲೋಕಸಭೆಯನ್ನೂ ಪ್ರತಿನಿಧಿಸಿ ಬಂದಿರುವಂಥವರು. ನೀವಿಬ್ಬರೂ ಈ ಸದನಕ್ಕೆ ಮಾದರಿಯಾಗಬೇಕಾಗಿರುವವರು. ನೀವೇ ಈ ರೀತಿ ಮಾತನಾಡಿದರೆ ಹೇಗೆ? ನೀವುಗಳೇ ಈ ರೀತಿ ಮಾತನಾಡಿದರೆ, ಈ ಸದನದಲ್ಲಿ ಯಾವ ಪರಿಸ್ಥಿತಿ ಉದ್ಭವಿಸಬಹುದು?

**(ಗೊಂದಲ)**

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಸನ್ನ ಕುಮಾರ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

**(ಗೊಂದಲ)**

---

**XXX ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1263**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುದೀರ್ಘವಾದಂಥ ಉತ್ತರವನ್ನು ಒದಗಿಸಿದ್ದಾರೆ. ಅವರು ನೀಡಿರುವ ಉತ್ತರವನ್ನು ಓದಲು ಇಲ್ಲಿ ಸಾಧ್ಯವಾಗದಷ್ಟು ಉತ್ತರವನ್ನು ನೀಡಿದ್ದಾರೆ. ಹಾಗಾಗಿ ನಾನು ಉತ್ತರವನ್ನು ಸಂಪೂರ್ಣವಾಗಿ ಓದಿ, ಏನಾದರೂ ಸಮಸ್ಯೆ ಇದ್ದರೆ, ನೇರವಾಗಿ ಮಾನ್ಯ ಸಚಿವರಿಗೆ ಪತ್ರವನ್ನು ಕಳುಹಿಸುವಂಥ ಕೆಲಸ ಮಾಡುತ್ತೇನೆ. ನನ್ನ ಪ್ರಶ್ನೆಯೇನೆಂದರೆ, ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಈಗಾಗಲೇ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಲ್ಲಿ 728.65 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ ಬರುವ 126.35 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ. ಇನ್ನೂ ಬಹಳಷ್ಟು ರಸ್ತೆಗಳಿದ್ದು, ಅದರ ಪಟ್ಟಿಯನ್ನು ಒದಗಿಸುತ್ತೇನೆ. ದಯವಿಟ್ಟು ಆ ರಸ್ತೆಗಳನ್ನೂ ಮೇಲ್ದರ್ಜೆಗೇರಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Sorry for interruption. Exchange of words, ಇಲ್ಲಿ ಏನು ಈ House witness ಮಾಡಿತೋ,... ಈ ಸದನದ ಸತ್ಸಂಪ್ರದಾಯ, ಸೌಹಾರ್ದಯುತ ವಾತಾವರಣಕ್ಕೆ ಅನುಗುಣವಾಗಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಮಾತನಾಡಿರುವ ಪದಗಳನ್ನೆಲ್ಲಾ ಸಂಪೂರ್ಣವಾಗಿ ಕಡತದಿಂದ ತೆಗೆಯಿಸಿ. ಏಕೆಂದರೆ, ಇದೊಂದು ಒಳ್ಳೆಯ tradition. ಈ ಸದನದ ಸತ್ಸಂಪ್ರದಾಯ, ಸದನದ ಗೌರವ-ಘನತೆ ಎತ್ತಿ ಹಿಡಿಯುವುದರ ಜೊತೆಗೆ ಸೌಹಾರ್ದಯುತವಾದ ವಾತಾವರಣ ನಿರ್ಮಿಸುವ ಸಲುವಾಗಿ ಆಗಿರಬಹುದು. This House has witnessed heated exchange of words. ಅದಕ್ಕಾಗಿ ದಯವಿಟ್ಟು ಅವರಾಗಲಿ, ನಮ್ಮ ಕಡೆ ಮಾತನಾಡಿರುವವರಾಗಲಿ ಅದು ಸದನಕ್ಕೆ ಶೋಭೆ ತರುವುದಲ್ಲ. ಹಾಗಾಗಿ, ಆ ಪದಗಳನ್ನು ಕಡತದಿಂದ ತೆಗೆಯಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅಸಂಸದೀಯ ಪದಗಳು ಬಳಕೆಯಾಗಿದ್ದರೆ ಮಾತ್ರ ಕಡತದಿಂದ ತೆಗೆಯಿಸಿ.

**ಉಪ ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೆ ದಯವಿಟ್ಟು ತಾವು ಒಂದು ನಿಮಿಷ ಕುಳಿತುಕೊಳ್ಳಿ.

**ಉಪ ಸಭಾಪತಿಯವರು:-** **ಯಾವುದಾದರೂ ಅಸಂಬದ್ಧವಾದ ಪದಗಳು ಬಳಕೆಯಾಗಿದ್ದಲ್ಲಿ ಅವನ್ನು ಕಡತದಿಂದ ತೆಗೆಯತಕ್ಕದ್ದು.**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಮ್ಮ ಪದಗಳನ್ನು ನಾವು ಬಳಸುವುದು ನಮ್ಮ ಸ್ವಾತಂತ್ರ್ಯದ ಹಕ್ಕು. ಒಂದು ವೇಳೆ ಅಸಂಸದೀಯ ಪದವಾಗಿದ್ದರೆ ತೆಗೆಯಿರಿ.

**ಉಪ ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೆ **ಅಸಂಬದ್ಧ ಪದಗಳು ಬಳಕೆಯಾಗಿದ್ದಲ್ಲಿ ಕಡತದಿಂದ ತೆಗೆದು ಹಾಕಲಾಗುತ್ತದೆ.**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ ಎಲ್ಲಾ ಪದಗಳ ಬಳಕೆಗೂ ನಾನು ಜವಾಬ್ದಾರಿಯಾಗಿರುತ್ತೇನೆ, ಹೊಣೆಗಾರನಾಗಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರತಿಯೊಬ್ಬರು ಜವಾಬ್ದಾರರಾಗಿದ್ದಾರೆ. ಮಾನ್ಯ ಆಯನೂರ ಮಂಜುನಾಥ್‌ರವರು ಹೇಳಿದ ಮಾತನ್ನೆಲ್ಲಾ ಕೇಳುವುದಕ್ಕಾಗುವುದಿಲ್ಲ. 4 ಪಕ್ಷ ಬದಲಾಯಿಸಿದವರು ನಮಗೆ ನೀತಿ ಪಾಠ ಹೇಳುವುದಕ್ಕೆ ಬರುವುದು ಬೇಡ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಸಹ ಈ ಹಿಂದೆ ಸಭಾಪತಿಗಳಾಗಿದ್ದರು ಎಂಬ ಕಾರಣದಿಂದ ಅವರಿಗೆ ಗೌರವ ನೀಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಮಗೂ ಸಹ ಎಲ್ಲರ ಮೇಲೆಯು ಗೌರವ ಇದೆ. ನಾಲ್ಕು ಪಕ್ಷ ಬದಲಾಯಿಸಿದವರು ನಮಗೆ ನೀತಿ ಪಾಠ ಹೇಳುವುದಕ್ಕೆ ಬರುವುದು ಬೇಡ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೆ ನಮಗೂ ಗೊತ್ತಿದೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅವರ ಮಾತನ್ನು ಕೇಳಿಕೊಂಡು ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ನಮಗೂ ಸಹ ಹೇಗಿರಬೇಕೆಂದು ಗೊತ್ತಿದೆ.

(ಗೊಂದಲ)

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಎರಡೂ ಪಕ್ಷಗಳ ನಾಯಕರಲ್ಲಿಯು ಮನವಿ ಮಾಡುತ್ತೇನೆ. ತಮ್ಮ ಸದಸ್ಯರೆಲ್ಲರನ್ನೂ ಕೂರಿಸುವ ಕೆಲಸ ಮಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರ ಮಂಜುನಾಥ್‌ರವರು ಪೀಠಕ್ಕೆ ಎಷ್ಟು ಗೌರವ ನೀಡಿದ್ದಾರೆ ಎಂಬುದು ಈಗ ತಮಗೂ ಗೊತ್ತಾಯಿತು ಅಲ್ಲವೇ?

**ಉಪ ಸಭಾಪತಿಯವರು:–** ಈಗಾಗಲೇ ಮಾತನಾಡಿದ್ದಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಯಾರಿಗೆ ನೀತಿ ಪಾಠ ಹೇಳುತ್ತಾರೆ. ನಮಗೆ ನೀತಿ ಪಾಠ ಹೇಳುತ್ತಾರೆಯೇ?

(ಗೊಂದಲ)

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಸನ್ನ ಕುಮಾರ್‌ರವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಪ್ರಸನ್ನ ಕುಮಾರ್‌ರವರು ನಮ್ಮ ಉತ್ತರದಿಂದ ಪ್ರಸನ್ನರಾಗಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರು ಇನ್ನಷ್ಟು ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ; ಖಂಡಿತವಾಗಿಯು ಅವರು ಯಾದಿಯನ್ನು ಕಳುಹಿಸಿಕೊಡಲಿ, ಪರಿಶೀಲನೆ ಮಾಡಿಸುತ್ತೇನೆ. ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಸಿಗತಕ್ಕ ರಸ್ತೆಗಳು ಯಾವುದಾದರೂ ಬಾಕಿ ಉಳಿದಿದ್ದರೆ, ನಾವು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ತಡೆಹಿಡಿಯಲಾದ ಪ್ರಶ್ನೆ**

**ಪ್ರಶ್ನೆ ಸಂಖ್ಯೆ 1028**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪ್ರವರ್ಗ-1 ಮತ್ತು ಪ್ರವರ್ಗ-2ಎ ರಲ್ಲಿ ಬರುವ ಎಲ್ಲಾ ಜಾತಿಗಳ ಸ್ಥಿತಿಗತಿಗಳ ಬಗ್ಗೆ ಅನ್ವೇಷಿಸಿ, ಇವತ್ತಿನ ಅವರ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಸಂವಿಧಾನದ ಅನುಚ್ಛೇದ 340ರ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ ಅವರ ಸರ್ವತೋಮುಖ ಏಳಿಗೆಗೆ ಅನುಗುಣವಾಗಿ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದ್ದು, ಈ ಪ್ರಶ್ನೆಯು ಮಾನ್ಯ ಸಚಿವರಿಗೆ ಅರ್ಥವಾಗಿದೆ ಎಂದು ನಾನು ಭಾವಿಸುತ್ತೇನೆ.

**(ಮುಂದು)**

**(452) 17.03.2021/1.00/ಎಸ್‌ಕೆ-ಜಿಆರ್**

**ಶ್ರೀ ಪಿ.ಆರ್. ರಮೇಶ್(ಮುಂದು):-**

ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರವಿದೆಯೇ ಎಂದು ಅವರು ಮನವರಿಕೆಯನ್ನು ಮಾಡಿಕೊಂಡು ಹೇಳಿಲ್ಲ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರಕ್ಕೂ ಮತ್ತು ನಾನು ಕೇಳಿರುವಂತಹ ಪ್ರಶ್ನೆಗೂ ಒಂದಕ್ಕೊಂದು ಸಂಬಂಧವಿಲ್ಲ. 70 ವರ್ಷಗಳಿಂದ ಹಿಂದುಳಿದ ವರ್ಗ ಎಂದು ಮಾಡಿಟ್ಟಿರುವ ಜನಾಂಗವನ್ನು ತಾವು ಪರಿಗಣಿಸಿ, ಅವರ ಸ್ಥಿತಿಗತಿಗಳನ್ನು ಕಂಡುಹಿಡಿಯುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೇ? ಆ ಜನಾಂಗವನ್ನು ಅಲ್ಲಿಯೇ ಇಟ್ಟಿದ್ದಾರೆಯೇ ಅಥವಾ ಮೇಲೆ ತಂದಿದ್ದಾರೆಯೇ ಹಾಗೂ ಕೆಳಗೆ ತುಳಿದಿದ್ದಾರೆಯೇ ಎನ್ನುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನೇ ಕೊಟ್ಟಿಲ್ಲ. ಆ ಪ್ರಶ್ನೆಯನ್ನು ಬಿಟ್ಟು ಏನು ಹೇಳಿದ್ದಾರೆಂದರೆ, ಹಿಂದುಳಿದ ವರ್ಗಗಳ ಆಯೋಗ ನೇಮಿಸುವುದರ ಬಗ್ಗೆ ಅವಕಾಶವಿರುತ್ತದೆ ಎಂದು ತಿಳಿಸಿದ್ದಾರೆ. ಆದರೆ 1951 ನೇ ಇಸವಿಯಿಂದಲೇ ಆ ಅವಕಾಶವಿದೆ. ಆ ಅವಕಾಶವನ್ನು ತಾವು ಏತಕ್ಕೆ ಸದುಪಯೋಗಪಡಿಸಿಕೊಂಡಿಲ್ಲ ಎನ್ನುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. 70 ವರ್ಷಗಳಿಂದ ಏನು ಮಾಡಿದ್ದಾರೆ ಎಂದು ನಾನು ಕೇಳಿರುವಂತಹದ್ದು. ಮಾನ್ಯ ಸಚಿವರು ಅದಕ್ಕೆ ಶೇಕಡವಾರು ವರ್ಗವಾರು ಮಾಡಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ ವರ್ಗವಾರು ಮಾಡಿರುವಂತಹದ್ದಕ್ಕೆ 2002 ರ ಅದೇಶದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಆದರೆ ಅವರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, ಅದರ ಬಗ್ಗೆ ವರದಿ ಕೊಡುವಂತಹದ್ದಕ್ಕೆ ಮಾನ್ಯ ಸಚಿವರು ಮಾಡಿದ್ದಾರೆಯೋ ಅಥವಾ ಇಲವೇ ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಎರಡನೆಯದಾಗಿ, ಈ ರಾಜ್ಯದಲ್ಲಿ ಜಾತಿಗಣತಿಗಾಗಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಲಾಗಿದೆ. ಇದು ಜಾತಿ ಎಂದರೆ ಕೇವಲ ಹಿಂದುಳಿದ ವರ್ಗದವರಿಗೆ ಮಾತ್ರವಲ್ಲ, ಇದು ಎಲ್ಲಾ ವರ್ಗದವರಿಗೂ ಅನ್ವಯಿಸುತ್ತದೆ. ಇದು ಪೂರ್ತಿ ಇರತಕ್ಕಂಥ ನಮ್ಮ ಜನಸಂಖ್ಯೆಯ ಒಂದು ಸ್ಥಿತಿಗತಿಗಳು, ಅವರನ್ನು ಸಾಮಾಜಿಕ ಮತ್ತು ಶೈಕ್ಷಣಿಕ, ಆರ್ಥಿಕವಾಗಿ ಬಲಾಢ್ಯರನ್ನಾಗಿ ಮಾಡುವುದಕ್ಕೆ ಹೇಳಿದ್ದೇವೆ. ತಮ್ಮ ಉತ್ತರದಲ್ಲಿ ಹೇಳಿರುವ ಹಾಗೇ, ಮಾನ್ಯ ಹೆಚ್. ಕಾಂತರಾಜುರವರ ನೇತೃತ್ವದಲ್ಲಿ ಸಾಕಷ್ಟು ಸಮೀಕ್ಷೆಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ತದನಂತರ ಅಗತ್ಯ ಕ್ರಮ ವಹಿಸಲಾಗುವುದು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅದು ಏಕೆ? ಇದನ್ನು ಏಕೆ ಕೈಬಿಟ್ಟಿದ್ದಾರೆ? ಸುಮಾರು 162 ಕೋಟಿ ರೂಪಾಯಿಗಳ ಸಾರ್ವಜನಿಕರ ಹಣವನ್ನು ವ್ಯಯ ಮಾಡಿ, ಈ ಒಂದು ಸಾಮಾಜಿಕ ಮತ್ತು ಶೈಕ್ಷಣಿಕ ಸರ್ವೇಕ್ಷಣೆ ಮಾಡಿದ್ದಾರೆಯೇ? ನಾನು ಜಾತಿಯ ಬಗ್ಗೆ ಹೇಳುತ್ತೀಲ್ಲ. ಪ್ರತಿಯೊಂದು ಜನಾಂಗದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ ಇರಬಹುದು. ಅವುಗಳ ಬಗ್ಗೆ ಅಧ್ಯಯನ ಮಾಡುವುದಕ್ಕೆ ಇದನ್ನು ಸಲ್ಲಿಸುವಂತಹದ್ದಕ್ಕೆ ಈ 162 ಕೋಟಿ ರೂಪಾಯಿಗಳಿರುವುದು. ಆದರೆ ಅದರಲ್ಲಿ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ 'ವರದಿಯನ್ನು ಸಲ್ಲಿಸಲಾಗಿರುವುದಿಲ್ಲ' ಎಂಬ ಪದವನ್ನು ಟಿಕ್ಕೆ ಮಾಡಿದ್ದೀರಾ. ಆಮೇಲೆ 'ಕ್ರಮ ವಹಿಸಲಾಗುವುದು' ಎಂದು ಹೇಳುತ್ತಿದ್ದೀರಿ. ಇದು 2019ರಲ್ಲಿ ಆಯಿತು ಎಂದು ಹೇಳುತ್ತೀರಿ. ಆದರೆ ಇವತ್ತಿನವರೆಗೂ ಆ ವರದಿಯನ್ನು ತರಿಸಿಕೊಂಡು, ಈ ಒಂದು ಸಭೆಯ ಮುಂದೆ ಇಡುವುದಕ್ಕೆ ಏಕೆ ಆಗಲಿಲ್ಲ? ಮೂರನೆಯದಾಗಿ, ಸಂವಿಧಾನದ 342 (ಎ) ರಲ್ಲಿ ತುಂಬಾ ಸ್ಪಷ್ಟವಾಗಿ ಏನು ಹೇಳುತ್ತದೆ ಎಂದರೆ

"324A. Socially and educationally backward classes.-

(1) The President may with respect to any State or Union territory, and where it is a State, after consultation with the Governor thereof, by public notification, specify the socially and educationally backward classes which shall for the purposes of this Constitution be deemed to be socially and educationally backward classes in relation to that State or Union territory, as the case may be.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(2) Parliament may by law include in or exclude from the Central List of socially and educationally backward classes specified in a notification issued under clause (1) any socially and educationally backward class, but save as aforesaid a notification issued under the said clause shall not be varied by any subsequent notification."

ಇದು ಬಹಳ ಸ್ಪಷ್ಟವಾಗಿದೆ. Socially and educationally backward ಇರುವಂತಹವರನ್ನು ತೆಗೆದುಕೊಳ್ಳುವುದಕ್ಕೆ ಒಂದು ನೋಟಿಫಿಕೇಷನ್ issue ಮಾಡಬೇಕು. ತಾವು ಇದನ್ನು ಮಾಡಿದ್ದೀರಿ. ಇಲ್ಲವೆಂದು ಹೇಳುವುದಿಲ್ಲ. ಹಾಗಾಗಿ ಇವರ ಸ್ಥಿತಿಗತಿಗಳನ್ನು ಹೆಚ್ಚಿಸಬೇಕು. ಇದನ್ನು ಬಿಟ್ಟು ಇನ್ನು ಹೆಚ್ಚಿಗೆ ಬೇರೆ ಇರುವಂತಹ ಜನಾಂಗವನ್ನು ತರುವುದಕ್ಕೆ ಹೊರಟಿದ್ದೀರಿ. ಮಾನ್ಯ ಸಚಿವರು ಕೊಟ್ಟಿರುವ ಮೂರನೇ ಉತ್ತರದಲ್ಲಿ ಸಂವಿಧಾನದ ಅನುಚ್ಛೇದ 15(6) ಮತ್ತು 16(6) ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ಆರ್ಥಿಕವಾಗಿ ಹಿಂದುಳಿದ ವರ್ಗದವರನ್ನು, ಆರ್ಥಿಕವಾಗಿ ದುರ್ಬಲ ವರ್ಗದವರನ್ನು, ನಮ್ಮ ಸಂವಿಧಾನದಲ್ಲಿ economically weaker section ಇರುವಂತಹದ್ದು. 'Economically weaker section' ಎಂದರೆ, it is not a backward section. It is ದುರ್ಬಲ. ದುರ್ಬಲವಾದಂತಹ ಒಂದು ವರ್ಗಗಳನ್ನು ಎಂದು ವರ್ಗೀಕರಣ ಮಾಡಿದ್ದೀರಿ. ಆ ಒಂದು ರೀತಿಯಲ್ಲಿ E.W.S., ಎಂದು ಹೇಳಿದ ಮೇಲೆ, ಅವರಿಗೆ ಏನೊಂದು ಮಾನದಂಡಗಳ ಈ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಅನುಬಂಧ–2 ರಲ್ಲಿ ನೀಡಿರುವ ಈ ಪಟ್ಟಿಯ ಶೀರ್ಷಿಕೆ 'Caste List for EWSs (other than SC,ST and Central OBC)' ಎಂದಿದೆ. ಇಲ್ಲಿ ಎಸ್.ಸಿ., ಎಸ್.ಟಿ., ಬರುವುದಿಲ್ಲ. Central O.B.C., ಎಂದರೆ, Central List of O.B.C. ಪಟ್ಟಿಯಲ್ಲಿದೆ. ಈ ಪಟ್ಟಿಯಲ್ಲಿ ಇಲ್ಲದೇ ಇರುವಂತಹ ಜನರನ್ನು ಇದರಲ್ಲಿ ತರಬಹುದು ಎಂದು ಹೇಳಿದ್ದೀರಿ. ಆದರೆ ಇರತಕ್ಕಂತಹ ಜನರನ್ನು ಬೇಕಾದಷ್ಟು ತಂದಿದ್ದೀರಿ. ಇದನ್ನು ಹೇಗೆ ತಂದರು ಎಂಬುದು ನನಗೆ ಗೊತ್ತಿಲ್ಲ. ಆದರೆ ಈ ಜನಾಂಗಕ್ಕೆ ಕೊಡುವುದಕ್ಕೆ ತಾವು ಒಂದು ನೋಟಿಫಿಕೇಷನ್ issue ಮಾಡಿದ್ದೀರಿ. ಆ ನೋಟಿಫಿಕೇಷನ್ ಏನು? ಈ ಒಂದು ಜನಾಂಗದ ಆರ್ಥಿಕ ಸ್ಥಿತಿಯನ್ನು ನೋಡಿ ಅವರಿಗೆ ಒಂದು ಪ್ರಮಾಣಪತ್ರವನ್ನು ಕೊಡುವುದಕ್ಕೆ ನೋಟಿಫಿಕೇಷನ್ issue ಮಾಡಿದ್ದೀರಿ. ಅದು ಹೇಗೆ ಕೊಟ್ಟಿದ್ದೀರಿ ಎಂದರೆ Central

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Government job, ಶಿಕ್ಷಣ ಇರುವಂತಹದ್ದಕ್ಕೆ ಮಾತ್ರ ಅಲ್ಲಿ ಕೊಟ್ಟಿರುವಂತಹದ್ದು. ಆದರೆ ನಿಮ್ಮ ರಾಜ್ಯದಲ್ಲಿ ಶೇಕಡಾ 10 ರಷ್ಟು ಕೊಡುವುದಕ್ಕೂ ಅವಕಾಶವನ್ನು ಕೊಟ್ಟಿಲ್ಲ. ಸಂವಿಧಾನದ ಅನುಚ್ಛೇದ 15(6) ಮತ್ತು 16(6) ರಲ್ಲಿ ತಮಗೂ ಅಧಿಕಾರವನ್ನು ಕೊಟ್ಟಿದ್ದಾರೆ. ಎರಡು ವರ್ಷಗಳಿಂದ ಈ ಅಧಿಕಾರವನ್ನು ಏಕೆ ಚಲಾಯಿಸಿಲ್ಲ? ಸಂವಿಧಾನದಲ್ಲಿ ನಿಮಗೆ ಅವಕಾಶವನ್ನು ಕೊಟ್ಟರೂ ಸಹ ಶೇಕಡ 10 ರಷ್ಟು ಮೀಸಲಾತಿ for socially and educationally backward ಯಾರ್ಯಾರು ಈ ಒಂದು ಪಟ್ಟಿಯಲ್ಲಿ ಇಲ್ಲದೇ ಇರುವಂತಹ ಜನಾಂಗಕ್ಕೆ ಕೊಡುವುದಕ್ಕೆ ಅವಕಾಶವಿದ್ದರೂ ಸಹ ಏಕೆ ನೀವು ಕೊಟ್ಟಿಲ್ಲ? ಆದರೆ ಪಟ್ಟಿಯನ್ನು ಕೊಟ್ಟಿದ್ದೀರಲ್ಲ. ಈ ಪಟ್ಟಿಯಲ್ಲಿ ಇಲ್ಲದೇ ಇರುವಂತಹ ಜನಾಂಗ ಕೇವಲ ಐದು ಮಾತ್ರ. ಅದು ಯಾವುದು ಎಂದರೆ ಬ್ರಾಹ್ಮಣ, ಆರ್ಯವೈಶ್ಯ, ಜೈನ, ನಾಯುಡು, ಮೊದಲಿಯರ್. ಈ ಐದು ಜನಾಂಗ ಮಾತ್ರ ಪಟ್ಟಿಯಲ್ಲಿ ಇಲ್ಲದೇ ಇರತಕ್ಕಂಥವರು ಬರುವಂತಹದ್ದು. ಈ ಪಟ್ಟಿಯಲ್ಲಿ ಇಲ್ಲದೇ ಇರುವಂತಹ ಜನಾಂಗಕ್ಕೆ socially and educationally backward ಮಾತ್ರ. ಆದರೆ economically backward ಬರುವುದಿಲ್ಲ. Socially and educationally backward ಗೆ ಮಾತ್ರ ಬರುತ್ತದೆ. ತಾವು ಕೊಟ್ಟಿರುವಂತಹದ್ದು Article 15(6) is only for education and Article 16(6) is only for employment. ಈ education ಮತ್ತು employment ಇವೆರಡಕ್ಕೂ ಕೊಟ್ಟಿರತಕ್ಕಂತಹದ್ದು ಈ ಐದು ಜನಾಂಗಕ್ಕೆ ಮಾತ್ರ ಬರುತ್ತದೆ. ಹಿಂದುಳಿದ ವರ್ಗ IIIA, IIIB ಎಂದು 2002 ರಲ್ಲಿ ವರ್ಗೀಕರಣ ಮಾಡಿ ಮಾಡಿದ್ದೀರಿ. ಅದರಲ್ಲಿ ಬರುವಂತಹದ್ದು, ಅತಿ ಹಿಂದುಳಿದ ವರ್ಗಕ್ಕೊಂದು parameter ಇದೆ. There are so many parameters, where we can consider the backwardness of the people in Karnataka. ಅದನ್ನು ಯಾವ ರೀತಿ ಅಳಿಯಬೇಕೆಂದು ಹೇಳಿ, ಅದಕ್ಕೆ ಆದಂತಹ ಮಾನದಂಡಗಳು. ಅದಕ್ಕೆ ಸಂಬಂಧಪಟ್ಟಂತೆ ಬೇಕಾದಷ್ಟು ತೀರ್ಪುಗಳಿವೆ. 2017–18 ರಲ್ಲಿ ತೀರ್ಪುಗಳಿದೆ. Indira Sawhney ರವರ judgment ಇದೆ. ಆದರೆ ಈ ತೀರ್ಪುಗಳ ಆಧಾರದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಆಯೋಗವನ್ನೆಲ್ಲಾ ಮಾಡಿದ್ದಾರೆ. ನಮ್ಮ ಕರ್ನಾಟಕದ ಭಾಗ್ಯವೇನೆಂದರೆ, ಹಿಂದುಳಿದ ವರ್ಗಗಳ ಆಯೋಗ ಮೊಟ್ಟಮೊದಲನೇಯದಾಗಿ ಆಗಿದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ. 1992ರ ತೀರ್ಪು ಆಧಾರದ ಮೇಲೆ ಮಾಡಿರುವಂತಹದ್ದು. ಅದಕ್ಕಿಂತ ಮುಂಚೆ ಮಾನ್ಯ ದೇವರಾಜ ಅರಸುರವರು ಇದ್ದಾಗ ಮಾಡಿದ್ದರು. ಆದರೆ ಹಾವನೂರ ಆಯೋಗ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊದಲು ಆಗಿದ್ದು. It's a model for the entire nation. ಇವತ್ತು ಕೇಂದ್ರ ಸರ್ಕಾರ 2019 ರಲ್ಲಿ because of the intervention of the Supreme Court, ಯಾವ ರೀತಿ ಇದನ್ನೆಲ್ಲಾ ಮಾಡಬೇಕೆಂದು ಹೇಳಿದ ಮೇಲೆ National Commission for Backward Classes ಮಾಡಿದರು. ಇವತ್ತು ಅದರಲ್ಲಿ ಸಂವಿಧಾನದಲ್ಲಿ ಪ್ರಾವಿಷನ್ ಇದೆ. ಇವೆಲ್ಲಾ ಇರುವಾಗ, ಸಂವಿಧಾನದ ಅನುಚ್ಛೇದ 340 ರ ಪ್ರಕಾರ ಆಯೋಗ ಮಾಡುವುದಕ್ಕೆ ಅವಕಾಶವಿದೆ. ಈಗಾಗಲೇ ಆಯೋಗ ಇರುವುದರಿಂದ ನೀವು ಕೊಟ್ಟಂತಹದ್ದು ಬರೀ ಹಿಂದುಳಿದ ವರ್ಗ ಮಾಡುವುದಕ್ಕಲ್ಲ. ರಾಜ್ಯದ entire ಜನಗಣತಿಯನ್ನು ಮಾಡುವುದಕ್ಕೆ ಸುಮಾರು 162 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಹಾಗಾಗಿ data's ತೆಗೆದುಕೊಳ್ಳಿ. ಆ ಮೂಲತಃ data's ಅನ್ನು ತೆಗೆದುಕೊಂಡು, ಅದರ ಪ್ರಕಾರ ಕಾರ್ಯಕ್ರಮಗಳನ್ನು ರೂಪಿಸಬಹುದು. ಇವತ್ತು ಏನಾಗಿದೆ ಎಂದರೆ ಕುರುಡು ಇರತಕ್ಕಂತಹ ಜನರು ಆನೆಯ ಸೊಂಡಿಲನ್ನು ಮುಟ್ಟಿದಾಗ, ಆನೆಯ ಸೊಂಡಿಲನ್ನೇ ಆನೆ ಎಂದು ಹೇಳುವುದು ಅಥವಾ ಆನೆಯ ಕಾಲನ್ನು ಮುಟ್ಟಿದಾಗ, ಅದು ಆನೆ ಎಂದು ಹೇಳುವುದು ಮತ್ತು ಆನೆಯ ಬಾಲವನ್ನು ಮುಟ್ಟಿದಾಗ, ಆನೆಯ ಅದು ಆನೆ ಎಂದು ಹೇಳುವುದು. ಈ ರೀತಿ ಇವತ್ತು ನೀವು ಹೋಗುತ್ತಿದ್ದೀರಿ.

**(ಮುಂದು)**

**(453)17.03.2021, 1.10, ಟಿಸಿಹೆಚ್-ಜಿಆರ್**

**ಶ್ರೀ ಪಿ.ಆರ್‌ರಮೇಶ್ (ಮುಂದು)**

ಇವತ್ತಿನ ದಿವಸ ಯಾವ ಸಮುದಾಯಗಳು ಈ ಒಂದು ಹಿಂದುಳಿದ ವರ್ಗದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಬಹಳಷ್ಟು ಕ್ಷೀಣಿಸಿವೆ. ಅಂತಹವುಗಳನ್ನು ನೀವು ನೋಡುತ್ತಿಲ್ಲ. ನೀವು ಬೇರೆ ಜನಾಂಗಗಳನ್ನು ನೋಡುತ್ತಿದ್ದೀರಿ. ಒಂದು ಸಮುದಾಯಕ್ಕೆ 500 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಇನ್ನೊಂದು ಸಮುದಾಯಕ್ಕೆ 500 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ.

**ಉಪ ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ಪ್ರಶ್ನೋತ್ತರ ಅವಧಿ. . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್‌ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಭಾರತದ ಸಂವಿಧಾನದ ಪ್ರಕಾರ ನೀವು ತೆಗೆದುಕೊಂಡು ಬಂದರೆ, ಯಾರ್ಯಾರಿಗೆ ಎಷ್ಟೆಷ್ಟು ಮೀಸಲಾತಿ ಕೊಡಬಹುದೆಂದು ದಯವಿಟ್ಟು ಉತ್ತರ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಕೇಳಿದಂಥ ಪ್ರಶ್ನೆಗಳಿಗೆ ಕೆಲವಕ್ಕೆ ಅವರೇ ಉತ್ತರಗಳನ್ನು ಕೊಟ್ಟುಕೊಂಡಿದ್ದಾರೆ. ಹಾಗಾಗಿ, ನಾನು ಉತ್ತರ ಕೊಡುವುದಕ್ಕೆ ಸುಲಭವಾಗಿದೆ. ಅವರು ಸುಧೀರ್ಘವಾಗಿ ಕೇಳಿರುವಂಥ ಪ್ರಶ್ನೆ ಮತ್ತು ವಿಚಾರದಲ್ಲಿ ರಾಜ್ಯ ಸರ್ಕಾರ 2002ರಲ್ಲಿ ಪ್ರವರ್ಗ–1 ಮತ್ತು ಪ್ರವರ್ಗ–2ರಲ್ಲಿ ಬರುವಂಥ ಜಾತಿಗಳ ಸ್ಥಿತಿಗತಿಗಳ ಬಗ್ಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳನ್ನು ಕಂಡುಕೊಳ್ಳುವುದಕ್ಕೆ ಸಂವಿಧಾನಬದ್ಧವಾಗಿ ಅನುಚ್ಛೇದ 340ರ ಪ್ರಕಾರ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಏನೇನು ಮಾಡಬೇಕು ಅದೆಲ್ಲವನ್ನೂ ಆಯೋಗಗಳು ಮಾಡಿದ್ದನ್ನು ಕೂಡ ನಾನು ಉಲ್ಲೇಖ ಮಾಡಿದ್ದೇನೆ. ಮೀಸಲಾತಿ ಪ್ರಮಾಣದಲ್ಲಿ ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ಇದಕ್ಕೆ ಒಟ್ಟು ಅಂಕಿ–ಅಂಶಗಳು ಮತ್ತು ಶೇಕಡಾವಾರು ಅಂಕಿ–ಅಂಶಗಳ ಪ್ರಕಾರ ಒಟ್ಟು ಶೇಕಡ 32 ರಷ್ಟು ಮೀಸಲಾತಿಗಳನ್ನು ಕೊಡುವುದಕ್ಕೆ ಇರುವಂಥ ಅವಕಾಶಗಳನ್ನು ಕೂಡ ಉಲ್ಲೇಖ ಮಾಡಲಾಗಿದೆ. ಮುಂದುವರೆದು, ಮಾನ್ಯ ಸದಸ್ಯರು ಎರಡನೇ ಪ್ರಶ್ನೆಯಲ್ಲಿ ಏನು ಕೇಳಿದ್ದಾರೆಂದರೆ, ಆರೂವರೆ ಕೋಟಿ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುವುದಕ್ಕೆ ಅಥವಾ ಜಾತಿ ಗಣತಿ ಎಂದು ನಾವೇನು ಕರೆಯುತ್ತೇವೆ, ಸುಮಾರು 262 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರೆಂದು ಹೇಳಿದ್ದೀರಿ. ಅದನ್ನು 162 ಕೋಟಿ ರೂಪಾಯಿಗಳೆಂದು ಕರೆಕ್ಷನ್ ಮಾಡಿ ಅವರಿಗೆಲ್ಲಾ ಮಾಹಿತಿಗಳನ್ನು ಒದಗಿಸಲಾಗಿದೆ. ಅವರ ಪ್ರಶ್ನೆ ಇರುವುದೇನೆಂದರೆ, ಅದನ್ನು ಇನ್ನೂ ಏಕೆ ಬಿಡುಗಡೆ ಮಾಡಿಲ್ಲ ಎನ್ನುವುದು. ಇತ್ತೀಚೆಗೆ ಈ ವಿಷಯ ಚರ್ಚೆಗೆ ಬಂದಿದ್ದು, ಮಾನ್ಯ ಸದಸ್ಯರಿಗೂ ಕೂಡ ವಾಸ್ತವಿಕ ಸ್ಥಿತಿ ಏನಿದೆಯೆಂದು ಗೊತ್ತಿದೆ. ಶ್ರೀ ಹೆಚ್. ಕಾಂತರಾಜುರವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಈ ಜಾತಿಗಣತಿಯನ್ನು ಸಿದ್ಧಪಡಿಸಿದ್ದರು. ಬೇರೆ ಬೇರೆ ಕಾರಣಕ್ಕಾಗಿ ಅವರ ಅವಧಿ ಮುಗಿದಿರುತ್ತದೆ. ಈಗ ಶ್ರೀ ಜಯಪ್ರಕಾಶ್ ಹೆಗ್ಡೆ ಎಂಬುವವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾರೆ. ಅದನ್ನು ಪರಿಶೀಲಿಸಿ ಬಿಡುಗಡೆ ಮಾಡುತ್ತೇವೆ ಎನ್ನುವಂಥ ಮಾತನ್ನು ಮೊನ್ನೆ ಕೂಡ ನಾನು ಹೇಳಿದ್ದೆನು. ಇವತ್ತು ಅದನ್ನು ಪುನರುಚ್ಚಾರ ಮಾಡಬೇಕಾದಂಥ ಅನಿವಾರ್ಯತೆ ಇದೆ. ಮಾನ್ಯ ಸದಸ್ಯರು ಮತ್ತೆ ಪ್ರಶ್ನೆ ಸಂಖ್ಯೆ ಮೂರರಲ್ಲಿ ಉಲ್ಲೇಖ ಮಾಡಿರುವಂಥದ್ದು ಏನೆಂದರೆ, ಸಂವಿಧಾನ ಅನುಚ್ಛೇದ 15(6) ಮತ್ತು 16(6) ರ ಪ್ರಕಾರ ಎಲ್ಲಾ ಜನಾಂಗದಲ್ಲಿರುವಂಥ ಆರ್ಥಿಕ ದುರ್ಬಲ ವರ್ಗದವರಿಗೆ ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂವಿಧಾನ ತಿದ್ದುಪಡಿ 102ರಲ್ಲಿ ಮಾಡಲಾಯಿತು. ಆ ಮೂಲಕ ಮಾಡಿದ್ದೇವೆ. ಅದಕ್ಕೆ ಏನು ಉತ್ತರವನ್ನು ಕೊಡುತ್ತೀರಿ ಎಂದು ಮಾನ್ಯ ಸದಸ್ಯರ ಚರ್ಚೆ ಇದೆ. ಈಗ ಇರುವಂಥ ಒಟ್ಟು ಅಂಕಿ–ಅಂಶಗಳ ಪ್ರಕಾರ ಸುಮಾರು 144 ಜಾತಿಗಳನ್ನು ಕಂದಾಯ ಇಲಾಖೆ ಮೂಲಕ ಗುರ್ತಿಸಿ, ಕೇಂದ್ರ ಸರ್ಕಾರಕ್ಕೆ ಕೊಡುವುದಕ್ಕೆ ಉದ್ಯೋಗ ಮತ್ತು ಶಿಕ್ಷಣಕ್ಕೆ ಮೀಸಲಾತಿಯನ್ನು ಅಳವಡಿಸಲಾಗಿದೆ. ತಾವು ಹೇಳಿರುವಂಥ ಐದು ಜಾತಿಗಳು ಅದರಲ್ಲಿ ಸೇರಿಲ್ಲ. ಮಾನ್ಯ ಸದಸ್ಯರು ಹೇಳಿರುವಂಥ ಐದು ಜಾತಿಗಳಾವುವು ಎಂದರೆ, ಸಾರಸ್ವತ ಗೌಡ ಸಾರಸ್ವತ, ಜೈನ, ನಾಯರ್ ಮತ್ತು ಮೊದಲಿಯರ್ ಇದ್ಯಾವುದೇ ಜಾತಿಗಳನ್ನು ಸೇರಿಸಿಲ್ಲ. ಅದನ್ನೂ ಕೂಡ ಸೇರಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂಥ ಮಾತುಗಳನ್ನು ಈ ಮೂಲಕ ಹೇಳುತ್ತಿದ್ದೇನೆ. ಇನ್ನೊಂದು ವಿಚಾರ ಇದನ್ನೆಲ್ಲಾ ನೀವು ಯಾವಾಗ ಮಾಡುತ್ತೀರಿ ಎಂದೂ ಕೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಅದನ್ನು ಸೇರಿಸಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇನ್ನೂ ಮುಂದುವರೆದು ಏನು ಹೇಳಿದ್ದಾರೆಂದರೆ, ಕೇಂದ್ರದಲ್ಲಿ ಉದ್ಯೋಗ ಮತ್ತು ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ನೀವೇಕೆ ಅವಕಾಶ ಮಾಡಿಕೊಟ್ಟಿಲ್ಲವೆಂದು ಸ್ಪಷ್ಟವಾದ ಪ್ರಶ್ನೆ ಇದೆ. ಅವರ ಪ್ರಶ್ನೆ ಸರಿ ಇದೆ. ಅವರ ಗಮನಕ್ಕೆ ತರುವುದೇನೆಂದರೆ, ಈ ಹಿಂದೆ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿದ್ದಾಗ, ರಾಜ್ಯ ಸರ್ಕಾರ ಶಿಕ್ಷಣ ಮತ್ತು ಇತರ ಉದ್ಯೋಗಗಳಿಗೆ ಸಂಬಂಧಿಸಿದಂತೆ, ಯಾವ ರೀತಿ ನಾವು ಕೊಡಬಹುದೆಂದು ಒಂದು ವರದಿಯನ್ನು ಕೊಡುವಂತೆ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿ ಜೊತೆ ಚರ್ಚೆ ಮಾಡಿ, ಆ ಸಮಿತಿ ಏನು ವರದಿ ಕೊಡುತ್ತದೆ ಅಥವಾ ನಾವು ಅದಕ್ಕೆ ಯಾವ ರೀತಿ ಸ್ಪಂದನೆ ಮಾಡಬೇಕೆಂದು ಯೋಚನೆ ಮಾಡಿ, ರಾಜ್ಯ ಸರ್ಕಾರದಲ್ಲೂ ಕೂಡ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿರ್ಧಾರವನ್ನು ಕೈಗೊಳ್ಳುತ್ತೇವೆ. ಇದಕ್ಕೆ ಬೇಕಾದಂಥ ಸಭೆಯನ್ನು ಪ್ರತ್ಯೇಕವಾಗಿ ಕರೆಯುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಈಗ ನಾನೂ ಕೂಡ ಹಿಂದುಳಿದ ವರ್ಗದ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ಹಿಂದುಳಿದ ವರ್ಗಗಳ ಇಲಾಖೆಯವರು ಪರಿಶಿಷ್ಟ ಜಾತಿಯವರು ಶೇಕಡ ಎಷ್ಟಿದ್ದಾರೆ, ಅಲ್ಪ ಸಂಖ್ಯಾತರು ಶೇಕಡ ಎಷ್ಟಿದ್ದಾರೆ ಮತ್ತು ಹಿಂದುಳಿದ ವರ್ಗದವರು ಶೇಕಡ ಎಷ್ಟು ಇದ್ದಾರೆಂದು ಕೊಟ್ಟಿದ್ದಾರೆ. ಅದನ್ನು 2011ರ ಜನಗಣತಿಯ ಆಧಾರದ ಮೇಲೆ ಕೊಟ್ಟಿದ್ದಾರೆ. ಇವತ್ತಿನ ದಿವಸ ಪರಿಶಿಷ್ಟ ಜಾತಿ ಶೇ.17.17 ಇದ್ದಾರೆ. ಪರಿಶಿಷ್ಟ ಪಂಗಡ ಶೇ.6.95 ಇದ್ದಾರೆ. ಅಲ್ಪಸಂಖ್ಯಾತರು ಶೇ.15.73 ಇದ್ದಾರೆ. ಹಿಂದುಳಿದ ವರ್ಗಗಳ ಸಂಖ್ಯೆ ಅಂದಾಜು ಶೇ.53 ಇದ್ದಾರೆ. ಇತರೆ ಸಮುದಾಯಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನಸಂಖ್ಯೆ ಶೇ.7.17 ಇದೆ. ಈಗ ಎಲ್ಲಾ ಜನಾಂಗದವರು ಒಟ್ಟು ಶೇ.100 ಏನಿದ್ದಾರೆ, ಹಿಂದುಳಿದ ವರ್ಗದವರು ಅಂದಾಜು ಶೇ.53 ಇದ್ದಾರೆ. ಇವರು ಹಂಚಿ ಹೋಗಿದ್ದಾರೆ. ಈ ಹಂಚಿಹೋಗಿರತಕ್ಕಂಥ ಜನ ಇವತ್ತು ಅವರ ಸಾಮಾಜಿಕ ನಿಲುವೇನು, ಸ್ಥಿತಿಗತಿಗಳೇನು ಮತ್ತು ಅವರು ಶೈಕ್ಷಣಿಕವಾಗಿ ಯಾವ ಮಟ್ಟದಲ್ಲಿದ್ದಾರೆ? ನೋಡಿ, ಇವತ್ತು ಹಿಂದುಳಿದ ವರ್ಗದಲ್ಲಿ ಹಲವಾರು ಜಾತಿಗಳಿವೆ. ನಾನು ನಿಮಗೆ ಸುಮ್ಮನೆ ಹೇಳುವುದಾದರೆ, ಈ ವಿಧಾನಸೌಧದಲ್ಲಿ Peon ಕೆಲಸಕ್ಕೂ ಆ ಜಾತಿಯಿಂದ ಬಂದೇ ಇಲ್ಲ. ಇನ್ನು ಅಧಿಕಾರಿ ಆಗುವುದು ಬೇಡ, Peon ಕೆಲಸಕ್ಕೂ ಆ ಜಾತಿಯಿಂದ ಇವತ್ತಿನವರೆಗೂ ವಿಧಾನಸೌಧದಲ್ಲಾಗಲೀ ಅಥವಾ ಸರ್ಕಾರದಲ್ಲಾಗಲೀ ಇಲ್ಲವೇ ಇಲ್ಲ. ಅಂತಹ ಜಾತಿಗಳಿವೆ. ಎಷ್ಟೋ ಜಾತಿಗಳಲ್ಲಿ ಕೆ.ಎ.ಎಸ್., ಅಧಿಕಾರಿಗಳಿಲ್ಲ. ಎಷ್ಟೋ ಜಾತಿಗಳಲ್ಲಿ ಐ.ಎ.ಎಸ್., ಅಧಿಕಾರಿಗಳೂ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ಈಗ ಏನು ಮಾಡಬೇಕೆಂದು ಮಾನ್ಯ ಸಚಿವರಿಗೆ ಸಲಹೆ ಕೊಡಿ. ಅದಕ್ಕೆ ಚರ್ಚೆ ಮಾಡುವುದು ಬೇಡ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅದನ್ನೇ ನಾನು ಹೇಳುತ್ತಿರುವುದು.

**ಉಪ ಸಭಾಪತಿಯವರು:–** ಪ್ರಶ್ನೋತ್ತರವನ್ನು ನಾವು 12.30 ಗಂಟೆಗೆ ಮುಗಿಸಬೇಕಾಗಿತ್ತು. ಈಗ ಒಂದೂವರೆ ಗಂಟೆ ಆಗಿದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಇದು ಅನುಚ್ಛೇದ 340ರ ಪ್ರಕಾರ ಅವರ ಸ್ಥಿತಿಗತಿಗಳನ್ನು ನೋಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ತಮ್ಮ ಕಾಲದಲ್ಲಿ ದಯವಿಟ್ಟು ಮಾಡಿ. ಈಗ ಏನು ಸರ್ವೇ ಮಾಡಿದ್ದಾರೆ, ಅದನ್ನು ಆದಷ್ಟು ಬೇಗ ಕಳುಹಿಸಿ ನಿಮ್ಮ ಯೋಜನೆಗಳನ್ನು, ತಮ್ಮ ಕಾರ್ಯಕ್ರಮಗಳನ್ನು ಸಮಗ್ರವಾಗಿ ಒಂದು ರೀತಿಯಲ್ಲಿ ನಮ್ಮ ಇಡೀ ರಾಜ್ಯಕ್ಕೆ ತಲುಪಿಸುವುದಕ್ಕೆ ತಮಗೆ ಆ ಒಂದು ಸರ್ವೇಕ್ಷಣೆ ಬಹಳ ಸಹಾಯ ಮಾಡುತ್ತದೆಂದು ನನ್ನ ಕಳಕಳಿಯ ಮನವಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ಗೊಂದಲಗಳೂ ಇಲ್ಲ. ಮಾನ್ಯ ಪಿ.ಆರ್. ರಮೇಶ್‌ರವರು ಹೇಳಿದ್ದು, ನೂರಕ್ಕೆ ನೂರರಷ್ಟು ಸತ್ಯ ಇದೆ. ಈ ವಿಚಾರದಲ್ಲಿ ಹಿಂದುಳಿದ ವರ್ಗಕ್ಕೆ ನ್ಯಾಯ ಕೊಡಬೇಕು ಎನ್ನುವ ದೃಷ್ಟಿಯಿಂದ. . . ಮತ್ತು ಈಗಾಗಲೇ 2015ರಲ್ಲಿ ಶ್ರೀ ಹೆಚ್.ಕಾಂತರಾಜ ರವರ ನೇತೃತ್ವದ ಆಯೋಗವು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿರುವಂಥ ವರದಿಯನ್ನು ಬಿಡುಗಡೆ ಮಾಡಬೇಕು ಎನ್ನುವುದು. ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿ.ಕೆ.ಹರಿಪ್ರಸಾದ್‌ರವರೇ, ತಮಗೂ ಕೂಡ ಇದರ ಬಗ್ಗೆ ಗೊತ್ತಿದೆ. ನಾನೇ ಒಮ್ಮೆ ಅದಕ್ಕೆ ಸರ್ಕಾರ 162 ಕೋಟಿ ರೂಪಾಯಿಗಳು ಖರ್ಚು ಮಾಡಿದೆ, ಏಕೆ ನೀವು ಬಿಡುಗಡೆ ಮಾಡುವುದಿಲ್ಲವೆಂದು ಸದನದ ಬಾವಿಯಲ್ಲಿ ನಿಂತಿದ್ದೆನು. ನನ್ನ ನೆನಪಿನ ಪ್ರಕಾರ ಆಗ ನನ್ನ ಹಿಂದೆ ಮಾನ್ಯ ಕೆ.ಸಿ.ಕೊಂಡಯ್ಯನವರೂ ಕೂಡ ಬಂದಿದ್ದರು. ಅದರಲ್ಲಿ ಯಾವುದೇ ವಾದಗಳು ಇರಲಿಲ್ಲ. ಈ ಮಧ್ಯೆ ಶ್ರೀ ಹೆಚ್.ಕಾಂತರಾಜರವರ ಅವಧಿ ಮುಗಿದ ನಂತರ, ಇತ್ತೀಚೆಗೆ ಶ್ರೀ ಜಯಪ್ರಕಾಶ್ ಹೆಗಡೆ ಎಂಬುವರನ್ನು ಹಿಂದುಳಿದ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ ನಂತರ, ಇದನ್ನು ಪುನಃ ತರಬೇಕೆಂದು ಬಿಡುಗಡೆ ಮಾಡಬೇಕು ಎನ್ನುವಂಥ ಚರ್ಚೆ ನಡೆಯುತ್ತಿದೆ. ಮತ್ತೆ ಮೊನ್ನೆ ದಿವಸ ನಾನು ತಮ್ಮ ಹತ್ತಿರ ಮಾತನಾಡುವಾಗ, ಮೊನ್ನೆಯೂ ಉತ್ತರ ಕೊಡುವಾಗಲೂ ಕೂಡ, ನಾನು ಆಯೋಗದ ಅಧ್ಯಕ್ಷರ ಜೊತೆ ಚರ್ಚೆ ಮಾಡಿ ಸರ್ಕಾರದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಮಾತನಾಡಿ, ಇದಕ್ಕೊಂದು ರೂಪವನ್ನು ನಾವು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೆನು. ಆದಷ್ಟು ಬೇಗ ಇದರ ಬಗ್ಗೆ ಕ್ರಮ ವಹಿಸಲಾಗುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ ಒಂದು ನಿಮಿಷ.

**ಶ್ರೀ ಗೋವಿಂದ ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಯೀಲ್ಡ್ ಆಗಿ. ಪಿ.ಆರ್.ರಮೇಶ್‌ರವರು ಬಹಳ ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಚಿವಾಲಯದಲ್ಲಿ, ಈ ಸರ್ಕಾರದಲ್ಲಿ ಮತ್ತು ವಿಧಾನಸಭೆಯಲ್ಲಿ ಒಬ್ಬರೂ Peon ಕೂಡ ಬರದೇ ಇರತಕ್ಕಂಥ ಜಾತಿಗಳಿವೆಯೆಂದು ಹೇಳಿದರು, ಅದು ಖಂಡಿತವಾಗಿಯೂ ಸತ್ಯ. ಆ ರೀತಿ ಒಂದು ಅಥವಾ ಎರಡು ಜಾತಿಗಳಲ್ಲ. ನೂರಾರು ಜಾತಿಗಳಿವೆ. ನಮ್ಮ ರಾಜಕೀಯ ಪಕ್ಷಗಳು ಈ ಪ್ರಶ್ನೆಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮಗೆ ಓಟ್ ಬ್ಯಾಂಕ್ ರಾಜಕಾರಣವೇ ಮುಖ್ಯವಾದಾಗ, ಸಾಮಾಜಿಕ ನ್ಯಾಯ ಎಲ್ಲಿಂದ ಸಿಗುವುದಕ್ಕೆ ಸಾಧ್ಯ ಇದೆ? ನಾವೆಲ್ಲರೂ ಇದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಾದಂಥ ಪರಿಸ್ಥಿತಿ ಅದಕ್ಕಾಗಿ, . . .

**ಉಪ ಸಭಾಪತಿಯವರು:–** ಮಾನ್ಯ ಗೋವಿಂದ ಕಾರಜೋಳರವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುತ್ತಾರೆ.

**ಶ್ರೀ ಗೋವಿಂದ ಕಾರಜೋಳ:–** ಮಾನ್ಯ ಸಭಾಪತಿಯವರೇ, ಆಯಿತು ಮಾತನಾಡಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಬಹಳ ವಿಸ್ತಾರವಾಗಿ ಉತ್ತರವನ್ನು ಕೊಟ್ಟರು. ನಾನು ಅವರಲ್ಲಿ ಇಷ್ಟೇ ಪ್ರಶ್ನೆ ಕೇಳುವುದು. ಸಂವಿಧಾನದ ಅನುಚ್ಛೇದ 340 ಗೆ ಅನುಗುಣವಾಗಿ ಸರ್ಕಾರ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡುವುದಕ್ಕೆ ಅವಕಾಶಗಳಿವೆ. 2017ನೇ ಇಸವಿಯಲ್ಲಿ National Commission for Backward Classes ನೇಮಕ ಮಾಡಲಾಯಿತು. ಅದಕ್ಕೆ ಸಾಂವಿಧಾನಿಕ ದರ್ಜೆಯನ್ನು ಕೊಡುವುದಕ್ಕೋಸ್ಕರ 1993 ರಲ್ಲಿ Indira Sawhney Vs. Union of India ಪ್ರಕರಣದಲ್ಲಿ ನೀಡಲಾದ ತೀರ್ಪಿನ ಹಿನ್ನಲೆಯಲ್ಲಿ ಅದನ್ನು repeal ಮಾಡಿ ಅದಕ್ಕೆ ತಿದ್ದುಪಡಿಯನ್ನು ಮಾಡಲಾಯಿತು. ಆ ತಿದ್ದುಪಡಿಯನ್ನು ಮಾಡಿದ ನಂತರ, ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳಬೇಡಿ ಎಂದು ನಾವೆಲ್ಲರೂ ಕೂಡ ಕೇಳಿದೆವು. ಇಲ್ಲವೆಂದು ಹೇಳಿದರು. ಆದರೆ, ಈಗ 102ನೇ ತಿದ್ದಪಡಿಯಾದ ನಂತರ ಓ.ಬಿ.ಸಿ., ಪಟ್ಟಿಯಲ್ಲಿ ಜಾತಿಗಳನ್ನು ಸೇರಿಸುವುದಕ್ಕೆ ರಾಜ್ಯಕ್ಕೆ ಅಧಿಕಾರ ಇದೆಯೇ, ಇಲ್ಲವೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದರೆ ಸಂತೋಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗಿರುವಂಥ ಒಟ್ಟು ವ್ಯವಸ್ಥೆಗಳಲ್ಲಿ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಕೇಳಿದ ಪ್ರಶ್ನೆಗೆ, ಇಂದಿರಾ ಸಹಾನಿ ಕೇಸ್‌ನಲ್ಲೂ ಕೂಡ ಈ ಚರ್ಚೆ ಒಂದು ಬಾರಿ ಬಂದಿತ್ತು. ಈಗ ಇರುವ ವ್ಯವಸ್ಥೆ ನಡುವೆ ಸುಪ್ರೀಂಕೋರ್ಟ್ ಕೂಡ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ಮಾತನ್ನು ಹೇಳಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿಯನ್ನು ಕೊಡಬೇಕಾದರೆ, ಈಗ ನೀವು ಕೊಟ್ಟಿರುವಂಥ ಮೀಸಲಾತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಇದು ಶೇ.32 ಸೇರಿದರೆ, ಒಟ್ಟು ಶೇ.50 ಮೀರಬಾರದೆಂದು ಹೇಳಿದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಕೇಂದ್ರ ಸರ್ಕಾರ ಮಾಡಿರುವಂಥ ಮೀಸಲಾತಿಯ ಆದೇಶ, ಕಾಯ್ದೆ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಕೇಳಿದೆ. ಕಾನೂನು ತಜ್ಞರು, ಮತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಜೊತೆ ನಾವು ಮಾತನಾಡಿ ಒಂದೆರಡ್ಮೂರು ದಿವಸದಲ್ಲಿ ಅದಕ್ಕೆ ಉತ್ತರವನ್ನು ಕೊಡಬೇಕೆಂದು ನಮ್ಮ ಮನಸ್ಸಿನಲ್ಲೂ ಇದೆ. ಯಾವುದೇ ಕಾರಣಕ್ಕೂ ಕೂಡ ರಾಜ್ಯದಲ್ಲಿರುವಂಥ ಹಿಂದುಳಿದ ವರ್ಗಗಳ ಒಟ್ಟು ವ್ಯವಸ್ಥೆಗೆ ಧಕ್ಕೆಯಾಗದಂತೆ, ಕ್ರಮವನ್ನು ವಹಿಸಲಾಗುವುದು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(454)17.3.2021/1.20/ಎಂ.ಎಂ–ಎಂ.ಡಿ**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, ಸಾಕು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಪ್ರಶ್ನೋತ್ತರ ವೇಳೆಯೇ ಒಂದೂವರೆ ಗಂಟೆಯಾಯಿತು. ಇನ್ನೂ ಮೂರು ಪ್ರಶ್ನೆಗಳಿವೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಒಂದು ಪ್ರಶ್ನೆಯನ್ನು ಅವರಿಗೆ ಕೇಳಿಬಿಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ನಾನು ಹೇಳಿದ ತಕ್ಷಣ ಮತ್ತೆ ಆಕ್ರೋಶಗೊಳ್ಳುತ್ತೀರಿ. ಮಾನ್ಯ ರಮೇಶ್‌ರವರೇ ಸಾಕು.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಚಿವರೇ, ಕೊನೆಯದಾಗಿ ಸಂವಿಧಾನದ ಅನುಚ್ಛೇದ 338(ಬಿ)(9) ಅದರಲ್ಲಿ *"The Union and every State Government shall consult the Commission on all major policy matters affecting Scheduled Castes".* ಇವತ್ತು ನೀವು ಮಾಡುತ್ತಿರುವುದು ನಮ್ಮ ರಾಜ್ಯದಲ್ಲಿ ಕೇಳಿಬರುತ್ತಿರುವಂತಹ ಕೂಗುಗಳು, it is affecting the most backward classes. ಈ ತೊಂದರೆಯಾಗುತ್ತಿರುವುದನ್ನು ನೀವು National Commission ಗಮನಕ್ಕೆ ತರುವುದಕ್ಕೆ ಸಂವಿಧಾನವು ಅವಕಾಶ ನೀಡಿದೆ. ದಯವಿಟ್ಟು ತಾವು ಇದನ್ನು ಪರಾಮರ್ಶಿಸಬೇಕು. ತಾವು ಮೂರು ಜನ ಅಧಿಕಾರಿಗಳನ್ನೊಳಗೊಂಡ ಒಂದು ಕಮಿಟಿ ರಚನೆ ಮಾಡಿದ್ದೀರಿ. ಇದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು? ಇದನ್ನು ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆಯೇ? How it is done by this Government. What powers empowers you to do that? ಸಂವಿಧಾನದ ಅನುಚ್ಛೇದಗಳನ್ನು ಓದಿಕೊಳ್ಳಿ. ಅದರಲ್ಲಿ ಬಹಳ ಸ್ಪಷ್ಟವಾಗಿದೆ. Backward classes ಗೆ ಮಾಡಬೇಕಾದರೆ ಅದನ್ನು ಆಯೋಗವೇ ಮಾಡಬೇಕು. You have already constituted a Commission.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರಿಗೆ ಮತ್ತು ಮಾನ್ಯ ಹರಿಪ್ರಸಾದ್‌ರವರಿಗೆ ಗೊತ್ತು. ತಾವೆಲ್ಲಾ ತಿಳಿದವರಾಗಿದ್ದೀರಿ. ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ ಪ್ರಜಾಪ್ರಭುತ್ವದಲ್ಲಿ ಒಂದೊಂದು ವರ್ಗದವರು ಒಂದೊಂದು ಅಭಿಪ್ರಾಯಗಳನ್ನು ಹೇಳಿರುತ್ತಾರೆ. ಎಲ್ಲರ ಅಭಿಪ್ರಾಯಗಳನ್ನು ಒಂದೇ ಸಲ ಸಂವಿಧಾನದ ಹೆಸರಿನಲ್ಲಿಯೇ ಉತ್ತರ ಕೊಟ್ಟು ಮುಗಿಸುವುದು ಕಷ್ಟ. ಅಂತಹ ಸಂದರ್ಭದಲ್ಲಿ ಎಲ್ಲವನ್ನೂ ವಿಚಾರ ಮಾಡಿ ಎಂದು ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿದೆ. ಸಮಿತಿ ಏನು ಅಭಿಪ್ರಾಯ ಪಡುತ್ತದೆ ಎಂದು ಕೇಳಿದರೆ ತಪ್ಪೇನು? ಅದಕ್ಕೋಸ್ಕರ ಇಲ್ಲಿ ಯಾವ ಗೊಂದಲಕ್ಕೂ ಅವಕಾಶವಿಲ್ಲ. ಇಡೀ ರಾಜ್ಯದಲ್ಲಿ ಎಲ್ಲರ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡೇ ಹೆಜ್ಜೆ ಇಡುವಂತಹ ನಿರ್ಧಾರವನ್ನು ಸರ್ಕಾರ ಮಾಡಿದೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, You cannot overrule the Commission powers.

**ಉಪಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ದಯವಿಟ್ಟು ಕುಳಿತುಕೊಳ್ಳಿ, please....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 908**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಕೊನೆಯ ಪ್ರಶ್ನೆಗೆ ದಾಖಲೆಗಳನ್ನು ಒದಗಿಸಿದ್ದಾರೆ ಅದಕ್ಕೆ ಅವರಿಗೆ ಅಭಿನಂದನೆಗಳು. ಹಂಚಿಕೆ/ವಿಲೇವಾರಿ ಮಾಡಲಾಗದೇ ಉಳಿದಿರುವ ನಿವೇಶನಗಳನ್ನು ಹಂತ ಹಂತವಾಗಿ ಹಂಚಿಕೆ/ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು ಎಂದು ಹೇಳಿದ್ದಾರೆ, ಸಂತೋಷ. ಹಾಗೆಯೇ ಹಾಸನ ಜಿಲ್ಲೆಯ ಹೊಸ ಬಸ್ ನಿಲ್ದಾಣದ ಪಕ್ಕ ಮಾಡಿರುವ ಬಡಾವಣೆಯಲ್ಲಿ **CA (Civic Amenities)** ಜಾಗದಲ್ಲಿ ಪಾರ್ಕ್ ಇದೆ. ಅವೆಲ್ಲವನ್ನು ಪಾರ್ಕ್ ಮಾಡಿ **fencing** ಮಾಡಬೇಕು. ಏಕೆಂದರೆ, ಅಲ್ಲಿ ಚಿರತೆ ಮತ್ತು ಆನೆಗಳ ಹಾವಳಿ ಜಾಸ್ತಿಯಾಗುತ್ತಿದೆ. ಮೊನ್ನೆ ದಿವಸ ಆನೆಗಳು ಆಲೂರುವರೆಗೂ ಬಂದಿದ್ದವು. ಇನ್ನು 7-8 ಕಿ.ಮೀ ಬಂದರೆ ನಿಮ್ಮ ವಸತಿ ಬಡಾವಣೆಗೂ ಬರುತ್ತವೆ. ಅದನ್ನು ಸರಿಪಡಿಸಬೇಕಾಗಿದೆ, ಇದು ಮೊದಲನೆಯದು. ಎರಡನೆಯದಾಗಿ ಅರಕಲಗೂಡು ತಾಲ್ಲೂಕಿನ ಕೊಣನೂರು ಗ್ರಾಮದಲ್ಲಿ 2005–06ರಲ್ಲಿ ಸುಮಾರು 1740 ಜನರಿಗೆ ರೂ.2000/– ಗಳಂತೆ ಶುಲ್ಕವನ್ನು ಸಂಗ್ರಹ ಮಾಡಿದ್ದರು. ಈ ರೀತಿ ಸುಮಾರು ಬಡಾವಣೆಗಳಲ್ಲಿ ಆಗಿದೆ. ಅದನ್ನೇನಾದರೂ ವಾಪಸ್ಸ್ ಕೊಡಬೇಕು ಅಥವಾ ಹೊಸ ಬಡಾವಣೆಯನ್ನು ಮಾಡಬೇಕೆನ್ನುವುದು ನನ್ನ ಉಪ ಪ್ರಶ್ನೆಯಾಗಿದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಿತ್ರರಾದ ಗೋಪಾಲಸ್ವಾಮಿಯವರು ಅವರ ಜಿಲ್ಲೆಯ ಅಭಿವೃದ್ಧಿಯಲ್ಲಿ ಗೃಹಮಂಡಳಿಯ ಪಾಲುದಾರಿಕೆ ಎಷ್ಟಿದೆ ಎಂಬ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಹಾಸನ ಜಿಲ್ಲೆಯಲ್ಲಿ ಸುಮಾರು 19 ವಸತಿ ಯೋಜನೆಗಳನ್ನು ಕೈಗೆತ್ತಿಕೊಂಡು ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಸಾಕಷ್ಟು ನಿವೇಶನಗಳನ್ನು ಕೊಟ್ಟಿದ್ದೇವೆ. ವಿಶೇಷವಾಗಿ ಬಸ್ ನಿಲ್ದಾಣದ ಪಕ್ಕದಲ್ಲಿರುವಂತಹ ನಿವೇಶನಗಳನ್ನು ಸ್ವಚ್ಛ ಮಾಡುವುದಕ್ಕೆ ಮೊನ್ನೆ ತಾನೇ ಅಧಿಕಾರಿಗಳನ್ನು ಕರೆದು ಹೇಳಿದ್ದೇನೆ. ಕೇವಲ ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಗೃಹ ಮಂಡಳಿಯಿಂದ ಎಲ್ಲೆಲ್ಲಿ ಈ ರೀತಿಯ ಜಾಗಗಳಿವೆ, ಅದಕ್ಕೆ ಒಂದು **Land Bank** ಅನ್ನು ಮಾಡಿ ಗೃಹ ಮಂಡಳಿಯಲ್ಲಿ ಎಷ್ಟು ಉಳಿದುಕೊಂಡಿದೆ ಅದಕ್ಕೂ ಕೂಡ ಚಾಲನೆ ಕೊಟ್ಟಿದ್ದೇವೆ. ಅದನ್ನು ತಕ್ಷಣವೇ ಮಾಡಿಸಿ, **fencing** ಮಾಡಿ, ಅದನ್ನು ಉಳಿಸಿ ಲಭ್ಯವಾದಂತಹ ಸಂದರ್ಭದಲ್ಲಿ ಆ ಜಿಲ್ಲೆಯ, ತಾಲ್ಲೂಕಿನಲ್ಲಿ ಏನು ಅವಶ್ಯಕತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇದೆ ಅದನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ ಸುಮಾರು 233ಕ್ಕೂ ಮೇಲ್ಪಟ್ಟು ನಿವೇಶನಗಳಿದ್ದವು. ನನಗೆ ತುಂಬಾ ಮಾನಸಿಕವಾಗಿ ನೋವಾಗಿದ್ದು ಏನೆಂದರೆ, ನಾವು ಯಾರಿಗೆ ಸೈಟುಗಳಿಗೆ ಜಮೀನನ್ನು ಕೊಟ್ಟಿದ್ದೆವು, ಸುಮಾರು 25 ಸೈಟುಗಳನ್ನು ಕೊಟ್ಟರೆ ಪಡೆದುಕೊಂಡಂತಹ ಜನರು ಸುಮಾರು 15 ವರ್ಷಗಳಿಂದ ಕೋರ್ಟ್‌ನಲ್ಲಿದ್ದ ಪ್ರಕರಣಗಳಿಂದಾಗಿ ಪ್ರತಿಯೊಂದಕ್ಕೂ ಕೂಡ ಒದ್ದಾಡುತ್ತಿದ್ದರು. ನಾವು ಕೊಟ್ಟಿರುವ ಸೈಟುಗಳನ್ನು ಮಾರಿದರೂ ಕೂಡ ಅವರು ವಕೀಲರಿಗೆ ಶುಲ್ಕ ಕೊಡುವುದಕ್ಕೆ ಆಗುತ್ತಿರಲಿಲ್ಲ. ಅದರ ಬಗ್ಗೆ ಮೊನ್ನೆ ತಾನೇ ಎಲ್ಲರನ್ನೂ ಕರೆದು ಮಾತನಾಡಿ 25 ಸೈಟುಗಳನ್ನು ವಿಲೇವಾರಿ ಮಾಡಿದ್ದೇವೆ. ರಾಜ್ಯದ ಈ ಭಾಗದಲ್ಲಿ ಎಷ್ಟಿದ್ದಾರೋ ಅಷ್ಟೂ ಜನರಿಗೂ ಇದನ್ನು ಮಾಡುತ್ತಿದ್ದೇವೆ. ಅರಕಲಗೂಡು ಮತ್ತು ಕೊಣನೂರು ಗ್ರಾಮದಲ್ಲಿ ಹಂಚಿಕೆಯಾಗದಿರುವ ನಿವೇಶನಗಳು ಯಾವುದಿದೆ ಅದನ್ನು ತೆಗೆದುಕೊಂಡಿದ್ದೇವೆ. ಹಿಂದೆ 'ಹುಡ್ಕೋ' ಯೋಜನೆಗಾಗಿ ತೆಗೆದುಕೊಂಡಿದ್ದರು. ಅದನ್ನು ಒಂದು ಹಂತಕ್ಕೆ ತರಲಾಗಿದೆ. ಯಾರ್ಯಾರಿಗೆ ಆಗಿಲ್ಲವೋ ಆ ಅರ್ಜಿದಾರರಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಆ ರೀತಿ ಯಾರಿಗಾದರೂ ಕೊಡಲಿಲ್ಲ ಎಂದರೆ, ತಾವು ಮಾಹಿತಿ ಕೊಟ್ಟರೆ, ನನ್ನ ಕಛೇರಿಗೆ ತಿಳಿಸಿದರೆ ತಕ್ಷಣವೇ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸ ಮಾಡುತ್ತೇವೆ. ನಾವು ಹಾಸನ ಜಿಲ್ಲೆಯಲ್ಲಿ ಸುಮಾರು 08 ವಸತಿ ಯೋಜನೆಗಳನ್ನು ಮಾಡಿದ್ದೇವೆ. ಅದರಲ್ಲಿ ಹಾಸನ ತಾಲ್ಲೂಕು, ಆಲೂರು ತಾಲ್ಲೂಕು, ಸಕಲೇಶಪುರ ತಾಲ್ಲೂಕು, ಅರಸೀಕೆರೆ ತಾಲ್ಲೂಕು, ಚನ್ನರಾಯಪಟ್ಟಣ ತಾಲ್ಲೂಕು, ಹೊಳೆನರಸೀಪುರ, ಅರಕಲಗೂಡು ಮತ್ತು ಬೇಲೂರು ತಾಲ್ಲೂಕು ಎಲ್ಲಾ ಕಡೆಗಳಲ್ಲೂ ಕೂಡ ಈಗಾಗಲೇ ಮಾಡಿದ್ದೇವೆ. ಇದರಿಂದ ಒಂದು **competition** ಇತ್ತು. ಖಾಸಗಿ ವ್ಯಕ್ತಿಗಳು ಯಾವುದೇ ನಕ್ಷೆ ಮಂಜೂರಾತಿ ಇಲ್ಲದೇ ಎಲ್ಲೆಂದರಲ್ಲಿ ಮಾಡಿ **CA site** ನ್ನು ಬಿಡದೇ ಇರುವುದಕ್ಕೋಸ್ಕರವಾಗಿ ಇತ್ತೀಚಿನ ದಿನಗಳಲ್ಲಿ ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ಮಾನ್ಯ ಗೋಪಾಲಸ್ವಾಮಿಯವರಿಗೆ ನಾನು ವಿನಂತಿ ಮಾಡುವುದು ಇಷ್ಟೇ, ಇದನ್ನು ಸರಿಪಡಿಸಲು ನಿಮ್ಮ ಮಾಹಿತಿ ಏನಾದರೂ ಇದ್ದರೆ ದಯಮಾಡಿ ಕೊಟ್ಟರೆ ಅದನ್ನೂ ಕೂಡ ಸೇರಿಸಿ ಸಾರ್ವಜನಿಕವಾಗಿ ಉಪಯುಕ್ತವಾಗಿರುವ ಕೆಲಸಗಳಿಗೆ ಅದನ್ನು ಮೀಸಲಾಗಿಡುವ ಕೆಲಸವನ್ನು ಕರ್ನಾಟಕ ಸರ್ಕಾರ ಮಾಡುತ್ತದೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಅವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು, ಅವರು 15 ದಿನಗಳಲ್ಲಿ ಉತ್ತರ ಕೊಡಿಸುತ್ತೇವೆ ಎಂದು ತಮ್ಮ ಸಚಿವಾಲಯದಿಂದ ಪತ್ರ ಹೋಗಿತ್ತು. ಆದರೆ ಎರಡು ತಿಂಗಳಾಯಿತು, Pradhan

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Manthri Awas Yojana ವಿಚಾರ ಏನಾಯಿತು ಎಂದು ಗೊತ್ತಾಗುತ್ತಿಲ್ಲ. ಕಳೆದ ತಿಂಗಳು 25ನೇ ತಾರೀಖಿನಂದು ಕೂಡ CEO (Chief Executive Officer) ರವರಿಗೆ ಪತ್ರ ಬರೆದಿದ್ದೇನೆ. ಅದು ಇನ್ನೂ ಪರಿಶೀಲನೆಯಾಗಿಲ್ಲ. ಮಾನ್ಯ ಸಚಿವರಿಗೇನಾದರೂ ರಾಜಕೀಯ ಒತ್ತಡವಿದ್ದರೆ ನಮಗೆ ತಿಳಿಸಲಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಯಾವ ಒತ್ತಡವೂ ಇಲ್ಲ. ಬಿ.ಜೆ.ಪಿ, ಜನತಾದಳ, ಕಾಂಗ್ರೆಸ್ ಎಲ್ಲವನ್ನೂ ನಾನು ನೋಡಿರುವುದರಿಂದ ಆ ರೀತಿ ಒತ್ತಡಕ್ಕೆ ಒಳಗಾಗುವವನೂ ಅಲ್ಲ, ಅದರ ಅವಶ್ಯಕತೆಯೂ ಇಲ್ಲ; ನಾವು ಒಂದು ಹಂತಕ್ಕೆ ತಲುಪಿದ್ದೇವೆ. **(ಗೊಂದಲ)** ಜನತಾದಳ ಎಂದು ಹೇಳಿದೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ಮಾನ್ಯ ಗೋಪಾಲಸ್ವಾಮಿಯವರೇ, ಮಾನ್ಯ ಸಚಿವರು ಹೇಳಿದರಲ್ಲಾ; ಇನ್ನೇನು?

**ಶ್ರೀ ವಿ. ಸೋಮಣ್ಣ:–** ಮಾನ್ಯ ಗೋಪಾಲಸ್ವಾಮಿಯವರೇ, ಒಂದು ನಿಮಿಷ. ಏನಾಗಿದೆ ಎಂದರೆ, ಹಾಸನ ಜಿಲ್ಲೆಗೆ ತನ್ನದೇ ಆದಂತಹ ಒಂದು ನೈತಿಕತೆ ಇದೆ ಮತ್ತು ಇತಿಹಾಸವೂ ಇದೆ. ಆ ಜಿಲ್ಲೆಯಲ್ಲಿ ನಾನು ಎರಡು ವರ್ಷ ಉಸ್ತುವಾರಿ ಮಂತ್ರಿಯಾಗಿಯೂ ಕೆಲಸ ಮಾಡಿದ್ದೇನೆ. ಸ್ವಾಭಿಮಾನಕ್ಕೆ ಮತ್ತೊಂದು ಹೆಸರೇ ಶ್ರೀ ಗೋಪಾಲಸ್ವಾಮಿ. ಸಣ್ಣ ಪುಟ್ಟ ವ್ಯತ್ಯಾಸಗಳು ಇರುತ್ತವೆ, ಅದನ್ನು ಸರಿ ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ನೀವು ಕೊಟ್ಟಿರುವುದರಿಂದ ಯಾರಿಗೆ ಅನುಕೂಲವೋ ನನಗೆ ಗೊತ್ತಿಲ್ಲ. ಯಾರು ಅರ್ಹ ಫಲಾನುಭವಿಗಳಿದ್ದಾರೆ, ಅವಶ್ಯಕತೆ ಇರುವಂತಹವರು ಇದ್ದಾರೆ, ಅಂತಹವರನ್ನು ಗುರುತಿಸಿ, ಕೇವಲ ಹಾಸನ ಜಿಲ್ಲೆಯಲ್ಲ, ರಾಜ್ಯದ 32 ಜಿಲ್ಲೆಗಳಲ್ಲೂ ಕೂಡ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದರಿಂದ ರಾತ್ರಿ ಒಂದು ಗಂಟೆ, ಎರಡು ಗಂಟೆಗೆ ಫೋನ್‌ನಲ್ಲಿ ನನಗೆ ಎಂತೆಂತಹ ಪದ ಪ್ರಯೋಗಗಳು ಬರುತ್ತವೆ ಎಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ; ಆದರೂ ನನಗೆ ಬೇಸರವಿಲ್ಲ. ಈಗಾಗಲೇ ಇದನ್ನು ಅಧಿಕಾರಿಗಳಿಗೆ ಹೇಳಿದ್ದೇನೆ. 15 ದಿವಸಗಳಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇನ್ನು 3–4 ದಿವಸಗಳಲ್ಲಿ ಮತ್ತೆ ಇನ್ನೊಂದು ಸಭೆ ಮಾಡುತ್ತೇನೆ. ತಮಗೂ ಸ್ನೇಹಿತನಾಗಿ, ವೈಯಕ್ತಿಕವಾಗಿ ಒಂದು ಮಾತನ್ನು ಹೇಳುತ್ತೇನೆ. ರಾಜಕಾರಣ ನಿಂತ ನೀರಲ್ಲ, ಹರಿಯುವ ನೀರು. ಕೆಲವಾರು ಸಂದರ್ಭಗಳಲ್ಲಿ ಉಂಟಾಗುವ ಯಾವುದೋ ಸಣ್ಣ ಪುಟ್ಟ ತಪ್ಪುಗಳನ್ನು ದೊಡ್ಡದು ಮಾಡುವುದಕ್ಕಿಂತ ಹೆಚ್ಚಾಗಿ ಅದನ್ನು ಸರಿ ಮಾಡುವಂತಹದ್ದು ನಮ್ಮ ಆದ್ಯ ಕರ್ತವ್ಯ. ಆ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೆಲಸಕ್ಕೆ ತಾವು ಕೈ ಜೋಡಿಸುತ್ತೀರೆಂದು ನಾನು ಇಚ್ಛೆಪಡುತ್ತೇನೆ. ಯಾರಿಗೆ ಅನಾನುಕೂಲವಾಗಿದೆ, ಅರ್ಹತೆ ಇಲ್ಲದವರಿಗೆ ಕೊಟ್ಟಿರುವಂತಹದ್ದು ಏನಾದರೂ ಇದ್ದರೆ ನಮಗೆ ಅದರ ಮಾಹಿತಿ ಕೊಡಿ. ಅದರ ಮಾಹಿತಿಯನ್ನು ನಾನು ತರಿಸುತ್ತಿದ್ದೇನೆ. ಕೇವಲ ಹಾಸನ ಜಿಲ್ಲೆ ಮಾತ್ರವಲ್ಲ, ರಾಜ್ಯದ ಇನ್ನಿತರ ಜಿಲ್ಲೆಗಳಿಂದಲೂ ಮಾಹಿತಿಯನ್ನು ತರಿಸುತ್ತಿದ್ದೇವೆ. ಇದರಿಂದ ಸಾಮಾನ್ಯರಿಗೆ, ಬಡವರಿಗೆ ಸೂರನ್ನು ನೀಡುವುದಕ್ಕೆ ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಚಿವರೇ, 15 ದಿನಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 882**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾನು ಚಾಲುಕ್ಯ ವೃತ್ತದಿಂದ ಹೆಬ್ಬಾಳ ಫ್ಲೈ ಓವರ್‌ಗೆ ಹೋಗುವಂತಹ ಒಂದು ಫ್ಲೈ ಓವರ್ ನಿರ್ಮಿಸಬೇಕೆಂದು ಪ್ರಶ್ನೆ ಕೇಳಿದ್ದೇನೆ. ಇದು ಬಿ.ಬಿ.ಎಂ.ಪಿ., ವ್ಯಾಪ್ತಿಗೆ ಸೇರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ನಾವು ಪ್ರಶ್ನೆಯನ್ನು ಬಿ.ಬಿ.ಎಂ.ಪಿ. ಯನ್ನು ಕೇಳಬೇಕೋ ಅಥವಾ ಇವರನ್ನು ಕೇಳಬೇಕೋ ಎನ್ನುವುದು ಗೊತ್ತಿಲ್ಲ, ಇದು ಮೊದಲನೆಯದು. ಎರಡನೆಯದಾಗಿ ಉದ್ದೇಶಿತ ಯೋಜನೆಯು ನಿಧಾನವಾಗಲು ಕಾರಣ ಕೇಳಿದ್ದೇನೆ. ಇದು ಸರ್ವೋಚ್ಚ ನ್ಯಾಯಾಲಯದಲ್ಲಿದೆ ಎಂದು ಹೇಳಿದ್ದಾರೆ. ಪ್ರಕರಣಗಳು ಹಲವಾರು ವರ್ಷಗಳು ಕೋರ್ಟ್‌ನಲ್ಲಿಯೇ ಇದ್ದರೆ ನಗರದ ಪರಿಸ್ಥಿತಿ ಸುಧಾರಿಸುವುದು ಹೇಗೆ? ಇವತ್ತು ಬೆಂಗಳೂರಿನಲ್ಲಿ 90 ಲಕ್ಷ ವಾಹನಗಳಿವೆ. ಸುಮಾರು ಶೇ.25ರಷ್ಟು ಜನರು ಈ ರಸ್ತೆಯನ್ನು ಉಪಯೋಗ ಮಾಡುತ್ತಾರೆ. ಅದರ ಜೊತೆಗೆ ದಿನಾಲೂ ವಿಮಾನ ನಿಲ್ದಾಣಕ್ಕೆ ಹೋಗುವವರಿದ್ದಾರೆ. ನೀವು signal free corridor ಮಾಡುತ್ತೇವೆಂದು ಮೊದಲೇ ಹೇಳಿದ್ದಿರಿ. ಇದುವರೆಗೂ ಅದು ಅನುಷ್ಠಾನವೇ ಆಗಿಲ್ಲ. ಹೀಗಾದರೆ ಜನಗಳ ಬವಣೆ ತೀರುವುದು ಹೇಗೆಂದು ಮಂತ್ರಿಗಳು ಹೇಳಲಿ ನಾನು ಆಮೇಲೆ ಮಾತನಾಡುತ್ತೇನೆ.

**ಶ್ರೀ ಗೋವಿಂದ.ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇದು ಲೋಕೋಪಯೋಗಿ ಇಲಾಖೆಗೆ ಬರದಿರುವಂತಹ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆಂದು ನಾನು ಬಿ.ಬಿ.ಎಂ.ಪಿ. ಇಂದ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕಂದಾಯ ಇಲಾಖೆ ಈ ರೀತಿ ಒಟ್ಟು ನಾಲ್ಕು ಇಲಾಖೆಗಳಿಂದ ಮಾಹಿತಿ ಪಡೆದುಕೊಂಡು ಉತ್ತರ ಕೊಟ್ಟಿದ್ದೇನೆ.

**(ಮುಂದು)**

**(455)/ 17-03-2021/ 01-30/ ಕೆಹೆಚ್-ಎಂಡಿ**

**ಶ್ರೀ ಗೋವಿಂದ ಎಂ.ಕಾರಜೋಳ(ಮುಂದು):–**

ಅದಕ್ಕೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡುತ್ತೇನೆ. ಇದು ನ್ಯಾಯಾಲಯದಲ್ಲಿಯೂ ಕೂಡ ಇದೆ. ಇದು ಮಹಾರಾಜರಿಗೆ ಸೇರಿದ ಜಾಗವಾಗಿರುವುದರಿಂದ, ಇದನ್ನು ಭೂಸ್ವಾಧೀನ ಮಾಡಿಕೊಂಡಾಗ ಅವರು ನ್ಯಾಯಾಲಯದ ಮೆಟ್ಟಿಲನ್ನು ಏರಿದ್ದಾರೆ. ಇನ್ನು ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿದಿರುವುದಿಲ್ಲ. ಇದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ತಮಗೂ ಕೂಡ ಗೊತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ, ತಾವು ಪ್ರಶ್ನೋತ್ತರವನ್ನು ಹಾಕಿ, ತಾವು ಏನೋ ಒಂದು ಕೇಳುವುದು, ನಾನು ಏನೋ ಒಂದು ಉತ್ತರವನ್ನು ಹೇಳುವುದಕ್ಕಿಂತಲೂ ಒಂದು ಸಭೆಯನ್ನು ಕರೆಯೋಣ. ಈ ಸಭೆಗೆ ಬಿ.ಬಿ.ಎಂ.ಪಿ., ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕರೆದು ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡುವುದು ಸೂಕ್ತ ಎಂದು ನನಗನಿಸುತ್ತದೆ. ಇದಕ್ಕೆ ತಾವು ಒಪ್ಪಿದರೆ ಒಂದು ಸಭೆಯನ್ನು ಕರೆಯೋಣ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ತಾವು ಹಿರಿಯರಿದ್ದೀರಿ. ತಾವು ಏನೇ ಹೇಳಿದರೂ ನಾವು ಒಪ್ಪುತ್ತೇವೆ. ಏಕೆಂದರೆ, ಸರ್ಕಾರ ಏನೇ ಹೇಳಿದರೂ ನಾವು ಒಪ್ಪಬೇಕು. ಸರ್ಕಾರವನ್ನು ನಡೆಸುವವರು ನೀವು. ಆದರೆ, ಈ ಪ್ರಶ್ನೆಯನ್ನು ಬಿ.ಬಿ.ಎಂ.ಪಿ.ಯವರಿಗೆ ಹಾಕಬೇಕೇ ಅಥವಾ ಬೇರೆ ಯಾರಿಗಾದರೂ ಹಾಕಬೇಕೇ ಎನ್ನುವ ಬಗ್ಗೆ ನನಗೆ ಗೊತ್ತಾಗಲಿಲ್ಲ. ಏಕೆಂದರೆ, ಸದನಕ್ಕೆ ನಾನು ಹೊಸ ಸದಸ್ಯನಾಗಿ ಬಂದಿದ್ದೇನೆ. ನಾನು ಪ್ರಶ್ನೆಯನ್ನು ಯಾರಿಗೆ ಹಾಕಬೇಕಾಗಿತ್ತು ಎನ್ನುವುದು ನನ್ನದೇ ಪ್ರಶ್ನೆಯಾಗಿದೆ. ಏಕೆಂದರೆ, ಈ ಪ್ರಶ್ನೆಯನ್ನು ತಮ್ಮನ್ನು ಬಿಟ್ಟು ಯಾರನ್ನು ಕೇಳಬೇಕು. ಬಿ.ಬಿ.ಎಂ.ಪಿ.,ಯವರನ್ನು ಸಭೆಗೆ ಕರೆಯುತ್ತೇವೆ ಎಂದು ಹೇಳುತ್ತಾರೆ. ಸರ್ಕಾರವು ಇದು ನ್ಯಾಯಾಲಯದಲ್ಲಿ ಇದೆ ಎಂದು ಹೇಳುತ್ತದೆ. ಇವತ್ತಿನ ತಂತ್ರಜ್ಞಾನದಲ್ಲಿ ತಾವು ಮನಸ್ಸು ಮಾಡಿದರೆ, ಇಲ್ಲಿಂದ ಅಲ್ಲಿಗೆ ಇನ್ನೊಂದು ಫ್ಲೈ ಓವರ್ ಮಾಡಬಹುದು. ಚಾಲುಕ್ಯ ಸರ್ಕಲ್‌ಯಿಂದ ಏರ್‌ಪೋರ್ಟ್‌ಗೆ ಹೋಗುವವರೆಗೆ ಆ ಫ್ಲೈ ಓವರ್ ಅನ್ನು reach ಮಾಡುವುದು ಅಷ್ಟೇ. ಅಲ್ಲಿನ ಜನರು ಜೀವದ ಮೇಲೆ ಭಯ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಆಟೋದವರು ಇರಬಹುದು, ಪಾದಚಾರಿಗಳು ಇರಬಹುದು, ಎರಡು ಚಕ್ರದ ವಾಹನದವರು ಇರಬಹುದು, ಇವರು ಬಹಳ ಕಷ್ಟಪಟ್ಟು ರಸ್ತೆಗಳಲ್ಲಿ ಓಡಾಡುತ್ತಿದ್ದಾರೆ. ಮಾನ್ಯ ಸಚಿವರು ಸಭೆ ಕರೆಯುತ್ತೇವೆ ಎಂದು ಹೇಳುತ್ತಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಸಭೆ ಕರೆಯುವುದಕ್ಕಿಂತ ಮೊದಲು ತಾವು ಏನು ಮಾಡಿದರೆ ಒಳ್ಳೆಯದು ಆಗುತ್ತದೆ ಎಂದು ಯೋಚನೆ ಮಾಡಬೇಕು. ಇದು ಸಾರ್ವಜನಿಕವಾಗಿ ಆಗುವಂತಹ ಕೆಲಸ. ಇದು ಒಬ್ಬರಿಗೆ ಇಬ್ಬರಿಗೆ ಆಗುವಂತಹ ಕೆಲಸವಲ್ಲ. 90 ಲಕ್ಷ ವಾಹನಗಳು ಇರುವಂತಹ ನಗರದಲ್ಲಿ ಶೇಕಡಾ 25 ರಷ್ಟು ವಾಹನಗಳು ಈ ಚಾಲುಕ್ಯ ಸರ್ಕಲ್‌ಗೆ ಬಂದು ಹೋಗುತ್ತವೆ. ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರು ಈ ಸುರಸುಂದರಿ ಕಥೆಯ ಬಗ್ಗೆ ಹೇಳುತ್ತಿದ್ದರು. ಈ ಸುರಸುಂದರಿಯನ್ನು ನೋಡುವುದಕ್ಕೆ ಪ್ರೇತಾತ್ಮರು ಬಂದ ಹಾಗೆ ಈ ಜನರು ಕೂಡ ಬರುತ್ತಾರೆ. ಆದ್ದರಿಂದ, ದಯವಿಟ್ಟು ಇದಕ್ಕೆ ಒಂದು ಸಮರ್ಪಕವಾದ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಸೂಕ್ಷ್ಮವಾಗಿ ಹೇಳಿದ್ದೇನೆ. ಈ ಪ್ರಶ್ನೆಯನ್ನು ಯಾರಿಗೆ ಕೇಳಬೇಕು ಎನ್ನುವುದು ಪ್ರಶ್ನೆ ಅಲ್ಲ. ಒಟ್ಟಾಗಿ ಈ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಬೇಕು. ಏಕೆಂದರೆ, ಇದರಲ್ಲಿ 4 ಇಲಾಖೆಗಳು ಭಾಗವಹಿಸುವುದರಿಂದ, ಒಂದೊಂದು ಭಾಗ ಒಬ್ಬೊಬ್ಬರ ಕಡೆ ಇದೆ. National Highway Authority of India ರವರು ಒಂದು ಭಾಗವನ್ನು ನಿರ್ವಹಣೆ ಮಾಡುತ್ತಾರೆ. ಇನ್ನೊಂದು ಭಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದವರು ನಿರ್ವಹಣೆ ಮಾಡುತ್ತಾರೆ. ಇನ್ನೊಂದು ಭಾಗವನ್ನು ಬಿ.ಬಿ.ಎಂ.ಪಿ.,ಯವರು ನಿರ್ವಹಣೆ ಮಾಡುತ್ತಾರೆ. ಈ ರೀತಿಯಾಗಿರುವುದರಿಂದ ಮಾನ್ಯ ಸದಸ್ಯರು ಉತ್ತರವನ್ನು ಸರ್ಕಾರಕ್ಕೆ ಕೇಳಬೇಕಾಗುತ್ತದೆ. ಯಾವುದೇ ಇಲಾಖೆ ಇದ್ದರೂ ಕೂಡ ಸರ್ಕಾರವೇ ಉತ್ತರ ಕೊಡುತ್ತದೆ. ಇದರ ಬಗ್ಗೆ ಏನು ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರು ಕೇಳಿರುವುದು ಸರಿ ಇದೆ. ಆದರೆ, ಇದಕ್ಕೊಂದು ಕೊನೆ ಹಾಡಬೇಕೆಂದರೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಗಮನಹರಿಸುತ್ತೇವೆ. Technical experts ಮತ್ತು 4 ಇಲಾಖೆಯ ಅಧಿಕಾರಿಗಳನ್ನು ಕರೆದು technical opinion ತೆಗೆದುಕೊಂಡು ಮಾಡುವುದಾದರೆ ಖಂಡಿತವಾಗಿಯೂ ಸರ್ಕಾರ ಮಾಡುವುದಕ್ಕೆ ಸಿದ್ಧ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಚಿವರೇ, ಒಂದು ತಿಂಗಳು, ಮೂರು ತಿಂಗಳು ಅಥವಾ ಆರು ತಿಂಗಳೇ, ಎಷ್ಟು ದಿವಸಗಳಲ್ಲಿ ಆಗಬಹುದು ಎಂದು ಹೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿದ ತಕ್ಷಣವೇ ಒಂದು ಸಭೆಯನ್ನು ಕರೆಯುತ್ತೇನೆ. ಆ ಸಭೆಗೆ ತಮ್ಮನ್ನು ಕೂಡ ಆಹ್ವಾನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1082**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, 'ಅರಣ್ಯ ಹಕ್ಕು ಕಾಯ್ದೆಯಡಿ ಬುಡಕಟ್ಟು ಸಮುದಾಯದ ಜಮೀನು ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಗಳು ಹಾಗೂ ಮಂಜೂರಾದ ಅರ್ಜಿಗಳು ಎಷ್ಟು;' ಮತ್ತು 'ಬಾಕಿ ಉಳಿದಿರುವ ಅರ್ಜಿಗಳು ಮಂಜೂರಾಗದಿರಲು ಕಾರಣವೇನು ಹಾಗೂ ಇವನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶ ಎಷ್ಟು;' ಹಾಗೂ ಇತ್ಯಾದಿ ಪ್ರಶ್ನೆಗಳನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಸರಿಯಾಗಿ ಕೊಟ್ಟಿದ್ದಾರೆ. ಆದರೆ, ಇದು ಸಮಾಧಾನದ ಉತ್ತರ ಅಲ್ಲ. ಏಕೆಂದರೆ, 2008 ರಿಂದ ಇಲ್ಲಿಯವರೆಗೆ 13 ವರ್ಷಗಳ ಅವಧಿಯಲ್ಲಿ 48415 ಅರ್ಜಿಗಳು ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅದರಲ್ಲಿ ಕೇವಲ 12428 ಅರ್ಜಿಗಳು ಮಂಜೂರಾತಿಯಾಗಿದೆ. 2657 ಅರ್ಜಿಗಳು ಬಾಕಿ ಇವೆ. ಇದೆಲ್ಲದಕ್ಕಿಂತ ಮುಖ್ಯವಾಗಿ 33330 ಅರ್ಜಿಗಳು ತಿರಸ್ಕೃತಗೊಂಡಿವೆ. ಈ ತಿರಸ್ಕೃತಗೊಂಡ ಅರ್ಜಿಗಳನ್ನು ಮತ್ತೊಮ್ಮೆ ಪರಿಶೀಲನೆಗೆ ಇಡುತ್ತೇವೆ ಎನ್ನುವಂತಹ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಈ ಅಂಕಿ-ಅಂಶಗಳನ್ನು ನೋಡಿದರೆ, ಸುಮಾರು ಮುಕ್ಕಾಲು ಭಾಗ ಅರ್ಜಿಗಳು ತಿರಸ್ಕೃತಗೊಂಡಿವೆ. ಕಾಲು ಭಾಗ ಮಾತ್ರ ಹಕ್ಕುಪತ್ರ ದೊರೆತಿರುವುದರ ಬಗ್ಗೆ ಮಾಹಿತಿ ಸಿಗುತ್ತದೆ. ಸಾಮಾನ್ಯವಾಗಿ ಉತ್ತರ ಕನ್ನಡ ಜಿಲ್ಲೆ ಸೇರಿದಂತೆ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಕೊಡಗು, ಮೈಸೂರು, ಚಾಮರಾಜನಗರ, ರಾಮನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಈ ಎಲ್ಲಾ ಜಿಲ್ಲೆಗಳಲ್ಲಿ ಈ ಸಮಸ್ಯೆ ಇರುವುದರಿಂದ, ಅರಣ್ಯ ಹಕ್ಕು ಕಾಯ್ದೆಯ ಹಕ್ಕುಪತ್ರ ಸಿಗದೇ ಇರುವುದರಿಂದ, ಸುಮಾರು 52 ಸಮುದಾಯದ ಜನಾಂಗದವರಿಗೆ ಮನೆ ಇರಬಹುದು, ಉಳಿದ ಯಾವುದೇ ಸವಲತ್ತುಗಳು ಸಿಗುತ್ತಿಲ್ಲ. ನಾನು ಮೊನ್ನೆಯ ದಿವಸ ಕೊಡಗು ಜಿಲ್ಲೆಯ ಎರಡು-ಮೂರು ಹಳ್ಳಿಗಳಿಗೆ ಹೋದಾಗ ವಿರಾಜಪೇಟೆ ತಾಲ್ಲೂಕಿನಲ್ಲಿ ಶೌಚಾಲಯಗಳನ್ನು ಕಟ್ಟುವುದಕ್ಕೆ ಅವರಿಗೆ ಜಾಗ ಸಿಗುತ್ತಿಲ್ಲ. ಅಷ್ಟೊಂದು ಕೆಟ್ಟ ಪರಿಸ್ಥಿತಿ ಅಲ್ಲಿದೆ. ಉಳಿದಂತೆ ರಸ್ತೆಗಳು ಮತ್ತು ಮನೆಗಳು ಇರಬಹುದು. ಇವೆಲ್ಲಾ ಬೇರೆ ಬೇರೆ ಪರಿಸ್ಥಿತಿಗಳು ಆಗಿವೆ. ಕೊಡಗು ಜಿಲ್ಲೆಯಲ್ಲಿ ಈಗಾಗಲೇ ನಾವು ಆ ಕಡೆಯೆಲ್ಲಾ ತಿರುಗಾಡಿ ನೋಡಿದಾಗ 2018 ರಲ್ಲಿ ಸುಮಾರು 150 ಮನೆಗಳು ಭಾರೀ ಮಳೆಯಾಗಿ ಆ ಮನೆಗಳು ಕೊಚ್ಚಿಕೊಂಡು ಹೋದಾಗ plastic shed ಗಳನ್ನು ಕಟ್ಟಿಕೊಂಡಿರುವುದು ಇವತ್ತಿನವರೆಗೂ ಇದೆ. ಅವರಿಗೆ ಮನೆಗಳು ಏಕೆ ಸಿಕ್ಕಿಲ್ಲ ಎಂದು ಪಂಚಾಯತ್‌ರವರನ್ನು ಕೇಳಿದರೆ, ಎರಡನೇ ಹಕ್ಕಿನಲ್ಲಿ ಇವರಿಗೆ ಹಕ್ಕುಪತ್ರ ಸಿಕ್ಕಿಲ್ಲ ಎಂದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಳೆಯಿಂದ ಅಲ್ಲಿನ ಮನೆಗಳು ಕೊಚ್ಚಿ ಹೋಗಿರುವುದಲ್ಲ. ಅನಾದಿಕಾಲದಿಂದಲೂ ಅವರು ಇರುವುದು ಹಾಗೆಯೇ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಎಸ್.ವೀಣಾ ಅಚ್ಚಯ್ಯನವರು ಸರಿಯಾಗಿ ಹೇಳಿದ್ದಾರೆ. ಆ plastic shed ನಲ್ಲಿಯೂ ಕೂಡ ಎರಡೆರಡು ಬೇಸಿಗೆ ಕಾಲ ಮತ್ತು ಎರಡೆರಡು ಮಳೆಗಾಲವನ್ನು ಕಳೆದಿದ್ದಾರೆ. ಇದೇ ಸ್ಥಿತಿ ಮೈಸೂರು, ಚಾಮರಾಜನಗರದಲ್ಲಿ ಇದೆ. ಪಕ್ಕದ ರಾಮನಗರ ತಾಲ್ಲೂಕಿನಲ್ಲಿ ಕಳೆದ 22 ದಿನಗಳಿಂದ ಇರುಳಿಗ ಸಮುದಾಯವು ಕಾಡಿನಲ್ಲಿ ಕುಳಿತು ಹೋರಾಟ ಮಾಡುತ್ತಿದ್ದಾರೆ. ನಮಗೆ ಜಮೀನು ಬೇಕು ಅದಕ್ಕೆ ನಾವು ಕಾಡಿನಲ್ಲಿ ಕುಳಿತಿದ್ದೇವೆ ಎಂದು 10 ವರ್ಷದ ಮಗುವನ್ನು ಕೇಳಿದರೂ ಸಹ ಹೇಳುತ್ತದೆ. ರಾತ್ರಿ ಹೊತ್ತು ಹುಲಿ, ಕರಡಿ ಏನೇ ಬಂದರೂ ಸಹ ಅಲ್ಲಿಯೇ ಮಲಗಿರುತ್ತಾರೆ. ಇದೆಲ್ಲಾ ನಮಗೆ ಗೊತ್ತಿರುವಂತಹ ವಿಚಾರ. ಇದಕ್ಕೆಲ್ಲಾ ಕಾರಣ ಕೇಳಿದರೆ, ಇಡೀ ಉತ್ತರ ಕರ್ನಾಟಕದಲ್ಲಿ ಸುಮಾರು 12 ಜಿಲ್ಲೆಗಳಲ್ಲಿ ಅರಣ್ಯ ಹಕ್ಕು ಪತ್ರ ಸಿಗದೇ ಇರುವಂತಹದ್ದು ಕಾಣುತ್ತದೆ. ಅದಕ್ಕೋಸ್ಕರ ನಾನು 'ಬಾಕಿ ಉಳಿದಿರುವ ಅರ್ಜಿಗಳು ಮಂಜೂರಾಗದಿರಲು ಕಾರಣವೇನು ಹಾಗೂ ಇವನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶ ಎಷ್ಟು;' ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಕ್ರಮ ಕೈಗೊಳ್ಳುತ್ತೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಸಮಯದ ಮಿತಿ ಇಲ್ಲ. ಆದಷ್ಟು ಬೇಗ ಈ ಸಮಯದ ಮಿತಿಯೊಳಗೆ ಮಾಡದೇ ಇದ್ದರೆ, ಮುಕ್ಕಾಲು ಭಾಗದಷ್ಟು ಹಾಗೆಯೇ ಉಳಿದಿದೆ. ಈ ಎಲ್ಲಾ ಜನಾಂಗ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇದನ್ನು ಮಾಡದೇ ಇದ್ದರೆ, ಮುಂದೊಂದು ದಿನ ಏನಾಗಬಹುದು ಎಂದರೆ, ನಾವೆಲ್ಲಾ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡುತ್ತಿರಬಹುದು. 2-3 ಪತ್ರಿಕೆಗಳಲ್ಲಿ ಬಂದಿರುವುದನ್ನು ಹೇಳುತ್ತೇನೆ. '22ನೇ ದಿನಕ್ಕೆ ತಿರುಗಿದ ಇರುಳಿಗ ಪ್ರತಿಭಟನೆ' ಎಂದು ಬಂದಿದೆ. ಇನ್ನೊಂದು ಪತ್ರಿಕೆಯಲ್ಲಿ 'ಜೆಮ್ಮ-ಪಾಳೆ ಹೋರಾಟ ಮಾಡಲು ಆದಿವಾಸಿಗಳು ಸಿದ್ಧ' ಎಂದು ಬಂದಿದೆ. ಮತ್ತೊಂದು ಪತ್ರಿಕೆಯಲ್ಲಿ 'ಆದಿವಾಸಿಗಳು ಪಾದಯಾತ್ರೆ' ಎಂದು ಬಂದಿದೆ. ಇದರ ಬಗ್ಗೆ ಅವರ ತಾಳ್ಮೆಯ ಕಟ್ಟೆ ಏನಾದರೂ ಮುರಿದರೆ, ನಾವೆಲ್ಲಾ ಜವಾಬ್ದಾರಿಯಾಗಬಹುದು, ಅದಕ್ಕೋಸ್ಕರ ಆದಷ್ಟು ಶೀಘ್ರವಾಗಿ ಇದನ್ನು ಎಷ್ಟು ಸಮಯದಲ್ಲಿ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಹೊಸದಾಗಿ ಅರ್ಜಿ ಹಾಕುವುದರ ಸಲುವಾಗಿ ಯಾವುದೇ ಕಾಲಮಿತಿ ಇಲ್ಲ. ಇದರ ಜೊತೆಗೆ ಅರಣ್ಯ ಹಕ್ಕು ಕಾಯ್ದೆಯ ಪ್ರಕಾರ ಈ ಬುಡಕಟ್ಟು ಸಮುದಾಯಗಳು ಒಟ್ಟಾರೆಯಾಗಿ ಸುಮಾರು 48415 ಅರ್ಜಿಗಳು ಸಲ್ಲಿಕೆಯಾಗಿತ್ತು. ಸುಮಾರು 17250 ಎಕರೆ ಜಮೀನು ಈಗಾಗಲೇ ಮಂಜೂರಾತಿ ಆಗಿದೆ. ಸುಮಾರು 33330 ಅರ್ಜಿಗಳು ಏನು ತಿರಸ್ಕೃತಗೊಂಡಿವೆಯೋ, ಈಗಾಗಲೇ ಇದಕ್ಕೆ ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆಯನ್ನು ಕೊಟ್ಟು ಪುನರ್ ಮರುಪರಿಶೀಲನೆ ಮಾಡಬೇಕೆಂದು ಆದೇಶ ಕೊಟ್ಟಿರುವ ಕಾರಣ, ಆದಷ್ಟು ಶೀಘ್ರದಲ್ಲಿಯೇ ಇದನ್ನು ಯಾವ ರೀತಿ ಮರು ಪರಿಶೀಲನೆ ಮಾಡಬೇಕು. ಇದನ್ನು ಯಾವ ರೀತಿ ಇತ್ಯರ್ಥ ಮಾಡಬೇಕೆಂಬ ವಿಚಾರದ ಬಗ್ಗೆ ನಾವು ಯೋಚನೆ ಮಾಡಿ, ಚಿಂತನೆ ಕೂಡ ಮಾಡುತ್ತಿದ್ದೇವೆ. 2657 ಅರ್ಜಿಗಳು ಬಾಕಿ ಉಳಿದಿವೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ. ಇದಕ್ಕೆ ಮತ್ತೆ ತಡೆಯಾಗಬಾರದೆನ್ನುವ ಕಾರಣದಿಂದ ಆಯುಕ್ತರು, ಕಾರ್ಯದರ್ಶಿಯವರು ಮತ್ತು ನಮ್ಮ ಅಧಿಕಾರಿಗಳೆಲ್ಲಾ ಇದರ ಬಗ್ಗೆ ಫಾಲೋ ಅಪ್ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಮೂಲಕ 2657 ಅರ್ಜಿಗಳನ್ನು ಆದಷ್ಟು ಶೀಘ್ರದಲ್ಲಿಯೇ ಇತ್ಯರ್ಥ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಇದರ ಜೊತೆಗೆ ಹೊಸದಾಗಿ ಅರ್ಜಿಯನ್ನು ಕೊಡುವಂತಹ ವಿಚಾರದಲ್ಲಿ ಕಾಲಮಿತಿ ಇದೆ. ಈಗ ಹೊಸದಾಗಿ ಅರ್ಜಿಯನ್ನು ಕೊಡಬಹುದು. 33330 ಅರ್ಜಿಗಳು ತಿರಸ್ಕೃತಗೊಂಡಿವೆ, ಅದನ್ನು ಪುನರ್ ಪರಿಶೀಲನೆ ಮಾಡಿ ಇತ್ಯರ್ಥ ಮಾಡುವಂತಹ ಕೆಲಸವನ್ನು ಮಾಡುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:–** ಮಾನ್ಯ ಸಭಾಪತಿಯವರೇ, ಇನ್ನೊಂದು ಚಿಕ್ಕ ಸಲಹೆಯೇನೆಂದರೆ, ಹಕ್ಕು ಪತ್ರ ಕೊಡುವಂತಹ ಪ್ರಕ್ರಿಯೆಯಲ್ಲಿ ಮೊದಲನೆಯದು, ಸಮಾಜ ಕಲ್ಯಾಣ ಇಲಾಖೆ, ಎರಡನೆಯದು, ಅರಣ್ಯ ಇಲಾಖೆ, ಮೂರನೆಯದು, ಕಂದಾಯ ಇಲಾಖೆ ಈ 3 ಇಲಾಖೆಗಳು ಪ್ರಮುಖ ಪಾತ್ರ ವಹಿಸುತ್ತದೆ. ವಿಶೇಷವಾಗಿ ಎಲ್ಲಾ ಜಿಲ್ಲೆಗಳಲ್ಲೂ ಅರಣ್ಯ ಇಲಾಖೆಯಿಂದ ಆಗುವಂತಹ ತೊಡಕುಗಳನ್ನು ತುಂಬಾ ಕಡೆ ಹೇಳುತ್ತಿದ್ದೇವೆ. ಸಾಮಾನ್ಯವಾಗಿ ಈ 3 ಇಲಾಖೆಗಳ ಮಧ್ಯದಲ್ಲಿ ಹೊಂದಾಣಿಕೆ... ಏನಾದರೂ ಇದ್ದರೆ, ಆದಷ್ಟು ಬೇಗ ಈ ಕೆಲಸ ಆಗಬಹುದು ಎನ್ನುವಂತಹದ್ದು ನನ್ನ ಅನಿಸಿಕೆಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 17ನೇ ಮಾರ್ಚ್ 2021 ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 111 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:-ಬೆಂಗಳೂರು ಮಹಾನಗರದಲ್ಲಿ ಮೈದಾನಗಳ ನಿರ್ವಹಣೆ ಕೊರತೆಯಿಂದ ಹಾಳಾಗಿರುವ ಬಗ್ಗೆ.**

***

**ಶ್ರೀ ಯು.ಬಿ.ವೆಂಕಟೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಉದ್ಯಾನನಗರಿ, ಸಿಲಿಕಾನ್ ಸಿಟಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರು ದಿನ ಕಳೆದಂತೆಲ್ಲಾ ತನ್ನ ವ್ಯಾಪ್ತಿಯನ್ನು ಹಿರಿದಾಗಿಸಿಕೊಳ್ಳುತ್ತಿದ್ದು, ತನ್ನ ಆಶ್ರಯದಲ್ಲಿ 1.23 ಕೋಟಿ ಜನರನ್ನು ಇಟ್ಟುಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಅವಿಷ್ಕಾರಗಳ ಮೂಲಕ ಇಡೀ ಜಗತ್ತಿನ ಗಮನ ಸೆಳೆದಿರುವ ಬೆಂಗಳೂರು ಕ್ರೀಡಾ ಲೋಕಕ್ಕೂ ಅನೇಕ ದಿಗ್ಗಜರನ್ನು ಕೊಡುಗೆಯಾಗಿ ನೀಡಿದೆ. ಉದಾಹರಣೆಗೆ, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಬ್ರಿಜೇಶ್ ಪಟೇಲ್, ಪಂಕಜ್ ಅಡ್ವಾಣಿ, ನಿಶಾ ಮಿಲ್ಲೆಟ್ ಹೀಗೆ ಇನ್ನೂ ಹಲವರು ಎತ್ತರದ ಸಾಧನೆಯ ಮೂಲಕ ಉದ್ಯಾನನಗರಿಯ ಕೀರ್ತಿ ಹೆಚ್ಚಿಸಿರುತ್ತಾರೆ. ಇಂತಹ ವಿಶಿಷ್ಟ ಕ್ರೀಡಾ ಪರಂಪರೆ ಹೊಂದಿರುವ ಈ ನಗರಿಯಲ್ಲಿ ಈಗ ಆಟದ ಮೈದಾನಗಳೇ ಮಾಯವಾಗುತ್ತಿವೆ.

ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ಒಟ್ಟು 192 ಆಟದ ಮೈದಾನಗಳಿದ್ದು, ಈ ಪೈಕಿ ಶೇ.21ರಷ್ಟು ಆಟದ ಮೈದಾನಗಳು ಸಾರ್ವಜನಿಕರ ಬಳಕೆಗೆ ಅಲಭ್ಯವಾಗಿವೆ. 2017 ರಲ್ಲಿ ಜನಾಗ್ರಹ ಎಂಬ ಸಂಸ್ಥೆ ಕೈಗೊಂಡ ಸಮೀಕ್ಷೆಯಲ್ಲಿ ತಿಳಿಸಿರುವಂತೆ 87 ಆಟದ ಮೈದಾನಗಳು ಬಳಕೆಗೆ ಯೋಗ್ಯವೇ ಅಲ್ಲ ಎನ್ನುವ ಮಾಹಿತಿಯನ್ನು ನೀಡಿತ್ತು.

ಪ್ರಸ್ತುತ ಬೆಂಗಳೂರಿನ ಬಹುತೇಕ ಆಟದ ಮೈದಾನಗಳು ಉದ್ಯಾನವನಗಳಾಗಿ ಪರಿವರ್ತನೆಗೊಂಡಿರುವುದರಿಂದ, ಆಟದ ಮೈದಾನಗಳ ಕೊರತೆ ತೀವ್ರವಾಗಿ ಕಂಡುಬಂದಿದೆ. ಇದರಿಂದ ಹೊಸ ತಲೆಮಾರಿನ ಹುಡುಗರು ಡಾಂಬರು ರಸ್ತೆಗಳಲ್ಲಿ ಆಟ ಆಡುವುದನ್ನು ನಾವು ನಗರದಲ್ಲಿ ಕಾಣಬಹುದಾಗಿದೆ. ಇದರ ಜೊತೆಗೆ ಹೊಸದಾಗಿ ನಿರ್ಮಾಣಗೊಳ್ಳುವ ಬಡಾವಣೆಗಳಲ್ಲೂ ಸಹ ಆಟದ ಮೈದಾನಗಳು ಇಲ್ಲವಾಗಿರುವುದು ಮತ್ತು ಒತ್ತುವರಿಯಾಗಿರುವುದು ತಿಳಿದುಬಂದಿರುತ್ತದೆ.

ಈ ವಿಷಯದ ಬಗ್ಗೆ ಸರ್ಕಾರ ಹೆಚ್ಚಿನ ಗಮನಹರಿಸಿ ಒತ್ತುವರಿಯಾಗಿರುವ ಆಟದ ಮೈದಾನಗಳನ್ನು ವಶಕ್ಕೆ ಪಡೆಯುವುದಲ್ಲದೇ, ನಿರ್ವಹಣೆ ಕೊರತೆಯಿಂದ ಹಾಳಾಗಿರುವ ಆಟದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈದಾನಗಳನ್ನು ಸುಸಜ್ಜಿತಗೊಳಿಸಿ, ಎಲ್ಲೆಲ್ಲಿ ಆಟದ ಮೈದಾನಗಳನ್ನು ಹೊಸದಾಗಿ ಸೃಷ್ಟಿ ಮಾಡುವುದಕ್ಕೆ ಅವಕಾಶ ಇದೆ. ಅಲ್ಲಿ ಮೈದಾನಗಳನ್ನು ನಿರ್ಮಾಣ ಮಾಡಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಕ್ರೀಡಾ ಮತ್ತು ಯುವ ಜನಸೇವಾ ಸಚಿವರನ್ನು ಶೂನ್ಯವೇಳೆಯಲ್ಲಿ ಕೇಳಲು ಇಚ್ಛಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವಂತಹ ಪ್ರಶ್ನೆಗೆ ಮಾನ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

**(ಮುಂದು)**

**(456) 17/03/2021/ಎಸ್‌ಪಿಆರ್/ಎಕೆ/1:40**

**ಆ) ವಿಷಯ:– ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೋಳ ಹಾಗೂ ನಗುವನಹಳ್ಳಿ ಗ್ರಾಮಗಳ ಬಳಿ ಕೆಮಿಕಲ್ ಫ್ಯಾಕ್ಟರಿ ಮತ್ತು ಒಳಚರಂಡಿ ಕಲ್ಮಶ ನೀರು ಕಾವೇರಿ ನದಿಗೆ ಸೇರುತ್ತಿರುವ ಬಗ್ಗೆ**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಮಂಡ್ಯ, ಮೈಸೂರು ಹಾಗೂ ಬೆಂಗಳೂರಿನ ಜನತೆಗೆ ಕುಡಿಯಲು ಹಾಗೂ ಲಕ್ಷಾಂತರ ಎಕರೆ ಬೇಸಾಯಕ್ಕೆ ಬಳಕೆಯಾಗುತ್ತಿರುವ ನಾಡಿನ ಜೀವ ನದಿಯಾಗಿರುವ ಕಾವೇರಿ ನದಿಯ ನೀರಿಗೆ ಕಾರ್ಖಾನೆಗಳ ಕೆಮಿಕಲ್ ಮಿಶ್ರಿತ ಹಾಗೂ ಒಳಚರಂಡಿ ಕಲ್ಮಶ ನೀರು ಮಿಶ್ರಣವಾಗುತ್ತಿರುವುದರಿಂದ ಸಾರ್ವಜನಿಕ ವಲಯದಲ್ಲಿ ಭಾರಿ ಆತಂಕವನ್ನುಂಟುಮಾಡಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೋಳ ಮತ್ತು ನಗುವನಹಳ್ಳಿ ಗ್ರಾಮಗಳ ಬಳಿ ಮೈಸೂರಿನ ಕಾರ್ಖಾನೆಗಳ ಕೆಮಿಕಲ್ ಮಿಶ್ರಿತ ಕಲುಷಿತ ನೀರು ಕಾವೇರಿ ನದಿಗೆ ಸೇರ್ಪಡೆಯಾಗುತ್ತಿದ್ದರೆ, ಶ್ರೀರಂಗಪಟ್ಟಣದ ಒಳಚರಂಡಿಯ ಇಡೀ ಕಲ್ಮಶ ನೀರು ಗಣಪತಿ ದೇವಾಲಯದ ಬಳಿ ಕಾವೇರಿ ನದಿಯನ್ನು ಸೇರುತ್ತಿದೆ. ಸಾರ್ವಜನಿಕರಿಗೆ ಕುಡಿಯಲು ಹಾಗೂ ರೈತಾಪಿ ವರ್ಗಗಳ ವ್ಯವಸಾಯಕ್ಕೆ ಈ ನೀರನ್ನು ಹೆಚ್ಚು ಬಳಕೆ ಮಾಡಿಕೊಳ್ಳುತ್ತಿದ್ದು, ಹಾಗೆಯೇ ರೈತಾಪಿ ವರ್ಗವು ಸಹ ನೇರವಾಗಿ ಜನ ಜಾನುವಾರುಗಳಿಗೆ ಕುಡಿಯಲು ಈ ನೀರನ್ನು ಬಳಸುತ್ತಿದ್ದಾರೆ. ಕಲುಷಿತ ನೀರು ಮಿಶ್ರಣಗೊಳ್ಳುತ್ತಿರುವ ಈ ನೀರಿನಿಂದಾಗಿ ಜನ ಮತ್ತು ಜಾನುವಾರುಗಳು ಸಾಂಕ್ರಾಮಿಕ ರೋಗಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುತ್ತಾಗುವ ಸಾಧ್ಯತೆ ಹೆಚ್ಚಾಗಿದೆ. ಆದ್ದರಿಂದ ನಾಡಿನ ಜೀವ ನದಿಯಾಗಿರುವ ಕಾವೇರಿ ನದಿ ಕಲುಷಿತಗೊಳ್ಳುತ್ತಿರುವುದರಿಂದ ಈ ಕೂಡಲೇ ಸರ್ಕಾರ ಈ ಬಗ್ಗೆ ಗಮನಹರಿಸಿ, ಕಲುಷಿತ ನೀರು ಕಾವೇರಿ ನದಿಗೆ ಸೇರದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಬೇಕು ಹಾಗೂ ಈ ನದಿಯ ರಕ್ಷಣೆಗೆ ಸರ್ಕಾರ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:– ಚಿಕ್ಕಮಗಳೂರು ಜಿಲ್ಲೆಯಲ್ಲಿ 2019–20 ಮತ್ತು 2020–21 ನೇ ಸಾಲಿನಲ್ಲಿ ಪ್ರವಾಹ, ಅತಿವೃಷ್ಟಿ ಇತ್ಯಾದಿಗಳಿಂದ ಉಂಟಾಗಿರುವ ನಷ್ಟಕ್ಕೆ ಪರಿಹಾರ ವಿತರಣೆಯಾಗಿರುವ ಬಗ್ಗೆ**

* * *

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಚಿಕ್ಕಮಗಳೂರು ಜಿಲ್ಲೆಯಲ್ಲಿ 2019–20 ಮತ್ತು 2020–21 ನೇ ಸಾಲಿನಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿ ಅತಿವೃಷ್ಟಿ ಉಂಟಾಗಿದ್ದು, ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಅತಿವೃಷ್ಟಿ ಸಂದರ್ಭದಲ್ಲಿ ವಿಪರೀತ ಮಳೆ ಬಿದ್ದು, ಗುಡ್ಡ ಕುಸಿತದ ಕಾರಣದಿಂದಾಗಿ ಮೂಡಿಗೆರೆ, ಚಿಕ್ಕಮಗಳೂರು, ಎನ್.ಆರ್.ಪುರ, ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿನ ಜನರ ಜೀವನ ಅಸ್ತವ್ಯಸ್ತವಾಗಿ, ಅವರ ಆಸ್ತಿ, ಮನೆ, ಹೊಲ, ಗದ್ದೆ, ತೋಟ ಎಲ್ಲವನ್ನೂ ಕಳೆದುಕೊಂಡು ಜನರು ಕಂಗಾಲಾಗಿದ್ದು ಇನ್ನೂ ಕಣ್ಣಮುಂದೆಯೇ ಕಟ್ಟಿದಂತಾಗಿದೆ, ಅನೇಕರು ಪೂರ್ತಿ ಜೀವನವನ್ನೇ ಕಳೆದುಕೊಂಡಿದ್ದಾರೆ. ಆ ಸಂದರ್ಭದಲ್ಲಿ ಸರ್ಕಾರವು ನಿರಾಶ್ರಿತರಿಗೆ ಹಲವಾರು ಘೋಷಣೆಗಳನ್ನು ಮಾಡಿರುವುದು ಸರಿಯಷ್ಟೆ. ಆದರೆ ಇನ್ನೂ ಅನೇಕರಿಗೆ ಪುನರ್‌ವಸತಿಯಾಗಲೀ, ನಿವೇಶನವಾಗಲೀ, ಮನೆಯಾಗಲೀ, ಮಂಜೂರಾಗದೇ ಇರುವುದು ದೌರ್ಭಾಗ್ಯವೇ ಸರಿ. ಅತಿವೃಷ್ಟಿಯಿಂದಾಗಿ ಏಲಕ್ಕಿ, ಮೆಣಸು, ಕಾಫಿ ಬೆಳೆಗಾರರಿಗೆ ಭಾರೀ ನಷ್ಟವುಂಟಾಗಿದ್ದು, ಇದುವರೆವಿಗೂ ಇವರುಗಳಿಗೆ ಪರಿಹಾರ ಮೊತ್ತವು ಜಮೆಯಾಗಿರುವುದಿಲ್ಲ. ಕೆಲವರಿಗೆ ಹಂತ ಹಂತವಾಗಿ ಜಮೆಯಾದರೆ, ಇನ್ನೂ ಕೆಲವರಿಗೆ ಯಾವುದೇ ರೀತಿಯ ಪರಿಹಾರ ಮೊತ್ತವು ಮಂಜೂರಾಗಿರುವುದಿಲ್ಲ. ಮುಂದುವರೆದು, ಜಿಲ್ಲೆಯ ಕೆಲವು ಗ್ರಾಮಗಳೇ ಸ್ಥಳಾಂತರಗೊಂಡಿದ್ದು, ಇಲ್ಲಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಸ್ಥರು ಬಾಡಿಗೆ ಮನೆಗೆ ಹೋದಲ್ಲಿ, ಬಾಡಿಗೆ ಮೊತ್ತವನ್ನು ಜಮೆ ಮಾಡುವುದಾಗಿ ಸರ್ಕಾರವು ಘೋಷಿಸಿದ್ದರೂ ಸಹ, ಇದು ಕಾರ್ಯಗತಗೊಂಡಿಲ್ಲದೇ ಇರುವುದರಿಂದ ಜನರ ಪರಿಸ್ಥಿತಿ ಅತಂತ್ರವಾಗಿದೆ. ಅತಿವೃಷ್ಟಿ ಸಂದರ್ಭದಲ್ಲಿ ಅನೇಕರು ದಾಖಲಾತಿಗಳನ್ನು ಕಳೆದುಕೊಂಡಿದ್ದು, ದಾಖಲಾತಿಗಳನ್ನು ಮರುಹೊಂದಿಸಿ ಕೊಡುವಲ್ಲಿಯೂ ಸಹ ಅಧಿಕಾರಿ ವರ್ಗವು ಹಿಂದೆ ಬಿದ್ದಿದೆ. ಮೂಡಿಗೆರೆ, ಚಿಕ್ಕಮಗಳೂರು ತಾಲ್ಲೂಕು ವ್ಯಾಪ್ತಿಯವರಿಗೆ ಪ್ರಸಕ್ತ ಸಾಲಿನ ಬೆಳೆ ಪರಿಹಾರ ಮೊತ್ತವು ತಲುಪಿರುವುದಿಲ್ಲ. ಈಗಾಗಲೇ ಎಷ್ಟು ಫಲಾನುಭವಿಗಳ ಆಸ್ತಿ, ಜಾಗ ಗುರುತಿಸಲಾಗಿದೆ, ಎಷ್ಟು ಶೇಕಡಾವಾರು ಲೆಕ್ಕದಲ್ಲಿ ಪರಿಹಾರ ದೊರಕಿದೆ, ಇನ್ನೂ ಎಷ್ಟು ಫಲಾನುಭವಿಗಳಿಗೆ ಪರಿಹಾರ ದೊರಕಬೇಕಿದೆ, ಎಂಬ ಮಾಹಿತಿಯು ಇಲ್ಲದಂತಾಗಿದೆ. ಇದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶೂನ್ಯ ವೇಳೆಯಲ್ಲಿ ಕಂದಾಯ ಸಚಿವರನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ

**ಅ) ವಿಷಯ:– ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂಬ ಕುಗ್ರಾಮಕ್ಕೆ ಸಾರಿಗೆ ಸೌಲಭ್ಯ ಒದಗಿಸದಿರುವ ಬಗ್ಗೆ**

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮುನಿರಾಜು ಗೌಡ ಪಿ.ಎಂ.(ತುಳಸಿ)ರವರು ದಿನಾಂಕ 15/03/2021 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಾರಿಗೆ ಸಚಿವರ ಪರವಾಗಿ ಲಿಖಿತ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) ವಿಷಯ;- ಕಲ್ಯಾಣ ಕರ್ನಾಟಕ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕದೇ ಇರುವ ಬಗ್ಗೆ.**

– – –

**ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್‌ರವರು ದಿನಾಂಕ 16/03/2021 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಲಿಖಿತ ಉತ್ತರವನ್ನು ಮಂಡಿಸುತ್ತೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಇ) ವಿಷಯ :– ಮೈಸೂರು ನಗರದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ಸುಸಜ್ಜಿತ ಚಿತ್ರನಗರಿ ಸ್ಥಾಪನೆ ಕುರಿತು.**

* * *

**ಶ್ರೀ ಸಿ.ಸಿ.ಪಾಟೀಲ್(ಸಣ್ಣ ಕೈಗಾರಿಕೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು):–**

ಮಾನ್ಯ ಸಭಾಪತಿಯವರೇ,

**(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಚಲನಚಿತ್ರ ನಗರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಪ್ರವಾಸೋದ್ಯಮ ಇಲಾಖೆಗೆ ನೀಡಿದ್ದ ಸರ್ಕಾರಿ ಆದೇಶವನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಸದರಿ ಯೋಜನೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಮಂಜೂರಾಗಿರುವ ಮೈಸೂರಿನ ಹಿಮ್ಮಾವು ಗ್ರಾಮದ ಜಮೀನನ್ನು ವರ್ಗಾಯಿಸಿಕೊಳ್ಳುವುದು ಸೇರಿದಂತೆ ಇನ್ನಿತರೆ ಅನುಷ್ಠಾನದ ಅಂಶಗಳ ಬಗ್ಗೆ ನಾವು ಕಂದಾಯ ಸಚಿವರೊಂದಿಗೆ ಮಾತನಾಡಿ ಚಿತ್ರನಗರಿಯನ್ನು ಮೈಸೂರು ನಗರದಲ್ಲಿ ಸ್ಥಾಪಿಸಲಾಗುವುದು ಎನ್ನುವ ಭರವಸೆಯನ್ನು ಮುಖ್ಯಮಂತ್ರಿಗಳ ಪರವಾಗಿ ನಾನು ಸದನಕ್ಕೆ ಕೊಡುತ್ತಿದ್ದೇನೆ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಮಕೃಷ್ಣ ಹೆಗಡೆರವರ ಕಾಲದಿಂದಲೂ ಪ್ರಾರಂಭವಾಗಿ ಇಂದಿನವರೆಗೆ ಚಿತ್ರನಗರಿಯನ್ನು ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆದರೆ ಇವತ್ತಿನ ದಿವಸ ಸಚಿವರು ಇದನ್ನು ಮಾಡೇ ಮಾಡುತ್ತೇನೆ ಎನ್ನುವ ತೀರ್ಮಾನವನ್ನು ಸದನದಲ್ಲಿ ಹೇಳಿದ್ದಾರೆ. ಇದಕ್ಕಾಗಿ ಚಿತ್ರೋದ್ಯಮದ ಪರವಾಗಿ ಮತ್ತು ವೈಯಕ್ತಿಕವಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**4. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

01. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2021

02. ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2021

**ಉಪಸಭಾಪತಿಯವರು:–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ನೇ ಸಾಲಿನ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**(ಮುಂದು)**

**(457)17–03–2021(01–50)ಬಿಎಸ್‌ಡಿ–ಎಕೆ**

**ಶ್ರೀ ಎಸ್.ಟಿ. ಸೋಮಶೇಖರ್ (ಮುಂದು)**

ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಕಡಿವಾಣ ಹಾಕಲು ಹಾಗೂ ಲೇವಾದೇವಿದಾರರಿಂದ ರೈತರು ಮತ್ತು ಸಾಮಾನ್ಯ ಜನರಿಗೆ ಶೋಷಣೆಯಿಂದ ಮುಕ್ತಗೊಳಿಸುವ ಸಲುವಾಗಿ, ಮಾನದಂಡದಿಂದ ಆಗಬಹುದಾದ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಈ ತಿದ್ದುಪಡಿಗಳನ್ನು ತರಲಾಗಿದೆ. ಹಾಲಿ ಸಾಲ ವಸೂಲಿ ಮಾಡಲು, ಸಾಲಗಾರರಿಗೆ ಹಿಂಸೆ ಕೊಡುವವರಿಗೆ 6 ತಿಂಗಳು ಸೆರೆವಾಸ ಅಥವಾ ರೂ.5 ಸಾವಿರ ದಂಡ ಅಥವಾ ಎರಡೂ ಕೂಡ ಈಗಿನ ವ್ಯವಸ್ಥೆಯಲ್ಲಿದೆ. ಅದನ್ನು ತಿದ್ದುಪಡಿ ಮಾಡಿ 6 ತಿಂಗಳ ಬದಲಾಗಿ ಒಂದು ವರ್ಷ ಸೆರೆವಾಸ ಅಥವಾ ರೂ.50 ಸಾವಿರಗಳ ದಂಡ ಅಥವಾ ಎರಡೂ ಕೂಡ ಇದೆ. ಪ್ರಥಮ ಅಪರಾಧಕ್ಕೆ ಮೂರು ತಿಂಗಳ ಸೆರೆವಾಸ ಅಥವಾ ರೂ. 1 ಸಾವಿರ ದಂಡ ಅಥವಾ ಎರಡೂ ಕೂಡ ಇತ್ತು. ಈಗ ಪ್ರಥಮ ಅಪರಾಧಕ್ಕೆ ಒಂದು ವರ್ಷದವರೆಗೆ ಸೆರೆವಾಸ ಅಥವಾ ರೂ.50 ಸಾವಿರ ದಂಡ ಅಥವಾ ಎರಡೂ ಕೂಡ ಇರುತ್ತದೆ. ಎರಡನೆಯ ಅಪರಾಧ ಹಾಗೂ ತದನಂತರದ ಅಪರಾಧಗಳಿಗೆ 6 ತಿಂಗಳ ಸೆರೆವಾಸ ಅಥವಾ ರೂ.2 ಸಾವಿರದವರೆಗಿನ ದಂಡ ಎಂದು ಇತ್ತು. ಈಗ ಎರಡನೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪರಾಧಕ್ಕಾಗಿ ಅಥವಾ ತದನಂತರದ ಅಪರಾಧಗಳಿಗೆ ಎರಡು ವರ್ಷದವರೆಗೆ ಸೆರೆವಾಸ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ದಂಡ ಎಂದು ತಿದ್ದುಪಡಿಯಾಗಿದ್ದು, ಇದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ತಂದಿರುವ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಬಹಳ ಹಿಂದೆ ಆಗಿದ್ದು, ಈ ವಿಧೇಯಕದಂತೆ ಸಾಲ ಕೊಟ್ಟಿರುವವರು ಕೇಳುವುದಕ್ಕೆ ಹೋದಾಗ ಸಾಲವನ್ನು ಕೊಡಬಾರದು ಎಂಬ ಉದ್ದೇಶ ಇದೆಯೇ? ಅನಾದಿ ಕಾಲದಿಂದಲೂ ಹಳ್ಳಿಗಳಲ್ಲಿ ಮದುವೆ, ಮನೆ ಕಟ್ಟಲು ಅಥವಾ ಬೇರೆ ಬೇರೆ ಕಾರಣಗಳಿಂದ ಸಾಲ ತೆಗೆದುಕೊಳ್ಳುತ್ತಿದ್ದರು ಹಾಗೂ ಅಷ್ಟೇ ನಂಬಿಕೆಯಿಂದ ವಾಪಸ್ಸು ಕೊಡುತ್ತಿದ್ದರು. ಈ ಕಾನೂನು ಜಾರಿಯಾದ ಮೇಲೆ ಇದರ shelter ನಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿದರೆ....... ಇದರ ಉದ್ದೇಶ ಚೆನ್ನಾಗಿದೆ, ನಾನು ಸ್ವಾಗತ ಮಾಡುತ್ತೇನೆ. ಆದರೆ ಎಲ್ಲೋ ಒಂದು ಕಡೆ ಹಣ ಕೊಟ್ಟವರ ಪರಿಸ್ಥಿತಿ ಏನು? ಅದಕ್ಕೆ ಬೇರೆ ಉಪಾಯ ಇದೆಯೇ?

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಎಲ್ಲ ಕಡೆ ವಿಪರೀತ complaints ಬಂದ ಮೇಲೆ ರೈತರ ಹಿತಕ್ಕಾಗಿ ಹಾಗೂ ಆತ್ಮಹತ್ಯೆಗಳಿಗೆ ಕಡಿವಾಣ ಹಾಕಬೇಕೆಂಬ ಉದ್ದೇಶ ಇದೆ. ಮಾನಸಿಕ ಹಾಗೂ ದೈಹಿಕವಾಗಿ ಲೇವಾದೇವಿದಾರರು ಹಿಂಸೆ ಕೊಡಬಾರದು ಎಂಬ ಒಂದೇ ದೃಷ್ಟಿಯಿಂದ ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಇದನ್ನು ರೈತರಿಗಾಗಿ ಮಾಡಿದ್ದೇವೆ. ಇದರಲ್ಲಿ ಬೇರೆ ಇನ್ಯಾವ ಉದ್ದೇಶ ಇಲ್ಲ.

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇವತ್ತು ಈ ವಿಧೇಯಕವನ್ನು ತಂದಿದ್ದು, ಪ್ರಪಂಚದಲ್ಲಿ ಯಾರೂ ಸಹ ಎಲ್ಲಾ ಸಮಯದಲ್ಲಿ ಹಣವನ್ನು ಇಟ್ಟುಕೊಂಡು ವ್ಯವಹಾರ ಮಾಡಲು ಸಾಧ್ಯವಿಲ್ಲ. ನಾವು ಸಾಲ ಮಾಡಿರುತ್ತೇವೆ, ಚುನಾವಣೆ ಸಮಯದಲ್ಲಿ contest ಮಾಡುವವರು ಬಹುತೇಕ ಸಾಲ ಮಾಡಿರುತ್ತಾರೆ. ಇದು ಒಪ್ಪಿಕೊಳ್ಳಬೇಕಾದ ವಿಚಾರ. ಆದರೆ ಈ ವಿಧೇಯಕದಂತೆ ಕಾನೂನುರೀತ್ಯಾ ಸಾಲ ಕೇಳುವವನ ಮೇಲೆ case ಮಾಡಿದರೆ, ನಾಳೆ ಸಾಲ ಬೇಕಾದ ಸಂದರ್ಭದಲ್ಲಿ ಯಾರು ಸಾಲ ಕೊಡುತ್ತಾರೆ? ಸಾಲ ಕೊಟ್ಟ ತಪ್ಪಿಗೆ jail ಗೆ ಹೋಗಬೇಕೆ? ದಂಡ ಕಟ್ಟಬೇಕೆ ಎನ್ನುವ ವಿಚಾರಗಳು ಬರುತ್ತವೆ. ಕೇಂದ್ರ ಸರ್ಕಾರದವರು Negotiable

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Instruments Act ಗೆ ತಿದ್ದುಪಡಿ ತಂದು, cheque ಮೂಲಕ ವ್ಯವಹಾರ ಅಥವಾ ಸಾಲ ನೀಡಿದ ಸಂದರ್ಭದಲ್ಲಿ court ಗೆ ಹೋಗಬಹುದು, cheque bounce ಆಗಿರುತ್ತದೆ. ಆ cheque ಅನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬಹುದಾಗಿದ್ದು, cheque bounce ಆಗಿರುವವರಿಗೆ ಹಣ ಕೊಡಿಸಿರುವ ಪ್ರಕರಣಗಳು ಲಕ್ಷಾಂತರ ಇವೆ. ಅಂತಹ ಸಮಯದಲ್ಲಿ ಕೇಂದ್ರ ಸರ್ಕಾರದ Negotiable Instruments Act ಪ್ರಕಾರ cheque bounce ಆಗುವುದು ತಪ್ಪು, ಆ ಹಣವನ್ನು ನ್ಯಾಯಾಲಯದ ಮೂಲಕ ಕೊಡಿಸಬೇಕು ಎಂದು ಮಾಡಿರುವ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮಾತ್ರ ಈ ರೀತಿ ತಿದ್ದುಪಡಿ ತಂದು ಸಾಲ ಕೊಟ್ಟವನಿಗೆ ದಂಡ ಹಾಕುವುದು ಸರಿಯೇ? ಅಂದರೆ ಹಿಂಸೆ ಮಾಡುವುದು, torcher ಮಾಡುವುದು, ಜಾತಿ ಬಗ್ಗೆ ಮಾತನಾಡುವುದೆಲ್ಲಾ ತಪ್ಪು, ಅದನ್ನು ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಎಲ್ಲೋ ಒಂದು ಕಡೆ ಜನರಿಗೆ ಕಷ್ಟ-ಸುಖಕ್ಕೆ ಹಣವನ್ನು ಸಾಲ ಮಾಡುವುದು, ಒಡವೆಗಳನ್ನು ಇಟ್ಟು ಸಾಲ ಮಾಡುವುದು ನಡೆಯುತ್ತಿದೆ. ಇವತ್ತು ಅನೇಕ ಕಡೆ pawn broker ಗಳು ಇದ್ದು, ಒಡವೆಗಳನ್ನು ಇಟ್ಟುಕೊಂಡು ಸಾಲ ಕೊಡುತ್ತಾರೆ. ಹಿಂದೆ ನಮ್ಮ ಊರಿನಲ್ಲಿ ಒಂದು ಪ್ರಕರಣ ನಡೆಯಿತು. ಈ ನೈಜ ಪ್ರಕರಣವನ್ನು ದಯವಿಟ್ಟು ಗಮನಿಸಬೇಕು. ನನ್ನ ಸ್ನೇಹಿತರಾದ ಶ್ರೀ ಅಶೋಕ್ ಎಂಬುವವರು ಒಬ್ಬರಿಗೆ ಕೊಟ್ಟ ನಂತರ ಅವರು ಸಾಲದ ಹಣವನ್ನು ಅವರು ಪುನಃ ಇವರಿಗೆ ವಾಪಸ್ ಕೊಡಲಿಲ್ಲ. ಶ್ರೀ ಅಶೋಕ್ ರವರು ಅವರ ಹತ್ತಿರ ಹೋಗಿ ಸಾಲ ಕೇಳಿದ ತಪ್ಪಿಗೆ ಸಾಲ ತೆಗೆದುಕೊಂಡಿರುವವನು S.P. ಗೆ ಒಂದು complaint ಕೊಟ್ಟ. Complaint ಕೊಟ್ಟ ಮೇಲೆ police ಶ್ರೀ ಅಶೋಕ್ ರವರನ್ನು ಕರೆದುಕೊಂಡು ಹೋದರು. ಆಗ ಇವರು ಕೊಟ್ಟ ಸಾಲಕ್ಕಿಂತ ಹೆಚ್ಚು ಹಣವನ್ನು police ಮತ್ತು ಬೇರೆ ಬೇರೆ ಅಧಿಕಾರಿಗಳಿಗೆ ಕೊಟ್ಟು ವಾಪಸ್ಸು ಬರಬೇಕಾಯಿತು. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದ್ದು, ವ್ಯವಹಾರವನ್ನು ಮಾಡುತ್ತಿದ್ದೇವೆ. ಆದರೆ ಎಲ್ಲಕ್ಕೂ ಈ ರೀತಿ ಕಾಯ್ದೆ ರೂಪದಲ್ಲಿ ತಂದರೆ ಏನಾಗುತ್ತದೆ? ಅಂದರೆ ಹಣವಂತರಿಗೆ ಹಣ ಸಿಗಬಹುದು, ಮಾಮೂಲಿ ಜನರಾದ ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಕಾಯ್ದೆ ತಂದಿರುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಮಾನ್ಯ ಸಭಾಪತಿಯವರೇ, ತಾವು ಅನುಮತಿ ನೀಡಿದರೆ ಇಂತಹ ಹತ್ತಾರು ನೈಜ ಪ್ರಕರಣಗಳನ್ನು ಉಲ್ಲೇಖ ಮಾಡುತ್ತೇನೆ. ಹಿಂದೆ ICICI Bank, private bank ಗಳಿಂದ ಸಾಲ ಕೊಡುತ್ತಿದ್ದರು. ರೈತರು ಸಹ ಸಾಲ ತೆಗೆದುಕೊಳ್ಳುತ್ತಿದ್ದರು. ಮೈಸೂರಿನ ನಂಜನಗೂಡಿನಲ್ಲಿ ರೈತರು ತೆಗೆದುಕೊಂಡ tractor ಮೇಲಿನ ಸಾಲವನ್ನು ಕಟ್ಟದಿದ್ದಾಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ICICI Bank ನವರು seize ಮಾಡಿದರು. Seize ಮಾಡಿದ ಕೂಡಲೇ ರೈತರು ಆತ್ಮಹತ್ಯೆ ಮಾಡಿಕೊಂಡರು. ಆ ಸಂದರ್ಭದಲ್ಲಿ ಎಲ್ಲಾ ಕಡೆ ರೈತ ಸಂಘದವರು ಪ್ರತಿಭಟನೆ ಮಾಡಿದರು. ಮಾನ್ಯ ಸಭಾಪತಿಯವರೇ, ಆ private bank ನವರು ಬಹಳ ಭಯ ಬಿದ್ದರು. ನಮ್ಮಲ್ಲಿಯೂ ಕೋಳಿ ಸಾಕಾಣಿಕೆಗೆ ರೂ.1.50 ಕೋಟಿಗಳ ವರೆಗೆ ಸಾಲ ತೆಗೆದುಕೊಂಡಿರುವವರು ಇದ್ದಾರೆ. ಖಾಸಗಿ bank ನವರು ಯಾವ ರೀತಿ settlement ಮಾಡಿಕೊಂಡರು ಎಂದರೆ ಎಷ್ಟು ಹಣ ತೆಗೆದುಕೊಳ್ಳಲು ಸಾಧ್ಯವಾಗುತ್ತದೆಯೋ, ಅಷ್ಟು ಹಣವನ್ನು ತೆಗೆದುಕೊಂಡು settlement ಮಾಡಿ case close ಮಾಡಿಕೊಂಡರು. ಈಗ ಸಾಲ ಮನ್ನಾ ಕಾರ್ಯಕ್ರಮಕ್ಕೆ ಸಾವಿರಾರು ಕೋಟಿಗಳನ್ನು ಕೊಡುತ್ತಿದ್ದಾರೆ. ಆದರೆ ರೈತರು ಸಾಲ ತೆಗೆದುಕೊಳ್ಳುವುದು ತಪ್ಪಿದೆಯೇ? ಸಹಕಾರಿ bank ಗಳಲ್ಲಿ 0% ನಲ್ಲಿ ಸಾಲ ಕೊಡಲು ಅವಕಾಶ ಮಾಡಿಕೊಟ್ಟಿದ್ದಾರೆ. 4% ಬಡ್ಡಿಗೆ ಸಾಲ ನೀಡಲು ಅವಕಾಶ ಮಾಡಿಕೊಟ್ಟಿದ್ಧಾರೆ. ಸಹಕಾರ bank ಗಳಲ್ಲಿ ಇದೊಂದು ದೊಡ್ಡ ದಂಧೆಯಾಗಿ ನಡೆಯುತ್ತಿದ್ದು, ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ಅನೇಕ ಬಾರಿ ತಂದಿದ್ದೇನೆ. ಅದೊಂದು head quarter ಆಗಿದ್ದು, ದಿನವೂ ಈ ಸಾಲದ paper ಗಳನ್ನೇ ಇಟ್ಟುಕೊಂಡು, ಹಣವನ್ನು ಗುಡ್ಡೇ ಇಟ್ಟುಕೊಂಡು ಒಂದು ಕಡೆ ಠೇವಣಿ collect ಮಾಡಿದ್ದೇವೆ ಎಂದು ಹೇಳಿ ಇನ್ನೊಂದು ಕಡೆ ಸಾಲ ಕೊಡುವುದು ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಇಂತಹ bank ನವರು ಹಣ ಕಟ್ಟದೇ ಅವರ ಮೇಲೂ ಮೊಕದ್ದಮೆ ಹಾಕುವ ಕಾಲ ಬಂದೇ ಬರುತ್ತದೆ ಎಂದು ಹೇಳಬಯಸುತ್ತೇನೆ. ಇದನ್ನು ಇನ್ನೊಂದು ಸಾರಿ ವಿವೇಚನೆಗೆ ಒಳಪಡಿಸಿ ಜಾರಿಗೆ ತಂದರೆ ಒಳ್ಳೆಯದು ಎಂದು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಶಾಸಕಾಂಗ ಪಕ್ಷದ ತೀರ್ಮಾನ, ಸದನದ ನೈತಿಕತೆಯ ಪ್ರಶ್ನೆ ಆಗಿರುವುದರಿಂದ ಈ ministry ಗೆ ಸಂಬಂಧಪಟ್ಟ ಚರ್ಚೆಯಲ್ಲಿ ನಾವ್ಯಾರೂ ಪಾಲ್ಗೊಳ್ಳುವುದಿಲ್ಲ. ಆದ್ದರಿಂದ ನಾವು ಬಹಿಷ್ಕಾರ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಚರ್ಚೆಯನ್ನು ಬಹಿಷ್ಕರಿಸಿ ಸದನದಿಂದ ಹೊರನಡೆದರು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಉಪ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಉಪ ಸಭಾಪತಿಯವರು:** " ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(458)/17.03.2021/2.00/ಹೆಚ್‌ವಿ:ಆರ್‌ಎನ್**

**ಉಪ ಸಭಾಪತಿಯವರುಃ–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ 3.00 ಗಂಟೆಯವರೆಗೂ ಮುಂದೂಡಲಾಗುವುದು.

(459) 17.03.2021 3.30 ಕೆಜಿ– ಬಿಎನ್‌ಎಸ್

**(ಮಧ್ಯಾಹ್ನ 2 ಗಂಟೆಗೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 31 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಆ) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ತರಲಾಗಿದೆ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ.245ರಲ್ಲಿ ಕುಷ್ಠರೋಗಿಗಳನ್ನು ಮತ್ತು ಗಲಭೆಕೋರರನ್ನು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಬಹುದು ಎಂಬುದಾಗಿದೆ. ಆದರೆ, ಈಗ ಕುಷ್ಠರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದ್ದು, ಆ ರೋಗದಿಂದ ಬಳಲುತ್ತಿರುವವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

treatment ಅನ್ನು ಮೊದಲ ಬಾರಿಗೆ ಸೇವಿಸುತ್ತಿದ್ದಂತೆಯೇ, ಅವರು ಸಾರ್ವಜನಿಕವಾಗಿ ವ್ಯವಹರಿಸಲು ಸಮರ್ಥರಾಗಿರುತ್ತಾರೆ. ಈಗ ಅಂತಹ ಔಷಧಿಗಳು ಬಂದಿವೆ. ಹಾಗಾಗಿ, ಆ ರೋಗ ಹರಡುವಂತಹ ಭೀತಿ ಇಲ್ಲ. ಈ ಹಿನ್ನೆಲೆಯಲ್ಲಿ ಸಿವಿಲ್ ರಿಟ್ ಅರ್ಜಿ ಸಂಖ್ಯೆ 1151/2017 (ಪಿಐಎಲ್–ಡಬ್ಲ್ಯು) ಇದರಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ನಿರ್ದೇಶನಕ್ಕೆ ಅನುಸಾರವಾಗಿ ಕುಷ್ಠರೋಗವು ಗುಣಪಡಿಸಬಹುದಾದ ಖಾಯಿಲೆಯಾಗಿದ್ದು, ಅದರಿಂದ ನರಳುತ್ತಿರುವ ವ್ಯಕ್ತಿಗಳ ವಿರುದ್ಧ ತಾರತಮ್ಯವನ್ನು ತೊಡೆದು ಹಾಕಲು ಕ್ರಮವಹಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ನ್ನು (1964ರ ಕರ್ನಾಟಕ ಅಧಿನಿಯಮ 22) ತಿದ್ದುಪಡಿ ಮಾಡುವುದು ಅವಶ್ಯವಿದ್ದು, ಅದನ್ನು ಕಲಂ 245 ರಲ್ಲಿರುವ 'ಕುಷ್ಠರೋಗ' ಎಂಬ ಪದವನ್ನು ತೆಗೆದುಹಾಕುವುದಕ್ಕೆ ಮಾತ್ರ ಈ ತಿದ್ದುಪಡಿಯನ್ನು ತರಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಕೇವಲ 'leprosy' ಎಂಬ ಪದವನ್ನು ಕೈಬಿಟ್ಟಿಲ್ಲ. 'Contagious disease' ಎಂದು ಹಾಕಿದ್ದಾರೆ. Government of India, Health Department's definition ಪ್ರಕಾರವಾಗಿ 'Tuberculosis' (T.B.) ಅಥವಾ ಈಗಿನ ಕೊರೋನಾ ವೈರಸ್ ಕೂಡ contagious disease ಆಗುತ್ತದೆ. ಇದು ಏನಾದರೂ ಸಹ ತಕರಾರು ಆಗುವುದಿಲ್ಲವೇ? ಅದು ಒಳ್ಳೆಯದು. Leprosy ಆದವರು one dose ಅಥವಾ ಆರು ತಿಂಗಳು ಔಷಧಿಯನ್ನು ತೆಗೆದುಕೊಂಡರೆ ಅವರು contagious ಇರುವುದಿಲ್ಲ. ಯಾವಾಗಲೂ ಸಹ ಅವರೊಂದಿಗೆ ಸಂಪರ್ಕದಲ್ಲಿದ್ದರೆ ಮಾತ್ರ leprosy spread ಆಗುತ್ತದೆ ಎನ್ನುವುದು ಇದೆ. ಇದರಲ್ಲಿ contagious disease ಅನ್ನು ಸೇರಿಸಿದ್ದಾರೆ. ಅದು ಸರಿಯಿಲ್ಲ ಎನ್ನುವುದು ನನ್ನ ಭಾವನೆ. ಅದಕ್ಕೆ ಏನಾದರೂ ಕಾನೂನಿನ ತೊಡಕು ಬರುತ್ತದೆಯೋ ಎಂಬುದನ್ನು ನೋಡಿಕೊಳ್ಳಬೇಕು ಎನ್ನುವುದು ನನ್ನ ಸಲಹೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಕುಷ್ಠರೋಗಿಗಳನ್ನು ಹೊರಗಿಡಬಹುದುದೆಂದು ಮಾರುಕಟ್ಟೆಯ ವ್ಯಾಕ್ಯದಲ್ಲಿ ಇತ್ತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಪದ ಇದೆ. ಇದು ಸೇರಿದರೆ 'contagious disease' ಎನ್ನುವಂಥದ್ದು ಅದರಲ್ಲಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ಇಷ್ಟಕ್ಕೆ ಮಾತ್ರಕ್ಕೆ ಸೀಮಿತವಾಗಿದೆ. ಕುಷ್ಠರೋಗವನ್ನು ಸಂಪೂರ್ಣವಾಗಿ ಗುಣಪಡಿಸುವ ಹಿನ್ನೆಲೆಯಲ್ಲಿ ಮತ್ತು ಅದಕ್ಕೆ ಸಮರ್ಪಕವಾದ ಔಷಧಿ ಸಿಕ್ಕಿದೆ ಎಂದು ಆರೋಗ್ಯ ಇಲಾಖೆ ಹೇಳುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಈ ಕುಷ್ಠರೋಗ ಎಂಬ ಪದವನ್ನು ತೆಗೆಯಬೇಕು ಇದರಲ್ಲಿ ತಾರತಮ್ಯ ಮಾಡಬಾರದೆಂದು ಮಾನ್ಯ ಭಾರತ ಸರ್ವೋಚ್ಛ ನ್ಯಾಯಾಲಯ ಸೂಚಿಸಿರುವ ಹಿನ್ನೆಲೆಯಲ್ಲಿ ಈ ತಿದ್ದಿಪಡಿಯನ್ನು ತರಲಾಗಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 :

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ:**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪೌರಾಡಳಿತ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**6. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಅಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಆದರೆ, ಸದನದಲ್ಲಿ ಅಧಿಕಾರಿಗಳು ಯಾರು ಕಾಣುತ್ತಿಲ್ಲ. ನಮ್ಮ ಆಯವ್ಯಯ ಸ್ವತಂತ್ರ ಭಾರತದಲ್ಲಿ ಮೊದಲಿಗೆ 'ಶೂನ್ಯ ಆಯವ್ಯಯ' ಎಂದು ಮಾಡುವಂತಹದ್ದು ಪ್ರಾರಂಭದಲ್ಲಿ ಇತ್ತು. ನಮ್ಮ ಸಂವಿಧಾನ ರಚನೆಯ ಮುನ್ನ ಮತ್ತು ಆನಂತರ ಬಹಳ ವರ್ಷಗಳ ಕಾಲ ಅದು ಇತ್ತು. ಸಂವಿಧಾನ ರಚನೆಯಾದ ಬಹಳಷ್ಟು ವರ್ಷಗಳ ನಂತರ 'ಅಭಿವೃದ್ಧಿಯ' ಎನ್ನುವಂತಹ ಬಜೆಟ್‌ನ್ನು ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಮಾಡುತ್ತಿದ್ದರು. ಈಗ ನಾವು 'ಅಭಿವೃದ್ಧಿಯ' ಬಜೆಟ್‌ನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆದರೆ, ಇದೇ ಸರ್ಕಾರ ಈ ಹಿಂದೆ 'ಕೃಷಿ ಬಜೆಟ್' ಎಂದು ಪ್ರತ್ಯೇಕವಾಗಿ ಮಾಡಿದ್ದರು.

ಮಾನ್ಯ ಸಭಾಪತಿಯವರೇ, ಈ ಬಾರಿಯ ಬಜೆಟ್‌ನಲ್ಲಿ ಒಂದು ವಿಶೇಷತೆ ಇದೆ. ಈ ಬಾರಿ ಆರು ವಲಯಗಳನ್ನಾಗಿ ವಿಂಗಡಣೆ ಮಾಡಿ ವಲಯವಾರು ಬಜೆಟ್‌ನ್ನು ಈ ಸರ್ಕಾರ ವಿಶೇಷವಾಗಿ ಮತ್ತೊಂದು ಸಾರಿ ಬೇರೆ ರೀತಿಯಲ್ಲಿ ತಿರುಗಿಸಿ ಕೊಟ್ಟಿದೆ. ಅದು ಏನೇ ಇರಲಿ. ಮೊದಲನೆಯದಾಗಿ, ಈಗ ಕೋವಿಡ್–

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

19 ವಿಶ್ವಕ್ಕೆ ಬಹಳ ಮಾರಕವಾಗಿದೆ. ಈ ಸನ್ನಿವೇಶದಲ್ಲಿ ಏನೇನಾಯಿತು ಎಂಬುದರ ಬಗ್ಗೆ ಸಣ್ಣಪುಟ್ಟ ವಿವರಣೆಗಳನ್ನು ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಆದರೆ, ಇದು ನಾಗರೀಕ ಸರ್ಕಾರ, ಜನಪರವಾದ ಸರ್ಕಾರ. ಪ್ರತಿವರ್ಷ ಸರ್ಕಾರದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಇರುತ್ತವೆ. ಇದು ಎಲ್ಲಾ ಸರ್ಕಾರಕ್ಕೂ ಇರುತ್ತವೆ. ಆದರೆ, ಈ ವರ್ಷ ವಿಶೇಷವಾಗಿ ಕೋವಿಡ್-19 ಇದೆ. ಈ ಸಂದರ್ಭದಲ್ಲಿ ನಮಗೆ ಒಂದು ವರ್ಷದ ನಂತರ ಬಜೆಟ್‌ನಲ್ಲಿ ಏನ್ನೆಲ್ಲಾ ಸ್ಪಷ್ಟವಾದಂತಹ ಚಿತ್ರಣವನ್ನು ಕೊಡಬಹುದಾಗಿತ್ತೋ. ಅದನ್ನು ಕೊಡಲಿಲ್ಲ. ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ಸಾರ್ವಜನಿಕರಿಂದ, ಸರ್ಕಾರಿ ನೌಕರರಿಂದ, ಕೈಗಾರಿಕೋದ್ಯಮಿಗಳಿಂದ, ಸಂಘ ಸಂಸ್ಥೆಗಳಿಂದ,

(ಮುಂದು)

**(460)17-03-2021(3-40)ಎಂವಿ-ಜಿಆರ್**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಧಾರ್ಮಿಕ ಸಂಘ-ಸಂಸ್ಥೆಗಳು ಮತ್ತು ಮಠಗಳಿಂದ ಇನ್ನು ಇತರೆ ಕಡೆಗಳಿಂದ ಕೋಟ್ಯಂತರ ರೂಪಾಯಿ ಹಣ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹರಿದು ಬಂದಿದೆ. ಈ ಕೋವಿಡ್-19 ಪ್ರಾರಂಭವಾದ ಮೂರು ತಿಂಗಳಿಗೆ ಪತ್ರಿಕೆಗಳಲ್ಲಿ ಓದಿದ್ದೆವು. ಈಗಾಗಲೇ ಆರು ಸಾವಿರ ಕೋಟಿ ರೂಪಾಯಿಗಳು ಮುಖ್ಯಮಂತ್ರಿಗಳ ನಿಧಿಗೆ ಬಂದಿದೆ ಎಂದು. ನಮ್ಮ ರಾಜ್ಯದಲ್ಲಿ ಸರ್ಕಾರ ಕೋವಿಡ್-19 ಪ್ರಕ್ರಿಯೆ ಪ್ರಾರಂಭ ಮಾಡಿ ಕರೆಕ್ಟ್ ಆಗಿ ಒಂದು ವರ್ಷವಾಗಿದೆ. ಆದರೆ, ಈ ಒಂದು ವರ್ಷದ ಅವಧಿಯಲ್ಲಿ ಕೋವಿಡ್-19ಗೆ ಸಂಬಂಧಪಟ್ಟಂತೆ ಯಾರ್ಯಾರಿಂದ ಎಷ್ಟೆಷ್ಟು ದೇಣಿಗೆ ಬಂತು ಮತ್ತು ಈ ಹಣವನ್ನು ಯಾವ್ಯಾವ ಇಲಾಖೆಯ ಮೂಲಕ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಸದನದ ಮುಂದೆ ಇದುವರೆಗೂ ಕೂಡ ಒಂದು ಹೇಳಿಕೆ ನೀಡುವುದಕ್ಕೆ ಸಾಧ್ಯವಾಗಿಲ್ಲ. ಈ ಬಜೆಟ್‌ನಲ್ಲಾದರೂ ಕೂಡ ಅದನ್ನು ಉಲ್ಲೇಖ ಮಾಡಬಹುದಿತ್ತು. ಆದರೆ, ಅದನ್ನು ಸಹ ಮಾಡಿಲ್ಲ. ಕೋವಿಡ್-19 ಅನ್ನು ಯಾವ್ಯಾವ ರೀತಿಯಲ್ಲಿ ನಿರ್ವಹಣೆ ಮಾಡಿದ್ದೇವೆಂದು ಹೇಳುತ್ತಾರೆಯೇ ವಿನಃ ಬಂದಂತಹ ಹಣವನ್ನು ಯಾವ್ಯಾವ ಇಲಾಖೆಯ ಮುಖಾಂತರ ಖರ್ಚು ಮಾಡಿದ್ದೇವೆ ಎಂದು ಹೇಳುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದರಿಂದ ನಾವೆಲ್ಲಾ ಜನಪ್ರತಿನಿಧಿಗಳು ಜನಸಾಮಾನ್ಯರ ಮುಂದೆ ತಲೆ ತಗ್ಗಿಸಬೇಕಾದಂತಹ ಪರಿಸ್ಥಿತಿ ಬಂದಿದೆ. ಕೋವಿಡ್-19 ನಿರ್ವಹಣೆಗೆ ಬಂದಂತಹ ಹಣದ ಬಗ್ಗೆ ಸರ್ಕಾರ ಈ ಸದನದ ಮೂಲಕ ಜನರಿಗೆ ತಿಳಿಸದೇ ಇರುವುದರಿಂದ ಇದು ಪಾರದರ್ಶಕವಾಗಿಲ್ಲ, ಇಲ್ಲಿ ಸರ್ಕಾರ ಕೋಟ್ಯಂತರ ರೂಪಾಯಿಗಳನ್ನು ಲೂಟಿ ಮಾಡಿದೆ ಎನ್ನುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಶಯವನ್ನು ಸಾರ್ವಜನಿಕರು ಸರ್ಕಾರದ ಮೇಲೂ ಹೇಳುತ್ತಾರೆ ಮತ್ತು ಜನಪ್ರತಿನಿಧಿಗಳ ಮೇಲೂ ಹೇಳುತ್ತಾರೆ. ಇವತ್ತು ನಾವು ವಿರೋಧ ಪಕ್ಷದಲ್ಲಿ ಇರಬಹುದು,...

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು conclusion ಗೆ ಬರುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಕನಿಷ್ಠಪಕ್ಷ ಒಂದು ಶ್ವೇತಪತ್ರವನ್ನಾದರೂ ಹೊರಡಿಸಬಹುದಿತ್ತು. ಆದರೆ, ಅವರು ಶ್ವೇತಪತ್ರವನ್ನೂ ಹೊರಡಿಸಲಿಲ್ಲ. ಅದನ್ನು ಬಜೆಟ್‌ನಲ್ಲಿ ತಿಳಿಸಬಹುದಿತ್ತು. ಆದರೆ, ಬಜೆಟ್‌ನಲ್ಲೂ ಸಹ ತಿಳಿಸಲಿಲ್ಲ. ಹಾಗಾದರೆ ಜನಪರವಾದ ಸರ್ಕಾರ ಇಷ್ಟೊಂದು ಬಹು ದೊಡ್ಡ ಮೊತ್ತವನ್ನು ಖರ್ಚು ಮಾಡಿರುವುದಕ್ಕೆ ಲೆಕ್ಕ ಇಲ್ಲವೇ? ಅದರ ಮಾಹಿತಿ ಇಲ್ಲವೇ? ಸರ್ಕಾರ ಯಾವುದೇ ರೀತಿಯ ಲೆಕ್ಕವನ್ನು ಇಡುವುದಕ್ಕೆ ಮತ್ತು ಯಾವುದೇ ಆಡಿಟ್ ಅನ್ನು ಮಾಡಿಸುವುದಕ್ಕೆ ಸಂವಿಧಾನದ ಆಶಯಗಳಲ್ಲಿ ಪ್ರತಿಯೊಂದು ಸರ್ಕಾರಕ್ಕೂ ಕೂಡ ವಿಶೇಷವಾದಂತಹ ಅಧಿಕಾರವಿದೆ. ಇಂತಹ ವಿಷಯದ ಬಗ್ಗೆ ಆಡಿಟ್ ಮಾಡಬೇಕೆಂದು ಅಕೌಂಟೆಂಟ್ ಜನರಲ್‌ರವರಿಗೆ ಸೂಕ್ತವಾದ ನಿರ್ದೇಶನವನ್ನು ಕೊಟ್ಟು, ಅದನ್ನು ಆಡಿಟ್ ಮಾಡಿಸುವುದಕ್ಕೆ ಸರ್ಕಾರಕ್ಕೆ ಸಂಪೂರ್ಣವಾದಂತಹ ಅಧಿಕಾರವಿದೆ. ಆ ರೀತಿ ಆಡಿಟ್ ಅನ್ನು ಸಹ ಮಾಡಿಸಿಲ್ಲ. ಒಂದು ಶ್ವೇತಪತ್ರವನ್ನು ಕೂಡ ಹೊರಡಿಸಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನಾವು ಜನಸಾಮಾನ್ಯರಿಗೆ ಏನು ಎಂದು ಉತ್ತರಿಸಬೇಕು. ನಾವು ಇಲ್ಲಿ ಈ ಸಂದರ್ಭದಲ್ಲಿ ಜನಪ್ರತಿನಿಧಿಗಳಾಗಿ ಇದ್ದೇವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಏನು ಹೇಳುತ್ತಾರೆ? ಈ ನಾಡಿನಲ್ಲಿ ಕೋವಿಡ್–19 ಸಂದರ್ಭದಲ್ಲೂ ಕೂಡ ಸರ್ಕಾರ ಎಲ್ಲಾ ರೀತಿಯ ದೊಡ್ಡ ಭ್ರಷ್ಟಾಚಾರಕ್ಕೆ ಒಳಗಾಗಿದೆ ಎಂದು ತೋರಿಸುವಂಥದ್ದು ಆಗಿದೆ. ಇದು ಈ ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ನಾನು ಒಂದು ವಿಷಯವನ್ನು ಹೇಳುತ್ತೇನೆ, ಅಂದರೆ, ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳುತ್ತಾರೆ. 'ಈ ಜಗತ್ತು ದೊಡ್ಡ ಸ್ಮಶಾನ, ಎಲ್ಲರೂ ಅಲ್ಲೆ ಸಲ್ಲಬೇಕು, ಇದು ಸದಾ ನಮಗೆಲ್ಲಾ ನೆನಪಿರಬೇಕು' ಎಂದು. ಈ ಜಗತ್ತಿನ ಆಡಳಿತ ವ್ಯವಸ್ಥೆಯಲ್ಲಿ ಯಾರೂ ಶಾಶ್ವತರಲ್ಲ. ಆದರೆ, ನಾವು ಮನುಷ್ಯರಾಗಿ ಕೆಲವು ಮೌಲ್ಯಗಳನ್ನು ಮತ್ತು ಸರ್ಕಾರ ಒಂದು ತತ್ವನಿಷ್ಠೆ ಮತ್ತು ಪಾರದರ್ಶಕತೆಗಳನ್ನು ಇಟ್ಟುಕೊಳ್ಳಬೇಕು. ಆದರೆ ಅದನ್ನೀಗ ನಾವು ನೋಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಇದೇ ಸಂದರ್ಭದಲ್ಲಿ '2019–20ನೇ ಸಾಲಿನ ಹಣಕಾಸು ವರ್ಷ ಮತ್ತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2020–21ನೇ ಸಾಲಿನ ಮೊದಲನೆ ಮೂರು ತ್ರೈಮಾಸಿಕಗಳಿಗೆ ಸಂಬಂಧಿಸಿದಂತೆ, ಕೈಬಿಡಲಾದ ತೆರಿಗೆ ವೆಚ್ಚ ಮತ್ತು ರಾಜಸ್ವದ ಬಗ್ಗೆ ಮಾಹಿತಿ' ಎಂದು ಇದೆ.

ಮಾನ್ಯ ಸಭಾಪತಿಯವರೇ, ಇಂತಹ ಕಡು ಕಷ್ಟದಲ್ಲೂ ಸಹ ಸರ್ಕಾರ 10 ಸಕ್ಕರೆ ಕಾರ್ಖಾನೆಯವರಿಗೆ 23.95 ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿ ನೀಡಿದ್ದಾರೆ. ಹಾಗೆಯೇ ಸುಮಾರು 31 ಕಂಪನಿಗಳಿಗೆ ಅಂದರೆ, ಟೊಯೋಟಾ ಕಿರ್ಲೋಸ್ಕರ್, ಟಿವಿಎಸ್ ಮೋಟಾರ್ಸ್, ಹೊಂಡಾ ಮೋಟಾರ್ಸ್ – ಈ ರೀತಿ ಸುಮಾರು 31 ಕಂಪನಿಗಳಿವೆ. ಇವರಿಗೆ 1.75 ಸಾವಿರ ಕೋಟಿ ರೂಪಾಯಿಗಳ ತೆರಿಗೆ ಮನ್ನಾ ಮಾಡಿದ್ದಾರೆ. ಈ ಕಂಪನಿಯವರು Industries and Commerce Department ಗೆ ತೆರಿಗೆ ಮನ್ನಾ ಮಾಡಿ ಎಂದು ಅರ್ಜಿ ಹಾಕಿಕೊಂಡಾಗ, ಈ ಕಂಪನಿಗಳಿಗೆ 1.75 ಸಾವಿರ ಕೋಟಿ ರೂಪಾಯಿಗಳ ತೆರಿಗೆ ಮನ್ನಾ ಮಾಡಿದ್ದಾರೆ ಮತ್ತೆ 10 ಸಕ್ಕರೆ ಕಂಪನಿಗಳಿಗೆ 24 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಈ 10 ಸಕ್ಕರೆ ಕಂಪನಿಗಳಿಗೆ ರೈತರಿಗೆ ಹಣ ಕೊಡುವುದಕ್ಕೆ ಕೊಟ್ಟಿದ್ದಾರೆಯೇ ಅಥವಾ ಏತಕ್ಕೆ ಕೊಟ್ಟಿದ್ದಾರೆ? ಇದನ್ನು ಸಕ್ಕರೆ ಮತ್ತು ಸಹಕಾರ ಇಲಾಖೆಯವರು ಹೇಳಬೇಕಾಗಿದೆ. ಈ ಬಜೆಟ್‌ನಲ್ಲಿ ಇದನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಇದನ್ನು ಎಲ್ಲಿಯಾದರೂ ಹೇಳಿದ್ದಾರೆಯೇ ಎಂದು ತಾವೇ ಹೇಳಿ. ಇಷ್ಟರ ಸಂಕಷ್ಟದ ಪರಿಸ್ಥಿತಿಯಲ್ಲೂ ಕೂಡ ಈ ರೀತಿಯಾಗಿರುವುದಕ್ಕೆ, ನಾನು ಕೇಳುತ್ತೇನೆ; ಬಡವರು ಮತ್ತು ಮಹಿಳಾ ಕೂಲಿ ಕಾರ್ಮಿಕರು ಕೆಲಸ ಮಾಡುವಂತಹ ಕಾರ್ಖಾನೆಗಳಿಗೆ ಈ ರೀತಿಯ ತೆರಿಗೆ ರಿಯಾಯಿತಿಯನ್ನು ನೀಡಿ, ತೆರಿಗೆ ಮನ್ನಾ ಮಾಡುತ್ತೇವೆ; ಕಾರ್ಮಿಕರಿಗೆ ವೇತನ ನೀಡಿ ಎಂದು ಹೇಳಲಿ. ಮಹಿಳೆಯರು ಮತ್ತು ಕೂಲಿ ಕಾರ್ಮಿಕರು ಕೆಲಸ ಮಾಡುವಂತಹ, ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವಂತಹ ಕಂಪನಿಗಳಿಗೆ ತೆರಿಗೆ ರಿಯಾಯಿತಿಯನ್ನು ಕೊಡಲಿಲ್ಲ. ಈ 31 ಕಂಪನಿಗಳಿಗೆ 1.75 ಸಾವಿರ ಕೋಟಿ ರೂಪಾಯಿಗಳ ಮತ್ತು ಸಕ್ಕರೆ ಕಾರ್ಖಾನೆಯವರಿಗೆ 29 ಕೋಟಿ ರೂಪಾಯಿಗಳನ್ನು ಇಂತಹ ಸಂಕಷ್ಟ ಪರಿಸ್ಥಿತಿಯಲ್ಲೂ ಕೊಟ್ಟಿದ್ದಾರೆ. ಹಾಗಾದರೆ ಇದು ಜನಪರ ಸರ್ಕಾರವೇ? ಏತಕ್ಕೋಸ್ಕರ, ಯಾವ ಲಾಭಕ್ಕೋಸ್ಕರ, ಯಾರ ಅಭಿವೃದ್ಧಿಗೋಸ್ಕರ ಮತ್ತು ಯಾವ ಬಡವರ ಚಿಂತನೆಗೋಸ್ಕರ ಸರ್ಕಾರ ಈ ತೆರಿಗೆಯನ್ನು ಮನ್ನಾ ಮಾಡಿದೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಎಲ್ಲೂ ಹೇಳಿಲ್ಲ. ಈ ಕೋವಿಡ್–19 ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಜಿ.ಎಸ್.ಡಿ.ಪಿ., ದರದ ಶೇಕಡಾ 5ರವರೆಗೆ ಸಾಲ ಪಡೆದುಕೊಳ್ಳುವುದಕ್ಕೆ ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಿತ್ತು. ಈಗ ಅದನ್ನು ಶೇಕಡಾ 4ಕ್ಕೆ ಇಳಿಸಿದ್ದೇವೆಂದು ಹೇಳುತ್ತಾರೆ. ಈಗ ಶೇಕಡಾ 4ರವರೆಗೆ ಸಾಲ ಪಡೆಯಲು ಅನುಮತಿಸಿದ್ದು, ಅದರಂತೆ ಕರ್ನಾಟಕ ವಿತ್ತೀಯ ಹೊಣೆಗಾರಿಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿನಿಯಮ 2020ಕ್ಕೆ ತಿದ್ದುಪಡಿ ಮಾಡಲು ಪ್ರಸ್ತುತ ಅಧಿವೇಶನದಲ್ಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಗಿದೆ. ಮತ್ತೆ ಸಾಲವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೋಸ್ಕರ ಶೇಕಡಾ 3ರಷ್ಟು ಇರುವುದನ್ನು ಶೇಕಡಾ 4ಕ್ಕೆ ಹೆಚ್ಚಿಸುವುದಕ್ಕೆ ವಿಧೇಯಕವನ್ನು ಮಂಡಿಸುತ್ತೇವೆಂದು ಹೇಳುತ್ತಾರೆ. ನಾನು ಇದನ್ನು ಖಂಡಿಸುತ್ತೇನೆ ಮತ್ತು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, the Government of India has given permission upto 5%.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರ ಶೇಕಡಾ 5ಕ್ಕೆ ಅನುಮತಿ ನೀಡಿದೆ. ಅದನ್ನು ಶೇಕಡಾ 4ಕ್ಕೆ ಇಳಿಸಿದ್ದೇವೆಂದು ಹೇಳಿದ್ದಾರೆ. ಈಗ ನಾನು ಅದನ್ನೇ ಓದುತ್ತಿದ್ದೇನೆ. ಈಗ ಮತ್ತೆ ಮುಂದೆ ಓದಿದರೆ, ಖಂಡಿತವಾಗಿ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಬಡ ಜನರ ಹೊಟ್ಟೆಯ ಮೇಲೆ ಹೊಡೆದು ಸಾಲ ಮಾಡುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾನು ಇದನ್ನು ಖಂಡಿಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಕ್ಕರೆ ಕಾರ್ಖಾನೆಗಳ ಬಗ್ಗೆ ಏನು ಹೇಳುತ್ತಿದ್ದಾರೆ, kindly you clarify this issue. ಇದು ಯಾವ ವರ್ಷದ ಕಬ್ಬಿನ ತೆರಿಗೆ, ಇದನ್ನು ಯಾವ ಸರ್ಕಾರ defer ಮಾಡಿದೆ? From 2015 it has been deferred.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವಾಗ ಅದನ್ನು ಹೇಳಲಿ. ಈಗ ದಯವಿಟ್ಟು ಮಾನ್ಯ ಸದಸ್ಯರನ್ನು ಕುಳಿತುಕೊಳ್ಳುವಂತೆ ಹೇಳಿ. ಇನ್ನು ಚರ್ಚೆ ಮಾಡುವುದು ಇದೆ. ಪುನಃ ನಾನು ಸ್ವಲ್ಪ ಸ್ವಲ್ಪ ಹೇಳುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಮಗೆ reality ಇರಬೇಕು. ನಮಗೆ clarity ಬೇಕು ಅಷ್ಟೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಹೇಗೆ ಇದೆ ಎಂದರೆ, ಆಹಾರ ಧಾನ್ಯಗಳ ಹೆಚ್ಚಳ, ಇವತ್ತು ಶೇಕಡಾ 20ರಷ್ಟು ಬೆಳೆ ನಷ್ಟವಾದರೂ ಕೂಡ 2020-21ನೇ ಸಾಲಿನಲ್ಲಿ ಬೆಳೆಗಳ ಉತ್ಪಾದನೆ 144.95 ಲಕ್ಷ ಟನ್ ಹೆಚ್ಚಳವೆಂದು ಹೇಳಿದ್ದಾರೆ. ಇವತ್ತು ಕೋವಿಡ್-19

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲೂ ಕೂಡ ಆರ್ಥಿಕ ಸಂಪತ್ತು ಹೆಚ್ಚು ಮಾಡಿರುವಂಥದ್ದು ರೈತರು ಮತ್ತು ರೈತ ಕಾರ್ಮಿಕರು ಎನ್ನುವುದನ್ನು ಈ ಸರ್ಕಾರ ಮನಗಾಣಬೇಕು.

**(ಮುಂದು)**

**(461) 03.50 17.03.2021 ಎಲ್ಎಲ್/ಜಿಆರ್**

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಒಂದು ರೆಕಾರ್ಡ್ ಮಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ಈ ರೀತಿಯಾದರೆ ನಾನು ಇನ್ನೂ ಮೂರು ದಿನ ಮಾತನಾಡುತ್ತೇನೆ. ತಾವು ನನಗೆ ಅವಕಾಶ ಕೊಡಬೇಕಾಗುತ್ತದೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು.

**ಉಪ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರು ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ತಾವು ಅದನ್ನು ನೋಟ್ ಮಾಡಿಕೊಳ್ಳಿ. **(ಗೊಂದಲ)** ನಂತರ ತಮಗೆ ಅವಕಾಶ ಕೊಟ್ಟಾಗ ತಾವು ಅದರ ಬಗ್ಗೆ ಮಾತನಾಡಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಅದನ್ನು ತಿದ್ದುಪಡಿ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವಾಗ ಮರಿತಿಬ್ಬೇಗೌಡರವರು ಈ ರೀತಿ ಮಾತನಾಡಿದರೆಂದು ಕುರಿತು ಮಾತನಾಡಲಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮಾತನಾಡುವಾಗ ಯಾರ ಹೆಸರನ್ನು ಕರೆಯಬೇಡಿ. ತಾವು ಯಾರ ಹೆಸರನ್ನಾದರೂ ಕರೆದರೆ, ಅವರು ತಕ್ಷಣ ನಿಲ್ಲುತ್ತಾರೆ. ಹಾಗಾಗಿ, ತಾವು ನನ್ನನ್ನು ನೋಡಿ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೋ ಅಥವಾ ಯಾರು ಬೇಕಾದರೂ ಉತ್ತರ ಕೊಡಬಹುದೋ?

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು. ಕೇಂದ್ರ ಸರ್ಕಾರ ಶೇಕಡ 5 ಕ್ಕೆ ಅವಕಾಶ ಮಾಡಿಕೊಟ್ಟಿದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಎಲ್ಲವನ್ನೂ ನೋಟ್ ಮಾಡಿಕೊಳ್ಳಿ. ತಮಗೂ ಸಹ ಮಾತನಾಡುವುದಕ್ಕೆ ಅವಕಾಶವಿದೆ. ಆಗ ತಾವು ಅದರ ಬಗ್ಗೆ ಮಾತನಾಡಬಹುದು. **(ಗೊಂದಲ)** ಮಾನ್ಯ ಮರಿತಿಬ್ಬೇಗೌಡರವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಮಾನ್ಯ ಭೋಜೇಗೌಡರೇ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಉತ್ತರ ಯಾರು ಕೊಡುತ್ತಾರೆಂದು ದಯಮಾಡಿ ತಿಳಿಸಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರು yield ಆದರೆ, ನೀವು ಮಾತನಾಡಿ. ಒಂದು ವೇಳೆ ಅವರು yield ಆಗದೇ ಹೋದರೆ ದಯಮಾಡಿ ಯಾರು ಎದ್ದು ನಿಂತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಬೇಡಿ. (**ಗೊಂದಲ**) ಮಾನ್ಯ ಮರಿತಿಬ್ಬೇಗೌಡರವರು ಮಾತನಾಡುವ ಸಂದರ್ಭದಲ್ಲಿ yield ಆದರೆ, ಯಾವ ಸದಸ್ಯರು ಮಾತನಾಡುತ್ತಾರೆ, ಅದನ್ನು ಮಾತ್ರ ಕಡತಕ್ಕೆ ಹಾಕಿಕೊಳ್ಳಿ. ಇಲ್ಲದೇ ಹೋದರೆ ಯಾವುದನ್ನು ಕಡತಕ್ಕೆ ಹಾಕಿಕೊಳ್ಳಬೇಡಿ. ಈಗ ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೋವಿಡ್–19 ಸಂದರ್ಭದಲ್ಲಿಯೂ ಕೂಡ 2020–21ನೇ ಸಾಲಿನಲ್ಲಿ ಆರ್ಥಿಕ ಸಂಪತ್ತನ್ನು ಹೆಚ್ಚಳ ಮಾಡಿದ್ದು ಎಂದರೆ, ಯಾವುದೇ ಕೈಗಾರಿಕೆಯಲ್ಲ ಅಥವಾ ಯಾವುದೇ ವ್ಯಾಪಾರ–ವಹಿವಾಟು ಅಲ್ಲ. ಅದು ಈ ನಾಡಿನ ರೈತ ಮತ್ತು ರೈತ ಕಾರ್ಮಿಕರಿಂದ ಅದು ಸಾಧ್ಯವಾಗಿರುತ್ತದೆ. ಆರ್ಥಿಕ ಸಂಪತ್ತಿನ ಹೆಚ್ಚಳ ಎನ್ನುವಂಥದ್ದನ್ನು ಸರ್ಕಾರ ಹೇಳುತ್ತಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಮಾನ್ಯ ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿಯೂ ಕೂಡ ರೈತರು ಈ ದೇಶದ ಬೆನ್ನೆಲುಬಾಗಿ ಆರ್ಥಿಕ ಸಂಪತ್ತನ್ನು ಹೆಚ್ಚಿಸುವಂತಹ ಕೆಲಸ ಮಾಡಿದೆ ಎನ್ನುವುದು ಮನವರಿಕೆಯಾದರೂ ಸಹ ಸರ್ಕಾರ ಕೈಗಾರಿಕೆಗಳಿಗೆ ಬಹಳ ಒತ್ತು ಕೊಟ್ಟಿದ್ದೇವೆಂದು ಹೇಳುತ್ತಿದೆ. ಕೃಷಿ ಆಧಾರಿತ ಕೈಗಾರಿಕೆಗಳಿಗೆ ವಿಶೇಷವಾದಂತಹ ಆದ್ಯತೆಯನ್ನು ಈ ಸರ್ಕಾರ ಕೊಡುತ್ತಿಲ್ಲ. ಕೃಷಿ ಆಧಾರಿತವಾದಂತಹ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ದಯಮಾಡಿ ಒತ್ತು ಕೊಡಬೇಕು. ಆ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಆದರೆ, ಸರ್ಕಾರ ಇವೊತ್ತಿನ ದಿವಸ ಏನಾಗಿದೆಯೆಂದರೆ, ಇದುವರೆವಿಗೂ ಕೂಡ ರೈತರ ಪಂಪ್‌ಸೆಟ್‌ಗಳಿಗೆ 10 ತಾಸು ನಿರಂತರ ವಿದ್ಯುತ್ ಅನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿರುವುದಿಲ್ಲ. ಇವೊತ್ತಿನ ದಿವಸ ವಿದ್ಯುಚ್ಛಕ್ತಿ ಸರ್‌ಪ್ಲಸ್ ಎಂದು ಹೇಳುತ್ತಾರೆ ಮತ್ತು ನಮ್ಮ ನಾಡಿನಲ್ಲಿ ವಿದ್ಯುಚ್ಛಕ್ತಿ ಕೊರತೆ ಇರುವುದಿಲ್ಲವೆಂದು ಹೇಳುತ್ತಾರೆ. ಇದನ್ನು ಸಮೃದ್ಧಿ ಮಾಡುವುದಕ್ಕೆ ಎಲ್ಲಾ ಸರ್ಕಾರಗಳು ಕೂಡ ಸಹಕಾರ ಮಾಡಿವೆ. ಅದಕ್ಕಾಗಿ, ಎಲ್ಲಾ ಸರ್ಕಾರಗಳಿಗೆ ನಾನು ಧನ್ಯವಾದ ಹೇಳುತ್ತೇನೆ. ಈ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಮತ್ತು ಅದರಲ್ಲಿ ನಮ್ಮ ರಾಜ್ಯ ಸ್ವಾವಲಂಬನೆಯಾಗುವುದಕ್ಕೆ ಎಲ್ಲಾ ಸರ್ಕಾರಗಳು ಕೈಜೋಡಿಸಿರುತ್ತವೆ. ಇಷ್ಟೆಲ್ಲಾ ಸ್ವಾವಲಂಬಿಯಾದರೂ ಕೂಡ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಏನೆಂದರೆ, ಇವೊತ್ತಿನ ದಿವಸ ದಿನನಿತ್ಯ ಬರತಕ್ಕಂತಹ ವಿದ್ಯುತ್ ಪರಿವರ್ತಕಗಳ ತೊಂದರೆಯನ್ನು, ಅಡೆತಡೆಗಳನ್ನು ಅಥವಾ ಸಬ್–ಸ್ಟೇಷನ್‌ಗಳನ್ನು ಕೊಡುವುದಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಸಬ್–ಸ್ಟೇಷನ್‌ಗಳು ಇಲ್ಲದೇ ಇರುವುದರಿಂದ, 24 ತಾಸುಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಬದಲಾವಣೆ ಮಾಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಹೇಳಿದೆ. ಆದರೆ, 24 ತಾಸುಗಳಲ್ಲಿ ಯಾವುದೇ ರೈತರಿಗೆ ಯಾವುದೇ ವಿದ್ಯುತ್ ಪರಿವರ್ತಕಗಳು ಸಿಗುತ್ತಿಲ್ಲ. ಇವೊತ್ತಿನ ದಿವಸ 25 ಕೆ.ವಿ., ಸಾಮರ್ಥ್ಯದ ಪರಿವರ್ತಕಗಳಿಗೆ 55 ಕೆ.ವಿ., ಸಾಮರ್ಥ್ಯದ ಕನೆಕ್ಷನ್ ಕೊಡುತ್ತಾರೆ. ಅದರಿಂದಾಗಿ, ಅದು ಸುಟ್ಟು ಹೋಗಿ ಒಂದು ದಿನ ಸಹ ಬಾಳಿಕೆ ಬರುವುದಿಲ್ಲ. ಈ ಎಲ್ಲಾ ಕಾರಣಕ್ಕಾಗಿ ಇವೊತ್ತಿನ ದಿನ      ಸಬ್-ಸ್ಟೇಷನ್‌ಗಳು ಹಾಕಬೇಕು, ಅದನ್ನು ಹಾಕುತ್ತಿಲ್ಲ. ಜೊತೆಗೆ, ಹೊಸ ವಿದ್ಯುತ್ ತಂತಿಗಳನ್ನು ಅಳವಡಿಸಬೇಕು, ಅವುಗಳನ್ನು ಹಾಕುತ್ತಿಲ್ಲ. ದಯಮಾಡಿ, ಸರ್ಕಾರ ರೈತರಿಗೆ ಮೊದಲು ಈ ಅನುಕೂಲವನ್ನು ಮಾಡಬೇಕು. ಈ ಭಾರತ ದೇಶದ ಅಥವಾ ಈ ನಾಡಿನ ಬೆನ್ನೆಲುಬು ರೈತರು.

ಇದರ ಜೊತೆಗೆ, ಸರ್ಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಹನಿ ನೀರಾವರಿ ಸಬ್ಸಿಡಿ ಕೊಡುವುದಾಗಿ ಹೇಳಿದೆ. ಉದಾಹರಣೆಗೆ, ಒಬ್ಬ ರೈತನ ಬಳಿ 5 ಎಕರೆ 10 ಅಥವಾ 15 ಗುಂಟೆ ಜಮೀನು ಇದ್ದು, ಅದು ಸಣ್ಣ ಅಥವಾ ಅತೀ ಸಣ್ಣ ವ್ಯಾಪ್ತಿಗೆ ಬರುವುದಾದರೆ ಆ ರೈತ ಇಂತಹ ಸವಲತ್ತಿನಿಂದ ವಂಚಿತನಾಗುತ್ತಾನೆ. ಇವೊತ್ತಿನ ದಿವಸ ಹನಿ ನೀರಾವರಿ ತಂದಿರುವ ಉದ್ದೇಶವೇನೆಂದರೆ, ನೀರಿನ ಬಳಕೆಯನ್ನು ಉತ್ತಮಪಡಿಸಬೇಕು; ಕಡಿಮೆ ನೀರಿನ ಬಳಕೆಯಲ್ಲಿ ಉತ್ತಮವಾದಂತಹ ಮತ್ತು ಯೋಗ್ಯವಾದಂತಹ ಬೆಳೆಯನ್ನು ಬೆಳೆಯಬೇಕು; ನೀರಿನ ಸದ್ಬಳಕೆ ಮಾಡಿಕೊಳ್ಳಬೇಕು ಎನ್ನುವಂತಹ ಸದುದ್ದೇಶದಿಂದ ಹನಿ ನೀರಾವರಿಯನ್ನು ಜಾರಿಗೆ ತರಲಾಗಿರುತ್ತದೆ. ಆದರೆ, ಸರ್ಕಾರ ಇದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಎಂದು ವಿಂಗಡಣೆ ಮಾಡುವ ಬದಲಾಗಿ, 10 ಎಕರೆ ಅಥವಾ 20 ಎಕರೆ ಜಮೀನಿನವರೆಗೂ ರಿಯಾಯಿತಿ ಕೊಡುತ್ತೇವೆ ಎನ್ನುವಂಥದ್ದನ್ನು ದಯಮಾಡಿ ಹೇಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇವೊತ್ತಿನ ದಿವಸ, ಕೇಂದ್ರ ಸರ್ಕಾರ ರೈತರ ಕೆಲವು ಬೆಳೆಗಳಿಗೆ ಬೆಂಬಲ ಬೆಲೆ ನೀಡುತ್ತಿದೆ. ಆದರೆ, ರಾಜ್ಯ ಸರ್ಕಾರ ಯಾವುದೇ ವಿಧವಾದಂತಹ ಬೆಂಬಲ ಬೆಲೆಯನ್ನು ಕೊಡುತ್ತಿಲ್ಲ. ಕೇಂದ್ರ ಸರ್ಕಾರ ಕೊಡುವಂತಹ ಬೆಂಬಲ ಬೆಲೆಯನ್ನು ಮಾತ್ರ ಈ ಸರ್ಕಾರ ಹಂಚಿಕೆ ಮಾಡುತ್ತಿದೆ. ಉದಾಹರಣೆಗೆ, ಈ ಸಾಲಿನಲ್ಲಿ ಭತ್ತ ಖರೀದಿ ಅಥವಾ ತೊಗರಿ ಖರೀದಿ ಮಾಡುವುದಕ್ಕಾಗಿ ನಮ್ಮ ರಾಜ್ಯ ಸರ್ಕಾರ ಖರೀದಿ ಕೇಂದ್ರಗಳನ್ನು ಜನವರಿ ತಿಂಗಳಿನಲ್ಲಿ ತೆರೆದಿರುತ್ತದೆ. ಆ ಖರೀದಿ ಕೇಂದ್ರಗಳನ್ನು ನವೆಂಬರ್ ತಿಂಗಳಿನಲ್ಲಿಯೇ ತೆರೆಯಬೇಕಾಗಿತ್ತು. ಖರೀದಿ ಕೇಂದ್ರಗಳನ್ನು ನವೆಂಬರ್ ತಿಂಗಳಿನಲ್ಲಿ ತೆರೆಯದೇ ತಡವಾಗಿದ್ದರಿಂದ, ನೆರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ನಮ್ಮ ರೈತರಿಂದ ಅತ್ಯಂತ ಕಡಿಮೆ ದರಕ್ಕೆ ಖರೀದಿ ಮಾಡಿದರು. ಇವೊತ್ತಿನ ದಿವಸ ಸರ್ಕಾರ ರೈತರನ್ನು ಉದ್ಧಾರ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆಂದು ಎ.ಪಿ.ಎಂ.ಸಿ., ವಿಧೇಯಕ ಮತ್ತು ಭೂಸುಧಾರಣಾ ವಿಧೇಯಕವನ್ನು ತಿದ್ದುಪಡಿಗೆ ತಂದು ಅಂಗೀಕಾರ ಮಾಡಿಕೊಂಡಿರುತ್ತಾರೆ. ಈ ಎಲ್ಲಾ ವಿಧೇಯಕಗಳನ್ನು ತಿದ್ದುಪಡಿಗೆ ತೆಗೆದುಕೊಂಡು ಬಂದರೂ ಸಹ ರೈತರಿಗೆ ಬೆಂಬಲ ಬೆಲೆಗಿಂತಲೂ ಜಾಸ್ತಿ ದರವನ್ನು ಬಂಡವಾಳಶಾಹಿಗಳು ಕೊಡುತ್ತಾರೆ ಎನ್ನುವಂತಹ ಘೋಷಣೆಗಳು ಮತ್ತು ಜಾಹೀರಾತನ್ನು ವಿಪರೀತವಾಗಿ ಕೊಟ್ಟಿರುತ್ತಾರೆ. ಆದರೆ, ಈ ಸಾಲಿನಲ್ಲಿ ಯಾವ ರೈತರಿಗೂ ಸಹ ಈ ರಾಜ್ಯದಲ್ಲಿ ಬೆಂಬಲ ಬೆಲೆಗಿಂತ ಹೆಚ್ಚು ದರವನ್ನು ಒಂದೇ ಒಂದು ಕ್ವಿಂಟಾಲ್ ಬೆಳೆಗೂ ಸಹ ಸಿಕ್ಕಿರುವುದಿಲ್ಲ. ಇದರಿಂದಾಗಿ, ಈ ರೈತ ಸಮುದಾಯಕ್ಕೆ ಹೆಚ್ಚು ತೊಂದರೆಯಾಗಿರುತ್ತದೆ.

ಆದುದರಿಂದ, ಈ ಸರ್ಕಾರದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಪ್ರತಿ ವರ್ಷ ಬಜೆಟ್‌ನಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ರೈತರು ಸಂಕಷ್ಟಕ್ಕೆ ಒಳಗಾದಾಗ ಅವರು ಬೆಳೆದಂತಹ ಬೆಳೆಯನ್ನು ಖರೀದಿ ಮಾಡುವುದಕ್ಕೆ, ಧಾನ್ಯಗಳನ್ನು ಖರೀದಿ ಮಾಡುವುದಕ್ಕೆ ಅಥವಾ ಹಣ್ಣು-ಹಂಪಲುಗಳನ್ನು ಖರೀದಿ ಮಾಡುವುದಕ್ಕೆ ಮೀಸಲಿಡಬೇಕು. ಅದನ್ನು ಏತಕ್ಕೆ ಮಾಡಿರುವುದಿಲ್ಲ? ರೈತರ ಹೆಸರಿನಲ್ಲಿ ಬಜೆಟ್ ಮಂಡನೆ ಮಾಡಿದಂತಹವರು; ಇವೊತ್ತಿನ ದಿವಸ ವಲಯವಾರು ಬಜೆಟ್ ಮಂಡನೆ ಮಾಡುತ್ತಿರುವವರು, ರೈತರ ಬಗ್ಗೆ ಕಣ್ಣೀರು ಸುರಿಸುವಂತಹವರು ಈ ಸಾಲಿನ ಬಜೆಟ್‌ನಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಆವರ್ತ ನಿಧಿ ಏತಕ್ಕೆ ಇಟ್ಟಿರುವುದಿಲ್ಲ? ಒಂದು ವೇಳೆ ಆ ರೀತಿ ಆವರ್ತ ನಿಧಿ ಇಟ್ಟಿದ್ದರೆ ನಾನು ಈ ಸರ್ಕಾರವನ್ನು ಒಪ್ಪುತ್ತಿದ್ದೆನು. ರೈತರ ಬಗ್ಗೆ ಮತ್ತು ರೈತ ಕಾರ್ಮಿಕರ ಬಗ್ಗೆ ಇರತಕ್ಕಂತಹ ಕಾಳಜಿ ಇದು ಎಂದು ನಾನು ಒಪ್ಪುತ್ತಿದ್ದೆನು. ಇದು ಯಾವುದನ್ನು ಮಾಡದೇ, ಹನಿ ನೀರಾವರಿಗೆ ಇಷ್ಟು ಮತ್ತು ಕೇಂದ್ರ ಸರ್ಕಾರ 2 ಸಾವಿರ ರೂಪಾಯಿ ಹಣವನ್ನು ಪ್ರತಿ ರೈತರಿಗೆ 3 ಕಂತುಗಳಲ್ಲಿ, ಮತ್ತು ರಾಜ್ಯ ಸರ್ಕಾರ 2 ಸಾವಿರ ರೂಪಾಯಿ ಹಣವನ್ನು 2 ಕಂತುಗಳಲ್ಲಿ ಒಟ್ಟಾರೆಯಾಗಿ 10 ಸಾವಿರ ರೂಪಾಯಿ ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಾಕುತ್ತದೆ. ಆ ಹಣವನ್ನು ರೈತರು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಿಂದ ಜಮಾ ಮಾಡಿಕೊಂಡು ಹತ್ತಿರದ ಅಂಗಡಿಯಲ್ಲಿ ಸ್ವಲ್ಪ ಎಣ್ಣೆ-ಗಿಣ್ಣೆ ಹಾಕಿಕೊಂಡು, ಅದರಲ್ಲಿ ಏನಾದರೂ ಹಣ ಉಳಿದರೆ ಮನೆಗೆ ಉಪ್ಪು-ಮೆಣಸಿನಕಾಯಿ ತೆಗೆದುಕೊಂಡು ಹೋಗಪ್ಪಾ ಎನ್ನುವ ರೀತಿ ಇರುತ್ತದೆ. ಇಂತಹ ಸೌಲಭ್ಯವನ್ನೇ ರೈತರಿಗೆ ಕೊಡುವುದು? ಇಷ್ಟು ಕೋಟಿ ರೈತರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಕೊಡಲಾಗಿದೆ ಎಂದು ಪತ್ರಿಕೆ ಮತ್ತು ಟಿ.ವಿ., ಮಾಧ್ಯಮಗಳಲ್ಲಿ ಜಾಹೀರಾತು ಕೊಟ್ಟಿದ್ದೇ ಕೊಟ್ಟಿದ್ದು. ಅದರ ಬದಲಾಗಿ, ಬಜೆಟ್‌ನಲ್ಲಿ ರೈತರಿಗೆ 10 ಸಾವಿರ ಕೋಟಿ ರೂಪಾಯಿ ಆವರ್ತ ನಿಧಿ ಮೀಸಲಿಟ್ಟು ಯಾವುದೇ ಟಿ.ವಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಧ್ಯಮ ಅಥವಾ ಪತ್ರಿಕೆಯಲ್ಲಿ ತಿಂಗಳಾನುಗಟ್ಟಲೆ ಜಾಹೀರಾತು ಹಾಕಿಸಿಕೊಳ್ಳಲಿ. ಆದರೆ, ಸರ್ಕಾರ ಈ ಕೆಲಸ ಮಾಡಿರುವುದಿಲ್ಲ. ಬದಲಾಗಿ ಯಾವ ಕೆಲಸ ಮಾಡಿದ್ದಾರೆ?

**(ಮುಂದು)**

**(462) 17.03.2021 4.00 ವೈಎಲ್-ಎಂಡಿ**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಒಂದು ದೇಶದಲ್ಲಿ ಒಬ್ಬ ರಾಜನಿರುತ್ತಾನೆ. ಆ ರಾಜನನ್ನು ಒಬ್ಬ ಶಿಲ್ಪಿ ಭೇಟಿಯಾಗಿ 'ಮಹಾರಾಜರೇ ತಾವು ಅನುಮತಿ ನೀಡಿದರೆ, ಒಂದು ಸುಂದರವಾದ ಮನೆಯನ್ನು ಕಟ್ಟುತ್ತೇನೆ' ಎಂದು ಕೇಳುತ್ತಾನೆ. ಅದಕ್ಕೆ ಮಹಾರಾಜ 'ಆಯಿತು' ಎಂದು ಅನುಮತಿ ನೀಡುತ್ತಾನೆ. ರಾಜರಿಗೂ ಅದೇ ಕೆಲಸವಾಗಿರುವುದರಿಂದ ಅನುಮತಿ ನೀಡುತ್ತಾರೆ. ಅದೇ ರೀತಿ ಆ ಶಿಲ್ಪಿ ಬಹಳ ಸುಂದರವಾದಂಥ ಅರಮನೆಯನ್ನು ಕಟ್ಟುತ್ತಾನೆ. ಆ ರಾಜ ಅರಮನೆಯ ಉದ್ಘಾಟನೆಯಾದ ನಂತರ ಆ ಶಿಲ್ಪಿಯ ಬಲಗೈಯನ್ನು ತೆಗೆಸುತ್ತಾನೆ. ತದನಂತರ ಆ ಶಿಲ್ಪಿ ಬೇರೆ ದೇಶಕ್ಕೆ ತೆರಳುತ್ತಾನೆ. ಆ ದೇಶಕ್ಕೆ ಹೋಗಿ ಅಲ್ಲಿ ಮತ್ತೊಬ್ಬ ರಾಜನನ್ನು ಭೇಟಿಯಾಗಿ, ನಡೆದ ಸಂಗತಿಯನ್ನು ವಿವರಿಸಿ, ಹಿಂದಿನ ಮಹಾರಾಜನ ಮೇಲಿನ ದ್ವೇಷ, ಅಸೂಯೆಯಿಂದಾಗಿ ಅದಕ್ಕಿಂತ ಉನ್ನತವಾದ ಅರಮನೆಯನ್ನು ಕಟ್ಟುತ್ತೇನೆ, ನನಗೆ ಅರಮನೆ ಕಟ್ಟಲು ಅವಕಾಶ ನೀಡಿ ಎಂದು ಕೇಳುತ್ತಾನೆ. ಅದಕ್ಕೆ ಆ ರಾಜನು 'ನಿನಗೆ ಬಲಗೈ ಇಲ್ಲ ಹೇಗೆ ಮನೆ ಕಟ್ಟುತ್ತೀಯಾ' ಎಂದು ಕೇಳುತ್ತಾನೆ. ಅದಕ್ಕೆ ಆ ಶಿಲ್ಪಿ 'ನೀವು ಅವಕಾಶ ನೀಡಿ, ನಾನು ಕಟ್ಟುತ್ತೇನೆ' ಎಂದು ಹೇಳುತ್ತಾನೆ. ನಂತರ ಆ ರಾಜನು ಆತನಿಗೆ ಅವಕಾಶ ನೀಡುತ್ತಾನೆ. ಹಿಂದೆ ಕಟ್ಟಿದಂಥ ಅರಮನೆಗಿಂತ ಅದ್ಭುತವಾದ ಅರಮನೆಯನ್ನು ಕಟ್ಟುತ್ತಾನೆ. ಅದಕ್ಕೆ ಆ ರಾಜ ಈತ ಬೇರೆ ಕಡೆ ಹೋಗಿ ಇನ್ನೊಂದು ಅರಮನೆಯನ್ನು ಕಟ್ಟಬಹುದು ಎಂದು ಎಡಗೈ ತೆಗೆಯಿಸುತ್ತಾನೆ.

ಆಗ ಆ ಶಿಲ್ಪಿ ಅವರಿವರ ಸಹಾಯ ಪಡೆದುಕೊಂಡು ಮತ್ತೊಂದು ದೇಶಕ್ಕೆ ತೆರಳಿ, ಆ ದೇಶದ ಮಹಾರಾಜನನ್ನು ಭೇಟಿಯಾಗಿ 'ಆ ಎರಡು ದೇಶಕ್ಕಿಂತ ಉನ್ನತವಾದ ಅರಮನೆಯನ್ನು ನಿರ್ಮಿಸುತ್ತೇನೆ, ನೀವು ಅವಕಾಶ ನೀಡಿ' ಎಂದು ಕೇಳುತ್ತಾನೆ. ಅದಕ್ಕೆ ಆ ಮಹಾರಾಜ 'ನಿನಗೆ ಎರಡು ಕೈ ಇಲ್ಲ, ಹೇಗೆ ಅರಮನೆಯನ್ನು ಕಟ್ಟುತ್ತೀಯಾ' ಎಂದು ಕೇಳುತ್ತಾನೆ. ಆದರೆ, ಆ ಶಿಲ್ಪಿ 'ನೀವು ಅವಕಾಶ ನೀಡಿ' ಎಂದು ಮಹಾರಾಜನನ್ನು ಕೇಳುತ್ತಾನೆ. ಅದಕ್ಕೆ ಆ ಮಹಾರಾಜ ಆಯಿತು ಎಂದು ಹೇಳಿ, ಅವಕಾಶ ನೀಡುತ್ತಾನೆ. ಅಲ್ಲಿ ಅವೆರಡಕ್ಕಿಂತ ಸುಂದರವಾದ ಮನೆಯನ್ನು ನಿರ್ಮಿಸುತ್ತಾನೆ. ಆದರೆ, ಆ ಮಹಾರಾಜ ಆತನ ಎಲ್ಲಾ ಇತಿಹಾಸವನ್ನು ಕೇಳಿಕೊಂಡು, ಕೊನೆಗೆ ಆತನ ಕತ್ತನ್ನೇ ಕತ್ತರಿಸುತ್ತಾನೆ. ಇವತ್ತು ಭಾರತೀಯ ಜನತಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾರ್ಟಿಯವರು ರೈತರ ವಿಷಯದಲ್ಲಿ ಅಂತಹ ಕೆಲಸವನ್ನು ಮಾಡಿದ್ದಾರೆ. ಇವತ್ತು ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆಯನ್ನು ಜಾರಿಗೆ ತಂದು ರೈತರ ಕತ್ತನ್ನೇ ಕತ್ತರಿಸಿಬಿಟ್ಟಿದ್ದಾರೆ. ಈಗಾಗಲೇ ನಾನು ಶ್ರೀ ಪೂರ್ಣಚಂದ್ರ ತೇಜಸ್ವಿಯವರು ಬರೆದ ಕಥೆಯನ್ನು ಓದಿ ತಿಳಿಸಿದ್ದೇನೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಪೂರ್ಣಚಂದ್ರ ತೇಜಸ್ವಿಯವರು ಕಥೆ ಬರೆದಿದ್ದಾರೆಯೇ? ಅಥವಾ ಬಿ.ಜೆ.ಪಿ. ಯವರು ಕತ್ತು ಕತ್ತರಿಸಿದರು ಎಂದು ಕಥೆ ಬರೆದಿದ್ದಾರೆಯೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಪೂರ್ಣಚಂದ್ರ ತೇಜಸ್ವಿಯವರು ಕಥೆಯನ್ನೇ ಬರೆದಿದ್ದಾರೆ. ಆ ಕಥೆಯು ಅವರಿಗೆ ಹೋಲಿಕೆಯಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಅವರಿಗೆ ಹೋಲಿಕೆ ಮಾಡಿ ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರೆ ನಾನು ನಿಮ್ಮ ಸ್ನೇಹಿತ, ಸ್ವಲ್ಪ ಮಾತನಾಡುವುದನ್ನು ನಿಲ್ಲಿಸಿ, ಗಡಿ-ಬಿಡಿ ಮಾಡಿಕೊಳ್ಳುವುದು ಬೇಡ. ತಾವು ಉದಾಹರಣೆ ನೀಡಿದ್ದು ಒಳ್ಳೆಯದೇ. ಆದರೆ, ಶ್ರೀ ಪೂರ್ಣಚಂದ್ರ ತೇಜಸ್ವಿಯವರನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಾರದಿತ್ತು.

**ಶ್ರೀ ಮರಿತಿಬ್ಬೇಗೌಡ:-** ಶ್ರೀ ಲಾಲ್ ಬಹದೂರ್ ಶಾಸ್ತ್ರಿಯವರು 'ಜೈ ಜವಾನ್, ಜೈ ಕಿಸಾನ್' ಘೋಷಣೆ ಮಾಡಿದರು. ಇವತ್ತು ಏನಾಗಿದೆ ಎಂದರೆ, 'ಜೈ ಜವಾನ್' ಎಂಬುದು ಸರಿ ಇದೆ. ಆದರೆ, 'ಜೈ ಕಿಸಾನ್' ಹೋಗಿ, 'ಜೈ ಕಿಸಾನ್' ಆಗಿದೆ. ಈ ಸರ್ಕಾರ ರೈತರನ್ನೆಲ್ಲಾ ಜೈಲಿಗೆ ಹಾಕಿ ಚೆಚ್ಚುತ್ತಿದ್ದಾರೆ. ರೈತರು ಪ್ರತಿಭಟನೆ ಮಾಡುವ ಹಕ್ಕಿಲ್ಲ, ಉಸಿರು ಬಿಡುವ ಹಾಗಿಲ್ಲ. ಇದು ಜೈ ಜವಾನ್, ಜೈ ಕಿಸನ್ ಎನ್ನುವಂಥದಾಗಿದೆ. ಇವತ್ತು ಇಂತಹ ಕೆಲಸವನ್ನು ಭಾರತೀಯ ಜನತಾ ಪಾರ್ಟಿಯವರು ಮಾಡುತ್ತಿದ್ದಾರೆ. ರೈತರನ್ನು ಎಲ್ಲಿ ಉಳಿಸುತ್ತಿದ್ದಾರೆಯೋ!

ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಕಾವೇರಿ ಕಣಿವೆ ನೀರಾವರಿಗೆ ಎಷ್ಟೆಷ್ಟು ಹಣವನ್ನು ಇರಿಸಿದ್ದಾರೆ ಎಂದರೆ, 2018-19 ಮತ್ತು 2019-20ನೇ ಸಾಲಿನಲ್ಲಿ ಕಾವೇರಿ ಕೊಳ್ಳಕ್ಕೆ ಹಿಂದಿನ ಸರ್ಕಾರ 2675 ಕೋಟಿ ರೂಪಾಯಿಗಳನ್ನು ನೀಡಿತ್ತು. ಇದರಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳಲಿಲ್ಲ. ಕೆಲವು ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಟೆಂಡರ್ ಆಗಿದೆ, technical bid ಆಗಿದೆ, finance bid ಆಗಿಲ್ಲ, finance bid ಆಗಿ work order issue ಆಗಿತ್ತು, technical bid

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವುದನ್ನು ಸರ್ಕಾರ ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಂಡಿತ್ತು ಮತ್ತು finance bid ಆಗಿರುವುದನ್ನು ಸರ್ಕಾರ ನಿಲ್ಲಿಸಿದೆ. ಜೊತೆಗೆ work order issue ಆಗಿ ಕಾಮಗಾರಿ ಕೆಲಸ ನಡೆಯುತ್ತಿದ್ದು, ಅದಕ್ಕೆ bill payment ಮಾಡಿ ಅದನ್ನು ಸಹ ನಿಲ್ಲಿಸಿದೆ. ಇವತ್ತು ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದು, 5 ವರ್ಷಗಳ ಕೊನೆಯಲ್ಲಿ ಮಂಜೂರಾತಿ ಮಾಡಿರುವುದನ್ನು ಮುಂದೆ ಬರುವ ಸರ್ಕಾರ ಆ ರೀತಿ ಮಾಡಿದರೆ ಹೇಗೆ? ಯಾವುದೇ ಸರ್ಕಾರವಾಗಲಿ, ಒಂದು ಬಜೆಟ್‌ನಲ್ಲಿ ಮಂಡನೆ ಮಾಡಿ, ಘೋಷಣೆ ಮಾಡಿರುವುದನ್ನು ಸರ್ಕಾರ ಬದಲಾವಣೆ ಆದ ಕೂಡಲೇ ಅದನ್ನು ತಡೆಹಿಡಿಯುವ ಕೆಲಸವೇನಿದೆ, ಅದು ಪ್ರಜಾಪ್ರಭುತ್ವ ವ್ಯವಸ್ಥೆಯೇ? ಇಂತಹ ವ್ಯವಸ್ಥೆ ಸಂವಿಧಾನದಲ್ಲಿ ಇದೆಯೇ? ಇವತ್ತು ಬಾಬಾ ಸಾಹೇಬ್ ಅಂಬೇಡ್ಕರ್,...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 2013ನೇ ಸಾಲಿನಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಜನಪರವಾದಂಥ ಬಜೆಟ್ ತಂದಿದ್ದೆವು. ಆದರೆ, 15 ದಿವಸಗಳಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಬೇರೆ ಬಜೆಟ್ ಘೋಷಣೆ ಮಾಡಿತ್ತು. ಆಗ ಅವರು ಎಲ್ಲಿದ್ದರು?

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾನಾಯಕರೆ ಮಾನ್ಯ ಸದಸ್ಯರನ್ನು ಮಾತನಾಡಲು ಬಿಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, 10 ಜಿಲ್ಲೆಯಲ್ಲಿ ಕಾವೇರಿ ತಾಯಿ ಹರಿಯುತ್ತಾಳೆ. ಈ ಕಾವೇರಿ ಕೊಳ್ಳದ ಜನರಿಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ 2675 ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಯೋಜನೆಗೆ ಬಿಡುಗಡೆ ಮಾಡಿದ್ದು, ಅದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಇದು ಜನಪರ ಸರ್ಕಾರವೇ? ನಾಗರಿಕ ಸರ್ಕಾರವೇ? ಈ ಸರ್ಕಾರದ ಆಡಳಿತ ವ್ಯವಸ್ಥೆ ಸಂವಿಧಾನಬದ್ಧವಾಗಿದೆಯೇ? ಇದು ಅವರಿಗೆ ಗೊತ್ತಿಲ್ಲ. ರಾಜ್ಯದಲ್ಲಿ 6 CADA (Command Area Development Authority) ಗಳಿದ್ದು, ಅದರಲ್ಲಿ ಮೈಸೂರು CADA ವು ಕಾವೇರಿ ಬೇಸನ್ ವ್ಯಾಪ್ತಿಗೆ ಬರುತ್ತದೆ. ಈ ಬಜೆಟ್‌ನಲ್ಲಿ ಇದಕ್ಕೆ 30 ಕೋಟಿ ರೂಪಾಯಿ ನೀಡಿದ್ದಾರೆ. ಈ 30 ಕೋಟಿ ರೂಪಾಯಿ ಬಿಡುಗಡೆ ಮಾಡಿರುವ ಅರ್ಥವೇನೆಂದರೆ, ಅಲ್ಲಿ ಯಾವುದೇ ಕೆಲಸವಾಗುವುದು ಬೇಡ. ಸುಮ್ಮನೆ ಸಂಬಳ ತೆಗೆದುಕೊಳ್ಳಿ ಎನ್ನುವಂತಾಗಿದೆ. 8 ಜಿಲ್ಲೆಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತವೆ. ಇದರಲ್ಲಿ 629 ನೀರಿನ ಸ್ವ–ಸಹಾಯ ಸಂಘಗಳು ಬರುತ್ತವೆ. ಇದಕ್ಕೆ ಪ್ರತಿ ವರ್ಷ ಈ CADA ದಿಂದ ಕಛೇರಿ ನಿರ್ವಹಣೆಗಾಗಿ 1 ಲಕ್ಷ ರೂಪಾಯಿಯನ್ನು ನೀಡಬೇಕು. ಅವರು ಈಗ 3 ಲಕ್ಷ ರೂಪಾಯಿಗೆ ಬೇಡಿಕೆಯನ್ನಿಟ್ಟಿದ್ದಾರೆ. ಈ 629 ಸ್ವ–ಸಹಾಯ ಸಂಘಗಳು ನೀರಿನ ತೆರಿಗೆಯನ್ನು ವಸೂಲಿ ಮಾಡುವಂಥ ಕೆಲಸ ಮಾಡುತ್ತಾರೆ. ಇವರಿಗೆ ಕಛೇರಿ ನಿರ್ವಹಣೆಗಾಗಿ ಈಗ 1 ಲಕ್ಷ ರೂಪಾಯಿ ನೀಡಲಾಗುತ್ತಿದೆ. ಇದರ ಜೊತೆಗೆ 4 ದೊಡ್ಡ ಜಲಾಶಯಗಳು 8 ಚಿಕ್ಕ ಜಲಾಶಯಗಳು ಬರುತ್ತವೆ. ಅದರ ಜೊತೆಗೆ ರಸ್ತೆ ಅಭಿವೃದ್ಧಿ ಮಾಡುವಂಥ ಈ ಕಾಡಾಗೆ ರೂ.30 ಕೋಟಿ ನೀಡಿದ್ದಾರೆ. ಈ ಮೊತ್ತವು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ರೈತರ ಬಗ್ಗೆ ನಮಗೆ ಬಹಳ ಕಳಕಳಿ ಇದೆ. ರೈತರು ಎಂದರೆ, ನಾವೇ ಜೀವ ಬಿಡುತ್ತೇವೆ, ಪ್ರಾಣ ಬಿಡುತ್ತೇವೆ ಎಂದು ಈ ಸರ್ಕಾರ ಹೇಳುತ್ತದೆ. ಇವರು ಮಾಡಿರುವಂಥ ಕೆಲಸ ರೈತರ ಪರವಾಗಿರುವುದೇ? ಯಾರ ಪರವಾಗಿರುವುದು? ನನಗೆ ಒಂದು ಮಾತು ನೆನಪಾಗುತ್ತಿದೆ. ಅದೇನೆಂದರೆ, ಯಾರೋ ಒಬ್ಬ ವ್ಯಕ್ತಿ ಬೀchi (ಬೀಚಿ)ರವರಿಗೆ ಒಂದು ಪ್ರಶ್ನೆ ಕೇಳುತ್ತಾನೆ. ಅದೇನೆಂದರೆ, 'ಭಾರತ ದೇಶ ಸಾಲಕ್ಕೆ ಅರ್ಜಿ ಸಲ್ಲಿಸದೇ ಇರುವುದು ಯಾವ ದೇಶ ಸ್ವಾಮಿ, ದಯವಿಟ್ಟು ಹೇಳುತ್ತೀರಾ' ಎಂದು ಕೇಳುತ್ತಾನೆ. ಅದಕ್ಕೆ ಬೀchi (ಬೀಚಿ)ರವರು 'ಈಗಲೂ ಸಹ ಚಂದ್ರಲೋಕಕ್ಕೂ ಅರ್ಜಿ ಹಾಕಿಕೊಂಡು ಕುಳಿತಿದ್ದಾರೆ' ಎನ್ನುವಂಥ ಮಾತನ್ನು ಹೇಳುತ್ತಾರೆ. ಆ ರೀತಿ ಈ ಸರ್ಕಾರ ಬಜೆಟ್ ಮಂಡನೆ ಮಾಡುತ್ತಿದೆ. ಸಾಲ ಮಾಡದೇ ಇರುವುದಿಲ್ಲ. ಚಂದ್ರಲೋಕಕ್ಕೂ ಅರ್ಜಿ ಹಾಕುತ್ತಾರೆ ಎಂದೇ ಬೀchi (ಬೀಚಿ)ರವರು ಹೇಳಿಬಿಟ್ಟಿದ್ದಾರೆ. ಆ ತರಹ ಸರ್ಕಾರ ಅಧಿಕಾರದಲ್ಲಿದೆ.

ಇವತ್ತು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ 'New Education Policy' ನ್ನು ಜಾರಿಗೆ ತಂದಿದೆ. ನಾನು ಅದನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಈ ದೇಶಕ್ಕೆ 'New Education Policy' ಅವಶ್ಯಕವಾಗಿದೆ ಎಂದು ಬಹಳ ಅಭಿಮಾನದಿಂದ ಹೇಳುತ್ತೇನೆ. ಅದನ್ನು ಬಿಜೆಪಿ ಸರ್ಕಾರ ಜಾರಿಗೆ ತಂದಿದೆ. ಇದರಿಂದ ಬಹಳ ಹೆಮ್ಮೆ, ಸಂತೋಷವಾಗಿದೆ. ಅದರಲ್ಲಿಯು ಕರ್ನಾಟಕ ರಾಜ್ಯದಲ್ಲಿ,...

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ರವಿಕುಮಾರ್‌ರವರೆ ದಯವಿಟ್ಟು ಮಧ್ಯೆ ಎದ್ದು ಮಾತನಾಡುವುದು ಬೇಡ. ಯಾರಿಗೂ ಮಾತನಾಡಲು ಅವಕಾಶ ನೀಡಿಲ್ಲ. ಹಾಗಾಗಿ ತಾವು ಮಾತನಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(463)17.03.2021/4.10/ಎಸ್‌ಕೆ-ಎಂಡಿ

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ದಯವಿಟ್ಟು, ಮಾನ್ಯ ಮರಿತಿಬ್ಬೇಗೌಡರೇ, ಇಲ್ಲಿ ಸ್ವಲ್ಪ ಕೇಳಿ. **(ಗೊಂದಲ)** ತಾವು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡ ನಂತರ ನೀರು ಕುಡಿಯಿರಿ.

**(ಈ ಹಂತದಲ್ಲಿ ವೈಸ್‌ಛೇರ್ಮನ್ ಆದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸಭಾ ಪೀಠವನ್ನು ಅಲಂಕರಿಸಿದರು)**

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸದಸ್ಯರು ಹೇಳುವಂತಹದ್ದನ್ನು ಕೇಳಿ.

**ಶ್ರೀ ಎನ್. ರವಿಕುಮಾರ್:-** ತಾವು ನೀರು ಕುಡಿಯುವಷ್ಟರೊಳಗೆ ನಾನು ಮಾತನಾಡುತ್ತೇನೆ. **(ಗೊಂದಲ)** ವಿದೇಶದಲ್ಲಿ ಹೋಗಿ ಬಂಗಾರವನ್ನು ಅಡವಿಟ್ಟರಲ್ಲ, ಅದರ ಬಗ್ಗೆ ತಾವು ಏತಕ್ಕೆ ಪ್ರಸ್ತಾಪ ಮಾಡುವುದಿಲ್ಲ?

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ವಿದೇಶದಲ್ಲಿ ಬಂಗಾರವನ್ನು ಅಡವಿಟ್ಟಾಗ, ಆಗ ಯಾವ ಸರ್ಕಾರವಿತ್ತು? ಅದೇ ತುಬಿರಾಯನ ಕಾಲದ ಶಿಕ್ಷಣ ಬೇಕಾ, ಶಿಕ್ಷಣ ಬದಲಾಗುತ್ತಿಲ್ಲವೇ?

**(ಗೊಂದಲ)**

**ವೈಸ್ ಛೇರ್ಮನ್:-** ಅವರು yield ಆಗಿಲ್ಲ, ಮಾನ್ಯ ಮರಿತಿಬ್ಬೇಗೌಡರೇ ತಾವು ಮಾತನಾಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚಂದ್ರ ಲೋಕಕ್ಕೆ application ಹಾಕಿದ್ದರು, ಅದರ ಬಗ್ಗೆ ವಿವರ ತರಿಸಿ.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರು yield ಆಗದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೇ ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಭಾಷಣದಲ್ಲಿ 2–3 ಸುಳ್ಳು ಇರಲಿ. ಆದರೆ ಇಡೀ ಭಾಷಣವೇ ಸುಳ್ಳಾಗಬಾರದು.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಬಂಗಾರವನ್ನು ತೆಗೆದುಕೊಂಡು ಹೋಗಿ ಲಂಡನ್‌ನಲ್ಲಿ ಅಡವಿಟ್ಟರಲ್ಲ, . . .

**ವೈಸ್ ಛೇರ್ಮನ್:–** ಮಾನ್ಯ ನಾರಾಯಣಸ್ವಾಮಿಯವರೇ ತಮ್ಮ ಸರದಿ ಬಂದಾಗ, ತಾವು ಮಾತನಾಡಿ. ಮಾನ್ಯ ಮರಿತಿಬ್ಬೇಗೌಡರೇ ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಆವಿಷ್ಕಾರ ಮಾಡುವುದಕ್ಕೆ ಹೊರಟಿದ್ದಾರೆ. ಅದರಲ್ಲಿ ಪ್ರಥಮವಾಗಿ ಕರ್ನಾಟಕ ರಾಜ್ಯದಿಂದಲೇ ಭಾರತ ದೇಶಕ್ಕೆ ಸಂದೇಶ ಕೊಡಬೇಕೆಂದು ಹೊರಟಿದ್ದಾರೆ. ನಾನು ಅದನ್ನು ಕೂಡ ಅಭಿಮಾನದಿಂದ ಸ್ವಾಗತಿಸುತ್ತೇನೆ. ಈ ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ಮಕ್ಕಳು ಇನ್ನು ಕೂಡ ಶಾಲೆಗೆ ಸೇರಲಿಲ್ಲ. ಇನ್ನು ಯಾವ ಶಾಲೆಯಲ್ಲಿದ್ದಾರೆ ಏನು ಎಂಬುವುದು ಯಾವುದೂ ಇಲ್ಲ. Online ನಲ್ಲಿಯಾದರೂ ಕಲಿಯಲಿ, ಎಲ್ಲಿಯಾದರೂ ಕಲಿಯಲಿ. ಆದರೆ ಯಾವುದಾದರೂ ಶಾಲೆಗೆ ಹೋಗಿ ಮಕ್ಕಳು admission ಆಗಬೇಕಲ್ಲವೇ? ಇನ್ನೂ ಕೂಡ admission ಆಗಿಲ್ಲ. ಆ ಮಕ್ಕಳು ಶಿಕ್ಷಣವನ್ನು ಚಂದ್ರಲೋಕದಲ್ಲಿ ಕಲಿಯಲಿ ಅಥವಾ ಎಲ್ಲಿ ಹೋಗಿಯಾದರೂ ಕಲಿಯಲಿ. ಎಲ್ಲಿಯಾದರೂ ಕೂಡ ಮಗುವಿನ admission ಬೇಕಲ್ಲ. ಇನ್ನೂ ಲಕ್ಷಾಂತರ ಮಕ್ಕಳು ಶಾಲೆಗೆ admission ಆಗಿಲ್ಲ. ಆ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರುವುದಕ್ಕೆ ಮತ್ತೆ ಯಾವುದೇ ಕಾರ್ಯಕ್ರಮಗಳು ಈ ಬಜೆಟ್‌ನಲ್ಲಿ ಇಲ್ಲ. ಈ ಕೋವಿಡ್ ಸಂದರ್ಭದಲ್ಲಿ ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕ ಬಂಧುಗಳು ವಾರಿಯರ್ಸ್ ಆಗಿ ಕೆಲಸ ಮಾಡಿದರು. ಇವತ್ತು ಪರೀಕ್ಷೆ, ಮೌಲ್ಯಮಾಪನ ಎಲ್ಲವನ್ನೂ ಕೂಡ ಮಾಡಿದರು. ಕೋವಿಡ್ ಸಂದರ್ಭದಲ್ಲಿ ಕಂದಾಯ ಅಧಿಕಾರಿಗಳು, ವೈದ್ಯಾಧಿಕಾರಿಗಳು ಏನೇನು ಕೆಲಸದ ಜವಾಬ್ದಾರಿಯನ್ನು ಕೊಟ್ಟರೋ, ಅದೆಲ್ಲಾ ಕೆಲಸವನ್ನು ನಮ್ಮ ಶಿಕ್ಷಕರು ಮಾಡಿದರು. ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಎಲ್ಲಾ ಶಾಲಾ ಕಾಲೇಜುಗಳ ಶಿಕ್ಷಕರು ಕೆಲಸ ಮಾಡಿದರು. ಅನುದಾನ ರಹಿತ ಸಂಸ್ಥೆಗಳಲ್ಲಿ ಮಾಡಿದಂತಹ ಶಿಕ್ಷಕ ವರ್ಗಕ್ಕೆ ಯಾವುದೇ ರೂಪದ ಹಣಕಾಸಿನ ನೆರವನ್ನು, ನಾವು ಎಷ್ಟು ಬಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಬೇಡಿಕೊಂಡರೂ ಹಣಕಾಸಿನ ನೇರವನ್ನು ನೀಡಲಿಲ್ಲ. ಇವತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ ನೂರಕ್ಕೆ ನೂರರಷ್ಟು ಹೆಚ್ಚು ಫಲಿತಾಂಶ ಬರತಕ್ಕಂತಹದ್ದನ್ನು ನಮ್ಮ ಸರ್ಕಾರ ಮನಗಾಣಲಿಲ್ಲ. ನಾನು ಬಹಳ ನಿರೀಕ್ಷೆ ಮಾಡಿದ್ದೆ. ಇವತ್ತು 1995ರ ನಂತರ ಪ್ರಾರಂಭವಾಗಿರುವಂತಹ ಕನ್ನಡ ಮಾಧ್ಯಮ ಶಾಲೆಗಳಿಗೆ ಕನಿಷ್ಠ ಪಕ್ಷ 2005 ರ ಸಾಲಿನವರೆಗೆ ಪ್ರಾರಂಭವಾಗಿರುವಂತಹ ಕನ್ನಡ ಮಾಧ್ಯಮ ಶಾಲೆಗಳಿಗೆ ಈ ಸರ್ಕಾರ ವೇತನ ಅನುದಾನ ಘೋಷಣೆ ಮಾಡುತ್ತದೆ ಎಂದು ನಾನು ಬಹಳ ಕಾದುಕೊಂಡಿದ್ದೆ. ಆದರೆ ಬಜೆಟ್ ಪುಸ್ತಕದಲ್ಲಿ ಎಲ್ಲಿ ಹುಡುಕಿದರೂ ಕೂಡ ಸಿಗುತ್ತಿಲ್ಲ. ಆ ಶಾಲೆಗಳಲ್ಲಿ ಕೆಲಸ ಮಾಡುತ್ತಿರತಕ್ಕಂತಹವರು ಸುಮಾರು 10–15 ವರ್ಷಗಳಿಂದ ನಿರಂತರವಾಗಿ ಶೋಷಣೆಗೆ ಒಳಗಾಗಿರುವಂತಹವರು. ಅತ್ಯಂತ ಕಡಿಮೆ ವೇತನಕ್ಕೆ ದುಡಿತ ಇರತಕ್ಕಂತಹವರು. ಅವರ ಬಗ್ಗೆಯೂ ಒಂದು ಉಲ್ಲೇಖವಿಲ್ಲ. ಇವತ್ತು ಆದರ್ಶ ವಿದ್ಯಾಲಯ ಮಾದರಿ ಶಾಲೆಗಳಿಗೆ ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ತೆರೆಯುವುದಕ್ಕೆ ಸುಮಾರು 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಇವತ್ತು ಈ ನಾಡಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಇನ್ನೂ ಕೂಡ ಪರಿಪೂರ್ಣವಾಗಿ ಶೌಚಾಲಯವನ್ನು ಕೊಡುವುದಕ್ಕಾಗಲಿಲ್ಲ.

**ವೈಸ್ ಛೇರ್ಮನ್:–** ಮಾನ್ಯ ಉಪ ಮುಖ್ಯಮಂತ್ರಿಗಳೇ ಮಾತನಾಡಿ.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗಳ ಕಡತ ಬಂದಿರುವುದರಿಂದ, ನಾನು ಕೆಳಮನೆಗೆ ಹೋಗಬೇಕಾಗಿರುವುದರಿಂದ ತಮ್ಮ ಅನುಮತಿಯನ್ನು ತೆಗೆದುಕೊಂಡು ಹೋಗುವುದಕ್ಕೆ ನಾನು ಎದ್ದು ನಿಂತಿದ್ದೇನೆ.

**ವೈಸ್ ಛೇರ್ಮನ್:–** ತಾವು ಅಲ್ಲಿಗೆ ಹೋಗಿ ಬನ್ನಿ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಇವತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕೋಟ್ಯಂತರ ರೂಪಾಯಿಗಳನ್ನು ಈ ನರೇಗಾ ಯೋಜನೆಯಲ್ಲಿ ಖರ್ಚು ಮಾಡುತ್ತಿದ್ದೇವೆ. ಇವತ್ತು ಗ್ರಾಮ ಪಂಚಾಯಿತಿ ಚುನಾವಣೆಗಳಿಗೆ ಮಹತ್ವ ಬಂದಿರುವಂತಹದ್ದು ಕೋಟಿ ರೂಪಾಯಿಗಳ ಹಣದಿಂದ ಈ ನರೇಗಾ ಹಣದಿಂದಲೇ ವಿಧಾನಸಭಾ ಚುನಾವಣೆಯಲ್ಲಿ ಖರ್ಚು ಮಾಡುತ್ತಿರುವುದು. ಪಂಚಾಯತ್‌ರಾಜ್ ಇಲಾಖೆಯಲ್ಲಿ ಸದುಪಯೋಗಕ್ಕಿಂತ ದುರಪಯೋಗವೇ ಜಾಸ್ತಿಯಾಗುತ್ತಿದೆ. ಏಕೆಂದರೆ, permanent structure ಕಾಮಗಾರಿ ಕೈಗೆತ್ತಿಕೊಳ್ಳುವುದು ಕಡಿಮೆ. ಗಿಡ ತೆಗೆಯುವುದಂತೆ, ಮಣ್ಣು ತೆಗೆಯುವುದಂತೆ ಯಾವುದು ಕಣ್ಣಿಗೆ ಕಾಣದೇ ಇರುವಂತಹ ಕೆಲಸ ಈ ನರೇಗಾ ಯೋಜನೆಯಲ್ಲಿ ಜಾಸ್ತಿಯಾಗಿದೆ. ದಯವಿಟ್ಟು, ಕೇಂದ್ರ ಸರ್ಕಾರದ ಯೋಜನೆಯ ಹಣ ಸದುಪಯೋಗವಾಗಬೇಕು. ಈ ಹಣದಲ್ಲಿ ಶೇಕಡಾ 25 ರಷ್ಟು ಹಣವನ್ನು ಪ್ರತಿವರ್ಷ ನಮ್ಮ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ವಿಭಾಗಕ್ಕೆ ಬಳಸಿಕೊಂಡರೆ, ಎರಡು ವರ್ಷದಲ್ಲಿ ಎಲ್ಲಾ ಶಾಲೆಗಳಿಗೆ ಉತ್ತಮವಾದಂತಹ ಶೌಚಾಲಯ, ಕ್ರೀಡಾಂಗಣ, ಶುದ್ಧ ಕುಡಿಯುವ ನೀರು, ಕಾಂಪೌಂಡ್ ಮೂಲಭೂತ ಸೌಕರ್ಯಗಳನ್ನು ಪರಿಪೂರ್ಣವಾಗಿ ಮಾಡಬಹುದು. ಇವತ್ತು ಶಾಲಾ–ಕಾಲೇಜುಗಳಲ್ಲಿ ಕಾಂಪೌಂಡ್‌ಗಳು ಇಲ್ಲದೇ, ಆ ಶಾಲಾ–ಕಾಲೇಜುಗಳ ಮೈದಾನಗಳು ಇವೆಲ್ಲವೂ ಕೂಡ ಒತ್ತುವರಿಯಾಗಿರುವಂತಹದ್ದು ಬಹಳವಿದೆ. ಇವೆಲ್ಲವನ್ನೂ ಕೂಡ ರಕ್ಷಣೆ ಮಾಡಬಹುದು. ಮೂಲಭೂತ ಸೌಲಭ್ಯಗಳನ್ನು ಸರ್ಕಾರಿ ಶಾಲೆಗಳಿಗೆ ಕೊಡಬಹುದು. ಇದಕ್ಕೆ ಸರ್ಕಾರ ಏನಾದರೂ ಮಾಡುತ್ತದೆ ಎಂದು ನಾನು ಬಹಳ ನಿರೀಕ್ಷೆ ಮಾಡಿದ್ದೆ. ಅದರ ಬಗ್ಗೆ ಕ್ಯಾರೆ ಎನ್ನುವುದಿಲ್ಲ. ಯಾವುದೋ ಪಂಚಾಯತ್ ರಾಜ್‌ಗಳಿಂದ 50 ಕೋಟಿ ರೂಪಾಯಿಗಳನ್ನು ನಾವು ಬಳಕೆ ಮಾಡಿದ್ದೇವೆಂಬುದರ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು, ಇದನ್ನು ತಾವು ಮಾಡಿ. ಸರ್ಕಾರಿ ಶಾಲೆಗಳಲ್ಲಿ ಓದುವಂತಹ ಮಕ್ಕಳು ಬಡವರ ಮಕ್ಕಳು. ಅಲ್ಲಿ ಗುಣಾತ್ಮಕವಾದಂತಹ ಶಿಕ್ಷಣ ಕೊಡಬೇಕೆಂದರೆ, ಅಲ್ಲಿ ಮೂಲಸೌಕರ್ಯವಿಲ್ಲ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಮರಿತಿಬ್ಬೇಗೌಡರೇ ನರೇಗಾ ಯೋಜನೆಯಿಂದ ಸುಮಾರು 40 ಲಕ್ಷ ರೂಪಾಯಿಗಳು ಬರುತ್ತಿತ್ತು. ಆದರೆ ಇವತ್ತು 1 ಕೋಟಿ ರೂಪಾಯಿಗಳು ಬರುತ್ತಿರುವ ಬಗ್ಗೆ ತಾವು ದಯವಿಟ್ಟು, ಒಳ್ಳೆಯ ಮಾತನ್ನಾದರೂ ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಇವತ್ತು ಶಾಲಾ–ಕಾಲೇಜುಗಳಲ್ಲಿ ಶೌಚಾಲಯವಿಲ್ಲದೆ ಬಹಳಷ್ಟು ತೊಂದರೆಯಾಗುತ್ತಿದೆ. ದಯವಿಟ್ಟು, ಸರ್ಕಾರ ಈ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದರ ಜೊತೆಗೆ ಅನುದಾನಿತ ಪ್ರೌಢ ಶಾಲೆ, ಪದವಿ ಪೂರ್ವ ಕಾಲೇಜು, ಡಿಗ್ರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳಲ್ಲಿ ದೀರ್ಘ ಕಾಲದಿಂದ ರಾಜೀನಾಮೆ ಮತ್ತು ಇನ್ನಿತರ ಕಾರಣಗಳಿಂದ ಆ ಹುದ್ದೆಗಳು ಖಾಲಿಯಾಯಿತು. ಅಲ್ಲಿ ತಾತ್ಕಾಲಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಆಡಳಿತ ಮಂಡಳಿಯವರು ಅವರಿಗೆ ಯಾವುದೇ ರೀತಿಯಾಗಿ ಸಂಬಳವನ್ನು ಕೊಡುತ್ತಿಲ್ಲ. ಇಂದಲ್ಲ ನಾಳೆ ನಿಮಗೆ ಅನುದಾನ ಬರುತ್ತದೆ, ಇಲ್ಲಿಯೇ ಇರಬೇಕು ಎಂದು ಅವರನ್ನು ಅಲ್ಲಿರಿಸಿಕೊಂಡು ಪುಕ್ಕಟೆಯಾಗಿ ದುಡಿಸಿಕೊಳ್ಳುತ್ತಿದ್ದಾರೆ. 2015ರಲ್ಲಿ ಖಾಲಿಯಾದಂತಹ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿವೆ. ಅದಕ್ಕೆ ಸಂಬಂಧಪಟ್ಟಂತೆ ಸುಮಾರು ಕಡತಗಳು ಇವತ್ತು ಆರ್ಥಿಕ ಇಲಾಖೆಗೆ ಬಂದಿವೆ. ಕೋವಿಡ್ ಹಿನ್ನೆಲೆಯಲ್ಲಿ ಯಾವುದಕ್ಕೂ ಅನುಮತಿಯನ್ನು ಕೊಡುವುದಿಲ್ಲ ಎಂದು ಹೇಳಿ, ಅದನ್ನು ಸರ್ಕಾರದವರು ತಡೆಹಿಡಿದಿದ್ದಾರೆ. ಇವತ್ತು ಆಯ್ಕೆ ಮಾಡಿ ಕಳುಹಿಸಿರುವಂತಹ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದೆ, ಇದಕ್ಕೋಸ್ಕರ 10-15 ವರ್ಷಗಳಿಂದ ಕಾದು ಕುಳಿತಿರುವಂತಹವರಿಗೆ ಇವತ್ತು ಅಭದ್ರತೆ ಸೃಷ್ಟಿಯಾಗಿದೆ. ಗುಣಾತ್ಮಕವಾದಂತಹ ಶಿಕ್ಷಣವನ್ನು ಕೊಡುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಕೂಡ ಈ ನಾಡಿನಲ್ಲಿ ಉತ್ತಮವಾದಂತಹ ಕೆಲಸವನ್ನು ಮಾಡುತ್ತಿವೆ. ಅಂತಹ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರದವರು ಮೀನಾ-ಮೇಷ ಎಣಿಸುತ್ತಿದ್ದಾರೆ. ಇದಕ್ಕೆ ಹಣವಿಲ್ಲವೆಂದು ಹೇಳುತ್ತೀರಿ. ಅದನ್ನು ಮುಂದಕ್ಕೆ ಹಾಕುತ್ತೀರಿ. ಅದೇ ಬೇರೆ ಬಾಬ್ತುಗಳಿಗೆ ಹಣವನ್ನು ಕೊಡುತ್ತೀರಿ. ಇಂತಹ ಕಷ್ಟ ಕಾಲದಲ್ಲಿಯೂ ಕೂಡ ಇವತ್ತು ಕೈಗಾರಿಕೋದ್ಯಮಿಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆಯನ್ನು ಮನ್ನಾ ಮಾಡಿದ್ದೀರಿ. ಇವತ್ತಿನ ದಿವಸ ಈ ಸಂಸ್ಥೆಗಳಿಗೆ ಕೇವಲ 200 ಕೋಟಿ ರೂಪಾಯಿಗಳು ಮಾತ್ರ ಅವಶ್ಯಕತೆ ಇಲ್ಲ. ಇವುಗಳಿಗೆ ಅನುಮೋದನೆ ನೀಡುವುದನ್ನು ತಡೆಹಿಡಿದಿದ್ದೀರಿ. ಹಾಗಾದರೆ ಸರ್ಕಾರದವರು ಶಿಕ್ಷಣಕ್ಕೆ ಏನು ಒತ್ತು ಕೊಡುತ್ತಾರೆ? 'New Education Policy' ಯನ್ನು ಇಂದ್ರ ಲೋಕದಿಂದ ತಂದು ಶಿಕ್ಷಣಕ್ಕೆ ಬದಲಾವಣೆಯನ್ನು ತರುತ್ತೀರಾ? ಶಿಕ್ಷಣಕ್ಕೆ ಬಾರಿ ಒತ್ತನ್ನು ನೀಡುತ್ತೇವೆಂದು ಹೇಳುತ್ತೀರಿ. ಆದರೆ, ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳಿಗೆ strengthen ಮಾಡುವಂತಹ ಯೋಜನೆಗೆ ಭಾರತೀಯ ಜನತಾ ಪಾರ್ಟಿಯವರು ಈ ಅನುದಾನಿತ ಹುದ್ದೆಗಳನ್ನು ತುಂಬುವುದಕ್ಕೆ ಇನ್ನೂ ಕೂಡ ಅನುದಾನ ಬಿಡುಗಡೆ ಮಾಡುವುದಕ್ಕೆ ಒಪ್ಪಿರುವುದಿಲ್ಲ. ಇದು ಶಿಕ್ಷಣಕ್ಕೆ ಕೊಡತಕ್ಕಂತಹ ಮಹತ್ವವೇ?

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(464)17.03.2021, 4.20, ಟಿಸಿಹೆಚ್-ಎಕೆ** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ನಾನು ಈಗಲೂ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಈ ನಾಡಿನಲ್ಲಿ ಗುಣಾತ್ಮಕ ಶಿಕ್ಷಣ ಕೊಡಬೇಕೆಂದರೆ, ಈ ಹುದ್ದೆಗಳು ಭರ್ತಿಯಾಗಬೇಕು. ಇದನ್ನು ಸರ್ಕಾರ ದಯವಿಟ್ಟು ಮಾಡಬೇಕು. ಮೊದಲನೆಯದಾಗಿ, ಸರ್ಕಾರಿ ಪದವಿ ಕಾಲೇಜ್‌ಗಳ ಬಗ್ಗೆ ಹೇಳುತ್ತೇನೆ. ಮಾನ್ಯ ಸಭಾನಾಯಕರೇ, 430 ಸರ್ಕಾರಿ ಪದವಿ ಕಾಲೇಜ್‌ಗಳಿವೆ. ಈ 430 ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ ಕಳೆದ 10 ವರ್ಷಗಳಿಂದ ಒಂದು ಕಾಲೇಜಿನಲ್ಲಿಯೂ ಸಹ ಖಾಯಂ Principal ಇಲ್ಲ. 10 ವರ್ಷಗಳಿಂದಲೂ ಅಲ್ಲಿ ಪ್ರಾಂಶುಪಾಲರು ಇಲ್ಲ. ಗೊತ್ತಾಯಿತೇನು? ನಾನು ಈ ವಿಚಾರದಲ್ಲಿ ಹಿಂದಿನ ಸರ್ಕಾರವನ್ನೂ ಕೂಡ ಸೇರಿಸಿ ಮಾತನಾಡುತ್ತಿದ್ದೇನೆ. ಆದರೆ, ಹಿಂದಿನ ಸರ್ಕಾರದಲ್ಲಿ ಯಾರೂ ಮಾಡಲಿಲ್ಲವೆಂದು ನೀವು ಕೂಡ ತಲೆದಿಂಬು ಹಾಕಿಕೊಂಡು ಮಲಗಿದ್ದೀರಲ್ಲಾ ಸ್ವಾಮಿ? ಈಗಾಗಲೇ ಈ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು. 430 ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ 10 ವರ್ಷಗಳಿಂದ ಕಾಯಂ ಪ್ರಾಂಶುಪಾಲರು ಇಲ್ಲವೆಂದರೆ, ಇನ್ಯಾವ ಗುಣಾತ್ಮಕ ಶಿಕ್ಷಣ ಹಾಗೂ ಆಡಳಿತ ವ್ಯವಸ್ಥೆಯನ್ನು ಪದವಿ ಕಾಲೇಜುಗಳಲ್ಲಿ ಕೊಡುವುದು ಸ್ವಾಮಿ? ಖಾಸಗಿ ಕಾಲೇಜ್‌ಗಳಲ್ಲೂ ಇಲ್ಲ, ಸರ್ಕಾರಿ ಕಾಲೇಜ್‌ಗಳಲ್ಲೂ ಕೂಡ ಅದಕ್ಕೆ ನಿಯಮವನ್ನು ರೂಪಿಸಿಲ್ಲ. ನೀವೂ ಮಾಡಲಿಲ್ಲ. ಇವತ್ತು ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ 14000 ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಅಂದರೆ, ಎಷ್ಟು ಹುದ್ದೆಗಳು ಖಾಲಿ ಇವೆ? ಸರ್ಕಾರಿ ಕಾಲೇಜ್‌ಗಳಲ್ಲಿ ಬಡವರು, ದಲಿತರು ಮತ್ತು ಹಿಂದುಳಿದ ವರ್ಗದವರು ಶ್ರಮಿಕರ ಮಕ್ಕಳು ಓದುತ್ತಿದ್ದಾರೆ. ಇಲ್ಲಿ ನಮಗೆ ಗುಣಾತ್ಮಕ ಶಿಕ್ಷಣವನ್ನು ಕೊಡುವುದಕ್ಕೆ ಆಗುತ್ತಿಲ್ಲ. ಸರ್ಕಾರ ಅತಿಥಿ ಉಪನ್ಯಾಸಕರಿಂದ ಕೆಲಸ ಮಾಡಿಸುತ್ತಿದೆ.

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ ಖಾಯಂ ಪ್ರಾಂಶುಪಾಲರ ನೇಮಕಾತಿಯನ್ನು ಎಷ್ಟು ವರ್ಷಗಳಿಂದ ಮಾಡಿಲ್ಲ, ಆ ಖಾಲಿ ಹುದ್ದೆಗಳನ್ನು ತುಂಬುವುದರ ಬಗ್ಗೆ . . .

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ 10 ವರ್ಷಗಳಿಂದ ಕಾಯಂ ಪ್ರಾಂಶುಪಾಲರನ್ನು ನೇಮಕಾತಿ ಮಾಡಿಲ್ಲ.

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾವಿರಾರು ಖಾಲಿ ಹುದ್ದೆಗಳನ್ನು ತುಂಬಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು. ಅದೆಲ್ಲವನ್ನೂ ಹೇಳೋಣ. ಕಳೆದ 10 ವರ್ಷಗಳಿಂದ ಕಾಯಂ ಪ್ರಾಂಶುಪಾಲರನ್ನು ನೇಮಕಾತಿ ಮಾಡಿಲ್ಲ. ನಿಮಗೆ ಈ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ. ಇದರ ಜೊತೆಗೆ ಅತಿಥಿ ಉಪನ್ಯಾಸಕರಿಗೆ ಬರೀ ಭರವಸೆ ಸಿಗುತ್ತಿದೆಯೇ ವಿನಃ ಅವರ ಸೇವಾ ಸಕ್ರಮಾತಿ ಹಾಗೂ ಸೇವಾ ಭದ್ರತೆಯನ್ನು ಯಾವ ಸರ್ಕಾರದಿಂದಲೂ ಕೂಡ ಆಗುತ್ತಿಲ್ಲ. ಇದು ಬಹಳ ಅತ್ಯಂತ ಶೋಚನೀಯ ಸಂಗತಿ. ಈ ಸರ್ಕಾರ ದಯಮಾಡಿ ಕಾಳಜಿ ವಹಿಸಬೇಕಾಗಿತ್ತು. ನಾನು ಈ ಬಜೆಟ್‌ನಲ್ಲಿ ಈ ಅತಿಥಿ ಉಪನ್ಯಾಸಕರ ಸಕ್ರಮಾತಿಗೆ ಏನಾದರೂ ಒಂದು ಘೋಷಣೆಯಾಗುತ್ತದೆಂದು ನಿರೀಕ್ಷೆ ಮಾಡಿದ್ದೆ. ಕಾಯಂ ಪ್ರಾಂಶಪಾಲರ ಬಗ್ಗೆ ನೇಮಕಾತಿ ಬಗ್ಗೆಯೂ ಇಲ್ಲ. ನೋಡಿ, ಕೇವಲ ಪದವಿ ಕಾಲೇಜ್‌ಗಳದ್ದಲ್ಲದೇ, 84 ಪಾಲಿಟೆಕ್ನಿಕ್‌ಗಳಿವೆ, ಈ 84 ಪಾಲಿಟೆಕ್ನಿಕ್‌ಗಳಲ್ಲಿ 68 ಪಾಲಿಟೆಕ್ನಿಕ್ ಕಾಲೇಜ್‌ಗಳಲ್ಲೂ ಕೂಡ ಪ್ರಾಂಶುಪಾಲರು ಇಲ್ಲವೆಂದು ಹೇಳಿದರೆ ಹೇಗೆ? ಇನ್ನು ಯಾವ ರೀತಿ ಪಾಲಿಟೆಕ್ನಿಕ್ ನಡೆಯುತ್ತವೆ. ಇದು ಯಾವ New Education Policy ನಾವು ಕೊಡುವುದು ಸ್ವಾಮಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಮರಿತಿಬ್ಬೇಗೌಡರವರೇ, ತಾವು ಒಮ್ಮೆ ನನ್ನ ಕಡೆ ನೋಡಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,. . .

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಹೇಳುತ್ತಿರುವ ಎಲ್ಲಾ . . .

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ಅವರೇಕೆ ಅಡ್ಡಿಪಡಿಸುತ್ತಿದ್ದಾರೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅನುದಾನಿತ ಶಾಲಾ–ಕಾಲೇಜ್‌ಗಳ. . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರಿಗೆ ಸ್ವಲ್ಪ ಪೇಷನ್ಸ್ ಇರಲಿ.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 45 ನಿಮಿಷ ಆಯಿತು. ತಾವು ಬೇಗ ಮಾತನಾಡಿ ಮುಗಿಸಬೇಕು. ಬೇರೆ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಬೇಕಲ್ಲವೇ? (ಗೊಂದಲ) ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರವರೇ ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ವೈಸ್ ಚೇರ್ಮನ್:–** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಮರಿತಿಬ್ಬೇಗೌಡರವರು ಯೀಲ್ಡ್ ಆಗಿಲ್ಲ. ಏತಕ್ಕೆ time waste ಮಾಡುತ್ತೀರಿ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಯೀಲ್ಡ್ ಆಗಿಲ್ಲವೆಂದು ಹೇಳಿ. Let him speak.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಚೇರ್ಮನ್:–** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಮರಿತಿಬ್ಬೇಗೌಡರವರು ಯೀಲ್ಡ್ ಆಗಿಲ್ಲ. ಅವರು ಬೇಗ ಮಾತನಾಡಿ ಮುಗಿಸಲಿ. Please allow him to speak. ಮಾನ್ಯ ಭೋಜೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ ನೋಡಿ, he can speak at the end of his speech. ಅವರು ಮಧ್ಯೆ ಮಧ್ಯೆ ಏಕೆ ಏಳುತ್ತಿದ್ದಾರೆ?

**(ಗೊಂದಲ)**

**VICE-CHAIRMAN:** Please allow him to speak. ಮಾನ್ಯ ಎಸ್.ಎಲ್.ಭೋಜೇಗೌಡರವರೇ, please sit down. ಮಾನ್ಯ ಮರಿತಿಬ್ಬೇಗೌಡ ರವರೇ, ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು disturb ಮಾಡಿದರೂ ಕೂಡ ನಾನು ಹೇಳುವುದನ್ನು ನಿಲ್ಲಿಸುವುದಿಲ್ಲ.

**ವೈಸ್ ಚೇರ್ಮನ್:–** ಹೌದು. ನನಗೆ ಗೊತ್ತು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಎಷ್ಟೇ disturb ಮಾಡಿದರೂ ಕೂಡ ನಾನು ಹೇಳುವುದನ್ನು ನಿಲ್ಲಿಸುವುದಿಲ್ಲ. ನಾನು ಗಟ್ಟಿ ಇದ್ದೇನೆ.

**ವೈಸ್ ಚೇರ್ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ನೀವು ಬಂಡೆ ತರಹ ಗಟ್ಟಿ ಇದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮರೆವು ಇನ್ನೂ ಪ್ರಾರಂಭವಾಗಿಲ್ಲ. 430 ಸರ್ಕಾರಿ ಪದವಿ ಕಾಲೇಜ್‌ಗಳಲ್ಲಿ RUSA (Rashtriya Uchchattar Shiksha Abhiyan) ಅಡಿಯಲ್ಲಿ 189 ಸರ್ಕಾರಿ ಕಾಲೇಜ್‌ಗಳಲ್ಲಿ ಸ್ಮಾರ್ಟ್ ಕ್ಲಾಸ್ ಎಂದು ಮಾಡಿದರು. ಒಂದೊಂದು ಕಾಲೇಜ್‌ಗೆ ವೆಚ್ಚ ಎರಡೆರಡು ಕೋಟಿ ಆಗಿದೆ. 480 ಕೋಟಿ ರೂಪಾಯಿಗಳ ವೆಚ್ಚದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

RUSA ಯೋಜನೆಯಡಿಯಲ್ಲಿ ಸ್ಮಾರ್ಟ್ ಕ್ಲಾಸ್ ಎಂದು ಮಾಡಿದರು. ಈ ಬಾರಿ ಬಜೆಟ್‌ನಲ್ಲಿ ಮತ್ತೆ ಅದೇ ಪದವಿ ಕಾಲೇಜ್‌ಗಳಿಗೆ ಹೊಸದಾಗಿ ಸ್ಮಾರ್ಟ್ ಕ್ಲಾಸ್ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಆ ಸ್ಮಾರ್ಟ್ ಕಾಲೇಜ್‌ಗಳೆಲ್ಲಾ ಧೂಳು ಹಿಡಿದಿವೆ. ಈ ಯೋಜನೆ 2015ರಿಂದ ಪ್ರಾರಂಭವಾಗಿದೆ. ಈಗಾಗಲೇ maintenance ಇಲ್ಲದೇ, RUSA ಯೋಜನೆಯಲ್ಲಿ 500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಿರುವುದೆಲ್ಲಾ ಧೂಳು-ದುಂಬು ಸೇರಿಕೊಂಡಿದೆ. ಅಲ್ಲಿಗೆ ಯಾವ ವಿದ್ಯಾರ್ಥಿ ಹಾಗೂ ಯಾರೂ ಕೂಡ ಹೋಗುತ್ತಿಲ್ಲ. ಅಲ್ಲಿ ಬೀಗ ಹಾಕಿದೆ. ಈಗ ಸ್ಮಾರ್ಟ್ ಕ್ಲಾಸ್‌ಗಳನ್ನೆಲ್ಲಾ ಪಕ್ಕಕ್ಕೆ ಸರಿಸಿ, 500 ಕೋಟಿಗಳಲ್ಲಿ ಸರ್ಕಾರ ಹೊಸದಾಗಿ ಕ್ಲಾಸ್‌ಗಳನ್ನು ಮಾಡುತ್ತಾರಂತೆ. ಇದು ಯಾವುದು ನ್ಯಾಯ? ಇದು New Education Policy ಯಲ್ಲಿ ದುಡ್ಡು ಹೊಡೆಯುವ ಕಾರ್ಯಕ್ರಮವೋ, ಇಲ್ಲವೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಕೊಡುವ ಕಾರ್ಯಕ್ರಮವೋ? ರೂಸಾ ಯೋಜನೆಯಲ್ಲಿ 480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರಲ್ಲಾ, ಈಗ ಅದು ಉಪಯೋಗಕ್ಕೆ ಬರುತ್ತಿಲ್ಲವಲ್ಲ. ಸರ್ಕಾರ ಇದರ ಬಗ್ಗೆ ಒಂದು ತನಿಖೆಯನ್ನು ಮಾಡಲಿ. ಇದಕ್ಕೆ ಯಾರು ಜವಾಬ್ದಾರರು? ಆಗ ನಿಮ್ಮ ಸರ್ಕಾರ ಅಧಿಕಾರದಲ್ಲಿ ಇರಲಿಲ್ಲವಲ್ಲ. ಅದನ್ನು ನೀವು ಮಾಡುವ ಮುನ್ನ, ಇದರ ಬಗ್ಗೆ ಒಂದು ತನಿಖೆಗೆ ಒಪ್ಪಿಸಿ.

ಇವತ್ತಿನ ದಿವಸ ಮಕ್ಕಳಿಗೆ ಶಿಕ್ಷಣ ಕೊಡುವ ಹೆಸರಿನಲ್ಲಿ ಎಂಥ ದಂಧೆ ನಡೆಯಿತು. ಕೇಂದ್ರ ಸರ್ಕಾರದ RUSA ಯೋಜನೆ 430 ಕಾಲೇಜ್‌ಗಲ್ಲಿ 180 ಕಾಲೇಜ್‌ಗಳಿವೆ. ಮಾನ್ಯ ಸಭಾಪತಿಯವರೇ, ಇವತ್ತು 430 ಕಾಲೇಜ್‌ಗಳಲ್ಲಿ ಕೇವಲ 26 ಸರ್ಕಾರಿ ಕಾಲೇಜ್‌ಗಳು 12 (ಬಿ) ಆಗಿರುವುದು. ಅಲ್ಲಿ ಕ್ವಾಲಿಟಿ ಇಲ್ಲ, ಮೂಲಭೂತ ಸೌಲಭ್ಯಗಳಿಲ್ಲ. ಒಟ್ಟಾರೆಯಾಗಿ ಸರ್ಕಾರಿ ಪದವಿ ಕಾಲೇಜ್‌ಗಳು NAAC (National Assessment and Accreditation Council) ಮುಂದಕ್ಕೆ ಹೋಗುವುದಕ್ಕೆ ಆಗಲಿಲ್ಲ. ಇವತ್ತು ಸರ್ಕಾರ ಅಲ್ಲಿ ಸ್ಮಾರ್ಟ್ ಕ್ಲಾಸ್ ಮಾಡುತ್ತೇವೆ, New Education Policy ತರುತ್ತೇವೆಂದು ಹೇಳುತ್ತಿದೆ. ಆ ಸರ್ಕಾರಿ ಪದವಿ ಕಾಲೇಜ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕೆ, ಬೇಡವೇ? ಮಾನ್ಯ ಸಭಾಪತಿಯವರೇ, ಟೆಕ್ನಿಕಲ್ ಎಜುಕೇಷನ್‌ಗೆ ಸಂಬಂಧಪಟ್ಟಂತೆ, ಇಂಜಿನಿಯರ್ ಕಾಲೇಜ್‌ಗಳು ಮತ್ತು ಪಾಲಿಟೆಕ್ನಿಕ್ ಕಾಲೇಜ್‌ಗಳ ಬಗ್ಗೆ ಹೇಳುವುದಾದರೆ, ಇಂಜಿನಿಯರ್ ಕಾಲೇಜ್‌ಗಳಲ್ಲಿ ಹಾಗೂ ಪಾಲಿಟೆಕ್ನಿಕ್ ಕಾಲೇಜ್‌ಗಳಲ್ಲಿ ಲ್ಯಾಬ್‌ಗಳನ್ನು ನಿಲ್ಲಿಸಿ ಒಂದೊಂದು ತಿಂಗಳಾಗಿದೆ. ಏತಕ್ಕೆಂದರೆ, ಇವರೆಲ್ಲಾ ಸ್ಮಾರ್ಟ್ ಕ್ಲಾಸ್, ಮತ್ತೆ ಏನೇನೋ ಹೊಸ ಹೊಸ ಯೋಜನೆಗಳನ್ನು ತಂದಿದ್ದಾರಲ್ಲಾ, ಇವೆಲ್ಲವನ್ನೂ ಮಾಡಬೇಕಾದರೆ, ಎಲೆಕ್ಟ್ರಿಸಿಟಿ ಬೇಕಾಗುತ್ತದೆ. ಈ ಎಲೆಕ್ಟ್ರಿಸಿಟಿಗೆ ಹಣವನ್ನು ತುಂಬದೇ 10 ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ, 6 ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತಿಂಗಳಿನಿಂದ ಲ್ಯಾಬ್ ಇಲ್ಲ. ಎಲೆಕ್ಟ್ರಿಸಿಟಿ ಇಲ್ಲ. ಅಲ್ಲಿಗೆ ಜನರೇಟರ್‌ನ್ನು ಕೊಟ್ಟಿದ್ದಾರೆ. ಆದರೆ, ಅದಕ್ಕೆ ಡೀಸೆಲ್ ಇಲ್ಲ. ಡೀಸೆಲ್‌ಗೆ ದುಡ್ಡು ಕೊಟ್ಟಿಲ್ಲ. ಇವತ್ತಿನ ದಿವಸ ಆ ಮಕ್ಕಳಿಗೆ ಲ್ಯಾಬ್ ಇಲ್ಲ. ಎಲೆಕ್ಟ್ರಿಸಿಟಿ ಇಲ್ಲದೆಯೇ ಯಾವ ಕಾಲೇಜ್‌ನಲ್ಲಿ ಯಾರು ಪಾಠ ಕೇಳುವುದಕ್ಕಾಗುತ್ತದೆ.

ಇವತ್ತಿನ ದಿವಸ ಆ ಕಾಲೇಜ್‌ಗಳಲ್ಲಿ ಅಟೆಂಡರ್ ಮತ್ತು ವಾಚ್‌ಮೆನ್‌ಗಳಿದ್ದಾರಲ್ಲ, ಆ ಕಾವಲುಗಾರರಿಗೆ ಆರೇಳು ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಈಗ ಅವರ್ಯಾರೂ ಕೆಲಸಕ್ಕೆ ಬರುತ್ತಿಲ್ಲ. ಇಂಜಿನಿಯರಿಂಗ್ ಕಾಲೇಜ್ ಮತ್ತು ಪಾಲಿಟೆಕ್ನಿಕ್ ಕಾಲೇಜ್‌ಗಳಲ್ಲಿ ರಾತ್ರಿ ಕಾವಲುಗಾರಿಗೆ ಬಜೆಟ್‌ನ್ನು ಕೊಟ್ಟಿಲ್ಲ. ಇವತ್ತಿನ ದಿವಸ ಅಲ್ಲಿ teaching faculty ಹುದ್ದೆಗಳು ಖಾಲಿ ಬಿದ್ದಿವೆ. Teaching faculty ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಗಲಿಲ್ಲ. ಇದ್ಯಾವುದು ಸ್ವಾಮಿ, ನಾವು ಇವತ್ತು New Education Policy ತರುತ್ತಿದ್ದೇವೆಂದು ಮಾತನಾಡುತ್ತಿದ್ದೇವೆ. ದಯಮಾಡಿ ಇವತ್ತಿನ ದಿವಸ ಅನುದಾನಿತ ಶಾಲಾ ಕಾಲೇಜ್‌ಗಳಲ್ಲಿ ಕೆಲಸ ಮಾಡತಕ್ಕಂಥ ನಮ್ಮ ಸಹೋದರ-ಸಹೋದರಿಯರು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇವತ್ತಿನ ದಿವಸ ಸರ್ಕಾರ ಪ್ರತಿಯೊಬ್ಬ ಪ್ರಜೆಗೂ ಕೂಡ ಒಂದಲ್ಲ ಒಂದು ಆರೋಗ್ಯ ವಿಮೆ ಯೋಜನೆ ಕೊಟ್ಟಿದೆ. ಆದರೆ ಈ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು ಹಾಗೂ ಸಿಬ್ಬಂದಿಗಳಿಗೆ ಯಾವುದೇ ಆರೋಗ್ಯ ವಿಮಾ ಯೋಜನೆ ಇಲ್ಲ. ಇದೊಂದು ಕರುಳು ಕಿವುಚುವಂಥ ವಿಷಯ. ಇವರನ್ನೂ ಜ್ಯೋತಿ ಸಂಜೀವಿನಿ ಯೋಜನೆಗೆ ಸೇರಿಸಬೇಕೆಂದು 20 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಆದರೆ, ಯಾವ ಸರ್ಕಾರ ಕೂಡ ಬಗ್ಗಲಿಲ್ಲ, ಏನೂ ಮಾಡಲಿಲ್ಲ. ಇವರು ಇದನ್ನಾದರೂ ಮಾಡುತ್ತಾರೆ, ಈ New Education Policy ಯಲ್ಲಿ ಈ ವರ್ಗಕ್ಕೆ ಒಂದು ಆರೋಗ್ಯ ವಿಮಾ ಯೋಜನೆಯನ್ನು ಕೊಡುತ್ತಾರೆ... ನೀವು ಅವರಿಗೆ ಜ್ಯೋತಿ ಸಂಜೀವಿನಿ ಆರೋಗ್ಯ ವಿಮಾ ಯೋಜನೆಯನ್ನಾದರೂ ತನ್ನಿ ಅಥವಾ ಯಾವ ಆರೋಗ್ಯ ವಿಮಾ ಯೋಜನೆಯನ್ನಾದರೂ ತನ್ನಿ ಸ್ವಾಮಿ. ಅವರು ಕೂಡ ಮನುಷ್ಯರು. ಇವತ್ತಿನ ದಿವಸ ಒಬ್ಬರು ಶಿಕ್ಷಕರ ಕುಟುಂಬದಲ್ಲಿ ಏನಾದರೂ ಒಂದು ಅವಘಡ ಸಂಭವಿಸಿ ಅವರಲ್ಲಿ ಯಾರಾದರು ಅನಾರೋಗ್ಯಪೀಡಿತರಾದಲ್ಲಿ, ಅದಕ್ಕಾಗಿ ಅವರು ಸುಮಾರು 3 ರಿಂದ 4 ಲಕ್ಷ ರೂಪಾಯಿಗಳು ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಇದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(465)17.3.2021/4.30/ಎಂ.ಎಂ–ಎ.ಕೆ**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ದಯಮಾಡಿ ಈ ವರ್ಗಕ್ಕೆ ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹವರಿಗೆ ಜ್ಯೋತಿ ಸಂಜೀವಿನಿಯೋ ಅಥವಾ ಇನ್ನಾವುದಾದರೂ ರೂಪದಲ್ಲಿಯೋ ಅವರ ವೇತನದಲ್ಲಿ ಪ್ರತಿ ತಿಂಗಳು ಕಟಾಯಿಸಿ ಅವರಿಗೆ ಯಾವುದಾದರೂ ಒಂದು ಆರೋಗ್ಯ ವಿಮಾ ಯೋಜನೆಯನ್ನು ಕೊಡಿ ಎಂದು ನಾವು ಪರಿಪರಿಯಾಗಿ ಕೇಳಿಕೊಂಡೆವು. ನೀವು ಅದನ್ನೂ ಕೂಡ ಮಾಡಲಿಲ್ಲ. ದಯವಿಟ್ಟು ಇನ್ನು ಮುಂದಾದರೂ ಕೂಡ ಇದರ ಬಗ್ಗೆ ಆಲೋಚನೆ ಮಾಡಿ. ದಯವಿಟ್ಟು ಮುಖ್ಯಮಂತ್ರಿಗಳು ಬಜೆಟ್‌ಗೆ ಉತ್ತರ ಕೊಡುವಾಗಲಾದರೂ ಘೋಷಣೆ ಮಾಡಿಸಿ ಎಂದು ವಿನಂತಿ ಮಾಡುತ್ತೇನೆ. ಉನ್ನತ ಶಿಕ್ಷಣದಲ್ಲಿ ಎಲ್ಲಾ ಹೊಸ ಯೋಜನೆಗಳು ಬಂದಿದೆ.

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರೇ, I will give another five minutes to you. ಅಲ್ಲಿಗೆ ಒಂದು ಗಂಟೆ ಆಗುತ್ತದೆ.

**Sri MARITHIBBEGOWDA:** No, no. ನಾನು ಇನ್ನೂ ಒಂದು ಗಂಟೆಗಳ ಕಾಲ ಮಾತನಾಡಬೇಕು.

**VICE-CHAIRMAN:** No, no. ಇನ್ನೂ ಮಾತನಾಡುವವರ ಪಟ್ಟಿ ದೊಡ್ಡದಿದೆ.

**ಶ್ರೀ ಮರಿತಿಬ್ಬೇಗೌಡ:–** ನನಗೆ ಮಾತನಾಡುವುದಕ್ಕೆ ಬಿಡಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, . . .

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರೇ, alright, ಇನ್ನು 10 ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್. ಪಾಟೀಲ್:–** (ಗೊಂದಲ) ಪ್ರತಿಯೊಂದು ಪಕ್ಷಕ್ಕೆ ಇಂತಿಷ್ಟು time allot ಮಾಡಿದ್ದಾರೆ. ಪ್ರತಿಯೊಂದು ಪಕ್ಷಕ್ಕೆ ಸಮಯ ನಿಗದಿ ಮಾಡಿದ್ದಾರೆ. It is left to them. ನೀವೇತಕ್ಕೆ ಅವರಿಗೆ ಹೇಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು, ಇದು ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷಕ್ಕೆ time allot ಆಗಿದೆ ಎಂದು ಹೇಳುತ್ತಾರೆ. ಅದು ಅವರಿಗೆ ಬಿಟ್ಟ ವಿಚಾರ. ಸಭಾನಾಯಕರಿಗೆ ಸಂಬಂಧಿಸಿದ ವಿಚಾರವಲ್ಲ.

**ವೈಸ್ ಛೇರ್ಮನ್:–** ಅದನ್ನು ಅವರಿಗೆ ನಾನು ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಇಲಾಖೆಯಲ್ಲಿ learning ಗಾಗಿ L.M.S (Learning Management System) ಎಂಬ ಹೊಸ ಯೋಜನೆಯನ್ನು ತಂದಿದ್ದಾರೆ. 'ಕ್ಲೌಡ್' ನಿಂದ ಪಾಠ ಕೇಳುವುದಂತೆ. ಎಲ್.ಎಂ.ಎಸ್., ನಲ್ಲಿ ಕ್ಲೌಡ್ ಸಾಫ್ಟ್‌ವೇರ್ ಎಂದು ಇದೆ. ಈ ಸಾಫ್ಟ್‌ವೇರ್ ಅನ್ನು ಕ್ಲೌಡ್‌ನಿಂದ ತೆಗೆದುಕೊಳ್ಳುತ್ತಾರಂತೆ. ಇದು 500 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಆಗಿದೆ. ಮಕ್ಕಳು ಫೋನ್ ಅನ್ನು ಕಿವಿಗಿಟ್ಟುಕೊಂಡು ಕೇಳಿ ಕೇಳಿ ಮಕ್ಕಳ ಕಿವಿ ಕಿವುಡಾಗಿ ಹೋಗಿದೆ. ಈ ಎಲ್.ಎಂ.ಎಸ್., ಸ್ಕೀಂನಿಂದ ಒಬ್ಬರಿಗೂ ಯಾವುದೂ ಸಂದೇಶ ಮುಟ್ಟುತ್ತಿಲ್ಲ. ಇದನ್ನು ತೆಗೆದುಕೊಂಡು ಬಂದು ಬಡವರ ಮಕ್ಕಳು, ಸರ್ಕಾರಿ ಕಾಲೇಜಿನಲ್ಲಿ ಓದುವ ಮಕ್ಕಳ ಜೀವನವೇ ಹಾಳಾಗುತ್ತಿದೆ. ದಯವಿಟ್ಟು ಇಂತಹದ್ದನ್ನು ನಿಲ್ಲಿಸಬೇಕು. ಕುವೆಂಪುರವರು ಒಂದು ಮಾತನ್ನು ಹೇಳುತ್ತಾರೆ. ಏನೆಂದರೆ, "ಜಗದೀಶ್ವರ ಮೈಯನ್ನು ನೋಡುವುದಿಲ್ಲ, ಮನಸ್ಸನ್ನು ನೋಡುತ್ತದೆ". ನಮ್ಮ ಸರ್ಕಾರದಲ್ಲಿ ಆಳುವವರಿಗೆ ಇದರ ಅರ್ಥವೇ ಗೊತ್ತಿಲ್ಲ. ಇವತ್ತು ವಿಶ್ವವಿದ್ಯಾಲಯಗಳಲ್ಲಿ highest education, ಪಿ.ಜಿ. ಕೋರ್ಸ್ ನಡೆಸುವಂತಹ highest body ಯು.ಜಿ.ಸಿ., ತಾಂತ್ರಿಕ ಶಿಕ್ಷಣ ಇವೆಲ್ಲಾ ಇರುತ್ತದೆ. ಕೃಷಿ ವಿಶ್ವವಿದ್ಯಾಲಯ, ಮೆಡಿಕಲ್ ವಿಶ್ವವಿದ್ಯಾಲಯ, ತಾಂತ್ರಿಕ ವಿಶ್ವವಿದ್ಯಾಲಯ ಅಥವಾ ಸಾಂಪ್ರದಾಯಿಕ ವಿಶ್ವವಿದ್ಯಾಲಯ ಅಥವಾ ಸರ್ಕಾರದ ಯಾವುದಾದರೂ ವಿಶ್ವವಿದ್ಯಾಲಯವನ್ನು ತೆಗೆದುಕೊಳ್ಳಿ, ಎಲ್ಲಾದರೂ ಶೇ.50 ರಷ್ಟು ಸಿಬ್ಬಂದಿಗಳಿದ್ದಾರೆ ಎಂದು ಹೇಳಿದರೆ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳು ನಡೆಯುತ್ತಿವೆ. ಅಲ್ಲಿ ಕುಲಪತಿಗಳನ್ನು ಏನು ಮಾಡಿದ್ದಾರೆಂದರೆ, ಅವರು ಗುಮಾಸ್ತರಿಗಿಂತ ಕಡೆಯಾಗಿದ್ದಾರೆ. ಹಿಂದೆ ಕುಲಪತಿಗಳೆಂದರೆ ದೊಡ್ಡ ಗೌರವವಿತ್ತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀ ಶ್ರೀಮಾಲಿ ಎಂಬ ಕುಲಪತಿಗಳಿದ್ದರು. ಒಂದು ಕಾಲದಲ್ಲಿ ವೈಸ್–ಛಾನ್ಸಲರ್ ಎಂದರೆ ಒಂದು ಗೌರವವಿತ್ತು. ಇವತ್ತು ಸರ್ಕಾರಗಳು ಕುಲಪತಿಗಳನ್ನು ಸಚಿವಾಲಯದಲ್ಲಿ 2ನೇ ದರ್ಜೆಯ ಗುಮಾಸ್ತನ ರೀತಿ ಕೈ ಕಟ್ಟಿಕೊಂಡು ನಿಲ್ಲುವಂತಹ ಪರಿಸ್ಥಿತಿಗೆ ತಂದಿದ್ದಾರೆ. ಕುಲಪತಿಗಳಿಗೆ ಮೂರು ಕಾಸಿನ ಕಿಮ್ಮತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳಲ್ಲಿ ` ಇಲ್ಲ. ದಯಮಾಡಿ, ಸರ್ಕಾರಗಳು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಓದುವ ಬಡವರ ಮಕ್ಕಳಿಗೆ ಗುಣಾತ್ಮಕವಾದ ಶಿಕ್ಷಣವನ್ನು ಕೊಡಬೇಕಾದುದು ನಮ್ಮ ಕರ್ತವ್ಯ. ಅದೊಂದನ್ನೂ ಕೂಡ ಸರ್ಕಾರ ಮಾಡುತ್ತಿಲ್ಲ. ಹುದ್ದೆಗಳನ್ನು ಭರ್ತಿ ಮಾಡುವುದು, ಒಳ್ಳೆಯ ಶಿಕ್ಷಣ ಕೊಡುವುದು, ಸಂಶೋಧನೆ ನಡೆಸುವುದನ್ನು ಮಾಡುತ್ತಲೇ ಇಲ್ಲ. ಅವರೆಷ್ಟು ಗೋಗರೆದರೂ ಕೂಡ ಒಂದು ಹುದ್ದೆಯನ್ನೂ ತುಂಬುವುದಕ್ಕೆ ಬಿಡುತ್ತಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಹೇಳುವುದಾದರೆ ನಾನು ಹೇಳಿದಂತಹ ಯಾವುದೇ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಒಂದು ಬ್ಯಾಕ್‌ಲಾಗ್ ಹುದ್ದೆಗಳನ್ನೂ ತುಂಬಲಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೆ ಅಡೆತಡೆಗಳಿಲ್ಲ. ಆ ವರ್ಗದವರಿಗೂ ಕೂಡ ತೀರಾ ಅನ್ಯಾಯವಾಗಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್‌ಗಳು ನಡೆಯುತ್ತವೆ. ತಾಲ್ಲೂಕು ಕೇಂದ್ರಗಳಲ್ಲಿ ಇರುವ ಹಾಸ್ಟೆಲ್‌ಗಳಿಗೆ ಹೆಚ್ಚು ವಿದ್ಯಾರ್ಥಿಗಳು ಬರುತ್ತಿಲ್ಲ. ನಗರ ಪ್ರದೇಶಗಳಿಗೆ ವಿದ್ಯಾರ್ಥಿಗಳು ಹೆಚ್ಚಾಗಿ ಬರುತ್ತಿದ್ದಾರೆ. ನಗರಪ್ರದೇಶಗಳ ಹಾಸ್ಟೆಲ್‌ಗಳಿಗೆ ತುಂಬಾ ಕೊರತೆಯುಂಟಾಗಿದೆ. ಎಸ್.ಸಿ./ಎಸ್.ಟಿ., ಹಾಸ್ಟೆಲ್, ಹಿಂದುಳಿದ ವರ್ಗಗಳ ಹಾಸ್ಟೆಲ್, ಅಲ್ಪಸಂಖ್ಯಾತರ ಹಾಸ್ಟೆಲ್ ಎಲ್ಲದಕ್ಕೂ ಕೂಡ ತುಂಬಾ ಕೊರತೆ ಉಂಟಾಗಿದೆ. ಆದ್ದರಿಂದ ದಯಮಾಡಿ ನಗರಪ್ರದೇಶಗಳಲ್ಲಿ ಎಸ್.ಸಿ./ಎಸ್.ಟಿ., ಹಾಸ್ಟೆಲ್, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಆದ್ಯತೆ ಮೇಲೆ ಕೆಲಸ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇವತ್ತು ಬಹಳ ಸಮಸ್ಯೆ ಇದೆ. ನಗರ ಪ್ರದೇಶಕ್ಕೆ ಬಂದು ಶಿಕ್ಷಣ ಮಾಡುವುದು, ಸರ್ಕಾರಿ ಸಂಸ್ಥೆಗಳಲ್ಲಿ, ಕಾಲೇಜುಗಳಲ್ಲಿ ಓದುವಂತಹ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಸರ್ಕಾರ ತುರ್ತಾಗಿ ಆ ಕೆಲಸವನ್ನು ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ವಿನಂತಿ ಮಾಡುತ್ತೇನೆ.

ಇನ್ನು ಮಹಿಳಾ ಸಬಲೀಕರಣದ ಬಗ್ಗೆ ಹೇಳುವುದಾದರೆ, ಮಹಿಳೆಯರ ಬಗ್ಗೆ ಬಹಳ ಒಳ್ಳೆಯ ಕಾರ್ಯಕ್ರಮ ಕೊಟ್ಟಿದ್ದಾರೆ. ಅದಕ್ಕೆ ನಾನು ಬಹಳ ಅಭಿನಂದಿಸುತ್ತೇನೆ. ಮಹಿಳೆಯರ ಸಬಲೀಕರಣಕ್ಕೆ ಶೇ.4ರಷ್ಟು ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ. ಇದನ್ನು ಮಹಿಳಾ ವಾಣಿಜ್ಯೋದ್ಯಮಿಗಳನ್ನು ಬೆಂಬಲಿಸಬೇಕೆಂದು ಮಾಡಿದ್ದಾರೆ. ಈ ಸರ್ಕಾರ ಮಹಿಳೆಯರ ಬಗ್ಗೆ ಈಗಲಾದರೂ ಇಷ್ಟೊಂದು ಕಳಕಳಿಯನ್ನು ಮಾಡಿದೆ. ನಾನು ಒಂದನ್ನು ಹೇಳುವುದೇನೆಂದರೆ, ಮಹಿಳೆಯರಿಗೆ ನೀಡಲಿರುವ ಶೇ.4 ರಷ್ಟು ಬಡ್ಡಿ ದರದಲ್ಲಿ ಸಾಲ ಪಡೆಯುವುದಕ್ಕೆ ಬರುವವರು ನಗರ ಪ್ರದೇಶದಲ್ಲಿ ದುಡ್ಡು ಹೊಡೆದು ಇಟ್ಟಿರುವಂತಹ ಜನರ ಕುಟುಂಬದವರು ಮಾತ್ರ. ಆರ್ಥಿಕವಾಗಿ ಭದ್ರತೆ ಇರುವಂತಹವರು ಮಾತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ಪಡೆಯುವುದಕ್ಕೆ ಬರುತ್ತಾರೆ. ನೀವು ಗ್ರಾಮೀಣ ಪ್ರದೇಶದಲ್ಲಿರುವ ಕೂಲಿ ಕಾರ್ಮಿಕ ಹೆಣ್ಣುಮಕ್ಕಳು, ಸ್ವಸಹಾಯ ಸಂಘಗಳು; ಈ ಸಂದರ್ಭದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರನ್ನು ನೆನೆಸುತ್ತೇನೆ. ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸ್ವಸಹಾಯ ಗುಂಪುಗಳು ಎಂಬ ಹೊಸ ಯೋಜನೆಯನ್ನು ಈ ನಾಡಿಗೆ ಕೊಟ್ಟರು.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಅದು ಶ್ರೀಮತಿ ಮೋಟಮ್ಮನವರು ಮಹಿಳಾ ಕಲ್ಯಾಣ ಸಚಿವರಾಗಿದ್ದಾಗ ಕೊಟ್ಟಂತಹ ಕೊಡುಗೆಯಾಗಿದೆ.

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಮರಿತಿಬ್ಬೇಗೌಡರೇ, ಸ್ತ್ರೀ ಶಕ್ತಿ ಯೋಜನೆ;

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಸ್ತ್ರೀ ಶಕ್ತಿ ಯೋಜನೆಯನ್ನು ಜಾರಿಗೆ ತಂದರು. ಮಾನ್ಯ ಸಿ.ಎಂ. ಲಿಂಗಪ್ಪನವರಿಗೆ ಎಂತಹ ನೆನಪಿದೆ. ಆ ಯೋಜನೆಯನ್ನು ಶ್ರೀ ಎಸ್.ಎಂ. ಕೃಷ್ಣರವರು ಜಾರಿಗೆ ತಂದರು. ಆಗ ಮಾನ್ಯ ಸೋಮಣ್ಣನವರೂ ಇದ್ದರು. ನೀವು ಸಹಕಾರಿ ಇಲಾಖೆಯವರ ಮೂಲಕ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಸ್ವಸಹಾಯ ಸಂಘಗಳ ಜೊತೆಗೆ; ಇಡೀ ರಾಜ್ಯಾದ್ಯಂತ ಪ್ರತಿ ತಾಲ್ಲೂಕುಗಳಲ್ಲಿ ದೊಡ್ಡ ದೊಡ್ಡ ಸ್ವಸಹಾಯ ಸಂಘಗಳಿವೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳ ವ್ಯವಸ್ಥೆಯೊಳಗೆ ಅವರನ್ನು ತೆಗೆದುಕೊಂಡು ಬಂದು ಅಲ್ಲಿ ಅವರಿಗೆ ಉದ್ಯೋಗವಕಾಶಗಳನ್ನು ಕೊಡುವುದು ಆಗಬೇಕು. ಹೊರಗುತ್ತಿಗೆ ಎಂಬ ವ್ಯಾಪಕವಾದ ಭ್ರಷ್ಟಾಚಾರದ ಜಾಲ ನಮ್ಮ ಸರ್ಕಾರದಲ್ಲಿದೆ. ಹೊರಗುತ್ತಿಗೆ ಪದ್ಧತಿಯನ್ನು ತೆಗೆದುಹಾಕಿ ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಉದ್ಯೋಗಗಳನ್ನು ಸ್ವಸಹಾಯ ಸಂಘಗಳ ಮೂಲಕ ಕೊಡುವುದೇ ಆದರೆ ಗ್ರಾಮೀಣ ಪ್ರದೇಶದಲ್ಲಿರುವ ಬಡ ಹೆಣ್ಣುಮಕ್ಕಳ, ಕೂಲಿಕಾರ ಹೆಣ್ಣುಮಕ್ಕಳಿಗೆ ಒಂದು ದೊಡ್ಡ ರೂಪವನ್ನು ಕೊಟ್ಟಂತಾಗುತ್ತದೆ. ಅದನ್ನು ಕೂಡ ಸಹಕಾರ ಸಂಘಗಳ ಮೂಲಕ ಉತ್ತೇಜಿಸಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಪ್ರಸೂತಿ ರಜೆ ಜೊತೆಗೆ ಆರು ತಿಂಗಳ ಮಕ್ಕಳ ಆರೈಕೆ ರಜೆ; ಇದೊಂದು ಒಳ್ಳೆಯ ಕೆಲಸ ಮಾಡಿದ್ದಾರೆ. ನಾನು ಅಭಿನಂದಿಸುತ್ತೇನೆ. ಆದರೆ ಸರ್ಕಾರಿ ನೌಕರರಿಗೆ ಮಾತ್ರ ಎಂದು ಇದೆ. ಇದನ್ನು ನಾನು ಬಹಳ ಕಟುವಾಗಿ ಖಂಡಿಸುತ್ತೇನೆ. ಖಾಸಗಿ ಕಂಪನಿಗಳಲ್ಲಿ ಮಹಿಳೆಯರು ಕೆಲಸ ಮಾಡುತ್ತಾರೆ. ಕಾರ್ಮಿಕ ಇಲಾಖೆ ವತಿಯಿಂದ ಇರುವ ಗಾರ್ಮೆಂಟ್ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುತ್ತಾರೆ. ಇದರ ಜೊತೆಗೆ ಸಾರ್ವಜನಿಕ ಉದ್ದಿಮೆಗಳಲ್ಲಿ ಬಹಳಷ್ಟು ಹೆಣ್ಣುಮಕ್ಕಳು ಕೆಲಸ ಮಾಡುತ್ತಾರೆ. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಣ್ಣುಮಕ್ಕಳಿಗೂ ಇದನ್ನು ವಿಸ್ತರಣೆ ಮಾಡಿ. ಸರ್ಕಾರಿ ನೌಕರರಿಗೆ ಮಾತ್ರ ಅಲ್ಲ. ದಯವಿಟ್ಟು ಸರ್ಕಾರಿ ನೌಕರರಿಗೆ ಕೊಡುವುದನ್ನು ಕಡಿಮೆ ಮಾಡಬೇಕು. ದಯವಿಟ್ಟು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ, ಇಂತಹ ಉದ್ದಿಮೆಗಳಲ್ಲಿ, ಬೇರೆ ಬೇರೆ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗೂ ಕೂಡ ಮಕ್ಕಳ ಆರೈಕೆಯ ಆರು ತಿಂಗಳ ರಜೆಯನ್ನು ಅವರಿಗೂ ವಿಸ್ತರಿಸುವಂತಹ ಕೆಲಸವನ್ನು ಮಾಡಿ. ಅದರಿಂದ ಇನ್ನೂ ಒಳ್ಳೆಯದಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತು ನೆನಪಿಗೆ ಬರುತ್ತದೆ.

**(ಮುಂದು)**

**(466) 17–03–2021/ 04–40/ ಕೆಹೆಚ್–ವಿಕೆ**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಮಾಸ್ಟರ್ ಹಿರಣ್ಣಯ್ಯನವರು ಅವರ ನಾಟಕದಲ್ಲಿ 'ನಾಯಿ ಮನೆ ಕಾಯುತ್ತೆ, ನಾಲಿಗೆ ಮನೆತನ ಕಾಯುತ್ತೆ' ಎಂದು ಹೇಳಿದ್ದಾರೆ. ಇವತ್ತು ಏನಾಗಿದೆ ಎಂದರೆ, ಒಮ್ಮೆ ಹಲ್ಲು ಮತ್ತು ನಾಲಿಗೆ 'ನಾನು ಹೆಚ್ಚು, ನಾನು ಹೆಚ್ಚು' ಎಂದು ಒಬ್ಬರಿಗೊಬ್ಬರು ಜಗಳ ಮಾಡುತ್ತಾರಂತೆ. ಹಲ್ಲುಗಳು ನಾವು 37 ಜನ ಇದ್ದೇವೆ, ನಾಲಿಗೆ ನೀನು ಒಂದೇ ಇರುವುದು, ನಾವು ಒಂದು ಸಾರಿ ಕಚ್ಚಿದರೆ ನಿನ್ನ ಕಥೆ ಮುಗಿದು ಹೋಗುತ್ತದೆ' ಎಂದು ಹೇಳುತ್ತವೆಯಂತೆ. ಆಗ ನಾಲಿಗೆ ಇಲ್ಲಾ, ನಾನೇ ಶಕ್ತಿ, ನೀವು 37 ಜನ ಇದ್ದರೂ ನನ್ನನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ' ಎಂದು ಹೇಳುತ್ತದೆಯಂತೆ. 'ಅದು ಹೇಗೆ? ಇದು ಸಾಧ್ಯವೇ ಇಲ್ಲ, ನಾವು 37 ಮಂದಿಯ ಮುಂದೆ ನೀನೇನು ಬೊಗಳೆ ಬಿಡುತ್ತೀಯಾ? ನಾನು ಪರಾಕ್ರಮಿ? ಹಾಗೆ–ಹೀಗೆ ಎಂದು ಬಹಳ ಕೊಚ್ಚಿಕೊಳ್ಳುತ್ತವೆಯಂತೆ. ಆದರೆ ರೀತಿ ನಾಲಿಗೆ ಹೇಳುತ್ತದೆಯಂತೆ, 'ನಾನು ನಾಲಿಗೆಯಿಂದ ಒಂದು ಕೆಟ್ಟ ಮಾತನ್ನು ಆಡಿಬಿಟ್ಟರೆ 37 ಜನರನ್ನು ಚಚ್ಚಿ ಧ್ವಂಸ ಮಾಡಿಬಿಡುತ್ತಾರೆ, ಹುಷಾರ್ ಎಂದು ಹೇಳುತ್ತದೆಯಂತೆ. ಹಾಗೆಯೇ ಇವರು 'ಸಂಖ್ಯೆ ಇದೆ, ಸಂಖ್ಯೆ ಇದೆ' ಎಂದು ಈ ರೀತಿ ಬಜೆಟ್ ಮಾಡಿಕೊಂಡು ನಾಡಿನ ಜನರಿಗೆ ಸುಳ್ಳು ಹೇಳಿಕೊಂಡು ಹೋಗುವುದು ಸರಿಯಲ್ಲ. ಕುವೆಂಪುರವರು 'ಪ್ರಜೆಗಳ ಸಂಕಷ್ಟಕ್ಕೆ ದೊರೆಯ ದೋಷವೇ ಕಾರಣ' ಎನ್ನುವ ಮಾತನ್ನು ಹೇಳಿದ್ದಾರೆ.

ಗೋ–ಹತ್ಯೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಗೋ–ಶಾಲೆಗಳನ್ನು ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತಾರೆ.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ಸಚಿವ ಸಂಪುಟ ಸಭೆ ಸಂಜೆ 5–30 ಕ್ಕೆ ಇದೆ. ಇನ್ನು ಮಾನ್ಯ ಆರ್. ಪ್ರಸನ್ನಕುಮಾರ್ ಮತ್ತು ಮಾನ್ಯ ಕೆ.ಪ್ರತಾಪ ಸಿಂಹ ನಾಯಕ್ ರವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಬೇಕಾಗಿದೆ. You take another five more minutes, ತಮಗೆ 4–45 ರವರೆಗೂ ಅವಕಾಶ ಕೊಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾತನಾಡುವವರಿಗೆ ಅವಕಾಶ ಕೊಡಿ. ಮಾನ್ಯ ಮರಿತಿಬ್ಬೇಗೌಡರವರೇ, ತಾವು ಇನ್ನು ಒಂದು ಗಂಟೆಯನ್ನು ತೆಗೆದುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇನ್ನು ಅರ್ಧ ಗಂಟೆಯಲ್ಲಿ ತಾಸಿನಲ್ಲಿ ಮುಗಿಸುತ್ತೇನೆ. ಗೋ–ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಈಗಾಗಲೇ ಕಾಯ್ದೆಯನ್ನು ತರಲಾಗಿದೆ. ಈಗ ನಮ್ಮ ಊರಿನಲ್ಲಿಯೇ ಒಬ್ಬ ಫೋನ್ ಮಾಡಿ 'ಏನಣ್ಣಾ ಮಾಡುವುದು, ನಮ್ಮ ಎತ್ತಿಗೆ ಕಾಲು ಮುರಿದು ಹೋಗಿದೆ; ಸೊಳ್ಳೆಗಳು, ಕಾಗೆಗಳು ಮುತ್ತಿಕೊಳ್ಳುತ್ತಿವೆ. ಈಗ ಇದನ್ನು ಮಾರುವ ಹಾಗೂ ಇಲ್ಲ. ಯಾರು ಬಂದು ಇದನ್ನು ತೆಗೆದುಕೊಂಡು ಹೋಗುವವರು ಇಲ್ಲ. ಯಾರಿಗೆ ಸುದ್ದಿ ಕೊಟ್ಟರೂ ಕೂಡ ಯಾರು ಬರುತ್ತಿಲ್ಲ ಎಂದು ಹೇಳಿದ. ಇವತ್ತು ಸಾಂಕ್ರಾಮಿಕ ರೋಗವಾದ ಕೋವಿಡ್ ಅಲ್ಲಿಂದಲೇ ಪ್ರಾರಂಭವಾಗುತ್ತಿದೆ. ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗಗಳು ಬರುತ್ತವೆ. ಇದರಿಂದ ಕಾಗೆಗಳು ಬಂದು ಕಿತ್ತು ತಿನ್ನುತ್ತವೆ, ಸೊಳ್ಳೆಗಳು ಮುತ್ತುತ್ತವೆ, ಗಬ್ಬು ವಾಸನೆ ಪ್ರಾರಂಭವಾಗುತ್ತದೆ. ಹಸುವಿಗೆ ಕಾಲು ಮುರಿದು ಹೋಗಿದೆ, ಕಾಯಿಲೆ ಬಂದು ಅಲ್ಲಿ ಬಿದ್ದಿದ್ದರೆ ಎಂದರೆ ಎಂತಹ ನರಕಯಾತನೆ. ತಾವು ಇಂತಹದ್ದನ್ನು ಕಾಯ್ದೆಯಲ್ಲಿ ತಂದಿದ್ದೀರಿ. ತತ್‌ಕ್ಷಣ ಪರಿಹಾರವಾಗಿ ತಾವು ಗೋ–ಶಾಲೆಗಳನ್ನು ತೆರೆಯುತ್ತೇವೆ ಎಂದು ಹೇಳಿದ್ದೀರಿ. ಗೋ–ಶಾಲೆಗಳನ್ನು ತೆರೆಯಿರಿ, ಆದರೆ, ಗೋ–ಶಾಲೆಗಳನ್ನು ಯಾವಾಗ ತೆರೆಯುತ್ತೀರಿ? ಈ ಗೋ–ಶಾಲೆಯವರು ಯಾವಾಗ ಈ ಪಶುಗಳನ್ನು ರೈತರಿಂದ ರಕ್ಷಣೆ ಮಾಡಿ, ತೆಗೆದುಕೊಂಡು ಹೋಗಿ ಸಾಕುತ್ತಾರೆ. ದಯಮಾಡಿ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಸ್ವಾಮಿ ವಿವೇಕಾನಂದರವರು ಗೋ–ಸಂರಕ್ಷಣೆ ಮಾಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ, ಹಸಿವಿನಲ್ಲಿ ಇರುವಂತಹ ಜನರನ್ನು ಬದುಕುಳಿಸುವುದು ನಮ್ಮ ಮೊದಲನೆಯ ಕರ್ತವ್ಯ. ಮೊದಲು ಆ ಕೆಲಸವನ್ನು ಮಾಡೋಣ. ಆಮೇಲೆ ಏನಾದರೂ ಬದುಕುಳಿದರೆ ಪ್ರಾಣಿಗಳನ್ನು ರಕ್ಷಣೆ ಮಾಡುತ್ತೇವೆ ಎಂದು ಆ ಕಾಲದಲ್ಲಿಯೇ ಹೇಳಿದ್ದರು. ಆದರೆ, ಇವತ್ತು ಏನಾಗಿದೆಯೆಂದರೆ, ಗೋವುಗಳ ರಕ್ಷಣೆಗೋಸ್ಕರ ಗೋ–ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಕೊಟ್ಟಿದ್ದೀರಿ. ಇದನ್ನು ನಾವು ಬಹಳ ಕಟುವಾಗಿ ವಿರೋಧಿಸಿದೆವು. ಸುಮಾರು 75–80 ವರ್ಷಗಳಿಂದ ಕಡು ಬಡತನದ ಕುಟುಂಬಗಳಲ್ಲಿ ವೃದ್ಧರು ಇದ್ದಾರೆ. ಒಂದು ಜಿಲ್ಲೆಗೆ ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೃದ್ಧಾಶ್ರಮ ಮಾಡಿ. ಅವರ ನೆರವಿಗೆ ಬನ್ನಿ. ಅವರ ವೋಟ್‌ಗಳನ್ನು ತಾವೇ ಹಾಕಿಸಿಕೊಳ್ಳಿ. ಆದರೆ, ಈ ಹಸುಗಳು ತಮಗೆ ವೋಟನ್ನು ಹಾಕುತ್ತವೆಯೇ,

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಕೇವಲ ವೋಟಿಗಾಗಿ ರಾಜಕಾರಣವನ್ನು ಮಾಡಬಾರದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ವೋಟಿಗಾಗಿಯೇ ಈ ರೀತಿಯ ರಾಜಕಾರಣ ಮಾಡುತ್ತಿರುವುದು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗ ವೋಟ್‌ಗೆ ರಾಜಕಾರಣ ಅಲ್ಲ, ನೋಟ್‌ಗಾಗಿ ರಾಜಕಾರಣ ಆಗುತ್ತಿದೆ. ವೋಟ್‌ಗೆ ರಾಜಕಾರಣವಾದರೆ ಪರವಾಗಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹೌದು, ಇದು ವೋಟ್‌ಗೋಸ್ಕರ ರಾಜಕಾರಣ ಅಲ್ಲ. ನೋಟಿಗಾಗಿ ರಾಜಕಾರಣ ಆಗುತ್ತಿದೆ.

**(ಗೊಂದಲ)**

**ವೈಸ್ ಛೇರ್‌ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮೊದಲು ವಿಚಾರಕ್ಕೆ ಬನ್ನಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ವೃದ್ಧಾಶ್ರಮಗಳನ್ನು ಮಾಡಿ, ಕಡು ಬಡ ಕುಟುಂಬದಲ್ಲಿ ಇರುವಂತಹವರಿಗೆ ಎಲ್ಲಾ ಸೌಲಭ್ಯಗಳನ್ನು ವೃದ್ಧಾಶ್ರಮಗಳಲ್ಲಿ ಕೊಡಿ. ಆ ಜೀವಗಳನ್ನು ಉಳಿಸಿ. ಇನ್ನು ಸ್ವಲ್ಪ ವರ್ಷ ಬದುಕುವುದಕ್ಕೆ ವೃದ್ಧಾಶ್ರಮಗಳನ್ನು ಮಾಡಿ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಮರಿತಿಬ್ಬೇಗೌಡರವರೇ, ಈಗಿರುವ ವೃದ್ಧಾಶ್ರಮಗಳು ಕಡಿಮೆಯಾಗಲಿ, ಮಕ್ಕಳು ತಂದೆ-ತಾಯಿಗಳನ್ನು ಸಾಕಲಿ. ವೃದ್ಧಾಶ್ರಮಗಳು ಬೇಡ, ವೃದ್ಧಾಶ್ರಮಗಳು ಕಡಿಮೆಯಾಗಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ 2019-20ನೇ ಸಾಲಿನ ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಾದ ನೀರಾವರಿ ಇರಬಹುದು, ಕುಡಿಯುವ ನೀರು ಇರಬಹುದು, ಕೆರೆ ತುಂಬಿಸುವುದು,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರು ಸಕ್ಕರೆ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡುವುದು ಸೇರಿದ ಹಾಗೆ ಇನ್ನಿತರೆ ಸುಮಾರು 865 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿತು. ಈ 865 ಕೋಟಿ ರೂಪಾಯಿಗಳಲ್ಲಿ ಒಂದು ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ. ನಾವು ರಾಜಕಾರಣ ಮಾಡುವುದಕ್ಕೆ ಬಂದಿಲ್ಲ, ತಾವು ರಾಜಕಾರಣ ಮಾಡುತ್ತಿದ್ದೀರಿ. ವೋಟ್‌ಗೋಸ್ಕರ ಅಲ್ಲವಂತೆ. ಇವತ್ತು ಸುಮಾರು 865 ಕೋಟಿ ರೂಪಾಯಿಗಳ ಕಾಮಗಾರಿಯಲ್ಲಿ ಮಂಡ್ಯ ಜಿಲ್ಲೆಯನ್ನು ಎಷ್ಟು ಕಡೆಗಣಿಸಿದ್ದಾರೆ ಎಂದರೆ, ಬಜೆಟ್‌ನಲ್ಲಿ ಘೋಷಣೆಯಾಗಿರುವಂತಹ ಒಂದು ಕಾಮಗಾರಿಯನ್ನು ಸಹ ಮಾಡುವುದಕ್ಕೆ ಬಿಡಲಿಲ್ಲ. ಇದು ನಾಗರಿಕ ಸರ್ಕಾರವಾಗಿದೆಯೇ, ಮಂಡ್ಯ ಜಿಲ್ಲೆಯ ಜನತೆ ಏನಾಗಬೇಕು? ಸುಮಾರು 865 ಕೋಟಿ ರೂಪಾಯಿಗಳ ಕಾಮಗಾರಿ ಕೆಲಸ ಏನಾಗಬೇಕು? ಇವತ್ತು ಸರ್ಕಾರದ ಏಕೈಕ ಸಕ್ಕರೆ ಕಾರ್ಖಾನೆ ಎಂದು ಇರುವಂತಹದ್ದು, ನಾಡಿನಲ್ಲಿ 'ಮೈಸೂರು ಸಕ್ಕರೆ ಕಾರ್ಖಾನೆ'ಯಾಗಿದೆ.

**ಡಾ|| ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಆ ಕಾರ್ಖಾನೆ ಏಕೆ ನಷ್ಟಕ್ಕೊಳಗಾಯಿತು?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಷ್ಟವಾಗುವುದಕ್ಕೆ ಬೇಕಾದಷ್ಟು ಕಾರಣಗಳು ಇವೆ. ಇದಕ್ಕೆ ಎಲ್ಲಾ ಸರ್ಕಾರಗಳು ಕಾರಣವಾಗಿವೆ ಮತ್ತು ಎಲ್ಲಾ ಸರ್ಕಾರಗಳು ಜವಾಬ್ದಾರಿಯಾಗಿವೆ. ಆದರೆ, ಆ ಕಾರ್ಖಾನೆಯನ್ನಾದರೂ ಕೂಡ ಪ್ರಾರಂಭ ಮಾಡುವಂತಹ ವಿಷಯವನ್ನು ಈ ಬಜೆಟ್‌ನಲ್ಲಿ ಘೋಷಣೆ ಮಾಡುತ್ತಾರೆ ಎಂದರೆ, ಅದನ್ನು ಕೂಡ ಮಾಡಲಿಲ್ಲ. ಆದಿಚುಂಚನಗಿರಿ ಮಠಕ್ಕೆ 10 ಕೋಟಿ ರೂಪಾಯಿಗಳು ಮತ್ತು ಕ್ರೀಡಾಂಗಣಕ್ಕೆ 10 ಕೋಟಿ ರೂಪಾಯಿಗಳು. ಒಟ್ಟು 20 ಕೋಟಿ ರೂಪಾಯಿಗಳನ್ನು ಮಂಡ್ಯ ಜಿಲ್ಲೆಗೆ ಘೋಷಣೆ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಯನ್ನು ಈ ಸರ್ಕಾರ ಎಷ್ಟು ಕಡೆಗಣಿಸಿದೆ ಎನ್ನುವಂತಥದ್ದು ಬಜೆಟ್ ಅನ್ನು ನೋಡಿದರೆ ಗೊತ್ತಾಗುತ್ತದೆ. ಹಿಂದಿನ ಸರ್ಕಾರ ಕೊಟ್ಟಿರುವಂತಹ ಕಾಮಗಾರಿಯನ್ನು ಸಂಪೂರ್ಣವಾಗಿ ರದ್ದು ಮಾಡಿರುವಂತಹದ್ದು, ಇವತ್ತು ಮಂಡ್ಯ ಜಿಲ್ಲೆಯ ಜನರು ಮತ್ತು ರೈತರ ಹೊಟ್ಟೆ ಮೇಲೆ ಹೊಡೆದಂತಾಗುತ್ತದೆಯಲ್ಲವೇ. ಅವರಿಗೆ ಕಷ್ಟ ಇಲ್ಲವೇ, ತೊಂದರೆ ಇಲ್ಲವೇ, ಮಂಡ್ಯ ಜಿಲ್ಲೆಯ ಬಗ್ಗೆ ಇಷ್ಟೊಂದು ತಾರತಮ್ಯ ಮಾಡುತ್ತಾರೆಯೇ? ಮಂಡ್ಯ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಯವರು ಬಂದು 'ನಾನು ಮಂಡ್ಯ ಜಿಲ್ಲೆಯವನು' ಎಂದು ಹೇಳಿದ ಪರಿಣಾಮವಾಗಿ ಉಪ ಚುನಾವಣೆಯಲ್ಲಿ ಜಯವನ್ನು ತಂದುಕೊಟ್ಟಂತಹ ಮಂಡ್ಯ ಜಿಲ್ಲೆಯ ಜನರಿಗೆ ಈ ರೀತಿ ಕೇವಲ 20 ಕೋಟಿ ರೂಪಾಯಿಗಳನ್ನು ಕೊಡುವುದೇ? ಅದರಲ್ಲಿಯೂ ಆದಿಚುಂಚನಗಿರಿ ಮಠಕ್ಕೆ 10 ಕೋಟಿ ರೂಪಾಯಿಗಳು ಮತ್ತು ಕ್ರೀಡಾಂಗಣಕ್ಕೆ 10 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರು ಮಾತನಾಡುವುದು ಬೇಡ ಎಂದು ಹೇಳುತ್ತಾರೆ. ದಯವಿಟ್ಟು, ಕುಳಿತುಕೊಳ್ಳಿ ಸಹೋದರಿ.

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, 10 ಸಾವಿರ ಕೋಟಿ ರೂಪಾಯಿಗಳ ರಾಷ್ಟ್ರೀಯ ಹೆದ್ದಾರಿ ಆಗಿರುವ ಬಗ್ಗೆ ತಾವು ಹೇಳುತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆಗ ಮಾನ್ಯ ತೇಜಸ್ವಿನಿಗೌಡರವರು ಇರಲಿಲ್ಲ. ದಯಮಾಡಿ, ನಾನು ಇನ್ನು ನಿರೀಕ್ಷೆ ಮಾಡಿದ್ದೆ. ಮಂಡ್ಯ ಜಿಲ್ಲೆ ಮತ್ತು ಮಂಡ್ಯ ತಾಲ್ಲೂಕಿನಲ್ಲಿ ಒಂದು IT Park ಮಾಡುತ್ತಾರೆ. ಮಳವಳ್ಳಿ ತಾಲ್ಲೂಕಿನಲ್ಲಿ ಒಂದು Granite Park ಮಾಡುತ್ತಾರೆ. ಎರಡು ಕಡೆಗಳಲ್ಲಿ ಸರ್ಕಾರಿ ಭೂಮಿ ಇದೆ. ಒಂದು IT Park, ಇನ್ನೊಂದು Granite Park ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಅನೇಕ ವರ್ಷಗಳ ಹಿಂದೆ ಮಳವಳ್ಳಿ ತಾಲ್ಲೂಕಿನಲ್ಲಿ ಒಂದು Granite Park ಮಾಡಬೇಕೆಂದು ಕೈಗಾರಿಕಾ ಇಲಾಖೆಯಿಂದ ಒಂದು ಯೋಜನೆ ತಯಾರಾಗಿತ್ತು. ಆದರೆ ಇದನ್ನು ಮಾಡಲಿಲ್ಲ. ಮಂಡ್ಯ ತಾಲ್ಲೂಕಿನಲ್ಲಿ IT Park ಮಾಡಬೇಕೆಂದು ಒಂದು ಯೋಜನೆ ತಯಾರಾಗಿತ್ತು. ಅದನ್ನು ಕೂಡ ಮಾಡಲಿಲ್ಲ. ಈ ಸರ್ಕಾರದಲ್ಲಾದರೂ ಘೋಷಣೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದರೆ, ಇವರು ಕೂಡ ಮಾಡಲಿಲ್ಲ. ಈ ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಯ ಜನತೆಗೆ ನಿಜಕ್ಕೂ ಕೂಡ ಬಹಳ ಅನ್ಯಾಯವಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ. ತಮ್ಮ ಜಿಲ್ಲೆಗೆ 20 ಕೋಟಿ ರೂಪಾಯಿಗಳು ಸಿಕ್ಕಿದೆ. ಆದರೆ, ಕೋಲಾರ ಜಿಲ್ಲೆಗೆ ಒಂದು ರೂಪಾಯಿ ಸಹ ಸಿಕ್ಕಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಅದರ ಬಗ್ಗೆ ತಾವು ಮಾತನಾಡಿ. ಇವತ್ತು ಯಾವ ರೀತಿಯಾಗಿದೆ ಎಂದರೆ, ಒಂದು ಸಮಾನತೆ, ಎಲ್ಲಾ ಸರ್ಕಾರಕ್ಕೂ ತನ್ನದೇ ಆದಂತಹ ಕಾರ್ಯಕ್ರಮಗಳು ಇವೆ. ತನ್ನ ಪಕ್ಷದ ಶಾಸಕರು ಇರುವ ಕಡೆ ಸ್ವಲ್ಪ ಅನುದಾನ ಜಾಸ್ತಿ ಕೊಡುವುದು ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿವೆ. ಅದನ್ನು ಮಾಡಲಿ. ಆದರೆ, ಡಾ|| ಬಿ.ಆರ್.ಅಂಬೇಡ್ಕರ್‌ರವರ ಸಂವಿಧಾನದ ತತ್ವಗಳ ಪರಿಪಾಲನೆ ಸ್ವಲ್ಪವಾದರೂ ಆಗಬೇಕಲ್ಲವೇ, ಸಮಾನತೆ ಎನ್ನುವುದಕ್ಕೆ ಹತ್ತಿರದಲ್ಲಾದರೂ ಇರಬೇಕೋ, ಬೇಡವೋ? ಮಂಡ್ಯ ಜಿಲ್ಲೆಯನ್ನು ಇಷ್ಟೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಗಣಿಸಿದರೆ ಹೇಗೆ? ಅಲ್ಲಿ ಕಾವೇರಿ ನೀರು ಕೂಡ ಹೊರಟು ಹೋಯಿತು. ಇವತ್ತು ಎಲ್ಲೋ ಕಾವೇರಿ ಹೆಚ್ಚುವರಿ ನೀರಿಗೆ ಅಣೆಕಟ್ಟೆ ಕಟ್ಟಿಕೊಳ್ಳುತ್ತಿದ್ದಾರೆ. ಇವತ್ತು ಬಜೆಟ್‌ನಲ್ಲಿ ಮೇಕೆದಾಟು ಯೋಜನೆಗೆ 9 ಸಾವಿರ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ಆದರೆ, ಕೇಂದ್ರ ಸರ್ಕಾರದಲ್ಲಿ ಅನುಮತಿ ಸಿಕ್ಕಿದೆಯೇ? ಆದರೆ ತಮಿಳುನಾಡಿನವರು ಕಟ್ಟಿಕೊಳ್ಳುತ್ತಿದ್ದಾರೆಯಲ್ಲವೇ, ಕೇಂದ್ರ ಸರ್ಕಾರದವರು ತಾವು ಕಟ್ಟಿಕೊಳ್ಳಿ ಎಂದು ಅವರಿಗೆ ಬಿಟ್ಟಿದ್ದಾರೆಯಲ್ಲವೇ, ಈ ಬಜೆಟ್‌ನಲ್ಲಿ 9 ಸಾವಿರ ಕೋಟಿ ರೂಪಾಯಿಗಳನ್ನು ಕಾಯ್ದಿರಿಸುತ್ತೇವೆ ಎಂದು ಹೇಳುತ್ತಾರೆ. ಆದರೆ, ಕೇಂದ್ರ ಸರ್ಕಾರದಲ್ಲಿ ಈ ಯೋಜನೆಗೆ ಅನುಮತಿ ಸಿಕ್ಕಿಲ್ಲ.

**(ಮುಂದು)**

**(467)17-03-2021(04-50)ಬಿಎಸ್‌ಡಿ-ವಿಕೆ**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಇವತ್ತು ಕೇಂದ್ರ ಮತ್ತು ರಾಜ್ಯದಲ್ಲಿ ಎರಡೂ ಕಡೆ ಭಾರತೀಯ ಜನತಾ Party ಅಧಿಕಾರಕ್ಕೆ ಬಂದಿರುವುದರಿಂದ ಬಹಳ ಸಂತೋಷ ಪಟ್ಟರು. ಈ ನಾಡಿನ ಜನರು ಎರಡೂ ಕಡೆ ಒಂದೇ ಪಕ್ಷ ಅಧಿಕಾರಕ್ಕೆ ಬಂದಿದೆ, ನಮ್ಮ ಬದುಕು ಬಂಗಾರವಾಗುತ್ತದೆ ಎಂದು ಬಹಳ ಜನ ಸಂತೋಷ ಪಟ್ಟರು. ಆದರೆ ಎರಡೂ ಕಡೆ ಒಂದೇ ಪಕ್ಷ ಅಧಿಕಾರದಲ್ಲಿ ಇದ್ದರೆ ಏನಾಗುತ್ತದೆ ಎಂಬುದನ್ನು ಭಾರತೀಯ ಜನತಾ Party ಯ ಕಾರ್ಯಕ್ರಮಗಳಿಂದ ಮುಗ್ಧ ಮತದಾರರು ಅರ್ಥ ಮಾಡಿಕೊಳ್ಳಬೇಕು. ಒಂದು ಪ್ರಾದೇಶಿಕ ಪಕ್ಷವನ್ನು ಕಡೆಗಣಿಸಿದ್ದಾರೆ, ಪ್ರಾದೇಶಿಕ ಪಕ್ಷಗಳಿರುವ ರಾಜ್ಯಗಳಲ್ಲಿ ರಾಷ್ಟ್ರೀಯ ಪಕ್ಷಗಳು ಅಂಗಲಾಚಿ ಕೆಲಸ ಮಾಡುತ್ತಿವೆ. ಆದರೆ ಕರ್ನಾಟಕ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವನ್ನು ಉಳಿಸಿಕೊಳ್ಳದೇ ರಾಷ್ಟ್ರೀಯ ಪಕ್ಷವನ್ನು ನಂಬಿ ಎಂತಹ ಅನಾಹುತವಾಗುತ್ತದೆ ಎಂಬುದನ್ನು ಉದಾಹರಣೆಯಾಗಿ ಭಾರತೀಯ ಜನತಾ Party ಯ ಆಡಳಿತದಲ್ಲಿ ನಾವು ನೋಡಬಹುದಾಗಿದೆ ಎಂದು ನಾನು ಬಹಳ ಬೇಸರದಿಂದ ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೇಕೆದಾಟು ಯೋಜನೆಗೆ ರೂ. 9 ಸಾವಿರ ಕೋಟಿಗಳನ್ನು ಕೊಟ್ಟಿಲ್ಲ. ಆಯವ್ಯಯದಲ್ಲಿ "ಅರ್ಕಾವತಿ ಮತ್ತು ಕಾವೇರಿ ನದಿಯ ಸಂಗಮದ ಸಮೀಪದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲಕ ಜಲಾಶಯವನ್ನು ನಿರ್ಮಿಸಿ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ಇದಕ್ಕಾಗಿ 9,000 ಕೋಟಿ ರೂ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದಾಜು ಮೊತ್ತದ ಯೋಜನಾ ವರದಿಯನ್ನು ಈಗಾಗಲೇ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ಅವಶ್ಯಕ ಅನುಮೋದನೆಯನ್ನು ಶೀಘ್ರವಾಗಿ ಪಡೆದು ಅನುಷ್ಠಾನಗೊಳಿಸಲಾಗುವುದು" ಎಂದು ಉಲ್ಲೇಖಿಸಲಾಗಿದೆ. ಇದು ಹಣ ಕೊಟ್ಟಂತೆ ಅಲ್ಲ. ವರದಿಯನ್ನು ಆಯೋಗಕ್ಕೆ ಸಲ್ಲಿಸಲಾಗಿದ್ದು, ಹಣವನ್ನು ಕೊಟ್ಟಿಲ್ಲ.

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ಸಭಾಪತಿಯವರೇ, ಹಣ ಇದ್ದರಲ್ಲವೇ ಕೊಡುವುದು! ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ Budget ಪುಸ್ತಕವನ್ನು ಓದಿಲ್ಲ ಎಂದುಕೊಂಡಿದ್ದೆ. ಆನೆಗಳ ಹಾವಳಿ, ಅಂದರೆ ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಿ, ರೈತರ ಬೆಳೆಯನ್ನು ರಕ್ಷಿಸಲು ಸರ್ಕಾರವು ಬಹಳ ಕಾಲದಿಂದ ಹೋರಾಟ ಮಾಡಿಕೊಂಡು ಬಂದಿದೆ. ಇನ್ನು ಕೂಡ ಆನೆ ಹಾವಳಿ ತಪ್ಪಿಸಲು rail barricade ಹಾಕಬೇಕೆಂದು ಹೊಸ ಯೋಜನೆ ತಂದಿದ್ದು, ಮಾನ್ಯ ಸಿ.ಸಿ. ಪಾಟೀಲರಿಗೂ ಇದರ ಪರಿಚಯ ಇದೆ. ನಾನು ಮೊನ್ನೆ ದಿವಸ ಅರಣ್ಯ ಸಚಿವರಾಗಿದ್ದ ಮಾನ್ಯ ಆನಂದ್ ಸಿಂಗ್ ರವರನ್ನು ಭೇಟಿಯಾಗಿದ್ದೆನು. ನಮ್ಮ ಕ್ಷೇತ್ರದಲ್ಲಿ ಸಕಲೇಶಪುರ, ಹೆಚ್.ಡಿ. ಕೋಟೆ ಮತ್ತು ಚಾಮರಾಜನಗರಗಳಲ್ಲಿ ದೊಡ್ಡ ಹಾವಳಿ ಇದ್ದು, ಅಲ್ಲಿ barricade ಹಾಕಿದ್ದಾರೆ. ಆದರೆ ಸ್ವಲ್ಪ ಭಾಗ ಉಳಿದಿದ್ದು, ಈ ಭಾಗದಲ್ಲಿ ಬುದ್ಧಿವಂತ ಆನೆಗಳು ಬಂದು ಎಲ್ಲವನ್ನು ಹಾಳು ಮಾಡುತ್ತಿವೆ. ಇದರ ಸಲುವಾಗಿ ಮಾನ್ಯ ಆನಂದ್ ಸಿಂಗ್‌ರವರನ್ನು ಭೇಟಿಯಾಗಿ ' ತಾವು ಸಚಿವರಾಗಿದ್ದೀರಿ, ಇದನ್ನು ಸ್ವಲ್ಪ ಪೂರ್ಣ ಮಾಡಿಸಿ' ಎಂದು ಕೇಳಿಕೊಂಡೆನು. ಅದಕ್ಕೆ ಮಾನ್ಯ ಸಚಿವರು 'ನಾವು ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಳ್ಳಬೇಕು, ನಾನು ಎರಡು ಸಾರಿ ಕೇಂದ್ರ ಸರ್ಕಾರಕ್ಕೆ ಭೇಟಿಯಾಗಿದ್ದೇನೆ. ಅದಕ್ಕೆ ಕೇಂದ್ರ ಸರ್ಕಾರವರು rail barricade ನಿಂದ ಆನೆಗಳ ಹಾವಳಿ ತಪ್ಪಸಬಹುದು ಎಂದು ಈಗಲೇ ಕೇಳುತ್ತಿರುವುದು, ಈ rail barricade ನಿಂದ ಆನೆಗಳ ಹಾವಳಿ ತಪ್ಪಿಸಬಹುದು ಎಂದು ಇದುವರೆಗೂ ಹೊಳೆಯಲಿಲ್ಲ, ದೇಶದಲ್ಲಿ ಈಗ ಮೊದಲಾಗಿದ್ದು, ಇದರ ಬಗ್ಗೆ ಸವಿವರವಾಗಿ ವಿವರಿಸಬೇಕು, explain ಮಾಡಬೇಕು, ಅಲ್ಲಿಯವರೆಗೂ ಒಂದು ಪೈಸೆ ಕಾಸು ಕೊಡುವುದಿಲ್ಲ ಎಂದು ಮಾನ್ಯ ಸಚಿವರಿಗೆ ಹೇಳಿದರು' ಎಂದು ನನ್ನ ಬಳಿ ಹೇಳಿದರು. ಇದರ ಬಗ್ಗೆ ಏನು ಎಂದು ಗೊತ್ತೇ ಇಲ್ಲ ಎಂದು ಹೇಳಿದರಂತೆ!

**ಡಾ: ತೇಜಸ್ವಿನಿಗೌಡಃ–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಹೆಸರನ್ನು ಉಲ್ಲೇಖ ಮಾಡುತ್ತಿದ್ದು, ಅವರು ಸದನದಲ್ಲಿ ಇಲ್ಲ. ಅವರು ಮಾನ್ಯ ಆನಂದ್‌ಸಿಂಗ್ ರವರ ಹೆಸರನ್ನು ಉಲ್ಲೇಖ ಮಾಡಿದ್ದರಿಂದ ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡಃ–** ನಾನೇನು ತಪ್ಪು ಹೇಳಿದೆ? ಮಾನ್ಯ ಆನಂದ್ ಸಿಂಗ್‌ರವರು ಈಗಲೂ ಮಂತ್ರಿಗಳಾಗಿದ್ದಾರೆ.

**ಡಾ: ತೇಜಸ್ವಿನಿಗೌಡಃ–** ಅವರು ಈಗ ಇಲ್ಲ, ಅವರು ಇದ್ದಾಗ ಹೇಳಲಿ.

**ಶ್ರೀ ಮರಿತಿಬ್ಬೇಗೌಡಃ–** ಅವರು ಮಂತ್ರಿಗಳಾಗಿದ್ದು, ಇದನ್ನು ಹೇಳಲಿ. (ಗೊಂದಲ)

**ಡಾ: ತೇಜಸ್ವಿನಿಗೌಡಃ–** ಅವರು mislead ಮಾಡಬಾರದು.

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ಆನಂದ್ ಸಿಂಗ್ ರವರು ನನ್ನ ಬಳಿ ಮಾತನಾಡಿದ್ದನ್ನು ನಾನು ಹೇಳಿದ್ದೇನೆ. (ಗೊಂದಲ)

**ಡಾ: ತೇಜಸ್ವಿನಿಗೌಡಃ–** ವ್ಯಂಗ್ಯಕ್ಕೂ ಒಂದು ಮಿತಿ ಇರಬೇಕು. (**ಗೊಂದಲ**)

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ಹೇಳಿದ್ದೇನೆ. ಮುಂದುವರೆದು ಅವರು ಇನ್ನೂ ಒಂದು ಮಾತನ್ನು ಹೇಳಿದ್ದನ್ನು ಹೇಳಿಬಿಡುತ್ತೇನೆ. ಈ ವಿಚಾರವನ್ನು ಅವರ ಬಳಿ ಅರಣ್ಯ ಖಾತೆ ಇದ್ದಾಗ ಮಾತನಾಡಿದ್ದೇನೆ. ಆಗ ನಾನು ಮಾನ್ಯ ಸಚಿವರ ಬಳಿ ' ಸಾರ್, ಏನಾದರೂ ಮಾಡಿ ತಾವು ವಿವರಣೆ ಕೊಟ್ಟು ಬೇಗ ಅಣೆ ತಂದು barricade ಮಾಡಿಸಿಕೊಡಿ' ಎಂದು request ಮಾಡಿಕೊಂಡೆನು. ಅದಕ್ಕೆ ಅವರು ' ನನ್ನ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ' ಎಂದು ಹೇಳಿದರು. ನಂತರ ಇನ್ನೊಂದು ಅವಘಡ ಆಯಿತು. ಮಾನ್ಯ ಸಚಿವರಿಗೆ ಅವರ ಖಾತೆ ಬದಲಾವಣೆ ಆಗಿರುವುದೇ ಗೊತ್ತಿಲ್ಲ. ನಾನು ಕಳೆದ ಅಧಿವೇಶನದಲ್ಲಿ ಪುನಃ ' ಸಾರ್ , ದೆಹಲಿಗೆ ಹೋಗಿದ್ದೀರಾ? ಏನಾಯಿತು' ಎಂದು ಕೇಳಿದೆ. ಅದಕ್ಕೆ ಮಾನ್ಯ ಸಚಿವರು ' ಏನು ಗೌಡ್ರೇ, ನಿಮಗೆ ಗೊತ್ತಿಲ್ಲವೇ? ನನಗೆ ಆ ಖಾತೆಯೇ ಇಲ್ಲ' ಎಂದು ಹೇಳಿದರು. ಆಗ ನಾನು sorry Sir, ಇದು ನನಗೆ ಗೊತ್ತೇ ಆಗಲಿಲ್ಲ ಎಂದು ಹೇಳಿದೆ. (**ಗೊಂದಲ**) ನಂತರ ಈಗ ಯಾವ ಖಾತೆ ಕೊಟ್ಟಿದ್ದಾರೆ ಎಂದು ಅವರನ್ನು ಕೇಳಿದೆ. (**ಗೊಂದಲ**)

**ಶ್ರೀಮತಿ ಭಾರತಿಶೆಟ್ಟಿಃ–** ಈ ಭಾಷೆ ಸರಿಯಲ್ಲ. (**ಗೊಂದಲ**)

**ಡಾ: ತೇಜಸ್ವಿನಿಗೌಡಃ–** ಮಾನ್ಯ ಸಭಾಪತಿಯವರೇ, (**ಗೊಂದಲ**)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಚೇರ್ಮನ್‌:-** ಮಾನ್ಯ ಸದಸ್ಯರೇ, please sit down. ತಾವು ಈ ಕಡೆ ಕುರಿತು ಮಾತನಾಡಿ, ಇಲ್ಲಿ ಇಲ್ಲದವರ ಹೆಸರನ್ನು ಉಲ್ಲೇಖ ಮಾಡಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಸಹೋದರಿಯವರನ್ನು ಕೇಳುವುದೇನೆಂದರೆ ಮಾನ್ಯ ಆನಂದ್ ಸಿಂಗ್‌ರವರು ಸುಮ್ಮನಿದ್ದಾರೆ, ಇವರಿಗೆ ಏಕೆ ಈ ನೋವು?

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಆನಂದ್ ಸಿಂಗ್‌ರವರು ಸದನದಲ್ಲಿ ಇಲ್ಲ. (**ಗೊಂದಲ**)

**ಡಾ: ತೇಜಸ್ವಿನಿಗೌಡ:-** ಮಾನ್ಯ ಕುಮಾರ ಸ್ವಾಮಿಯವರು ಮಂಡ್ಯ ಕೆರೆ ಮಾಡಲಿಲ್ಲ (ಗೊಂದಲ) ....... ಕೆರೆ ಮಾಡಲಿಲ್ಲ, ಅವರು ಸುಳ್ಳು ಹೇಳುತ್ತಿದ್ದಾರೆ.

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಆನಂದ್ ಸಿಂಗ್‌ರವರು ಇಲ್ಲ, ಅವರು clarification ಕೊಡುವುದಕ್ಕೆ ಆಗುವುದಿಲ್ಲ, ಇದರ ಬಗ್ಗೆ ನಾಳೆ-ನಾಳಿದ್ದು ವಿಚಾರ ಮಾಡೋಣ.

**ಶ್ರೀ ಮರಿತಿಬ್ಬೇಗೌಡ:-** ನಾನು ಟೀಕೆ ಮಾಡುತ್ತಿಲ್ಲ.

**Sri C.C. PATIL:-** I will not take your much more time. ನನಗೆ ಮಾನ್ಯ ಮುಖ್ಯಮಂತ್ರಿಯವರು ಅರಣ್ಯ ಖಾತೆ ಜವಾಬ್ದಾರಿ ಕೊಟ್ಟಾಗ ಕಳೆದ ಸಾರಿ Budget ನಲ್ಲಿ ರೂ.100 ಕೋಟಿಗಳ ಅನುದಾನವನ್ನು ಇಟ್ಟಿದ್ದು, ಹಳೆಯ rail barricade ತೆಗೆದುಕೊಂಡು ಆ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. Railway ಇಲಾಖೆಯ concession rate ನಲ್ಲಿ ಹಳೆಯ rail barricade ಕೊಡುವ ಬಗ್ಗೆ ಮನವಿ ಮಾಡಿದ್ದೇವೆ. ಮಾನ್ಯ ಸುರೇಶ ಅಂಗಡಿಯವರು ಕೊಡುವ ಬಗ್ಗೆ ಮಾತನ್ನು ಕೊಟ್ಟಿದ್ದಾರೆ. ದುರದೃಷ್ಟವಶಾತ್ ನಾವು ಅವರನ್ನು ಕಳೆದುಕೊಂಡಿದ್ದೇವೆ. ನಾನು ಅರಣ್ಯ ಮಂತ್ರಿಯಾಗಿದ್ದಾಗ ರೂ.100 ಕೋಟಿಗಳನ್ನು ಖರ್ಚು ಮಾಡಿ barricade ಅನ್ನು tart ಮಾಡಿದ್ದೇನೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಇದು implement ಆಗಲಿಲ್ಲ, ರೂ.100 ಕೋಟಿ ಎಲ್ಲಿ ಖರ್ಚಾಗಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡಃ–** ನಾನು ಟೀಕೆ ಮಾಡುತ್ತಿಲ್ಲ, ವಿಚಾರ ಈ ರೀತಿ ಇದೆ, ದಯವಿಟ್ಟು ಏನಾದರೂ ಮಾಡಿ complete ಮಾಡಿ, ಈ ಯೋಜನೆಯನ್ನು ರೈತರ ನೆರವಿಗೆ ತನ್ನಿ ಎಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರನ್ನು ಎರಡನೆಯ ಬಾರಿ ಭೇಟಿಯಾದಾಗ ಅವರನ್ನು ಕುರಿತು ' ಸಾರ್, ತಮಗೆ ಯಾವ ಖಾತೆ ನೀಡಿದ್ದಾರೆ?' ಎಂದು ಕೇಳಿದೆ. ಅದಕ್ಕೆ ಅವರು ' ಅದೇನೋ ಮೂಲಭೂತ ಸೌಕರ್ಯ ಎಂಬ ಖಾತೆ ಕೊಟ್ಟಿದ್ಧಾರೆ, ಆದರೆ ಖಾತೆ ವಹಿಸಿಕೊಂಡು ಒಂದು ವಾರ ಆಯಿತು, ಇದುವರೆಗೂ ಯಾವ ಅಧಿಕಾರಿ ಬಂದು ಪರಿಚಯ ಮಾಡಿಕೊಳ್ಳಲಿಲ್ಲ, ಒಂದು file ಸಹ ನನಗೆ ಬಂದಿಲ್ಲ' ಎಂದು ಹೇಳಿದರು. ಈ ವಿಚಾರವನ್ನು ಹೇಳಿದ್ದಾರೆ. ಇದನ್ನು ಅವರ ಬಳಿಯೇ ಕೇಳಬಹುದು. ನಾನು ಆಕ್ಷೇಪಣೆ ಮಾಡುತ್ತಿಲ್ಲ.

**ವೈಸ್ ಛೇರ್ಮನ್ಃ–** ಅವರು ಸದನದಲ್ಲಿ ಇಲ್ಲ, ತಾವು 5 ಗಂಟೆಗೆ ಮುಕ್ತಾಯ ಮಾಡಿ.

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ಸಭಾಪತಿಯವರೇ, ಸರ್ಕಾರ ಹೇಗಿದೆ ಎಂದರೆ ಇವತ್ತು ಭ್ರಷ್ಟಾಚಾರ ಎನ್ನುವುದು ಈ Budget ಅನ್ನು ನೋಡಿದರೆ.....

**ವೈಸ್ ಚೇರ್ಮನ್ಃ–** ಭ್ರಷ್ಟಾಚಾರದ ಬಗ್ಗೆ ನಿನ್ನೆ ಮಾತನಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡಃ–** ಅನುದಾನಿತ ಶಾಲೆಗಳ ಬಗ್ಗೆ HRMS ಎಂದು ಮಾಡಿದ್ದಾರೆ. ಅದರಲ್ಲಿ HRMS-2, ಅದರಲ್ಲಿ Khajane-2 ಎಂದು ಮಾಡಿದ್ದಾರೆ. ಇವತ್ತು K-2 ನಲ್ಲಿ release ಆದರೆ ಮಾಯಾಜಾಲದಂತೆ ಸಂಜೆಗೆ ಅಂತರಜಾಲದಲ್ಲಿ ಹೊರಟು ಹೋಗುತ್ತದೆ ಎಂದು ಹೇಳಿಕೊಂಡು ಬಂದರು. ಅನುದಾನಿತ ಸಂಸ್ಥೆಗಳು ಹಾಗೂ ಶಾಲಾ–ಕಾಲೇಜುಗಳಿಗೆ 2–3 ತಿಂಗಳಿಗೊಮ್ಮೆ K-2 ನಲ್ಲಿ salary ಕೊಡುತ್ತಿದ್ದಾರೆ. ಇದನ್ನು ತಪ್ಪಿಸಲು ಏನಾದರೂ ಮಾಡಬೇಕು. ಸರ್ಕಾರಿ ಶಾಲೆಗಳಿಗೆ ಏ–2 ನಲ್ಲಿ ಬಹಳ ಟಚಿಣಜ ಆಗಿ salary ಹೋಗುತ್ತದೆ. ಇನ್ನು ಇದನ್ನು ಪಕ್ಕಾ ಮಾಡಿಲ್ಲ. ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ? ಎಷ್ಟು ದಿನಗಳಿಂದ ಈ ಯೋಜನೆ ಇದೆ? ಅನುದಾನಿತ ಸಂಸ್ಥೆಗಳು ಹಾಗೂ ಶಾಲಾ ಕಾಲೇಜುಗಳಿಗೆ ವೇತನ ತಕ್ಷಣ ಹೋಗುವಂತೆ K-2 ನಲ್ಲಿರುವ ದೋಷವನ್ನು ಸರಿಪಡಿಸಿ ಮಾಡಬೇಕು. ಈ ಸರ್ಕಾರದ Budget ನೋಡಿದರೆ ಒಂದು ರೀತಿ ಮನಸ್ಸಿಗೆ ಬಹಳ ಬೇಸರವಾಗುತ್ತದೆ. ಶ್ರೀಯುತ ಕುವೆಂಪುರವರು ಬಹಳ ಹಿಂದೆ ಘಟಿಕೋತ್ಸವದಲ್ಲಿ ' ಈ ನಾಡು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದಲ್ಲಿ ಶಿಕ್ಷಣ ಎನ್ನುವುದು ಅನ್ನದ ಭಾಷೆಯ ಶಿಕ್ಷಣವಾಗಿದೆ, ಇದು ಜ್ಞಾನದ ಶಿಕ್ಷಣ ಅಲ್ಲ' ಎನ್ನುವ ಮಾತನ್ನು ಹೇಳಿದರು.

(ಮುಂದು)

(468)/17.03.2021/5.00/ಹೆಚ್‌ವಿ:ಬಿಎನ್‌ಎಸ್

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರಕವಿ ಕು.ವೆಂ.ಪು.ರವರು 'ನಮ್ಮ ನಾಡಿನ ಮಕ್ಕಳಿಗೆ ಜ್ಞಾನದ ದೀಕ್ಷೆಯನ್ನು ಕೊಡುವಂತಹ ಶಿಕ್ಷಣವನ್ನು ನೀಡಬೇಕು' ಎನ್ನುವ ಮಾತನ್ನು ಹೇಳಿದ್ದರು. ಮುಂದುವರೆದು, 'ಇವತ್ತಿನ ಶಿಕ್ಷಣ, ಪರೀಕ್ಷೆಗಳು ಮತ್ತು ಮೌಲ್ಯಮಾಪನಗಳು ಎಲ್ಲವೂ ಅದೃಷ್ಟದ, ಜನಪಿನ ಪರೀಕ್ಷೆಗಳಾಗಿವೆ' ಎಂದು ಸಹ ಹೇಳಿದ್ದಾರೆ. ಇದು ಇವತ್ತಿನ ವ್ಯವಸ್ಥೆಗೆ ಸರಿ ಹೊಂದುತ್ತಿದೆ. ಇತ್ತೀಚಿನ ದಿನಗಳಲ್ಲಿ ಅದೃಷ್ಟದ ಪರೀಕ್ಷೆಗಳೇ ಹೆಚ್ಚಾಗಿ ನಡೆಯುತ್ತಿವೆ. ದುಡ್ಡಿರುವವರ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ದುಡ್ಡು ಕೊಟ್ಟು ಪದವಿಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳು ಬಡವರ ಮಕ್ಕಳಿಗೆ ಶಿಕ್ಷಣ ಕೊಡುತ್ತೇವೆಂದು ಹೇಳಿಕೊಂಡು ದೊಡ್ಡದೊಡ್ಡ ಕಟ್ಟಡಗಳನ್ನು ತೋರಿಸಿ, ಹಣವನ್ನು ದೋಚಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಈ ರೀತಿಯ ಪ್ಯಾಕೇಜ್‌ಗಳು ನಡೆಯುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರಕವಿ ಕು.ವೆಂ.ಪು.ರವರು 'ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಓದಿದ ನಂತರ ನನ್ನ ಸಾಹಿತ್ಯ ರಚನೆಗೆ ಪ್ರೇರಣೆ ದೊರೆಯಿತು' ಎನ್ನುವ ಮಾತನ್ನು ಹೇಳಿದ್ದಾರೆ. ಕು.ವೆಂ.ಪು.ರವರು ಯಾವುದೇ ಜಾತಿಯ ಹೆಸರನ್ನು ಬಳಸಿಕೊಳ್ಳದೇ ತಮ್ಮ ಸಾಹಿತ್ಯ ಕೃಷಿಯಿಂದಾಗಿ ಮುಗಿಲೆತ್ತರಕ್ಕೆ ಬೆಳೆದಿದ್ದಾರೆ. ಯುಗ ಪುರುಷ ಡಾ||ಬಿ.ಆರ್.ಅಂಬೇಡ್ಕರ್, ರಾಷ್ಟ್ರಪಿತ ಮಹಾತ್ಮ ಗಾಂಧಿ, ಸ್ವಾಮಿ ವಿವೇಕಾನಂದರು, ಬುದ್ಧ ಮತ್ತು ಕರ್ಮಯೋಗಿ ಬಸವಣ್ಣ ಇವರುಗಳನ್ನು ಈ ಸಮಾಜದಲ್ಲಿರುವ ಯಾವುದೇ ಜಾತಿಯೊಂದಿಗೆ ಸಮ್ಮಿಳಿತಗೊಳಿಸಬಾರದು. ಇವರುಗಳ ಜಾತಿ ನೋಡಬಾರದು. ಅದೇ ರೀತಿಯಲ್ಲಿ ಸಾಹಿತ್ಯ ಲೋಕದಲ್ಲಿ ರಾಷ್ಟ್ರಕವಿ ಕು.ವೆಂ.ಪು.ರವರು ಜಾತಿಗೆ ಹೊರತಾಗಿ, ಎತ್ತರಕ್ಕೆ ಬೆಳೆದು ನಿಂತಿದ್ದಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ಗದ್ಯ, ಪದ್ಯ, ಕವನ, ಕಥೆ, ಕಾದಂಬರಿ ಎಲ್ಲ ಪ್ರಾಕಾರಗಳಲ್ಲಿಯೂ ಅವರು ಕೃಷಿ ಮಾಡಿದ್ದಾರೆ. ಕು.ವೆಂ.ಪು.ರವರು ವಿಶ್ವ ಮಾನವರಾಗಿದ್ದಾರೆ. ಅವರಿಗೆ ಈ ದೇಶದ ಅತ್ಯುನ್ನತ್ತ ಪ್ರಶಸ್ತಿಯಾಗಿರುವ 'ಭಾರತರತ್ನ' ಪ್ರಶಸ್ತಿಯನ್ನು ನೀಡಬೇಕಾಗಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಇಂತಹ ಮಹಾನ್ ಕವಿಯ ಮನೆಯಾದ 'ಉದಯ ರವಿ' ಯನ್ನು ಸ್ಮಾರಕವನ್ನಾಗಿ ಮಾರ್ಪಾಡು ಮಾಡಿ, ಸಾರ್ವಜನಿಕರಿಗೆ ಮುಕ್ತಗೊಳಿಸಬೇಕಾಗುತ್ತದೆ. ಸಾಹಿತ್ಯಲೋಕದಲ್ಲಿ ಅವರ ಜೀವನ ಚರಿತ್ರೆ ಅಜರಾಮರವಾಗಿ ಉಳಿಯುವಂತೆ ಮಾಡಬೇಕಾಗುತ್ತದೆ. ಈ ಕೆಲಸವನ್ನು ಯಾವ ಸರ್ಕಾರಗಳೂ ಮಾಡಿಲ್ಲ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಈ ಬಾರಿಯ ಆಯವ್ಯಯದಲ್ಲಾದರೂ ಘೋಷಣೆ ಮಾಡುತ್ತಾರೆನ್ನುವ ನಿರೀಕ್ಷೆಯಲ್ಲಿದ್ದೆ, ಅವರೂ ಸಹ ಘೋಷಣೆ ಮಾಡಲಿಲ್ಲ. ತಮ್ಮ ಇಡೀ ಜೀವಮಾನವನ್ನು ಸಾಹಿತ್ಯ ಕೃಷಿಗಾಗಿಯೇ ಮುಡಿಪಾಗಿಟ್ಟವರು ಕು.ವೆ.ಪು.ರವರು. ಅವರ ಬಗ್ಗೆ ಈ ಸರ್ಕಾರ ಚಿಂತನೆಯನ್ನೇ ಮಾಡಿಲ್ಲ, ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಸಹ ರೂಪಿಸಿಲ್ಲ. ಯಾವತ್ತೋ ಒಂದು ದಿನ ಸರ್ಕಾರ 'ಕು.ವೆಂ.ಪು.ರವರ ಜನ್ಮ ದಿನಾಚರಣೆಯನ್ನು ಆಚರಣೆ ಮಾಡಬೇಕು' ಎಂದು ಘೋಷಣೆ ಮಾಡಿತ್ತು ಅಷ್ಟೆ.

ಸನ್ಮಾನ್ಯ ಸಭಾಪತಿಯವರೇ, ಬಸವಣ್ಣನವರನ್ನು ಲಿಂಗಾಯಿತರು ತಮ್ಮವರು ಎನ್ನುವುದು, ಡಾ||ಬಿ.ಆರ್.ಅಂಬೇಡ್ಕರ್ ಅವರನ್ನು ದಲಿತರು ಮತ್ತು ಕು.ವೆಂ.ಪು. ಅವರೊಂದಿಗೆ ಒಕ್ಕಲಿಗ ಜಾತಿಯವರು ಗುರುತಿಸಿಕೊಳ್ಳುತ್ತಿದ್ದಾರೆ. ಇವರೆಲ್ಲರೂ ವಿಶ್ವಮಾನವರು ಇವರುಗಳು ಯಾವುದೇ ಜಾತಿ, ಜನಾಂಗಕ್ಕೆ ಸೀಮಿತವಾದವರಲ್ಲ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೆ, ಒಕ್ಕಲಿಗರು ನಾಡಪ್ರಭು ಕೆಂಪೇಗೌಡರೊಂದಿಗೆ ಗುರುತಿಸಿಕೊಳ್ಳುತ್ತಾರೆ. ಕು.ವೆಂ.ಪು. ಅವರೊಂದಿಗಲ್ಲ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಕು.ವೆಂ.ಪು., ಯುಗ ಪುರುಷ ಡಾ||ಬಿ.ಆರ್.ಅಂಬೇಡ್ಕರ್, ರಾಷ್ಟ್ರಪಿತ ಮಹಾತ್ಮ ಗಾಂಧಿ, ಸ್ವಾಮಿ ವಿವೇಕಾನಂದರು, ಬುದ್ಧ ಮತ್ತು ಕರ್ಮಯೋಗಿ ಬಸವಣ್ಣ ಇವರುಗಳನ್ನು ಈ ಸಮಾಜದಲ್ಲಿರುವ ಯಾವುದೇ ಜಾತಿಯೊಂದಿಗೆ ಸಮ್ಮಿಳಿತಗೊಳಿಸಬಾರದು. ಇವರುಗಳು ವಿಶ್ವ ಮಾನವರು, ಜಾತಿಗೆ ಅತೀತರಾಗಿದ್ದಾರೆ. ಇವರೆಲ್ಲರೂ ನಮ್ಮ ಬದುಕಿಗೆ ಬೆಳಕು ಕೊಟ್ಟವರು. ನಾನು ಇವತ್ತು ಈ ಸದನದಲ್ಲಿ ನಿಂತು ಮಾತನಾಡುತ್ತಿದ್ದೇನೆಂದರೆ, ಅದು ಡಾ||ಬಿ.ಆರ್.ಅಂಬೇಡ್ಕರ್‌ರವರು ನಮಗೆ ಕೊಟ್ಟಿರುವ ಹಕ್ಕು. ಈ ಎಲ್ಲ ಮಹಾತ್ಮರು ನಿಸ್ವಾರ್ಥತೆಯಿಂದ ನಮ್ಮ ಸಮಾಜಕ್ಕೆ ಕೊಟ್ಟಿರುವ ಕೊಡುಗೆಯಿಂದಾಗಿ ಇವತ್ತು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆ. ಇವರುಗಳ ಪುತ್ಥಳಿ ಮಾಡಿ ಪೂಜೆ ಮಾಡುವುದು ಮತ್ತು ಕಾರ್ಯಕ್ರಮಗಳನ್ನು ಮಾಡುವುದಕ್ಕಷ್ಟೇ ಸೀಮಿತಗೊಳಿಸಿದ್ದೇವೆ. ಈ ರೀತಿ ಆಗಬಾರದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರೇ, ಈಗಾಗಲೇ ತಮ್ಮ ಮಾತುಗಳನ್ನು ಪ್ರಾರಂಭಿಸಿ ಸುಮಾರು 1 ಗಂಟೆ 30 ನಿಮಿಷಗಳಾಗಿವೆ. ಸಂಜೆ 5.30ಕ್ಕೆ ಸಚಿವ ಸಂಪುಟ ಸಭೆ ಇರುವುದರಿಂದ ಸದನವನ್ನು ಮುಕ್ತಾಯಗೊಳಿಸಬೇಕಾಗಿದೆ. ಇನ್ನೂ ಮಾನ್ಯ ಪ್ರತಾಪಸಿಂಹ ನಾಯಕ್‌ರವರು ಆಯವ್ಯಯದ ಮೇಲೆ ಮಾತನಾಡುವವರಿದ್ದಾರೆ. ತಾವು ತಮ್ಮ ಮಾತುಗಳನ್ನು ಆದಷ್ಟು ಬೇಗ ಮುಕ್ತಾಯಗೊಳಿಸಿ, ಅವರುಗಳಿಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, 5 ಗಂಟೆ 30 ನಿಮಿಷಗಳಿಗೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು. ಭಾರತೀಯ ಜನತಾ ಪಕ್ಷದವರು ಅಧಿಕಾರಕ್ಕೆ ಬರುವುದಕ್ಕೂ ಮೊದಲು 'ನಾವು ಅಧಿಕಾರಕ್ಕೆ ಬಂದರೆ, ಭ್ರಷ್ಟಾಚಾರವನ್ನು ನಿಗ್ರಹ ಮಾಡುತ್ತೇವೆ. ಲೋಕಾಯುಕ್ತವನ್ನು ಮರು ಸ್ಥಾಪನೆ ಮಾಡುತ್ತೇವೆ' ಎನ್ನುವ ಘೋಷಣೆಯನ್ನು ಮಾಡಿದ್ದರು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಲೋಕಾಯುಕ್ತವನ್ನು ನಿಷ್ಕ್ರಿಯಗೊಳಿಸಿ, ಎ.ಸಿ.ಬಿ., ಯನ್ನು ಜಾರಿಗೆ ತಂದರು. ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದು ಬಹಳಷ್ಟು ತಿಂಗಳುಗಳಾಗಿವೆ, ಇಲ್ಲಿಯವರೆವಿಗೂ ಲೋಕಾಯುಕ್ತ ಹಲ್ಲು ಕಿತ್ತ ಹಾವಿನ ರೀತಿ ಅಲ್ಲಿಯೇ ಬಿದ್ದಿದೆ. ಎ.ಸಿ.ಬಿ.,ಯಲ್ಲಿರುವ ಪೋಲೀಸ್ ಅಧಿಕಾರಿಗಳೆಲ್ಲ ಅಪ್ರಾಮಾಣಿಕರೆಂದು ನಾನು ಹೇಳುತ್ತಿಲ್ಲ. ಆದರೆ, ಲೋಕಾಯುಕ್ತ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಇದು ನ್ಯಾಯಾಧೀಕರಣದ ಕಾನೂನಿನ ಚೌಕಟ್ಟಿನೊಳಗೆ ಬರುತ್ತದೆ. ಆದರೆ, ಎ.ಸಿ.ಬಿ.,ಯಲ್ಲಿರುವ ಅಧಿಕಾರಿಗಳು ಸರ್ಕಾರದ ಅಧೀನದಲ್ಲಿರುತ್ತಾರೆ. ಆದ್ದರಿಂದ ಈ ಸಂಸ್ಥೆಯಿಂದ ನಿಷ್ಪಕ್ಷಪಾತವಾದ ತನಿಖೆ ನಡೆಸಲು ಸಾಧ್ಯವಾಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಪಕ್ಷದವರು ಅಧಿಕಾರಕ್ಕೆ ಬರುವುದಕ್ಕೂ ಮೊದಲು ಘೋಷಣೆ ಮಾಡಿದಂತೆ ಈ ಆಯವ್ಯಯದಲ್ಲಿ ಲೋಕಾಯುಕ್ತವನ್ನು ಬಲಗೊಳಿಸುತ್ತಾರೆ ಪುನಃ ಅದನ್ನು ಅಸ್ತಿತ್ವಕ್ಕೆ ತರುತ್ತಾರೆ ಎನ್ನುವ ನಿರೀಕ್ಷೆಯಲ್ಲಿದ್ದೆ. ಈ ಆಯವ್ಯಯ ಆ ರೀತಿಯ ಯಾವ ಭರವಸೆಯನ್ನು ಮೂಡಿಸಿಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಎಷ್ಟು ಭ್ರಷ್ಟರಾಗಿದ್ದಾರೆ ಎನ್ನುವ ಅಂಶವನ್ನು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಭ್ರಷ್ಟಾಚಾರವನ್ನು ತಡೆಗಟ್ಟುವುದರಿಂದ ನಮ್ಮ ರಾಜ್ಯದ ತೆರಿಗೆಯ ಪ್ರಮಾಣ ಹೆಚ್ಚಾಗುತ್ತದೆ ಎನ್ನುವುದು ನನ್ನ ಮೂಲ ಉದ್ದೇಶವಾಗಿದೆ. ಟೀಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕಾಗಿಯೇ ನಾನು ಈ ರೀತಿ ಮಾತನಾಡುತ್ತಿಲ್ಲ. ಭ್ರಷ್ಟಾಚಾರವನ್ನು ತಡೆಗಟ್ಟುವುದರಿಂದ ನಮ್ಮ ರಾಜ್ಯದ ಆರ್ಥಿಕ ಸಂಪನ್ಮೂಲ ವೃದ್ಧಿಯಾಗುತ್ತದೆ. ಆ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕೆನ್ನುವುದಕ್ಕಾಗಿ ನಾನು ಒಂದೆರಡು ಸಲಹೆಗಳನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಐ.ಎ.ಎಸ್., ಮತ್ತು ಐ.ಪಿ.ಎಸ್., ಅಧಿಕಾರಿಗಳು ಈ ರಾಜ್ಯದ ಆಡಳಿತ ನಡೆಸುತ್ತಿದ್ದಾರೆ, ನೆಪ ಮಾತ್ರಕ್ಕೆ ಇವರೆಲ್ಲರೂ ಇದ್ದಾರೆ. ಕೆಲವೇ ಕೆಲವು ಐ.ಎ.ಎಸ್., ಅಧಿಕಾರಿಗಳು ಈ ಸರ್ಕಾರವನ್ನು ನಡೆಸುತ್ತಿದ್ದಾರೆ. ನನಗೆ ಸಮಯಾವಕಾಶವಿದ್ದರೆ, ಇವರಲ್ಲಿ ಎಷ್ಟು ಜನ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಿದ್ದೆ. ಒಂದು ಸಣ್ಣ ಉದಾಹರಣೆಯನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಎಲ್ಲ ಐ.ಎ.ಎಸ್., ಮತ್ತು ಐ.ಪಿ.ಎಸ್., ಅಧಿಕಾರಿಗಳಿಗೆ ಸರ್ಕಾರದಿಂದ 3–4 ಕಾರುಗಳನ್ನು ನೀಡಲಾಗಿರುತ್ತದೆ. ಆ ಕಾರುಗಳಲ್ಲಿ ಖಾಯಂ ಆಗಿ ಅವರ ಪತ್ನಿ, ಉಪ ಪತ್ನಿ ಮತ್ತು ಅವರ ತಂದೆತಾಯಿಗಳು ಓಡಾಡುತ್ತಿರುತ್ತಾರೆ. ನಾನು ಬೇಕಾದರೆ ಉದಾಹರಣೆಯನ್ನು ತೋರಿಸುತ್ತೇನೆ. ಪ್ರತಿನಿತ್ಯ ಸರ್ಕಾರಿ ಕಾರುಗಳಲ್ಲಿ ಖಾಯಂ ಆಗಿ ಒಂದು ಜಾಗಕ್ಕೆ ಅವರುಗಳು ಬರುತ್ತಾರೆ. ಅವರುಗಳ ಹೆಸರಿನ ಪಟ್ಟಿ ನನ್ನ ಜೇಬಿನಲ್ಲಿಯೇ ಇದೆ. ಆದರೆ, ಸಿ.ಡಿ., ಹಗರಣದ ರೀತಿಯಲ್ಲಿ ಈ ತನಿಖೆಯೂ ಬೇರೆ ಕಡೆಗೆ ತಿರುಗಬಹುದು ಎನ್ನುವ ಭಯ ನನಗಿದೆ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಇನ್ನೂ ಎಷ್ಟು ಸಮಯಗಳ ಕಾಲ ತಾವು ಮಾತನಾಡುತ್ತೀರಿ? ಈ ಸದನದಲ್ಲಿ ಸುಮಾರು 75 ಜನ ಸದಸ್ಯರಿದ್ದಾರೆ, ಒಬ್ಬೊಬ್ಬರು ಎರಡೆರಡು ಗಂಟೆಗಳ ಕಾಲ ಮಾತನಾಡಿದರೆ ಹೇಗೆ?

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, 5 ಗಂಟೆ 30 ನಿಮಿಷಗಳಿಗೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ದಯವಿಟ್ಟು ತಾವು ಅವಕಾಶವನ್ನು ನೀಡಬೇಕು. ಐ.ಎ.ಎಸ್., ಅದಿಕಾರಿಗಳಿಗೆ ಜಾಬ್ ಲಿಸ್ಟ್ ಇರುತ್ತದೆ. ಇಂತಿಂಥ ಸಭೆ–ಸಮಾರಂಭಗಳನ್ನು ಮಾಡಬೇಕು, ಕಡತ ಯಜ್ಞಗಳನ್ನು ಮಾಡಬೇಕೆಂದು ಇದೆ. ಅವರುಗಳು ಇದು ಯಾವುದನ್ನೂ ಪಾಲನೆ ಮಾಡುತ್ತಿಲ್ಲ. ಯಾವಯಾವ ಮೂಲದಿಂದ ಯಾವಯಾವ ಯೋಜನೆಗಳಿಂದ ಹಣ ಬರುತ್ತದೆ ಎನ್ನುವುದನ್ನು ಸರ್ಕಾರಕ್ಕೆ ಮನದಟ್ಟು ಮಾಡುತ್ತಿರುತ್ತಾರೆ. ಯಾರೋ ಬೆರಳೆಣಿಕೆಯಷ್ಟು ಅಧಿಕಾರಿಗಳು ಮಾತ್ರ ಈ ನಾಡಿನ ಗ್ರಾಮೀಣ ಭಾಗದ ಜನತೆಗೆ ಯೋಜನೆಗಳನ್ನು ಮುಟ್ಟಿಸಿ, ಅದನ್ನು ಸದುಪಯೋಗಪಡಿಸುವುದರ ಮೂಲಕ, ಈ ನಾಡಿನ ಜನತೆಯ ಬದುಕಿನಲ್ಲಿ ಸುಧಾರಣೆ ತರಬೇಕೆನ್ನುವ ಚಿಂತನೆಯನ್ನು ಹೊಂದಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹುತೇಕ ಅಧಿಕಾರಿಗಳು ದಿನನಿತ್ಯ ಭ್ರಷ್ಟಾಚಾರ ಎಸಗುತ್ತಿರುತ್ತಾರೆ. ಅಂತಹವರು ಇವತ್ತು ಈ ರಾಜ್ಯವನ್ನು ಆಳುತ್ತಿದ್ದಾರೆ.

**(ಮುಂದು)**

(469) 17.8.2021 5.10 ಪಿಕೆ:ಬಿಎನ್ಎಸ್ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಅದರ ಮಾಹಿತಿ ಕೊಡಿ, ಅವರ ಪಟ್ಟಿ ಕೊಡಿ. ಸದನದಲ್ಲಿ ಆ ವಿಷಯವನ್ನು ಹೇಳಿದರೆ ಒಳ್ಳೆಯದು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಹೇಳುತ್ತೇನೆ. ಆದರೆ ಇವರು ತನಿಖೆಗೆ ಒಪ್ಪಿಸುತ್ತೇನೆ ಎನ್ನುವುದಾದರೆ ಎಲ್ಲವನ್ನೂ ಬಿಚ್ಚಿ ಹೇಳಿಬಿಡುತ್ತೇನೆ.

**ಉಪಸಭಾಪತಿಯವರು:–** ಬನ್ನಿ, ವಿಚಾರಕ್ಕೆ ಬನ್ನಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ರಾಜಶೇಖರ್ ಮೂರ್ತಿಯವರು ಅರ್ಥ ಸಚಿವರಾಗಿದ್ದರು, ಅಬಕಾರಿ ಸಚಿವರಾಗಿ ಸಹ ಆಡಳಿತ ಮಾಡಿದ್ದರು. ಇವರು ಭ್ರಷ್ಟಾಚಾರವನ್ನು ತಡೆಗಟ್ಟುವಂತಹ ಎಲ್ಲಾ ಆಯಾಮಗಳನ್ನು ಸೃಷ್ಟಿ ಮಾಡಿದ್ದ ಫಲವಾಗಿ ಬೇರೆ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಖಜಾನೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣ ಸಂಗ್ರಹವಾಗಿತ್ತು ಎಂದು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಬಂದಿದ್ದನ್ನು ನಾವು ನೋಡಿದೆವು.

**ಶ್ರೀ ಸಿ.ಎಂ.ಲಿಂಗಪ್ಪ:–** ಅವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಖಜಾನೆಯಲ್ಲಿ ಹಣವೇ ಇರಲಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಅವರು ಬಿಗಿಯಾದ ಆಡಳಿತವನ್ನು ಮಾಡಿದರು. ರಾಜ್ಯದ ಅಭಿವೃದ್ಧಿ ಆಗಬೇಕು, ರಾಜ್ಯದ ಆದಾಯವನ್ನು ಹೆಚ್ಚು ಮಾಡಬೇಕು ಎನ್ನುವ ಪರಿಕಲ್ಪನೆ ಅವರನ್ನು ಆ ಮಟ್ಟಕ್ಕೆ ತೆಗೆದುಕೊಂಡು ಹೋಯಿತು. ಅದೇರೀತಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಿದರು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಅದಕ್ಕೋಸ್ಕರವೇ ಮಾನ್ಯ ವೀರೇಂದ್ರ ಪಾಟೀಲರವರನ್ನು ಮನೆಗೆ ಕಳುಹಿಸಿದಿರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಯಾದರು. ಅವರ ಕಾಲದಲ್ಲಿ ಮೂರು ವರ್ಷ ಭೀಕರ ಬರಗಾಲ ಬಂತು. ಡಾ:ರಾಜಕುಮಾರ್‌ರವರ ಅಪಹರಣವಾಯಿತು. ಸರ್ಕಾರಕ್ಕೆ ಸಂದಿಗ್ಧ ಪರಿಸ್ಥಿತಿ ತಲೆದೋರಿತು, ಸರ್ಕಾರ ಸಂಕಷ್ಟಕ್ಕೆ ಸಿಲುಕಿತು. ಕಾವೇರಿ ಸಮಸ್ಯೆ ಬಂತು. ಬೆಂಗಳೂರಿನಿಂದ ಕೆಆರ್‌ಎಸ್‌ ವರೆಗೆ ಮುಖ್ಯಮಂತ್ರಿಗಳು ಪಾದಯಾತ್ರೆ ಮಾಡಿದರು. ಆವತ್ತು ಕೇಂದ್ರ ಸರ್ಕಾರ, ಭಾರತದ ಎಲ್ಲಾ ಮಾಧ್ಯಮಗಳು, ಭಾರತ ದೇಶದಲ್ಲಿ ದೊಡ್ಡ ಅಭಿವೃದ್ಧಿಯ ಚಿಂತನೆ ಮತ್ತು ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಒತ್ತು ಕೊಟ್ಟ ರಾಜ್ಯ ಕರ್ನಾಟಕ ಎಂದು ಬರೆದಿದ್ದನ್ನು ನಾನು ಓದಿದ್ದೇನೆ. ಕರ್ನಾಟಕ ನಂಬರ್ ಒನ್ ರಾಜ್ಯ ಎಂದು ಹೇಳಿದರು. ಇವತ್ತು ಭಾರತ ದೇಶದಲ್ಲಿ ನಂಬರ್ ಒನ್ ಭ್ರಷ್ಟ ಸರ್ಕಾರ ಕರ್ನಾಟಕ ಎಂದಾಗಿದೆ. 20 ವರ್ಷದಲ್ಲಿ ಏನೇನಾಗಿದೆ ನೋಡಿ. ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿದೆ.

**ಶ್ರೀ ಎನ್.ರವಿಕುಮಾರ್:-** ಆ ರೀತಿ ಎಲ್ಲಿ ಹೇಳಿದೆ? ಯಾವ ದಾಖಲೆಯಲ್ಲಿ ಆ ರೀತಿ ಹೇಳಿದ್ದಾರೆ? ಯುಪಿಎ ಸರ್ಕಾರ ಭ್ರಷ್ಟಾತಿ ಭ್ರಷ್ಟ ಸರ್ಕಾರ ಎಂದು ಆ ಸರ್ಕಾರವನ್ನೇ ಜನ ಬದಲಾಯಿಸಿದರು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು ಭ್ರಷ್ಟ ಸರ್ಕಾರ ಎಂದು ಯಾರು ಹೇಳಿದ್ದಾರೆ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಮರಿತಿಬ್ಬೇಗೌಡರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುವುದಕ್ಕೆ ಅವಕಾಶ ಇದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಯಾವ ವರದಿಯಲ್ಲಿ ಆ ರೀತಿ ಹೇಳಿದ್ದಾರೆ? ಯಾರನ್ನೋ ಖುಷಿ ಪಡಿಸುವುದಕ್ಕೋಸ್ಕರ ಏನನ್ನೋ ಹೇಳುವುದು ಸರಿಯಲ್ಲ. ಯಾರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದ್ದಾರೆ ಎನ್ನುವುದನ್ನು ಹೇಳಿ. ಯಾವ ವರದಿಯ ಆಧಾರದ ಮೇಲೆ ಈ ರೀತಿ ಹೇಳುತ್ತಿದ್ದಾರೆ ಎಂದು ಹೇಳಲಿ. ಇದನ್ನು ನೀವು ಕ್ಲಿಯರ್ ಮಾಡಬೇಕು.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಹೇಳುತ್ತೇನೆ, ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮ್ಮ ಮನಸ್ಸಿಗೆ ಬಂದ ಹಾಗೆ ಹೇಳುವುದಕ್ಕಾಗುವುದಿಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:–** ಯಾವ ದಾಖಲೆಯ ಆಧಾರದ ಮೇಲೆ ಈ ರೀತಿ ಹೇಳುತ್ತಿದ್ದಾರೆ ಹೇಳಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ನಾನು ಹೇಳುತ್ತೇನೆ, ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಯಾವ ರಿಪೋರ್ಟ್ ಆಧಾರದ ಮೇಲೆ ಈ ರೀತಿ ಹೇಳುತ್ತಿದ್ದೀರಿ ಹೇಳಿ. ಏನು ಬೇಕಾದರೂ ಮಾತನಾಡಬಹುದೇ? ಯಾವ ಅಂಕಿ ಅಂಶದ ಆಧಾರದ ಮೇಲೆ ಈ ಸರ್ಕಾರ ಭ್ರಷ್ಟ ಸರ್ಕಾರ ಎಂದು ಹೇಳಿದಿರಿ? ಕೇವಲ ಅನುಭವದಿಂದ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಮುಗಿಸಿಯೇ ಇಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಏನಾದರೂ ಹೇಳುವುದಕ್ಕೆ ಒಂದು ಇತಿ–ಮಿತಿ ಎನ್ನುವುದು ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ನಾನು ನನ್ನ ಮಾತನ್ನು ಇನ್ನೂ ಮುಗಿಸಿಯೇ ಇಲ್ಲ. ನಾನು ಹೇಳಿದ್ದು ಅಸಂಸದೀಯ ಪದವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಈ ಸರ್ಕಾರ ಭ್ರಷ್ಟ ಸರ್ಕಾರ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ? ತಾವು ಹಿರಿಯ ಸದಸ್ಯರಿದ್ದೀರಿ. ಹಾಗೆಲ್ಲಾ ಮಾತನಾಡಬಾರದು. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಭ್ರಷ್ಟಾಚಾರದ ಬಗ್ಗೆ ಮಾತನಾಡುವುದು ಅಸಂಸದೀಯವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರು ಹೇಳಿರುವ ಮಾತುಗಳನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ನಾನು ವಿವರಗಳನ್ನು ಕೊಡುತ್ತೇನೆ. ನಂತರ ಮಾನ್ಯ ಸಭಾಪತಿಯವರು ತೀರ್ಮಾನ ಮಾಡಲಿ. ಈಗಲೇ ನಾನು ಮಾಹಿತಿಗಳನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ನಿಮ್ಮ ಪಕ್ಷದ ಅನೇಕ ಶಾಸಕರೇ ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿದೆ ಎಂದು ಹೇಳುತ್ತಿದ್ದಾರೆ. ಹಾದಿ-ಬೀದಿಯಲ್ಲಿ ಈ ಮಾತು ಕೇಳಿಬರುತ್ತಿದೆ.

**(ಗೊಂದಲ)**

**ಉಪಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್:–** ಇಡೀ ರಾಜ್ಯದ ಯಾವುದೇ ಕಡೆ ಹೋಗಿ ಕೇಳಿ, ಭ್ರಷ್ಟಾಚಾರದಲ್ಲಿ ಈ ಸರ್ಕಾರ ನಂಬರ್ ಒನ್ ಎಂದು ಹೇಳುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಹೇಳಿರುವ ಮಾತುಗಳನ್ನು ಕಡತದಿಂದ ತೆಗೆಯಬೇಕು. ಒಬ್ಬ ಹಿರಿಯ ಸದಸ್ಯರು ಆ ರೀತಿ ಹೇಳುವುದು ಸರಿಯಲ್ಲ.

**(ಗೊಂದಲ)**

**ಉಪಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ನೀವು "ನಂಬರ್ ಒನ್ ಭ್ರಷ್ಟಾಚಾರ ಸರ್ಕಾರ" ಎಂದೇನು ಉಲ್ಲೇಖ ಮಾಡಿದಿರೋ ಅದರ ಬಗ್ಗೆ ಪ್ರೂಫ್ ಕೊಟ್ಟರೆ ನೀವು ಹೇಳಿದ್ದು ಕಡತದಲ್ಲಿ ಇರುತ್ತದೆ. ನೀವು ಹೇಳಿದಕ್ಕೆ ಆಧಾರ ಸಿಕ್ಕಿದರೆ ಮಾತ್ರ ಅದು ಕಡತದಲ್ಲಿರುತ್ತದೆ; ಇಲ್ಲದಿದ್ದರೆ ಅದನ್ನು ಕಡತದಿಂದ ತೆಗೆಯಿರಿ. ಆಧಾರವಿದ್ದರೆ ಅದು ಕಡತದಲ್ಲಿ ಇರಲಿ. ಇಲ್ಲದೇ ಇದ್ದರೆ ಅದನ್ನು ತೆಗೆದು ಹಾಕುವಂತಹ ಕೆಲಸ ಮಾಡುತ್ತೇವೆ. ಮರಿತಿಬ್ಬೇಗೌಡರೇ ನಿಮ್ಮ ಮಾತನಾಡುವ ಅವಧಿ ಮುಗಿಯುತ್ತಾ ಬರುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ಕಡತದಿಂದ ತೆಗೆಯಿರಿ ಎಂದು ಹೇಳಿ.

(ಗೊಂದಲ)

**ಉಪಸಭಾಪತಿಯವರು:–** ಹೇಳಿದ್ದೇನೆ. ಆಧಾರವಿಲ್ಲದಿದ್ದರೆ ಅದನ್ನು ಕಡತದಿಂದ ತೆಗೆಯಲಾಗುತ್ತದೆ. ಆಧಾರ ಇದ್ದರೆ ಅದು ಕಡತದಲ್ಲೇ ಇರುತ್ತದೆ. ಪತ್ರಿಕೆಯಲ್ಲೋ ಅಥವಾ ಬೇರೆ ದಾಖಲೆಗಳಲ್ಲಿ ಹಾಗೆ ಬಂದಿದೆ ಎಂದು ದಾಖಲೆಗಳನ್ನು ಕೊಟ್ಟರೆ ಅದು ದಾಖಲೆಯಲ್ಲಿರುತ್ತದೆ. ಸುಮ್ಮನೆ ಏಕಾಏಕಿ ಏನನ್ನೋ ಹೇಳಿದಾಗ ಅದನ್ನು ಕಡತದಲ್ಲಿರಿಸುವುದು ಒಳ್ಳೆಯದಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಇಡೀ ರಾಜ್ಯದ ಆರೂವರೆ ಕೋಟಿ ಜನ ಇದನ್ನು ಭ್ರಷ್ಟಾಚಾರದ ಸರ್ಕಾರ ಎಂದು ಹೇಳುತ್ತಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಸಿ.ಪಾಟೀಲ್:-** ಜನ ಆ ರೀತಿ ಯಾವ ಆಧಾರದ ಮೇಲೆ ಹೇಳುತ್ತಾರೆ? ಅವರು ನಿಮ್ಮ ಕಿವಿಯಲ್ಲಿ ಬಂದು ಹೇಳಿ ಹೋಗಿದ್ದಾರೆಯೇ?

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ನೀವು ಮುಂದುವರೆಸಿ. ನಿಮಗೆ ಇನ್ನೂ ಐದು ನಿಮಿಷಗಳ ಕಾಲಾವಕಾಶ ಉಳಿದಿದೆ. ಅದರ ಒಳಗೆ ಮಾತನಾಡಿ. ಬೇರೆ ವಿಚಾರಗಳನ್ನು ಮಾತನಾಡಬೇಡಿ. ನೀವು ಮಾತನಾಡುವಾಗ ನನ್ನನ್ನು ನೋಡಿ ಮಾತನಾಡಿ. ಬೇರೆ ಕಡೆ ನೋಡಿ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಇದುವರೆಗೆ ಸುಳ್ಳನ್ನು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಣ್ಣಯ್ಯನವರು ತಮ್ಮ ನಾಟಕಗಳ ಮೂಲಕ ಒಂದು ಮಾತನ್ನು ಹೇಳಿದರು. ಕಾಂಗ್ರೆಸ್ ಪಕ್ಷದವರು ಈ ದೇಶವನ್ನು ಬಹಳ ಕಾಲ ಆಳಿದರು, ಆಗ ಅವರು ಒಂದು ಲಾಡುವಿನಲ್ಲಿ ಒಂದೊಂದೇ ಅಗಳನ್ನು ತಿನ್ನುತ್ತಿದ್ದರು; ಆದರೆ ಬಿಜೆಪಿ ಯವರು ಅಧಿಕಾರಕ್ಕೆ ಬಂದಮೇಲೆ ಇವರೇ ಒಂದೊಂದು ಲಾಡುವನ್ನೇ ಲಬಕ್ ಎಂದು ತಿನ್ನುತ್ತಿದ್ದಾರೆ ಎಂದು ಹೇಳಿದರು. ಇವತ್ತು ನನಗೆ 'ಲಂಚಾವತಾ' ನಾಟಕದ ಸಂದರ್ಭ ನೆನಪು ಬಂತು. ಇವರು ಭ್ರಷ್ಟರಲ್ಲ ಎಂದಮೇಲೆ ಏಕೆ ಮೈ ಪರಚಿಕೊಳ್ಳಬೇಕು? ಮಾನ್ಯ ಗೋಪಾಲಯ್ಯನವರ ತರಹ ಸುಮ್ಮನೆ ಕುಳಿತುಕೊಳ್ಳಲಿ.

**ಉಪಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ನಾನು ಆಗಲೇ, ನನ್ನನ್ನು ನೋಡಿ ಮಾತನಾಡಿ ಎಂದು ಹೇಳಿದೆ. ನೀವು ವ್ಯಕ್ತಿಗಳ ಹೆಸರನ್ನು ಹಿಡಿದು ಹೇಳಿದರೆ ಮತ್ತೆ ಅವರು ಮಾತನಾಡುವುದಕ್ಕೆ ಎದ್ದು ನಿಲ್ಲುತ್ತಾರೆ. ಏಕೆ ನಿಮ್ಮ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತೀರಿ?

**ಶ್ರೀ ಎಂ.ಗೋಪಾಲಯ್ಯ(ಅಬಕಾರಿ ಸಚಿವರು):-** ಮಾನ್ಯ ಸದಸ್ಯರು ನನ್ನ ಹೆಸರನ್ನು ಹೇಳಿದರು. ಮೊನ್ನೆ ನಡೆದ ಉಪಚುನಾವಣೆಯಲ್ಲಿ ನಮ್ಮ ಪಕ್ಷದಿಂದ ಸ್ಪರ್ಧಿಸಿದ್ದವರೆಲ್ಲರೂ ಗೆದ್ದು ಬಂದಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ ಈಗೇನು ಉಪಚುನಾವಣೆ ಬರುತ್ತಿದೆಯೋ ಅದರಲ್ಲೂ ಬಿಜೆಪಿಯವರೇ ಗೆದ್ದು ಬರುತ್ತಾರೆ. ದಯವಿಟ್ಟು ಇದನ್ನು ತಿಳಿದುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ನೀವು ಉಪಚುನಾವಣೆಯನ್ನು ಹೇಗೆ ಗೆದ್ದಿರಿ ಎನ್ನುವುದು ಇಡೀ ಜಗತ್ತಿಗೆ ಗೊತ್ತಿದೆ.

**(ಮುಂದು)**

(470)17-03-2021/5-20/bkp-gr

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯಸಭಾಪತಿಯವರೇ, ಇದು ಯೀಲ್ಡ್ ವಿಷಯವಲ್ಲ. ಅವರ ಸರ್ಕಾರ ಇದ್ದಾಗ ಈ ರೀತಿಯಲ್ಲಿಯೇ ಆರೋಪ ಬಂದಿರುವುದು ರೆಕಾರ್ಡ್ ಅಗಿದೆ, ಗಣಿ ವಿಚಾರದಲ್ಲಿ 150 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದು ಸದನದಲ್ಲಿ ರೆಕಾರ್ಡ್ ಆಗಿದೆ. ಅದನ್ನು ತೆಗೆಸಿ ನೋಡಿ ಸತ್ಯಹರಿಶ್ಚಂದ್ರನ ಮೊಮ್ಮಕ್ಕಳು ಇವರು.

**ಶ್ರೀ ಮರಿತಿಬ್ಬೇಗೌಡ: :–** ಮಾನ್ಯಸಭಾಪತಿಯವರೇ, ಒಬ್ಬ ವ್ಯಕ್ತಿ ಬೀಚಿ ಯವರಿಗೆ ಒಂದು ಪ್ರಶ್ನೆಯನ್ನು ಕೇಳಿದರಂತೆ. ಸರ್, ನಾನು ಈ ಬಾರಿ ಅಸೆಬ್ಲಿ ಚುನಾವಣೆಗೆ ಹೋಗಬೇಕೆಂದಿದ್ದೇನೆ. ಆದ್ದರಿಂದ, ದಯಮಾಡಿ ಚುನಾವಣೆ ಮುಗಿಯವವರೆಗೆ ನಿಮ್ಮ ತಲೆಯನ್ನು ಕೊಡಬೇಕೆಂದರಂತೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–**ಇದು ಜನರಿಗೆ ಮಾಡುವ ಅವಮಾನ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಅಂದರೆ ನಿಮ್ಮ ಬುದ್ಧಿ ಕೊಡಬೇಕು, ನಿಮ್ಮ ವಿವೇಚನೆಗೆ ಕೊಡಬೇಕು ಎಂದು ಕೇಳಿದ್ದರಂತೆ. ಅಯ್ಯೋ ಮಾರಾಯ ಅದಕ್ಕೆ ನನ್ನ ತಲೆ ಏನೂ ಬೇಕಾಗಿಲ್ಲಪ್ಪ. ಒಂದು ದೊಡ್ಡ ಜೇಬು ಇದ್ದು ತಲೆ ಇಲ್ಲದ ಜನರು ಇದ್ದರೆ ಸಾಕು ಎಂದು ಹೇಳಿದರಂತೆ. ಆ ತರಹ ಚುನಾವಣೆಯಲ್ಲಿ ಇವರು ಗೆದ್ದು ಬರುತ್ತಾರೆ. ಇದು ನಮಗೆ ಗೊತ್ತು.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–**ಇದು ಜನರಿಗೆ ಮಾಡಿದ ಅವಮಾನ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎನ್.ರವಿಕುಮಾರ್:** ನೀವು ವೋಟ್ ಹಾಕಿರುವವರಿಗೆ ಅವಮಾನ ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ಇವತ್ತು ಬೆಲೆ ಏರಿಕೆ ಗಗನಕ್ಕೆ ಹೋಗಿದೆ. ಇವತ್ತು ಸಾಮಾನ್ಯ ಜನರು ಬಳಕೆ ಮಾಡುವಂತಹ ಡೀಸಲ್ ಮತ್ತು ಪೆಟ್ರೋಲ್ ಹಾಗೂ ಗ್ಯಾಸ್ ಸಿಲಿಂಡರ್ ಬೆಲೆ . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:** ಮಾನ್ಯ ಸಭಾಪತಿಯವರೇ, ತಲೆ ಇಲ್ಲದಿರುವಂತಹ ಜನರು ವೋಟ್ ಹಾಕುತ್ತಾರೆಯೇ? ತಲೆ ಇಲ್ಲದಿರುವಂತಹ ಜನರು ವೋಟ್ ಹಾಕಿ ಇವರನ್ನು ಇಲ್ಲಿಗೆ ಕಳುಹಿಸಿದ್ದಾರೆಯೇ? ಜನರಿಗೆ ಅವಮಾನ ಮಾಡುವಂತಹ ಕೆಲಸವನ್ನು ಇವತ್ತು ಮಾನ್ಯ ಮರಿತಿಬ್ಬೇಗೌಡರು ಮಾಡುತ್ತಿದ್ದಾರೆ. ರಾಜ್ಯದ ಜನರಿಗೆ ಅವಮಾನ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಇದನ್ನು ನಾನು ಹೇಳುತ್ತೇನೆ. ಇದನ್ನು ಮಾಡಿತ್ತಿರುವಂತಹವರು ಯಾರು ಎಂದು ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಎನ್.**ರವಿಕುಮಾರ್: ರಾಜ್ಯದ ಹಲವಾರು ಜನರು ಬಿ.ಜೆ.ಪಿ.ಗೆ ವೋಟ್ ಹಾಕಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೆ, . . .

**ಉಪ ಸಭಾಪತಿಯವರು:** ಮಾನ್ಯ ರವಿಕುಮಾರ್‌ರವರೆ ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೆ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೆ ದಯವಿಟ್ಟು ಮುಗಿಸಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀವು ನನ್ನ ಹತ್ತಿರ ಮಾತನಾಡಿ. ನೀವು ಅವರಿಗೆ ಕೈತೋರಿಸಿ ಮಾತನಾಡುತ್ತಿದ್ದೀರಿ. ಅವರನ್ನು ಎದ್ದೇಳಿಸಿ ಮಾತನಾಡಿದರೆ ನಾನು ಏನು ಮಾಡಲಿ? ನೀವು ಮಾತನಾಡಿ ಎಂದು ಮೊದಲಿನಿಂದಲೂ ಹೇಳುತ್ತಲೇ ಇದ್ದೇನೆ. ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಅವರು ಏಕೆ ಮಾತನಾಡುತ್ತಾರೆ; ಅವರು ಮಾತನಾಡುವಾಗ ಬೇಕಾದರೆ ಮಾತನಾಡಲಿ.

**ಉಪ ಸಭಾಪತಿಯವರು:** ನಾನು ಇಲ್ಲಿ ಕುಳಿತು ಕೇಳುತ್ತಿದ್ದೇನೆ. ಒಂದು ಗಾದೆಯಿದೆ. ಜಿಗುಟುವವರೂ ನೀವೇ ಹಾಗೂ ತೊಟ್ಟಿಲನ್ನು ತೂಗುವವರೂ ನೀವೇ ಆಗಿದ್ದೀರಿ. ಜಿಗುಟಿ ಏರಿಸಿಕೊಂಡು ಬಿಡುತ್ತೀರಿ ಮತ್ತೆ ಅವರನ್ನು ಗಲಾಟೆ ಮಾಡುತ್ತಾರೆ ಎಂದು ಹೇಳುತ್ತೀರಿ. ದಯವಿಟ್ಟು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಜನ ಸಾಮಾನ್ಯರು ಉಪಯೋಗಿಸುವಂತಹ ವಸ್ತುಗಳ ಬೆಲೆ ಗಗನಕ್ಕೇರಿದೆ. ಡೀಸಲ್, ಪೆಟ್ರೋಲ್ ಮತ್ತು ಗ್ಯಾಸ್ ಸಿಲಿಂಡರ್ ಅನ್ನು ಎಲ್ಲಾ ಸಾಮಾನ್ಯ ಜನರೂ ಉಪಯೋಗಿಸುತ್ತಾರೆ. ನನ್ನ ಹೆಂಡತಿ ಹೇಳಿದಳು, “ಏನ್ರಿ ಅಡುಗೆ ಎಣ್ಣೆ ರೂ. 80 ರೂಪಾಯಿಗಳು ಇದ್ದದ್ದು ಇವತ್ತು 150 ರೂಪಾಯಿಗಳಿಗೆ ಏರಿಕೆಯಾಗಿದೆ ನೋಡ್ರಿ” ಎಂದಳು. ಸ್ವಾಮಿ, ಇಂತಹ ಸಂದರ್ಭದಲ್ಲಿ ಅಂದರೆ ಈ ಬೆಲೆ ಏರಿಕೆಯಲ್ಲಿ ಸಾಮಾನ್ಯ ಜನರ ಪರಿಸ್ಥಿತಿಯೇನು? ನಾವು ಎಂದಿಗೂ ಕೂಡ ಜೀವನದಲ್ಲಿ ಅಂದರೆ ಭಾರತ ದೇಶದಲ್ಲಿಯೇ ಬಡವರು ಇಂತಹ ಸಂಕಷ್ಟಕ್ಕೆ ಸಿಕ್ಕಿಕೊಂಡಿರಲಿಲ್ಲ. ಇಂತಹ ದುಬಾರಿ ಬೆಲೆಗಳು ಅಂದರೆ ಎಲ್ಲದಕ್ಕೂ ಕೂಡ ದುಬಾರಿಯಾಗಿದೆ. ಇವತ್ತು ನಾವು ಈ ಬಜೆಟ್‌ನಲ್ಲಿ ಏನಾದರೂ ಒಂದು ಬಡವರಿಗೆ ಹಾಗೂ ಸಾಮಾನ್ಯ ಜನರಿಗೆ ತೆರಿಗೆ ರಿಯಾಯಿತಿ ಕೊಡಬಹುದು ಎನ್ನುವಂತಹದ್ದನ್ನು ನಾನು ಬಹಳ ನಿರೀಕ್ಷೆ ಮಾಡಿದ್ದೆ. ಅದನ್ನು ಇವತ್ತು ಇವರು ಮಾಡಲಿಲ್ಲ. ಅದನ್ನೂ ಕೊಡಲಿಲ್ಲ. ಇವತ್ತು ಒಂದು ಲೀಟರ್ ಪೆಟ್ರೋಲ್‌ಗೆ 95 ರೂಪಾಯಿಗಳಾಗಿದೆ. ಡೀಸಲ್ ಬೆಲೆ 86 ರೂಪಾಯಿಗಳಾಗಿದೆ. ಏನು ಸ್ವಾಮಿ? ಬಡವರು ಉಪಯೋಗಿಸುವಂತಹ ಅನಿಲ ಅಂದರೆ ಗ್ಯಾಸ್ ಸಿಲಿಂಡರ್ ಇವತ್ತು ಈ ರೀತಿ ದುಬಾರಿಯಾದರೆ ಹೇಗೆ? ಇಂತಹದ್ದರ ಬಗ್ಗೆ ಸರ್ಕಾರ ತೆರಿಗೆ ಹಾಕಿಲ್ಲವೆನ್ನುವುದೊಂದನ್ನು ಇದರಲ್ಲಿ ಹೇಳುವುದು ಬಿಟ್ಟರೆ ಬೇರೆ ಇಲ್ಲ. ಆದರೆ, ಇಂತಹ ಬೆಲೆ ಏರಿಕೆ ಸಂದರ್ಭದಲ್ಲಿ ಸರ್ಕಾರ ಬಡವರಿಗೆ ಏನಾದರೂ ಒಂದು ಕಿಂಚಿತ್ತು ಸಾರ್ವತ್ರಿಕವಾಗಿ ಅನುಕೂಲವಾಗುವಂತಹದ್ದನ್ನು ಮಾಡಬೇಕು ಎಂಬ ಒಂದು ಚಿಂತನೆಯನ್ನು ಮಾಡಲೇ ಇಲ್ಲವಲ್ಲಾ? ಇವತ್ತು ‘ಜೈ ಶ್ರೀರಾಮ್, ಜೈ ಹನುಮಾನ್’ ಎಂದರೆ ಪೆಟ್ರೋಲ್ ಹಾಗೂ ಡೀಸಲ್ ಬೆಲೆ ಕಡಿಮೆಯಾಗುತ್ತಾ ಸ್ವಾಮಿ? ಹೇಳಿ ಸ್ವಾಮಿ. ಅನಿಲದ ರೇಟ್ ಕಡಿಮೆಯಾಗುತ್ತಾ ಸ್ವಾಮಿ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:** ಮಾನ್ಯ ಸಭಾಪತಿಗಳೇ,

**ಉಪ ಸಭಾಪತಿಗಳು:** ಮಾನ್ಯ ರವಿಕುಮಾರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಹೇಳುತ್ತೇನೆ. ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇವರಿಗೆ ಎಷ್ಟೊಂದು ಅಸೂಯೆ, jealousy ಇದೆ. ಮಾನ್ಯ ಸದಸ್ಯರು ಸುಮ್ಮನೆ ಕುಳಿತುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):** ಮಾನ್ಯ ಸಭಾಪತಿಯವರೆ, **'ಜೈಶ್ರೀರಾಮ್'** ಎಂದು ಹೇಳುತ್ತಾರೆ. ಇವರು ಹೇಳಿದ್ದು ಸರಿ ಎನ್ನುತ್ತೀರಾ? ಇವರು ಏನು ಮಾತನಾಡುತ್ತಿದ್ದಾರೆ?

**(ಗೊಂದಲ)**

**ಉಪ ಸಭಾಪತಿಗಳು:** ಸಭಾನಾಯಕರೆ, ಕುಳಿತುಕೊಳ್ಳಿ. ಮುಗಿಸೋಣ. ಆಯಿತು. ದಯಮಾಡಿ ಕುಳಿತುಕೊಳ್ಳಿ ಮಾನ್ಯ ನಾರಾಯಣಸ್ವಾಮಿಯವರೆ,

**(ಗೊಂದಲ)**

ಬಜೆಟ್ ವಿಷಯದ ಮೇಲೆ ಮಾತನಾಡುತ್ತಿದ್ದೀರಿ. ಮಾನ್ಯ ಮರಿತಿಬ್ಬೇಗೌಡರೆ, ವಿಚಾರಗಳನ್ನು ಚೆನ್ನಾಗಿ ಮಂಡಿಸುತ್ತಿದ್ದೀರಿ. ಅದನ್ನು ಏಕೆ ಸುಮ್ಮನೆ ಅವರಿಗೆ ಕೀ ಕೊಟ್ಟುಕೊಂಡು ನಿಮ್ಮ ಸಮಯವನ್ನು ಏಕೆ ಸುಮ್ಮನೆ ಸಮಯ ಹಾಳು ಮಾಡಿಕೊಳ್ಳುತ್ತೀರಿ? ನೇರವಾಗಿ ನಮ್ಮ ಹತ್ತಿರ ಮಾತನಾಡಿ. ಡೀಸಲ್ ಬೆಲೆ ಪೆಟ್ರೋಲ್ ಬೆಲೆ ಬಗ್ಗೆ ಮಾತನಾಡಿ. ಅದನ್ನು ಬಿಟ್ಟು ಬೇರೆ ವಿಚಾರಗಳನ್ನು ಏಕೆ ಚರ್ಚೆ ಮಾಡುತ್ತೀರಿ? ನೀವು ಬಜೆಟ್ ವಿಷಯದ ಮೇಲೆ ಮಾತನಾಡುವುದಕ್ಕೆ ಸ್ವತಂತ್ರ್ಯರಿದ್ದೀರಿ. ಅದರ ಬಗ್ಗೆ ಪ್ರಶ್ನೆಯಿಲ್ಲ. ಮಾತನಾಡಿ

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಮಾನ್ಯ ಸಭಾಪತಿಯವರೇ, ನಿಮಗೆ ಇದು ಸರಿ ಅನಿಸುತ್ತಿದೆಯೇ?

**(ಗೊಂದಲ)**

**ಉಪ ಸಭಾಪತಿಗಳು:** ನೋಡಿ ಮಾನ್ಯ ಮರಿತಿಬ್ಬೇಗೌಡರೆ, ಕೆಲವರಿಗೆ ಭಾವನೆಗಳಿರುತ್ತದೆ. ನೀವು ಭಾವನೆಗಳ ವಿಚಾರದಲ್ಲಿ ಕೆಲವರನ್ನು ಕೆದಕುವಂತಹ ವಿಚಾರ ಮಾಡಬೇಡಿ. ಭಾವನೆಗಳ ವಿಚಾರದಲ್ಲಿ ಬರಬಾರದು. ನೀವು ಬಜೆಟ್ ವಿಷಯದ ಮೇಲೆ ಮಾತನಾಡಿ, ತಪ್ಪಿಲ್ಲ. ನಾನು ಏನೂ ಆಹಾರ ಬಗ್ಗೆ ಹೇಳುತ್ತಿಲ್ಲ. ಮಾತನಾಡಿ. ಆದರೆ, ಭಾವನೆಗಳ ಮೇಲೆ ಮಾತನಾಡಬೇಡಿ. ನಿಮ್ಮ ಭಾವನೆಗಳ ವಿರುದ್ಧ ಮಾತನಾಡಿದರೂ ತಪ್ಪೆ. ಇನ್ನೊಬ್ಬರ ಭಾವನೆಗಳ ವಿರುದ್ಧ ಮಾತನಾಡಿದರೂ ತಪ್ಪೇ ಆಗುತ್ತದೆ. ನೋಡಿ ಮಾನ್ಯ ಮರಿತಿಬ್ಬೇಗೌಡರೆ ನಿಮಗೆ ಕೊಟ್ಟಂತಹ ಸಮಯಾವಕಾಶ ಮುಗಿದಿದೆ. ಈಗಾಗಲೇ 5 ಗಂಟೆ 30 ನಿಮಿಷವಾಗಿದೆ. ಕ್ಯಾಬಿನೆಟ್ ಮೀಟಿಂಗ್‌ಗೆ ಅವರು ಕೇಳಿಕೊಂಡಿದ್ದಾರೆ. ಇನ್ನು ನಿಮಗೆ ಕೇವಲ ಮೂರು ನಿಮಿಷಗಳ ಕಾಲಾವಕಾಶವಿದೆ. ಆದಷ್ಟುಬೇಗ ಮುಗಿಸಿ. 5 ಗಂಟೆ 30 ನಿಮಿಷ ಬಿಟ್ಟು ನಾನು ಒಂದು ನಿಮಿಷ ಮುಂದಕ್ಕೆ ಹೋಗುವುದಿಲ್ಲ. 5 ಗಂಟೆ 30 ನಿಮಿಷಕ್ಕೆ ನಾನು ನಿಲ್ಲಿಸುತ್ತೇನೆ. ಮಾತನಾಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:** ಸಭಾಪತಿಯವರೆ, ಒಂದು ನಿಮಿಷ. ಯಾವುದೇ ದೇವರಿಗೆ ಜೈ ಎಂದರೂ ಸಹಿತ . . ವಿಷಯದ ಸ್ಪಷ್ಟೀಕರಣ ನಾನು ಮಾಡುತ್ತಿದ್ದೇನೆ. ಒಂದು ಮಾತಿಗೆ ನನಗೆ ಅವಕಾಶ ಕೊಡಿ. ಯಾವುದೇ ದೇವರಿಗೆ ಜೈ ಎಂದರೂ ಕೂಡ ಬೆಲೆ ಏರಿಕೆ ನಿಲ್ಲುವುದಿಲ್ಲ. ಇವರ ಮನೆ ದೇವರಿಗೆ ಜೈ ಎಂದರೂ ಕೂಡ ಬೆಲೆ ಏರಿಕೆ ನಿಲ್ಲುವುದಿಲ್ಲ. ನಾನು ಏನು ಹೇಳುತ್ತಿದ್ದೇನೆ ಎಂದರೆ ಈ ರೀತಿ ದೇವರಿಗೆ, ರಾಮನಿಗೆ ಅಪಮಾನ ಮಾಡುವಂತಹ ಕೆಲಸವಾಗಬಾರದು.

**(ಗೊಂದಲ)**

**ಉಪ ಸಭಾಪತಿಯವರು:** ಮಾನ್ಯ ರವಿ ಕುಮಾರ್‌ರವರೆ, ಕುಳಿತುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು :** ಮಾನ್ಯ ರವಿಕುಮಾರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನೀವು ಮಾತನಾಡಬೇಕಾದರೆ ಈ ವಿಚಾರಗಳನ್ನು quote ಮಾಡಿ. ಈಗ ಅವರ ಮಾತುಗಳನ್ನು ನೋಟ್ ಮಾಡಿಕೊಂಡಿರಿ.

**ಶ್ರೀ ಮರಿತಿಬ್ಬೇಗೌಡ: ಮಾನ್ಯ** ಸಭಾಪತಿಗಳೇ, . .

**ಉಪ ಸಭಾಪತಿಯವರು :** ನಿಮ್ಮದು ಇನ್ನು ಕೇವಲ ಎರಡು ನಿಮಿಷಗಳಿದೆ. ಅದರಲ್ಲಿ ಒಂದು ನಿಮಿಷ ಬಿಟ್ಟು ಮುಂದೆ ಹೋಗುವುದಿಲ್ಲ. ಏಕೆಂದರೆ, 5 ಗಂಟೆ 30 ನಿಮಿಷಕ್ಕೆ ಮುಗಿಸಿ ಕೊಡಬೇಕೆಂದು ಅವರು ಮಧ್ಯಾಹ್ನವೇ ಹೇಳಿದ್ದಾರೆ, ಕ್ಯಾಬಿನೆಟ್ ಮೀಟಿಂಗ್ ಇದೆ ಎಂದು ಹೇಳಿದ್ದಾರೆ. ಆದರೂ ಸಹಿತ ಸಚಿವರುಗಳು ಕುಳಿತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ದಂಯವಿಟ್ಟು ಯಾರೂ ಕೂಡ disturb ಮಾಡಬಾರದೆಂದು ದಯವಿಟ್ಟು ವಿನಂತಿ ಮಾಡುತ್ತೇನೆ. ಇನ್ನು 5 ನಿಮಿಷಗಳಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಗಳು:** ದಯವಿಟ್ಟು ಯಾರೂ ಮಾತನಾಡಬೇಡಿ. ಆಯಿತು ನೀವು ಮಾತನಾಡಿ.

**(ಗೊಂದಲ)**

**ಉಪ ಸಭಾಪತಿಗಳು:** ನೀವು ಮಾತನಾಡಬೇಕಾದರೆ ಮಾತನಾಡಿ. ನಿಮಗೂ ಸಹಿತ ಬಜೆಟ್ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶವಿದೆ.

**ಶ್ರೀ ಮರಿತಿಬ್ಬೇಗೌಡ :-** ಮಾನ್ಯಸಭಾಪತಿಯವರೇ, ಈ ಆಯವ್ಯಯದಲ್ಲಿ ರೂ.71,000 ಕೋಟಿಗಳನ್ನು ಸಾಲ ಮಾಡಬೇಕಾಗಬಹುದು ಎಂದು ಒಂದು ಅಂದಾಜು ತಿಳಿಸಿದ್ದಾರೆ. ಈಗ ಇರತಕ್ಕಂತಹದ್ದು ರೂ.4 ಲಕ್ಷ ಕೋಟಿಗಳ ಜೊತೆಗೆ ರೂ.71,000 ಕೋಟಿಗಳನ್ನೂ ಸಹಿತ ನಾವು ಸಾಲ ಮಾಡಬೇಕಾಗಬಹುದು ಎಂದು ತಿಳಿಸಿದ್ದಾರೆ. ಮಾನ್ಯ ಸಭಾಪತಿಗಳೇ, ರೂ.4,71,000 ಕೋಟಿಗಳನ್ನು 7 ಕೋಟಿ ಜನರಿಗೆ ಹಾಗೂ ಈಗಾಗಲೇ ಜನಿಸಿ ಆಸ್ಪತ್ರೆಯ ತೊಟ್ಟಿಲಿನಲ್ಲಿರುವ ಮಗುವನ್ನೂ ಲೆಕ್ಕ ಹಾಕಿಕೊಂಡರೆ ಒಂದು ವ್ಯಕ್ತಿಗೆ ರೂ.76,380/-ಗಳ ಸಾಲದ ಹೊರೆ ಬೀಳುತ್ತದೆ. ಸ್ವಾಮಿ, ಇವತ್ತು ಸಾಲದ ಹೊರೆ ರೂ.76,000/ಗಳಾಗುತ್ತದೆ. ಇವತ್ತು ಕೋವಿಡ್ ಸಂದರ್ಭದಲ್ಲಿ ಬಂದಂತಹ ದೇಣಿಗೆ ಬಗ್ಗೆ ಲೆಕ್ಕ ಕೊಡುವುದಕ್ಕೆ ಆಗುವುದಿಲ್ಲ. ಈ ಬಜೆಟ್‌ನಲ್ಲಿ ಸಾಲ ಮಾಡಿರುವುದರ ಬಗ್ಗೆ ಹೇಳುತ್ತಾರೆ. ಹರಿದು ಬಂದಂತಹ ದೇಣಿಗೆ ಬಗ್ಗೆ, ಖರ್ಚಾಗಿರುವುದರ ಬಗ್ಗೆ ಲೆಕ್ಕ ಕೊಡುವುದಕ್ಕೆ ಈ ಸರ್ಕಾರ ಸಮರ್ಥವಾಗಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದರೆ, ಮತ್ತೆ ಈ ಸಲ ರೂ.71,000 ಕೋಟಿ ಸಾಲ ಮಾಡಬಹುದು ಎಂದು ಹೇಳುತ್ತಾರೆ. ಒಬ್ಬರ ತಲೆ ಮೇಲೆ ರೂ.76,386/–ಗಳು ಒಬ್ಬ ವ್ಯಕ್ತಿಯ ಮೇಲೆ ಬೀಳುತ್ತದೆ.

**(ಮುಂದು)**

**(471) 17.03.2021 05.30 ಎಸ್‌ವಿ–ಜಿಆರ್**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಮಾನ್ಯ ಸಭಾಪತಿಯವರೇ, ಈ ಸರ್ಕಾರದ ಘೋಷಣೆ 'ಬಡವರ ಹಸಿವು ಮುಕ್ತ ಕರ್ನಾಟಕ' ಎಂಬುದಲ್ಲ. ಪ್ರಾರಂಭದಿಂದಲೂ 'ಕಾಂಗ್ರೆಸ್ ಮುಕ್ತ ಭಾರತ' ಎಂದು ಹೇಳಿಕೊಂಡು ಬಂದಿದೆ. ಹಸಿವು ಮುಕ್ತ ಭಾರತ ಮಾಡುತ್ತೇವೆಂದು ಎಂದು ಕೂಡ ಹೇಳಲಿಲ್ಲ. ಈ ಆಯವ್ಯಯ ನೋಡಿದರೆ ಜನರಿಗೆ ಗೊತ್ತಾಗುತ್ತದೆ.

ಮಾನ್ಯ ಸಭಾಪತಿಯವರೇ, ದಿವಂಗತ ಜೆ.ಹೆಚ್.ಪಟೇಲರು ಹೇಳಿದ ಒಂದು ಕತೆ ನೆನಪಾಗುತ್ತಿದೆ. ಮೂರು ಜನ ಮಹಿಳೆಯರು ಸಂತೆಗೆ ಹೋಗುತ್ತಾರೆ. ಅಲ್ಲಿ ಇಬ್ಬರು ಮಹಿಳೆಯರು ಅವರಿಗೆ ಬೇಕಾದ ವಸ್ತುಗಳನ್ನು ಖರೀದಿಸುತ್ತಾರೆ. ಒಬ್ಬ ಮಹಿಳೆ ಮಾತ್ರ ಏನನ್ನೂ ಕೊಳ್ಳದೆ ಅತ್ತಿತ್ತ ನೋಡುತ್ತಿದ್ದಳು. ಮೂರು ಜನರೂ ಮನೆಗೆ ಹಿಂದಿರುಗುವಾಗ ಇಬ್ಬರು ಮಹಿಳೆಯರು ಆ ಒಬ್ಬ ಮಹಿಳೆಯನ್ನು ಕುರಿತು "ನಾವು ಏನೇನೋ ಕೊಂಡೆವು. ನೀನು ಏಕೆ ಏನನ್ನೂ ಕೊಳ್ಳಲಿಲ್ಲ" ಎಂದು ಕೇಳುತ್ತಾರೆ. ಅದಕ್ಕೆ ಆಕೆ "ನನ್ನ ಗಂಡ ಮಾನ ಮರ್ಯಾದೆ ಎಲ್ಲವನ್ನೂ ಕಳೆದುಕೊಂಡಿದ್ದಾನೆ. ನಾನು ಆ ಮಾನ ಮರ್ಯಾದೆ ಇಲ್ಲಿ ದೊರೆಯುತ್ತದೇನೋ ಎಂದು ಹುಡುಕುತ್ತಾ ನಿಮ್ಮ ಜೊತೆ ಇಲ್ಲಿಗೆ ಬಂದೆನು. ಎಲ್ಲಿಯೂ ಕೂಡ ಕಾಣಲಿಲ್ಲ. ಅದಕ್ಕೆ ನಾನು ಮಾನ ಮರ್ಯಾದೆ ಕೊಳ್ಳಲಿಕ್ಕಾಗಲಿಲ್ಲವಲ್ಲ ಎನ್ನುವ ದುಃಖದಲ್ಲಿದ್ದೇನೆ." ಎಂದು ಹೇಳುತ್ತಾಳೆ.

ಈ ರೀತಿಯಾಗಿ ಮಾನ ಮರ್ಯಾದೆ ಎಲ್ಲವನ್ನೂ ಕಳೆದುಕೊಂಡಿರುವ ಈ ಸರ್ಕಾರಕ್ಕೆ ಆಯವ್ಯಯವನ್ನು ಮಂಡಿಸಲಿಕ್ಕೆ ಬದ್ಧತೆ ಇದೆಯೇ? ಹೋಗಿರುವ ಮಾನ ಮರ್ಯಾದೆ ಇವರಿಗೆ ಎಲ್ಲಿಂದ ಬರುತ್ತದೆ? ಜನ ತಕ್ಕ ಉತ್ತರ ಕೊಡುತ್ತಾರೆ. ನಾನು ಈ ಆಯವ್ಯಯವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಬಡವರ, ರೈತರ, ಕಾರ್ಮಿಕರ ವಿರೋಧಿ ಆಯವ್ಯಯವಾದ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಅವಕಾಶಕ್ಕಾಗಿ ತಮಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಉಪ ಸಭಾಪತಿಯವರು:–** ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 5 ಗಂಟೆ 32 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ಗುರುವಾರ ದಿನಾಂಕ 18ನೇ ಮಾರ್ಚ್ ಮಾಹೆ 2021ರಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"